ಶುಕ್ರವಾರ, ಅಕ್ಟೋಬರ್ 14, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್ ಶೋ
ಮುಂಬೈನಲ್ಲಿ ಗುರುವಾರ ನಡೆದ ಫ್ಯಾಷನ್ ಶೋದಲ್ಲಿ ಬಾಲಿವುಡ್ ನಟಿ ವರೀನಾ ಹುಸೇನ್ ಹೆಜ್ಜೆ ಹಾಕಿದರು



SAMSUNG

Galaxy Z Flip4
Now in Blue



samsung.com

Get ready to Flip at ₹ 49999*

Retail price	₹ 89999^
Exchange value of old device	₹ 33000^^
Upgrade bonus / Bank cashback	₹ 7000~
Own Z Flip4 now at	**₹ 49999***

HDFC BANK FESTIVE TREATS | Samsung upgrade

Follow us on: samsung.com | @SamsungIndia | @SamsungIndia | SamsungIndia | @samsungindia

Re+ Please dispose e-waste and plastic waste responsibly. For more information or for e-waste pick up, please call 1800 40 7267864 or 1800 5 7267864.

*T&C apply. Final pricing is subject to dealer discretion. ^Retail price of 1 Unit of Galaxy Z Flip4 128GB | 8GB. Price inclusive of taxes.
^^Approximate value shown for 1 Unit of 128GB | 8GB of Galaxy Z Flip3. Exchange at the discretion of retailer.
~Cashback provided by issuer at its sole discretion. Image simulated for representational purpose only. Colour as per availability.

Scan and experience the ultimate flex.

Or WhatsApp "Hi" to 9870-494949 to buy now at Samsung Exclusive Stores.

Cheil-13616/22

ಶುಕ್ರವಾರ, ಅಕ್ಟೋಬರ್ 14, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆಲ್ಫಿ ಸಮಯ

ಉತ್ತರ ಪ್ರದೇಶದ ವಾರಾಣಸಿಯಲ್ಲಿ ಗುರುವಾರ 'ಕರ್ವಾ ಚೌತ್' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು ಸೆಲ್ಫಿ ತೆಗೆದುಕೊಂಡರು







ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲ್ಲೂಕಿನ ಮರಳಹಳ್ಳಿಯಲ್ಲಿ ಗುರುವಾರ ಭಾರತ್ ಜೋಡೊ ಯಾತ್ರೆ ಸಾಗುತ್ತಿದ್ದ ಸಂದರ್ಭದಲ್ಲಿ ರಾಹುಲ್ ಗಾಂಧಿ ಅವರು ಓವರ್ ಹೆಡ್ ಟ್ಯಾಂಕ್ ಏರಿ ರಾಷ್ಟ್ರಧ್ವಜ ಪ್ರದರ್ಶಿಸಿದರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇದ್ದರು.

ವಾಟರ್ ಟ್ಯಾಂಕ್ ಏರಿದ ರಾಹುಲ್

ಜೋಡೊ ಯಾತ್ರೆಯಲ್ಲಿ ಸಾಗುತ್ತಿದ್ದ ರಾಹುಲ್ ಗಾಂಧಿ ಮರಳಹಳ್ಳಿಯಲ್ಲಿ ಓವರ್ ಹೆಡ್ ಟ್ಯಾಂಕ್ ಏರಿ ರಾಷ್ಟ್ರಧ್ವಜ ಪ್ರದರ್ಶಿಸಿದ್ದು ಗಮನ ಸೆಳೆಯಿತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಹ ಟ್ಯಾಂಕ್ ಏರಿದರು.

ಜೋಡೊ ಯಾತ್ರೆ ಕಣ್ತುಂಬಿಕೊಳ್ಳಲು ಮರಳಹಳ್ಳಿಯಲ್ಲಿ ಜನರು ಓವರ್ ಹೆಡ್ ಟ್ಯಾಂಕ್ ಏರಿದ್ದರು. ರಾಹುಲ್ ಪರವಾಗಿ ಘೋಷಣೆ ಕೂಗಿದರು. ಇದನ್ನು ಗಮನಿಸಿದ ರಾಹುಲ್ ಟ್ಯಾಂಕ್ ಬಳಿಗೆ ತೆರಳಿ ಏಣಿ ಏರಲು ಆರಂಭಿಸಿದರು. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರನ್ನು ಹಿಂಬಾಲಿಸಿದರು.

ಇಂದಿರಾ ಮೊಮ್ಮಗನೆಂಬ ಮೋಡಿ.. ಗ್ರಾಮೀಣರ ಖುಷಿ

• ಜಿ.ಬಿ. ನಾಗರಾಜ್

ಮೊಳಕಾಲ್ಮುರು (ಚಿತ್ರದುರ್ಗ): 'ಭೀಕರ ಬರಗಾಲದಲ್ಲಿ ಕೆಂಪು ಜೋಳ ಕೊಟ್ಟಿದ್ದ ಇಂದಿರಾ ಗಾಂಧಿ ಮೊಮ್ಮಗ ಬಂದಿದ್ದಾರೆ. ಇಂದಿರಮ್ಮನನ್ನು ನೋಡಲು ಆಗಲಿಲ್ಲ, ಮೊಮ್ಮಗನನ್ನಾದರೂ ಕಣ್ತುಂಬಿಕೊಳ್ಳೋಣ...' ಹೀಗೆ ಹೇಳುತ್ತ ರಸ್ತೆ ಬದಿಯಿಂದ ಬಾಗಿ ಪಾದಯಾತ್ರೆಯತ್ತ ದೃಷ್ಟಿ ಹರಿಸಿದ ವೃದ್ಧೆ ಸಿದ್ಧಮ್ಮ, ರಾಹುಲ್ ಕಂಡೊಡನೆ ಪುಳಕಿತರಾದರು.

ರಾಜ್ಯದ ವಿವಿಧೆಡೆಯಿಂದ ಪಾದಯಾತ್ರೆಗೆ ಹರಿದುಬಂದ ಜನರಲ್ಲಿ ಬಹುತೇಕರಿಗೆ ರಾಹುಲ್, ಇಂದಿರಾ ಗಾಂಧಿ ಮೊಮ್ಮಗ ಎಂಬುದೇ ಕುತೂಹಲದ ಕೇಂದ್ರವಾಗಿದೆ. ಇಂದಿರಾ ಗಾಂಧಿ ಕಾಲದಲ್ಲಿ ಭೂಮಿ ಪಡೆದವರು, ಬರಗಾಲದಲ್ಲಿ ಪಡಿತರದ ನೆರವು ದೊರೆತವರು ಅಭಿಮಾನದಿಂದ ಭಾರತ್ ಜೋಡೊ ಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ಹಿರಿಯೂರು, ಚಳ್ಳಕೆರೆ ದಾಟಿ ಯಾತ್ರೆಯು ಮೊಳಕಾಲ್ಮುರು ತಲುಪುತ್ತಿದ್ದಂತೆಯೇ ಈ ಅಭಿಮಾನ ಇಮ್ಮಡಿಗೊಂಡಂತೆ ಕಾಣುತ್ತಿದೆ.

'ಆಗ ನನಗಿನ್ನೂ 18 ವರ್ಷ. ಭೀಕರ ಬರ ಪರಿಸ್ಥಿತಿ ತಲೆದೋರಿ ಒಪ್ಪೊತ್ತಿನ ಊಟಕ್ಕೂ ತೊಂದರೆ ಆಗಿತ್ತು. ನಮ್ಮಂತಹ ಬಡವರು ಬದುಕುವುದೇ ಕಷ್ಟವಾಗಿತ್ತು. ಕೆಂಪುಜೋಳವನ್ನು ಇಂದಿರಮ್ಮ ಮನೆಗೆ ತಲುಪಿಸಿದ್ದರು. ಅಂದಿನಿಂದ ಇಂದಿರಾ ಗಾಂಧಿ ಬಗ್ಗೆ ಮೂಡಿರುವ ಹೆಮ್ಮೆ ಇನ್ನೂ ಕಡಿಮೆಯಾಗಿಲ್ಲ..' ಎಂದರು ಸಂಡೂರು ತಾಲ್ಲೂಕಿನ ಬಂಡ್ರಿಯ ನಾಗಪ್ಪ.

'ಉಳುವವನೇ ಭೂಮಿಯ ಒಡೆಯ' ಕಾನೂನಿನಲ್ಲಿ ನಾಲ್ಕು ಎಕರೆ ಭೂಮಿ ಪಡೆದಿರುವ ಮೊಳಕಾಲ್ಮುರು ತಾಲ್ಲೂಕಿನ ಕೋನಸಾಗರದ ಓಬಳ್ಳಮ್ಮ ಅವರೂ ಇಂದಿರಾ ಗಾಂಧಿ ಮೇಲಿನ ಅಭಿಮಾನದಿಂದಲೇ ಯಾತ್ರೆಗೆ ಬಂದಿದ್ದರು. ಬಿ.ಜಿ. ಕೆರೆಯಿಂದ ಕೋನಸಾಗರದತ್ತ ಪಾದಯಾತ್ರೆ ಸಾಗುತ್ತಿರುವಾಗ ರಸ್ತೆಬದಿಯಲ್ಲಿ ಕಾಯುತ್ತಿದ್ದ ಓಬಳಮ್ಮ ರಾಹುಲ್ ಕಂಡೊಡನೆ ಹರ್ಷಚಕಿತರಾದರು.

'ಇಂದಿರಾ ಗಾಂಧಿ ಕಾಲದಲ್ಲಿ ಪತಿಗೆ ನಾಲ್ಕು ಎಕರೆ ಭೂಮಿ ಸಿಕ್ಕಿತ್ತು. ತುಂಡು ಭೂಮಿ ಇಲ್ಲದೇ ಕೂಲಿ ಮಾಡುವುದೇ ಕಾಯಕವಾಗಿತ್ತು. ಇಂದಿರಮ್ಮನ ಮೊಮ್ಮಗ ಬರುತ್ತಿರುವುದು ಗೊತ್ತಾಗಿ ಯಾತ್ರೆ ನೋಡಲು ಬಂದೆ' ಎಂದು ಹೇಳುವಾಗ ಓಬಳಮ್ಮ ಮುಖದಲ್ಲಿ ಕೃತಜ್ಞತೆಯ ಭಾವವಿತ್ತು.

ಚಿತ್ರದುರ್ಗ ಜಿಲ್ಲೆಯಲ್ಲಿ ಸಾಗುತ್ತಿರುವ ಭಾರತ್ ಜೋಡೊ ಯಾತ್ರೆ ಗುರುವಾರ ಬಿ.ಜಿ. ಕೆರೆಯಿಂದ 21 ಕಿ.ಮೀ. ದೂರದ ಮೊಳಕಾಲ್ಮುರು ತಲುಪಿತು. ಹೆದ್ದಾರಿ ಮಾರ್ಗದಲ್ಲಿ ತೆರಳುತ್ತಿದ್ದ ಭಾರತ್ ಜೋಡೊ ಯಾತ್ರೆ ಗುರುವಾರ ಹಳ್ಳಿ ಮಾರ್ಗದಲ್ಲಿ ಸಾಗಿತು. ರೇಷ್ಮೆ, ಶೇಂಗಾ ಜಮೀನುಗಳನ್ನು ನೋಡುತ್ತ ರೈತರೊಂದಿಗೆ ಬೆಳೆ, ವೈಜ್ಞಾನಿಕ ಬೆಲೆ ಬಗ್ಗೆ ರಾಹುಲ್ ಚರ್ಚಿಸಿದರು.

'ಕನ್ನಡಕ್ಕೆ ಬೇಕು ಆದ್ಯತೆ'

'ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಆದ್ಯತೆ ಸಿಗಬೇಕು. ಪಕ್ಷ ಕನ್ನಡಕ್ಕೆ ಪ್ರಾಶಸ್ತ್ಯ ನೀಡಲಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

'ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಏಕಿಲ್ಲ' ಎಂಬ ಪ್ರಶ್ನೆಯನ್ನು ಯುವ ಸಮೂಹ ಕೇಳುತ್ತಿದೆ. ಕನ್ನಡದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ಅವಕಾಶ ಸಿಗಬೇಕು. ತಮಿಳುನಾಡಿನಲ್ಲಿ ತಮಿಳು, ಕೇರಳದಲ್ಲಿ ಮಲಯಾಳಂ ಭಾಷೆಗಳು ಆದ್ಯತೆ ಪಡೆಯುವಂತಾಗಲು ಭಾಷಾ ಸ್ವಾತಂತ್ರ್ಯದ ಅಗತ್ಯವಿದೆ' ಎಂದು ಮೊಳಕಾಲ್ಮುರು ಪಟ್ಟಣದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಪ್ರತಿಪಾದಿಸಿದರು.

'ಆರ್‌ಎಸ್‌ಎಸ್ ಮತ್ತು ಬಿಜೆಪಿ ಕನ್ನಡವನ್ನು ದ್ವಿತೀಯ ದರ್ಜೆ ಭಾಷೆಯನ್ನಾಗಿ ಕಾಣುತ್ತಿವೆ. ಮುಂದೊಂದು ದಿನ ಜನಾಕ್ರೋಶ ಎದುರಿಸಬೇಕಾಗುತ್ತದೆ. ಮಾತೃ ಭಾಷೆಯಲ್ಲಿ ಮಾತನಾಡುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ' ಎಂದರು.

ರೇಷ್ಮೆ ಬಟ್ಟೆ ಉಡುಗೊರೆ

ರೇಷ್ಮೆಗೆ ಹೆಸರಾಗಿರುವ ಮೊಳಕಾಲ್ಮುರು ತಾಲ್ಲೂಕಿನಲ್ಲಿ ಭಾರತ್ ಜೋಡೊ ಯಾತ್ರೆ ಸಾಗಿದಾಗ ಜನರು ರೇಷ್ಮೆ ಬಟ್ಟೆಯನ್ನು ಉಡುಗೊರೆಯಾಗಿ ನೀಡಿ ಹರಸಿದರು.

'ರಾಹುಲ್ ಗಾಂಧಿ ಅವರಿಗೆ ರೇಷ್ಮೆ ಬಟ್ಟೆ ಉಡುಗೊರೆ ಬಂದಿದೆ. ಈ ಬಟ್ಟೆಯನ್ನು ಹೊಲಿದು ತರಲು ಕನಕಪುರಕ್ಕೆ ಕಳುಹಿಸಲಾಗಿದೆ. ಈ ಬಟ್ಟೆಯನ್ನು ರಾಹುಲ್ ಧರಿಸಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾಹಿತಿ ನೀಡಿದರು.

ಬಳ್ಳಾರಿ: 3 ಲಕ್ಷ ಜನ

'ಭಾರತ್ ಜೋಡೊ ಯಾತ್ರೆಯನ್ನು ರಾಯಚೂರಿನಲ್ಲಿ ನಡೆಸಿದರೆ ತೆಲಂಗಾಣದ ಕಾರ್ಯಕರ್ತರು ಬರುವುದಾಗಿ ಹೇಳಿದ್ದರು. ಸಂಪರ್ಕಕ್ಕೆ ಅನುಕೂಲವಿರುವ ಕಾರಣಕ್ಕೆ ಬಳ್ಳಾರಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ ಯಾವುದೇ ತಂತ್ರಗಾರಿಕೆ ಇಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ರಾಹುಲ್ ಅವರು ಶನಿವಾರ ಬೆಳಿಗ್ಗೆ ಬಳ್ಳಾರಿಗೆ ಬರಲಿದ್ದಾರೆ. ಮಧ್ಯಾಹ್ನ 12ಕ್ಕೆ ಸಮಾವೇಶ ಆರಂಭವಾಗಲಿದೆ' ಎಂದರು.

ಹೈಕಮಾಂಡ್‌ಗೆ ಕಪ್ಪ ಕಾಣಿಕೆಯ ಸಂಸ್ಕೃತಿ ಬಿಜೆಪಿಯಲ್ಲಿಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ/ಹೊಸಪೇಟೆ (ವಿಜಯನಗರ): 'ಹೈಕಮಾಂಡ್‌ಗೆ ಕಪ್ಪ ಕಾಣಿಕೆ ಕೊಡುವ ಸಂಸ್ಕೃತಿ, ಸಂಪ್ರದಾಯ ಬಿಜೆಪಿಯಲ್ಲಿಲ್ಲ. ಆ ಸಂಸ್ಕೃತಿ, ಸಂಪ್ರದಾಯ ಕಾಂಗ್ರೆಸ್ ಪಕ್ಷದಲ್ಲಿದೆ. ರಾಜ್ಯದಲ್ಲಿ ಹಿಂದೆಯಿದ್ದ ಕಾಂಗ್ರೆಸ್ ಸರ್ಕಾರ ಆ ಪಕ್ಷದ ಹೈಕಮಾಂಡ್‌ಗೆ 'ಎಟಿಎಂ' (ಎನಿ ಟೈಮ್ ಮನಿ) ಆಗಿತ್ತು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪ ಮಾಡಿದರು.

ಇಲ್ಲಿನ ಜಿ.ಬಿ.ಆರ್. ಕಾಲೇಜು ಕ್ರೀಡಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಬಿಜೆಪಿ ಜನಸಂಕಲ್ಪ ಯಾತ್ರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕರ್ನಾಟಕದಲ್ಲಿ ಲೂಟಿ ಮಾಡಿದ ಹಣವನ್ನು ಸೂಟ್‌ಕೇಸ್‌ಗಳಲ್ಲಿ ತುಂಬಿ ಕಾಂಗ್ರೆಸ್ ಹೈಕಮಾಂಡ್‌ಗೆ ಕಪ್ಪ ಕಾಣಿಕೆ ರೂಪದಲ್ಲಿ ಕೊಡುತ್ತಿತ್ತು. ಇದೇ ಕಾರಣದಿಂದಲೇ ಕೆಪಿಸಿಸಿ ಅಧ್ಯಕ್ಷರು ಇಡಿ, ಐಟಿ ವಿಚಾರಣೆಗೆ ಒಳಪಟ್ಟಿದ್ದಾರೆ. ಕಾಂಗ್ರೆಸ್ ಪಕ್ಷದ ಹೈಕಮಾಂಡ್ ತಪ್ಪಿನಿಂದ ಅವರು ವಿಚಾರಣೆ ಎದುರಿಸುತ್ತಿದ್ದಾರೆ ಎಂದರು.

ಹೈಕಮಾಂಡ್‌ಗೆ ಕಪ್ಪ ಕಾಣಿಕೆ ಕೊಡುವ ಸಂಸ್ಕೃತಿ ಆರಂಭಿಸಿದ ಕಾಂಗ್ರೆಸ್‌ನವರು ಈಗ ನಮ್ಮ ಪಕ್ಷದ ವಿರುದ್ಧ ಆರೋಪ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಜನ ಜಾಗೃತರಾಗಿದ್ದಾರೆ. ಹಳೆಯ ನಾಟಕ, ಮೋಸದ ವಿಚಾರ ರಾಜ್ಯದಲ್ಲಿ ನಡೆಯುವುದಿಲ್ಲ. ನುಡಿದಂತೆ ನಡೆಯುವವರಿಗೆ ಕಾಲವಿದು. ಅನ್ನಭಾಗ್ಯದಲ್ಲಿ ಕನ್ನ ಹಾಕಿದವರು, ಬೋರ್‌ವೆಲ್‌ಗಳು, ನೀರಾವರಿ ಯೋಜನೆ, ಹಾಸ್ಟೆಲ್‌ಗಳ ದಿಂಬು ಹಾಸಿಗೆಯಲ್ಲಿ ಹಣ ಹೊಡೆದಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಹಿನ್ನಡೆಯಾಗಿದ್ದರೆ ಅದು ಕಾಂಗ್ರೆಸ್ ಭ್ರಷ್ಟಾಚಾರದಿಂದ ಎಂದು ಆರೋಪಿಸಿದರು.

ಯಾವ ಮುಖದಿಂದ ರಾಹುಲ್ ಬರುತ್ತಿದ್ದಾರೆ?: ಬಳ್ಳಾರಿಗೆ 'ಭಾರತ್ ಜೋಡೊ' ಯಾತ್ರೆ ಬರುತ್ತಿದೆ. ಸೋನಿಯಾ ಗಾಂಧಿ ಅವರನ್ನು ಲೋಕಸಭೆಗೆ ಆಯ್ಕೆ ಮಾಡಿ ಜಿಲ್ಲೆಯ ಜನ ಅವರಿಗೆ ಬೆಂಬಲ, ಆಶ್ರಯ ನೀಡಿದ್ದರು. ಆದರೆ, ಅವರು ಬಳ್ಳಾರಿ ಸಂಸದ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಉತ್ತರ ಪ್ರದೇಶಕ್ಕೆ ಹಾರಿ ಹೋದರು. ಬಳ್ಳಾರಿ ತವರು ಮನೆಯೆಂದು ಹೇಳಿದ್ದ ಸೋನಿಯಾ ಅವರಿಂದ ಜನ ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದರು. ಬಳ್ಳಾರಿ ಜಿಲ್ಲೆಯ ಸಮಗ್ರ ಅಭಿವೃದ್ಧಿ ₹3 ಸಾವಿರ ಕೋಟಿ ಪ್ಯಾಕೇಜ್ ಭರವಸೆ ಕೊಟ್ಟಿದ್ದರು. ಆದರೆ, ಉಷ್ಣ ವಿದ್ಯುತ್ ಸ್ಥಾವರ ಮಾಡಿರುವುದು ಬಿಟ್ಟರೆ ಬೇರೇನೂ ಕೆಲಸ ಮಾಡಲಿಲ್ಲ ಎಂದರು.

ಈಗ ಸುಳ್ಳು ಭರವಸೆ ಕೊಡುತ್ತ ರಾಹುಲ್ ಗಾಂಧಿ ಬಳ್ಳಾರಿಗೆ ಬರುತ್ತಿದ್ದಾರೆ. ನಿಮ್ಮ ತಾಯಿ ಅವರನ್ನು ಇಲ್ಲಿನ ಜನ ಆರಿಸಿ ಕಳಿಸಿದಾಗ ಏನೂ ಮಾಡಲಿಲ್ಲ. ಈಗ ಜನ ಜಾಗೃತರಾಗಿದ್ದಾರೆ. ನಿಮ್ಮ ಸುಳ್ಳು, ಮೋಸದ ಮಾತುಗಳನ್ನು ನಂಬುವುದಿಲ್ಲ ಎಂಬ ಸಂದೇಶವನ್ನು ಜಿಲ್ಲೆಯ ಜನ ಅವರಿಗೆ ಕೊಡಬೇಕು ಎಂದು ಹೇಳಿದರು.

ಯಾವ ಮುಖದಿಂದ ರಾಹುಲ್ ಗಾಂಧಿ ಅವರು ಬಳ್ಳಾರಿಗೆ ಬರುತ್ತಿದ್ದಾರೆ. ಯಾವಾಗ, ಏನೂ ಬೇಕಾದರೂ ಮಾತಾಡಿ ಮರಳು ಮಾಡಬಹುದು ಅಂದುಕೊಂಡಿದ್ದಾರಾ? ದುರ್ಗಾದೇವಿ, ವಿಜಯನಗರ ಸಾಮ್ರಾಜ್ಯ, ವಿದ್ಯಾರಣ್ಯರ ಶಕ್ತಿ ಬಳ್ಳಾರಿಯ ನೆಲದಲ್ಲಿದೆ. 2023ರ ಚುನಾವಣೆಯಲ್ಲಿ ಈ ಭಾಗದ ಶಕ್ತಿ ಏನೆಂಬುದು ಜನ ನಿಮಗೆ ತೋರಿಸಿಕೊಡುತ್ತಾರೆ ಎಂದು ಅವರು ಹೇಳಿದರು.

ಪ್ರತಿ ಕ್ಷೇತ್ರದಲ್ಲಿ ಸರ್ವೆ-ಯಡಿಯೂರಪ್ಪ

'ರಾಜ್ಯದ ಪ್ರತಿಯೊಂದು ವಿಧಾನಸಭಾ ಕ್ಷೇತ್ರದ ಸ್ಥಿತಿಗತಿ ಹಾಗೂ ಯಾರ ಪರ ಜನರ ಒಲವು ಇದೆ ಎನ್ನುವುದರ ಬಗ್ಗೆ ಪ್ರಧಾನಿ ನರೇಂದ್ರ ಮೋದಿಯವರು ಸರ್ವೆ ನಡೆಸುತ್ತಿದ್ದಾರೆ' ಎಂದು ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಇಲ್ಲಿನ ಜಿ.ಬಿ.ಆರ್. ಕ್ರೀಡಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ಬಿಜೆಪಿ ಜನಸಂಕಲ್ಪ ಯಾತ್ರೆಯಲ್ಲಿ ಮಾತನಾಡಿದ ಅವರು, ಅದೇ ರೀತಿ ರಾಜ್ಯದಲ್ಲೂ ರಾಜ್ಯ ಸರ್ಕಾರ ಸರ್ವೆ ನಡೆಸುತ್ತಿದೆ. ಪಕ್ಷದ ಮುಖಂಡರ ಕೆಲಸ ನೋಡಿಕೊಂಡು ಟಿಕೆಟ್ ನೀಡಲಾಗುವುದು. ಅವರ ಗೆಲುವಿಗೆ ಎಲ್ಲ ಕಾರ್ಯಕರ್ತರು ಶ್ರಮಿಸಬೇಕೆಂದು ಸೂಚಿಸಿದರು.

'ಸಾಮಾಜಿಕ ನ್ಯಾಯ ಭಾಷಣದ ಸರಕು'

'ಸಾಮಾಜಿಕ ನ್ಯಾಯದ ಭಾಷಣ ಮಾಡುವ ಕಾಂಗ್ರೆಸ್‌ನವರು ಆ ವರ್ಗಗಳಿಗೆ ನ್ಯಾಯ ಕೊಡಲಿಲ್ಲ. ಅದು ಭಾಷಣದ ಸರಕಾಗಿದೆ. ನಿಜವಾಗಿ ಹಿಂದುಳಿದವರಿಗೆ ಸಹಾಯ ಮಾಡುತ್ತಿರುವ ಬಿಜೆಪಿಯವರಿಗೆ ಜನ ಮನ್ನಣೆ ಕೊಡಬೇಕು. ಭಾಷಣದಿಂದ ಹೊಟ್ಟೆ ತುಂಬುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ವಿಜಯನಗರ ಜಿಲ್ಲೆ ಹೂವಿನಹಡಗಲಿಯಲ್ಲಿ ಗುರುವಾರ ನಡೆದ ಬಿಜೆಪಿ ಜನಸಂಕಲ್ಪ ಯಾತ್ರೆಯಲ್ಲಿ ಭಾಗವಹಿಸಿದ್ದ ಜನಸ್ತೋಮ –ಪ್ರಜಾವಾಣಿ ಚಿತ್ರ

'ಕಾಂಗ್ರೆಸ್ ಪಕ್ಷದ್ದು 85 ಪರ್ಸೆಂಟ್ ಸರ್ಕಾರ'

ಬಳ್ಳಾರಿ: 'ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸಿದ ಕಾಂಗ್ರೆಸ್ ಪಕ್ಷದ್ದು 85 ಪರ್ಸೆಂಟ್ ಸರ್ಕಾರ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ಕೊಟ್ಟರು.

ಸಿರುಗುಪ್ಪದಲ್ಲಿ ಗುರುವಾರ ಸಂಜೆ ನಡೆದ 'ಜನ ಸಂಕಲ್ಪ ಯಾತ್ರೆ'ಯಲ್ಲಿ ಭಾಗವಹಿಸಿ ಮಾತನಾಡಿದ ಮುಖ್ಯಮಂತ್ರಿ, 'ದಿಲ್ಲಿಯಿಂದ 100 ರೂಪಾಯಿ ಬಿಡುಗಡೆ ಮಾಡಿದರೆ ಹಳ್ಳಿಗೆ 15 ರೂಪಾಯಿ ಮಾತ್ರ ಬರುತಿತ್ತು. ಉಳಿದ 85 ರೂಪಾಯಿ ಸೋರಿಕೆ ಆಗುತಿತ್ತು. ಈ ಮಾತನ್ನು ನಾನು ಹೇಳುತ್ತಿಲ್ಲ. ದಿ. ರಾಜೀವ್ ಗಾಂಧಿ ಅವರೇ ಹೇಳಿದ್ದರು' ಎಂದರು.

'ರಾಜೀವ್ ಗಾಂಧಿ ಸತ್ಯವನ್ನೇ ಹೇಳಿದ್ದರು. ಆದರೆ, ಮೋದಿ 85 ರೂಪಾಯಿ ಸೋರಿಕೆಗೆ ಕಡಿವಾಣ ಹಾಕಿದ್ದಾರೆ. ಇಡೀ 100 ರೂಪಾಯಿ ಫಲಾನುಭವಿಗಳಿಗೆ ಸಿಗುವಂತೆ ನೇರ ಬ್ಯಾಂಕ್ ಖಾತೆಗೆ ವರ್ಗಾಯಿಸುತ್ತಿದ್ದಾರೆ' ಎಂದು ಹೇಳಿದರು.

'ನಮ್ಮದು 40 ಪರ್ಸೆಂಟ್ ಸರ್ಕಾರ ಎಂದು ಕಾಂಗ್ರೆಸ್ ಮುಖಂಡರು ಆರೋಪ ಮಾಡುತ್ತಿದ್ದಾರೆ. 85 ಪರ್ಸೆಂಟ್ ಹಣ ನುಂಗಿದವರು ನಮ್ಮ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿದ್ದಾರೆ. ಕೇಂದ್ರದಲ್ಲಿ 10 ವರ್ಷ ಅಧಿಕಾರ ನಡೆಸಿದ ಕಾಂಗ್ರೆಸ್ ಭೂಮಿ, ಆಕಾಶ ಮತ್ತು ಪಾತಾಳದಲ್ಲೂ ಭ್ರಷ್ಟಾಚಾರ ಮಾಡಿದೆ ಎಂದು ಲೇವಡಿ ಮಾಡಿದರು.

ವಿವಿಧೆಡೆ ಭಾರಿ ಮಳೆ: ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ರಾಯಚೂರು ಜಿಲ್ಲೆಯಲ್ಲಿ 2 ಮನೆ ಕುಸಿತ
- ಹಲವೆಡೆ ಸಂಚಾರಕ್ಕೆ ಧಕ್ಕೆ

ಬೆಂಗಳೂರು: ರಾಜ್ಯದ ತುಮಕೂರು, ಹಾಸನ, ಕೋಲಾರ ಜಿಲ್ಲೆಗಳಲ್ಲಿ, ಕೊಡಗು ಜಿಲ್ಲೆಯ ಸೋಮವಾರಪೇಟೆ ಹಾಗೂ ಶನಿವಾರಸಂತೆಯಲ್ಲಿ ಗುರುವಾರ ಭಾರಿ ಮಳೆಯಾಗಿದೆ. ಕಲಬುರಗಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ಹಲವೆಡೆ ಜಮೀನುಗಳಿಗೆ ನೀರು ನುಗ್ಗಿ ಬೆಳೆಗಳು ಹಾಳಾಗಿವೆ.

ಮಳೆಗೆ ಸಂಬಂಧಿಸಿದ ಅವಘಡಗಳಲ್ಲಿ ನಾಲ್ಕು ಜನರು ಮೃತಪಟ್ಟಿದ್ದಾರೆ. ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ಚೋರಗಿ ಗ್ರಾಮದ ಪೀರಪ್ಪ ಗೋವಿಂದ ಕೋರೆ ಎಂಬುವವರು ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ.

ಬಾಗಲಕೋಟೆಯಲ್ಲಿ ಮನೆ ಕುಸಿದು ಸುಧಾಬಾಯಿ ಕಾವೇರಿ (81) ಎಂಬುವವರು ಮೃತಪಟ್ಟಿದ್ದಾರೆ. ಮಣ್ಣಿನಡಿ ಸಿಲುಕಿದ್ದ ಅವರ ಮೃತ ದೇಹವನ್ನು ಅಗ್ನಿಶಾಮಕ ದಳ ಸಿಬ್ಬಂದಿ ಹೊರ ತೆಗೆದಿದ್ದಾರೆ. ಸುಧಾಬಾಯಿ ಅವರ ಅಂತ್ಯಕ್ರಿಯೆಗೆ ಸ್ಮಶಾನದಿಂದ ಸ್ಮಶಾನಕ್ಕೆ ಅಲೆದಾಡಿದ ಪ್ರಸಂಗವೂ ನಡೆಯಿತು.

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ತುಂಗೋಟಿ ಗ್ರಾಮದಲ್ಲಿ ಮನೆ ಚಾವಣಿ ಕುಸಿದು ಚೌಡಮ್ಮ (70) ಎಂಬುವವರು ಮೃತಪಟ್ಟಿದ್ದಾರೆ. ನಿರಂತರ ಮಳೆ ಪರಿಣಾಮ, ಗದಗ–ಬೆಟಗೇರಿ ಅವಳಿ ನಗರದಲ್ಲಿ ಮನೆ ಕುಸಿದು ಸುಶೀಲವ್ವ ಅಡಿವಯ್ಯ ಕಲ್ಮಠ (60) ಮೃತಪಟ್ಟಿದ್ದು, ಅಡಿವಯ್ಯ ಹಾಗೂ ಬಸಮ್ಮ ಎಂಬುವವರು ಗಾಯಗೊಂಡಿದ್ದಾರೆ.

ರಾಯಚೂರು ಜಿಲ್ಲೆಯಲ್ಲಿ ಒಟ್ಟು ಎಂಟು ಮನೆಗಳು ಕುಸಿದಿವೆ. ಕೆಲ ಜಿಲ್ಲೆಗಳಲ್ಲಿ ರಸ್ತೆಗಳು ಹಾಳಾಗಿವೆ. ಸೇತುವೆಗಳು ಮುಳುಗಿದ್ದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು.

ಒಳಹರಿವು ಹೆಚ್ಚಳ: ಕಳೆದ ಎರಡು ದಿನಗಳಿಂದ ಕೃಷ್ಣಾ ಅಚ್ಚುಕಟ್ಟು ಪ್ರದೇಶದ ಕರ್ನಾಟಕ ವ್ಯಾಪ್ತಿಯಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಕೃಷ್ಣಾ ನದಿಯ ಒಳಹರಿವು ಹೆಚ್ಚಿದೆ. ಆಲಮಟ್ಟಿ ಜಲಾಶಯದ ಒಳಹರಿವು 80 ಸಾವಿರ ಕ್ಯುಸೆಕ್ ಗೆ ಹೆಚ್ಚಿದೆ. ಮುಂಜಾಗ್ರತಾ ಕ್ರಮವಾಗಿ ಜಲಾಶಯದ ಹೊರಹರಿವನ್ನು 1.20 ಲಕ್ಷ ಕ್ಯುಸೆಕ್ ಗೆ ಹೆಚ್ಚಿಸಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.30	17,577	21,840
ಹಾರಂಗಿ	2,859	2,858.41	2,222	1,250
ಕಬಿನಿ	2,284	2,282.15	2,890	1,350
ಹೇಮಾವತಿ	2,922	2,921.45	3,063	2,222
ಲಿಂಗನಮಕ್ಕಿ	1,819	1,814	3,495	5,448
ಸೂಪಾ (ಮೀ)	564	553.68	275	225
ಮಾಣಿ	594	589	179	1,071
ತುಂಗಭದ್ರಾ	1,633	1,632.87	65,815	64,841
ಮಲಪ್ರಭಾ	2,079.50	2,079.50	3,294	3,294
ಘಟಪ್ರಭಾ	2,175	2,174.80	997	185
ಭದ್ರಾ	186	186	4,024	4,024
ಆಲಮಟ್ಟಿ (ಮೀ)	519.60	519.58	52,388	1,20,000
ನಾರಾಯಣಪುರ (ಮೀ)	492.25	491.47	1,65,000	1,82,190

* ನೆಲಮಟ್ಟದಿಂದ

ಮತಾಂತರ: ಮಾಜಿ ಕಾರ್ಪೊರೇಟರ್ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂ ಯುವಕನನ್ನು ಇಸ್ಲಾಂ ಧರ್ಮಕ್ಕೆ ಬಲವಂತವಾಗಿ ಮತಾಂತರಿಸಿ ಖತ್ನಾ (ಮುಂಜಿ) ಮಾಡಿಸಿ ಪೀಡಿಸಿದ್ದ ಪ್ರಕರಣದಲ್ಲಿ ಮಾಜಿ ಕಾರ್ಪೊರೇಟರ್ ಸೇರಿ ಮೂವರನ್ನು ಬನಶಂಕರಿ ಪೊಲೀಸರು ಬಂಧಿಸಿದ್ದಾರೆ. ಈ ಮೂಲಕ ಬಂಧಿತರ ಸಂಖ್ಯೆ ಐದಕ್ಕೆ ಏರಿದೆ.

'ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಶ್ರೀಧರ್ ಎಂಬುವರನ್ನು ಮತಾಂತರ ಮಾಡಿ ಕಿರುಕುಳ ನೀಡಲಾಗಿತ್ತು. ಶ್ರೀಧರ್ ನೀಡಿದ್ದ ಹೇಳಿಕೆ ಆಧರಿಸಿ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರಲು ಉದ್ದೇಶಪೂರ್ವಕವಾಗಿ ನಡೆಸಿದ ಕೃತ್ಯ (ಐಪಿಸಿ 295ಎ) ಹಾಗೂ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆ ಹುಬ್ಬಳ್ಳಿಯ ನವನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಪ್ರಕರಣವನ್ನು ಬನಶಂಕರಿ ಠಾಣೆಗೆ ಇತ್ತೀಚೆಗೆ ವರ್ಗಾಯಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳಾದ ಬನಶಂಕರಿಯ ಕಾವೇರಿನನಗರ ನಿವಾಸಿ ಶಬೀರ್ (34) ಹಾಗೂ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಮೊಹಮ್ಮದ್ ಅಸಾನ್ ಅಲಿಯಾಸ್ ಅತ್ತಾವರ್ ರೆಹಮಾನ್ (45) ಎಂಬುವವರನ್ನು ಮಾತ್ರ ಬಂಧಿಸಲಾಗಿತ್ತು. ಇದೀಗ, ಬನಶಂಕರಿ ವಾರ್ಡ್ ಮಾಜಿ ಕಾರ್ಪೊರೇಟರ್ ಅನ್ಸರ್ ಪಾಷಾ (47) ಮತ್ತು ಆತನ ಸಹಚರರಾದ ನಯಾಜ್ ಪಾಷಾ (36), ಹಾಜೀ ಸಾಬ್ (34) ಅವರನ್ನು ಮಂಡ್ಯದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಅನ್ಸರ್ ಪಾಷಾ ಹಾಗೂ ಹಾಜೀಸಾಬ್, ಸಂತ್ರಸ್ತ ಶ್ರೀಧರ್ ಅವರಿಗೆ ಖತ್ನಾ ಮಾಡಿಸಿದ್ದ ಧಾರ್ಮಿಕ ಕೇಂದ್ರದ ಸದಸ್ಯರಾಗಿದ್ದರು. ಇನ್ನೊಬ್ಬ ಆರೋಪಿ ನಯಾಜ್, ಖತ್ನಾ ಮಾಡಿಸಿದ್ದಕ್ಕಾಗಿ ಶ್ರೀಧರ್ ಅವರಿಗೆ ₹ 35 ಸಾವಿರ ನೀಡಿದ್ದ. ಮತಾಂತರ ಮಾಡುವುದು ಇವರೆಲ್ಲರ ಉದ್ದೇಶವಾಗಿತ್ತು' ಎಂದಿವೆ.

ನಾನಾ ಆಮಿಷವೊಡ್ಡಿ ಮತಾಂತರ: 'ಸಂತ್ರಸ್ತ ಶ್ರೀಧರ್, ಡಿಪ್ಲೊಮಾ ವ್ಯಾಸಂಗ ಮಾಡಿದ್ದರು. ಅವರ ತಂದೆ–ತಾಯಿ ತೀರಿಕೊಂಡಿದ್ದರು. ಆಸ್ತಿ ವಿಚಾರವಾಗಿ ಸಂಬಂಧಿಕರಲ್ಲಿ ಜಗಳವಿತ್ತು. ಹೀಗಾಗಿ, ನಗರ ತೊರೆದು ಬೆಂಗಳೂರಿಗೆ ಬಂದು ಸೈಬರ್ ಕೇಂದ್ರವೊಂದರಲ್ಲಿ ಕೆಲಸಕ್ಕೆ ಸೇರಿದ್ದರು. ಅವರಿಗೆ ನಾನಾ ಆಮಿಷವೊಡ್ಡಿದ್ದ ಆರೋಪಿಗಳು, ಮತಾಂತರ ಆಗುವಂತೆ ಪೀಡಿಸಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಶ್ರೀಧರ್ ಅವರಿಗೆ ಒತ್ತಾಯದಿಂದ ಖತ್ನಾ ಮಾಡಿಸಿದ್ದ ಆರೋಪಿಗಳು, ಸಲ್ಮಾನ್ ಎಂಬುದಾಗಿ ಹೆಸರು ಬದಲಿಸಿದ್ದರು. ಮಸೀದಿಯೊಂದರಲ್ಲಿ ಕೆಲದಿನ ಅಕ್ರಮ ಬಂಧನದಲ್ಲಿರಿಸಿದ್ದರು. 'ನಿತ್ಯವೂ ಕುರಾನ್ ಓದಬೇಕು. ಇಲ್ಲದಿದ್ದರೆ, ನೀನು ಉಗ್ರನೆಂದು ಹೇಳಿ ವಿಡಿಯೊ ಹರಿಬಿಡುತ್ತೇವೆ' ಎಂಬುದಾಗಿ ಆರೋಪಿಗಳು ಬೆದರಿಸಿದ್ದರು.'

'ಶ್ರೀಧರ್ ಅವರು ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ಪರಿಚಯವಾದ ಯುವತಿಯನ್ನು ಭೇಟಿಯಾಗಲು ಹುಬ್ಬಳ್ಳಿಯ ನವನಗರಕ್ಕೆ ಹೋಗಿದ್ದರು. ಅವರ ಬಗ್ಗೆ ಅನುಮಾನಗೊಂಡಿದ್ದ ಸ್ಥಳೀಯರು, ಥಳಿಸಿ ಠಾಣೆಗೆ ಒಪ್ಪಿಸಿದ್ದರು. ಪೊಲೀಸರ ವಿಚಾರಣೆ ವೇಳೆ ಶ್ರೀಧರ್, ಮತಾಂತರ ಸಂಗತಿ ಹೇಳಿ ರಕ್ಷಣೆ ಕೋರಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಪಿಎಫ್ಐ: ಮತ್ತೆ ಏಳು ಜನರು ವಶಕ್ಕೆ

ಮಂಗಳೂರು: ಎಸ್‌ಡಿಪಿಐ ಹಾಗೂ ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ಮುಖಂಡರ ಮನೆಗಳ ಮೇಲೆ ಗುರುವಾರ ಬೆಳಗಿನ ಜಾವ ಪೊಲೀಸರು ದಾಳಿ ನಡೆಸಿದರು.

ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ನೇತೃತ್ವದಲ್ಲಿ ಪೊಲೀಸರು ಪಣಂಬೂರು, ಸುರತ್ಕಲ್, ಮಂಗಳೂರು ಗ್ರಾಮಾಂತರ, ಉಳ್ಳಾಲ ಸೇರಿ ಎಂಟಕ್ಕೂ ಹೆಚ್ಚು ಕಡೆಗಳಲ್ಲಿ ದಾಳಿ ನಡೆಸಿದರು. ಏಳು ಜನರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೆಲ ದಿನಗಳ ಹಿಂದೆ ಕೇಂದ್ರ ಸರ್ಕಾರ ಪಿಎಫ್ಐ ಸಂಘಟನೆಯನ್ನು ನಿಷೇಧಿಸಿ ಆದೇಶ ಹೊರಡಿಸಿದೆ. ಈ ಸಂದರ್ಭದಲ್ಲಿ ನಗರದ ವಿವಿಧೆಡೆಗಳಲ್ಲಿ ಪೊಲೀಸರು ಪಿಎಫ್ಐ ಮುಖಂಡರ ಮನೆಗಳ ಮೇಲೆ ದಾಳಿ ನಡೆಸಿದ್ದರು.

ರಥ ಮುಟ್ಟಿದ್ದಕ್ಕೆ ಪರಿಶಿಷ್ಟರಿಗೆ ಬಹಿಷ್ಕಾರ

ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ತಿಡಿಗೋಳ ಗ್ರಾಮದಲ್ಲಿ ರಥ ಮುಟ್ಟಿದ ಕಾರಣಕ್ಕೆ ಪರಿಶಿಷ್ಟ ಜಾತಿಯ ಯುವಕರ ಮೇಲೆ ಲಿಂಗಾಯತ ಸಮುದಾಯದ ಯುವಕರು ಹಲ್ಲೆ ಮಾಡಿದ ಘಟನೆ ನಡೆದು ಎರಡು ವಾರಗಳಾಗಿವೆ. ಹಲವು ಬಾರಿ ಸಂಧಾನಕ್ಕೆ ಪ್ರಯತ್ನಿಸಿದರೂ ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ಅಘೋಷಿತ ಬಹಿಷ್ಕಾರ ಕೊನೆಗೊಂಡಿಲ್ಲ.

'ಗಿರಣಿ ಅಂಗಡಿಯಲ್ಲಿ ಹಿಟ್ಟು ಹಾಕುವುದಿಲ್ಲ, ಕಿರಾಣಿ ಅಂಗಡಿಯಲ್ಲಿ ವಸ್ತುಗಳನ್ನು ನೀಡುವುದಿಲ್ಲ, ಹೋಟೆಲ್‌ನಲ್ಲಿ ಚಹಾ ಕುಡಿಯಲು ಕೂಡ ನಿರ್ಬಂಧಿಸಲಾಗಿದೆ' ಎಂದು ಪರಿಶಿಷ್ಟ ಜಾತಿಯವರು ಸಮಸ್ಯೆ ತೋಡಿಕೊಂಡರು. ಅಧಿಕಾರಿಗಳು, ಪೊಲೀಸರು ಪರಿಸ್ಥಿತಿ ತಿಳಿಗೊಳಿಸಲು ಪ್ರಯತ್ನಿಸಿದರು. ಆದರೆ, ಬಿಗುವಿನ ಪರಿಸ್ಥಿತಿ ಇದೆ.


ಚಿಕ್ಕಪೇಟೆ ಶಾಸಕ ಉದಯ್ ಗರುಡಾಚಾರ್‌ಗೆ 2 ತಿಂಗಳ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಪ್ರಮಾಣ ಪತ್ರದಲ್ಲಿ ಮಾಹಿತಿ ಮರೆಮಾಚಿದ ಆರೋಪಕ್ಕೆ ಸಂಬಂಧಿಸಿದಂತೆ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಉದಯ್ ಬಿ. ಗರುಡಾಚಾರ್ ಅವರಿಗೆ ಎರಡು ತಿಂಗಳ ಸಾದಾ ಜೈಲು ಶಿಕ್ಷೆ ಮತ್ತು ₹10 ಸಾವಿರ ದಂಡ ವಿಧಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಸಂಬಂಧ ಎಚ್.ಜಿ. ಪ್ರಶಾಂತ್ ಎಂಬುವವರು ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ ಹಾಲಿ- ಮಾಜಿ, ಶಾಸಕರು ಮತ್ತು ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ಮ್ಯಾಜಿಸ್ಟ್ರೇಟ್ ವಿಚಾರಣಾ ನ್ಯಾಯಾಲಯದ (ಎಸಿಎಂಎಂ-42) ನ್ಯಾಯಾಧೀಶೆ ಪ್ರೀತ್ ಜೆ ಈ ಕುರಿತಂತೆ ತೀರ್ಪು ನೀಡಿದ್ದಾರೆ.

ಪ್ರಕರಣವೇನು?: 'ಉದಯ್ ಗರುಡಾಚಾರ್ 2018ರಲ್ಲಿ ಬೆಂಗಳೂರಿನ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಜಯ ಗಳಿಸಿದ್ದಾರೆ. ಚುನಾವಣೆಗೆ ನಾಮಪತ್ರ ಸಲ್ಲಿಸುವ ವೇಳೆ ಅವರು ತಮ್ಮ ವಿರುದ್ಧ ಅಶೋಕನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ, ಮೇವರಿಕ್ ಹೋಲ್ಡಿಂಗ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ನಾಗಿರುವುದು ಮತ್ತು ಪತ್ನಿಯ ಬ್ಯಾಂಕ್ ಖಾತೆಯ ವಿವರಗಳನ್ನು ಪ್ರಮಾಣ ಪತ್ರದಲ್ಲಿ ಬಹಿರಂಗಪಡಿಸಿಲ್ಲ' ಎಂದು ಆಕ್ಷೇಪಿಸಿ ಬನಶಂಕರಿ ಮೂರನೇ ಹಂತದ ನಿವಾಸಿ ಎಚ್.ಜಿ.ಪ್ರಶಾಂತ್ ಖಾಸಗಿ ದೂರು ಸಲ್ಲಿಸಿದ್ದರು.



ಉದಯ್ ಗರುಡಾಚಾರ್

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರು, 'ಆರೋಪಿಯು ವಿವರಗಳನ್ನು ಮುಚ್ಚಿಟ್ಟಿರುವುದು ಧೃಡ ಪಟ್ಟಿದ್ದು, ಜನತಾ ಪ್ರಾತಿನಿಧ್ಯ ಕಾಯ್ದೆ-1956ರ ಕಲಂ 125-ಎ ಅಡಿಯಲ್ಲಿ ಅವರನ್ನು ತಪ್ಪಿತಸ್ಥರೆಂದು ಗುರುತಿಸಲಾಗಿದೆ' ಎಂದು ತೀರ್ಪಿನಲ್ಲಿ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಉನ್ನತ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಿದ ನ್ಯಾಯಾಲಯ, ಷರತ್ತು ಬದ್ಧ ಜಾಮೀನು ಮಂಜೂರು ಮಾಡಿದೆ.

ಅರ್ಜಿದಾರರ ಪರ ವಕೀಲ ಎಚ್. ಮಂಜುನಾಥ್ ವಾದ ಮಂಡಿಸಿದ್ದರು.

ಬಾಲಕಿಯನ್ನು ಬೆಳಿಗ್ಗೆಯೇ ಕರೆಸಿಕೊಂಡಿದ್ದ, ಶಿಕ್ಷಕಿಯರ ವಿರುದ್ಧವೂ ಕೆಟ್ಟ ಚಾಳಿ ತೋರಿದ್ದ

ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪಿ

• ಟಿ.ಕೆ.ಲಿಂಗರಾಜು

ಮಳವಳ್ಳಿ (ಮಂಡ್ಯ): ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಆರೋಪಿಯು ಇದಕ್ಕೂ ಮೊದಲು ಹಲವು ಬಾರಿ ಮಕ್ಕಳು ಹಾಗೂ ಶಿಕ್ಷಕಿಯರಿಗೆ ಲೈಂಗಿಕ ಕಿರುಕುಳ ನೀಡಿದ್ದನೆಂಬ ವಿಷಯ ಗೊತ್ತಾಗಿದೆ. 'ಆರೋಪಿ ವಿರುದ್ಧ ಮೊದಲೇ ಕ್ರಮ ಕೈಗೊಂಡಿದ್ದರೆ ಬದುಕುಳಿಯುತ್ತಿದ್ದಳು' ಎಂದು ಬಾಲಕಿಯ ಪೋಷಕರು ದುಃಖಿಸಿದರು.

ಆರೋಪಿಗೆ 2 ಬಾರಿ ಎಚ್ಚರಿಕೆ ನೀಡಲಾಗಿತ್ತು. ಒಮ್ಮೆ ಪೋಷಕರೊಬ್ಬರು ಹೊಡೆದಿದ್ದರು. ಕಿರುಕುಳದಿಂದಾಗಿಯೇ ಇಬ್ಬರು ಶಿಕ್ಷಕಿಯರು 4 ತಿಂಗಳ ಹಿಂದೆ ಕೆಲಸ ಬಿಟ್ಟಿದ್ದರು.

ದಸರಾ ರಜೆ ಮುಗಿದು ರಾಜ್ಯದ ವಿವಿಧೆಡೆ ಶಾಲೆಗಳು ಪುನರಾರಂಭಗೊಂಡರೂ ಜಿಲ್ಲೆಯಲ್ಲಿ ಅ.16ರವರೆಗೂ ರಜೆ ಮುಂದುವರಿದಿದೆ. ಕೆಲವು ಖಾಸಗಿ ಶಾಲೆಗಳು ಆರಂಭಗೊಂಡಿದ್ದರೂ ಕೆ.ಆರ್.ಪೇಟೆ ತಾಲ್ಲೂಕಿನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಕುಂಭಮೇಳಕ್ಕೆ ಬಸ್‌ಗಳನ್ನು ಕಳುಹಿಸಿದ್ದರಿಂದ ಅವುಗಳು ಆರಂಭವಾಗಿರಲಿಲ್ಲ. ಬಾಲಕಿ ಓದುತ್ತಿದ್ದ ಖಾಸಗಿ ಶಾಲೆಗೂ ರಜೆ ಇತ್ತು. ಅದನ್ನು ತಿಳಿದೇ ಆರೋಪಿ 'ಇಲ್ಲೇ ಕುಳಿತು ಹೋಂ ವರ್ಕ್ ಮಾಡು ಬಾ' ಎಂದು ಮಂಗಳವಾರ (ಅ.11) ಬೆಳಿಗ್ಗೆಯೆ ಕರೆಸಿಕೊಂಡಿದ್ದ.



ಬಾಲಕಿಯ ಅಂತ್ಯಕ್ರಿಯೆ ಮೆರವಣಿಗೆ ವೇಳೆ ಮಳವಳ್ಳಿ ಪಟ್ಟಣದಲ್ಲಿ ಸೇರಿದ್ದ ಜನಸ್ತೋಮ

'ಶಾಲೆಗೆ ತೆರಳಿದ್ದರೆ ನನ್ನ ಕಂದಮ್ಮ ಬದುಕುತ್ತಿದ್ದಳು, ದಸರಾ ರಜೆ ಮುಗಿಯದ ಕಾರಣ ಮನೆಯಲ್ಲೇ ಇದ್ದವಳನ್ನು ಕಿರಾತಕ ಕರೆಸಿಕೊಂಡು ಹಾಳು ಮಾಡಿ, ಕೊಂದು ಹಾಕಿದ್ದಾನೆ' ಎಂದು ಬಾಲಕಿಯ ಅಜ್ಜ ಗೋಳಿಟ್ಟರು. ಸಂಜೆ 5ರಿಂದ 6.30ರವರೆಗೆ ಟ್ಯೂಷನ್ ನಡೆಯುತ್ತಿತ್ತು. ಪ್ರತಿದಿನ ಮೊಮ್ಮಗಳನ್ನು ಅವರೇ ಟ್ಯೂಷನ್‌ಗೆ ಕರೆದೊಯ್ದು ವಾಪಸು ಕರೆತರುತ್ತಿದ್ದರು.

'ಹೊಲದಿಂದ ವಾಪಸ್ ಬರುವಷ್ಟರಲ್ಲಿ ಕಂದಮ್ಮ ಮನೆಯಲ್ಲಿರಲಿಲ್ಲ. ಬೆಳಗ್ಗಿನ ಹೊತ್ತಲ್ಲಿ ಟ್ಯೂಷನ್ ಇರುತ್ತದೆಯೇ ಎಂಬ ಪ್ರಶ್ನೆ ಮೂಡಿತು. ಆಗಲೇ ಅಲ್ಲಿಗೆ ಹೋಗಬೇಕಾಗಿತ್ತು. ನನ್ನ ಕೈಯೊಳಗೆ ಆಡಿದ ಮಗಳು ಈಗಿಲ್ಲವಲ್ಲ ದೇವರೇ' ಎಂದು ಅಜ್ಜ ದುಃಖಿಸಿದರು.

'ಟ್ಯೂಷನ್ ಕೇಂದ್ರವಿದ್ದ ಕಟ್ಟಡದ ಮಾಲೀಕ ಮೈಸೂರಿನಲ್ಲಿ ನೆಲೆಸಿದ್ದರಿಂದ ಆರೋಪಿ ಆಡಿದ್ದೇ ಆಟವಾಗಿತ್ತು. ತಾನೇ ಪಾಠ ಮಾಡುತ್ತಿದ್ದ. ಹೆಸರಿನ ಜೊತೆ ಎಂ.ಎ, ಬಿ.ಇಡಿ ಎಂದು ಹಾಕಿಕೊಂಡಿದ್ದ. ಈತ ಶಿಕ್ಷಕನೋ, ಉಸ್ತುವಾರಿಯೋ ಎಂಬುದು ತನಿಖೆಯಾಗಬೇಕು' ಎಂದು ಪೋಷಕರೊಬ್ಬರು ಒತ್ತಾಯಿಸಿದರು.

'ಐದು ವರ್ಷಗಳಿಂದ ನಡೆಯುತ್ತಿದ್ದ ಕೇಂದ್ರ ಅನಧಿಕೃತವಾಗಿದ್ದು, ಅನುಮತಿ ಪಡೆದಿಲ್ಲ' ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯನ್ನು ಖಂಡಿಸಿ ವಿವಿಧ ಸಂಘಟನೆಗಳ ಮುಖಂಡರು ಜಿಲ್ಲೆಯಾದ್ಯಂತ ಗುರುವಾರ ಪ್ರತಿಭಟಿಸಿ, ಆರೋಪಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿದರು.

ಬಾಲಕಿ ಹೆಸರು ಉಲ್ಲೇಖಿಸಿದ ಸಂಸದೆ

ಸಂಸದೆ ಸುಮಲತಾ ಅಂಬರೀಶ್ ಘಟನೆಯನ್ನು ಖಂಡಿಸುವ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬಾಲಕಿಯ ಹೆಸರು ಉಲ್ಲೇಖಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

'ಘಟನೆ ನಡೆದು 3 ದಿನ ಕಳೆದರೂ ಸಂಸದೆ ಸ್ಥಳಕ್ಕೆ ಬಂದು ಪೋಷಕರಿಗೆ ಸಾಂತ್ವನ ಹೇಳಿಲ್ಲ'ವೆಂದು ಜಿಲ್ಲೆಯಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು. ಚುನಾವಣೆ ಸಂದರ್ಭದಲ್ಲಿ ಸುಮಲತಾ ಅವರು ನೀಡಿದ್ದ 'ನಾನು ಮಳವಳ್ಳಿ ಹುಚ್ಚೇಗೌಡರ ಸೊಸೆ' ಹೇಳಿಕೆ ಎಲ್ಲೆಡೆ ಹರಿದಾಡಿತ್ತು. ಈಗ ಅದನ್ನೇ ಬಳಸುತ್ತಿರುವ ಜನ 'ಮಳವಳ್ಳಿ ಹುಚ್ಚೇಗೌಡರ ಸೊಸೆ ಎಲ್ಲಿದ್ದಾರೆ' ಎಂದು ಪ್ರಶ್ನಿಸುತ್ತಿದ್ದಾರೆ.

ಅದರಿಂದ ಎಚ್ಚೆತ್ತ ಸುಮಲತಾ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಘಟನೆಯನ್ನು ಖಂಡಿಸಿ ಸಂದೇಶ ಪ್ರಕಟಿಸಿದ್ದಾರೆ. ಬಾಲಕಿಯ ಆತ್ಮಕ್ಕೆ ಶಾಂತಿ ಕೋರಿದ್ದಾರೆ.

ಶುಕ್ರವಾರ, ಅಕ್ಟೋಬರ್ 14, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 284 | ಪುಟ 20

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,235 ▼	17,014 ▼	₹52,280 (ಬೆಂಗಳೂರು) ▲	₹58,300 (ಬೆಂಗಳೂರು) ▼	82.38 ▼



ಒಳ ಪುಟಗಳು



ವಿಸ್ತೃತ ಪೀಠಕ್ಕೆ ವರ್ಗಾಯಿಸಲು ಮುಖ್ಯ ನ್ಯಾಯಮೂರ್ತಿಗೆ ಶಿಫಾರಸು

ಹಿಜಾಬ್: ಭಿನ್ನಮತದ ತೀರ್ಪು

ಪ್ರಜಾವಾಣಿ ವಾರ್ತೆ

ನವದೆಹಲಿ: ಶಾಲಾ–ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿ ಕರ್ನಾಟಕ ಸರ್ಕಾರ ಹೊರಡಿಸಿದ್ದ ಆದೇಶವನ್ನು ಎತ್ತಿ ಹಿಡಿದಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು ಭಿನ್ನಮತದ ತೀರ್ಪು ನೀಡಿದೆ.

ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಿದೆ.

10 ದಿನಗಳ ಕಾಲ ವಾದ–ಪ್ರತಿವಾದ ಆಲಿಸಿದ್ದ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ಪೀಠವು ಸೆಪ್ಟೆಂಬರ್ 22ರಂದು ತೀರ್ಪನ್ನು ಕಾಯ್ದಿರಿಸಿತ್ತು. ಗುರುವಾರ ಬೆಳಿಗ್ಗೆ 10.30ಕ್ಕೆ ತೀರ್ಪನ್ನು ಪ್ರಕಟಿಸಿತು.

ನ್ಯಾಯಮೂರ್ತಿ ಹೇಮಂತ್ ಗುಪ್ತ ಅವರು ವಿದ್ಯಾರ್ಥಿನಿಯರ ಮೇಲ್ಮನವಿಗಳನ್ನು ತಿರಸ್ಕರಿಸಿದರು.

6ನೇ ಪುಟ ನೋಡಿ

ಹಿಜಾಬ್ ಹಕ್ಕು ಶಾಲಾ ಗೇಟ್ ಬಳಿ ಮೊಟಕುಗೊಳ್ಳಲ್ಲ: ಧುಲಿಯಾ

‘ಹೆಣ್ಣು ಮಗುವಿಗೆ ತನ್ನ ಮನೆಯೊಳಗೆ ಅಥವಾ ಮನೆಯ ಹೊರಗೆ ಹಿಜಾಬ್ ಧರಿಸಲು ಅಧಿಕಾರ ಇದೆ. ಆ ಹಕ್ಕು ಶಾಲೆಯ ದ್ವಾರದ ಬಳಿ ಮೊಟಕುಗೊಳ್ಳು-ವುದಿಲ್ಲ’ ಎಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಸುಧಾಂಶು ಧುಲಿಯಾ ಗುರುವಾರ ಹೇಳಿದ್ದಾರೆ.

ಕರ್ನಾಟಕ ಸರ್ಕಾರದ ಅಧಿಸೂಚನೆಯನ್ನು ರದ್ದುಪಡಿಸಿ ಪ್ರತ್ಯೇಕ ತೀರ್ಪು ನೀಡಿರುವ ಅವರು, ‘ವಿದ್ಯಾರ್ಥಿನಿ ಶಾಲೆಯ ಗೇಟ್ ಒಳಗೆ ಕೂಡ ತನ್ನ ಘನತೆ ಹಾಗೂ ಗೋಪ್ಯತೆ ಕಾಪಾಡಿಕೊಳ್ಳುವ ಮೂಲಭೂತ ಹಕ್ಕುಗಳನ್ನು ಹೊಂದಿರುತ್ತಾಳೆ. ತರಗತಿಯೊಳಗೆ ಈ ಹಕ್ಕುಗಳು ಅನ್ವಯವಾಗುವುದಿಲ್ಲ ಎಂಬ ವಾದ ಸರಿಯಲ್ಲ’ ಎಂದು ಹೇಳಿದ್ದಾರೆ.

6ನೇ ಪುಟ ನೋಡಿ

ಶಾಲೆಗಳಲ್ಲಿ ಧಾರ್ಮಿಕ ಸಂಕೇತ ಸರಿಯಲ್ಲ: ಹೇಮಂತ್ ಗುಪ್ತ

‘ಯಾವುದೇ ಒಬ್ಬ ವಿದ್ಯಾರ್ಥಿನಿ ತಲೆಗೆ ಸ್ಕಾರ್ಫ್ ಧರಿಸುವುದನ್ನು ಅಥವಾ ಯಾವುದೇ ಇತರ ವಿದ್ಯಾರ್ಥಿ ಧಾರ್ಮಿಕ ಸಂಕೇತದ ಬಟ್ಟೆಗಳನ್ನು ಧರಿಸುವುದರಿಂದ ರಾಜಿಯಾಗಲು ಒಪ್ಪದಿದ್ದಲ್ಲಿ ಸಂವಿಧಾನದ 14ನೇ ಪರಿಚ್ಛೇದದ ಅನುಸಾರ ಎಲ್ಲ ವಿದ್ಯಾರ್ಥಿಗೆ ಸಮಾನ ಹಕ್ಕು ಒದಗಿಸುವ ಉದ್ದೇಶದಿಂದ ಆ ವಿದ್ಯಾರ್ಥಿಗಳಿಗೆ ಅವಕಾಶ ನಿರಾಕರಿಸುವುದು ಸರಿ’ ಎಂದು ನ್ಯಾಯಮೂರ್ತಿ ಹೇಮಂತ್ ಗುಪ್ತ ಹೇಳಿದರು.

6ನೇ ಪುಟ ನೋಡಿ

ಹಿಜಾಬ್ ನಿಷೇಧ ಮುಂದುವರಿಯಲಿದೆ: ಬಿ.ಸಿ.ನಾಗೇಶ್

ಬೆಂಗಳೂರು: ಹಿಜಾಬ್ ನಿಷೇಧ ಕುರಿತು ಸುಪ್ರೀಂಕೋರ್ಟ್ ಸ್ಪಷ್ಟ ತೀರ್ಪು ನೀಡುವವರೆಗೂ ಸರ್ಕಾರದ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಪ್ರತಿಕ್ರಿಯಿಸಿದರು.

ಸುಪ್ರೀಂಕೋರ್ಟ್‌ನ ಪೂರ್ಣ ತೀರ್ಪು ಹೊರಬರದಿದ್ದರೂ, ರಾಜ್ಯ ಹೈಕೋರ್ಟ್ ನೀಡಿದ ತೀರ್ಪು ಇದೆ. ಕೋರ್ಟ್‌ಗಳ ನಡೆ ಕುರಿತು ಪ್ರತಿಕ್ರಿಯೆ ನೀಡುವುದಿಲ್ಲ. ಶಾಲಾ ಶಿಕ್ಷಣ ನಿಯಮಗಳಂತೆ ಸರ್ಕಾರ ನಿಷೇಧದ ನಿರ್ಧಾರ ತೆಗೆದುಕೊಂಡಿತ್ತು ಎಂದು ಹೇಳಿದರು.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



16 ಜಿಲ್ಲೆಗಳ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿ ವಿಡಿಯೊ ಕಾನ್ಫರೆನ್ಸ್

ತಿಂಗಳಲ್ಲಿ ಬೆಳೆ ಹಾನಿ ಪರಿಹಾರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ ಬೆಳೆಹಾನಿ ಕುರಿತು 16 ಜಿಲ್ಲೆಗಳ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ ಹಾಗೂ ಎಸ್ಪಿಗಳ ಜತೆಗೆ ವಿಡಿಯೊ ಕಾನ್ಫರೆನ್ಸ್ ನಡೆಸಿ, ‘ಅಕ್ಟೋಬರ್ ತಿಂಗಳಲ್ಲಿ ಮಳೆಯಿಂದ ಆಗಿರುವ ಹಾನಿ ಕುರಿತು ಜಂಟಿ ಸಮೀಕ್ಷೆ ನಡೆಸಿ, ತಿಂಗಳೊಳಗೆ ಪರಿಹಾರ ವಿತರಿಸಬೇಕು’ ಎಂದು ಸೂಚಿಸಿದರು.

ಬಿಜೆಪಿ ಜನಸಂಕಲ್ಪ ಯಾತ್ರೆಯಲ್ಲಿ ಪಾಲ್ಗೊಳ್ಳಲು ಬುಧವಾರ ರಾತ್ರಿ ತಾಲ್ಲೂಕಿನ ಕಮಲಾಪುರದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿರುವ ಅವರು ಗುರುವಾರ ಬೆಳಿಗ್ಗೆ ಸಚಿವರಾದ ಗೋವಿಂದ ಕಾರಜೋಳ, ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ ಅವರೊಂದಿಗೆ ಸಭೆ ನಡೆಸಿದರು.

ಮನೆಗಳ ಹಾನಿ ದಾಖಲಿಸುವಾಗ ಯಾವುದೇ ಲೋಪವಾಗದಂತೆ ಜಿಲ್ಲಾ-ಧಿಕಾರಿಗಳು ಖುದ್ದು ಮೇಲ್ವಿಚಾರಣೆ ವಹಿಸಬೇಕು ಎಂದು ತಿಳಿಸಿದರು.

7ನೇ ಪುಟ ನೋಡಿ


ಮಳೆಗೆ 13 ಜನರ ಸಾವು, 3309 ಮನೆಗಳಿಗೆ ಹಾನಿ

ಹಿಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ಅಕ್ಟೋಬರ್ ತಿಂಗಳೊಂದರಲ್ಲೇ ಮಳೆಗೆ 13 ಜನ ಸಾವಿಗೀಡಾಗಿದ್ದು, 3309 ಮನೆಗಳಿಗೆ ಹಾನಿ ಉಂಟಾಗಿದೆ. 28 ಜಾನುವಾರುಗಳು ಮೃತಪಟ್ಟಿವೆ. 6,279 ಹೆಕ್ಟೇರ್ ಬೆಳೆ ಹಾನಿಯಾಗಿದೆ. ಐದು ಕಾಳಜಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. 1330 ಜನ ಆಶ್ರಯ ಪಡೆದಿದ್ದಾರೆ. 8.83 ಲಕ್ಷ ರೈತರಿಗೆ ₹947.8 ಕೋಟಿ ಪರಿಹಾರ ವಿತರಿಸಲಾಗಿದೆ. ಎರಡನೇ ಹಂತದಲ್ಲಿ 2 ಲಕ್ಷ ರೈತರಿಗೆ ₹250 ಕೋಟಿ ಬೆಳೆ ಪರಿಹಾರ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗು-ತ್ತಿದೆ ಎಂದು ಸಿ.ಎಂ ಹೇಳಿದರು.

ಜೂನ್ 1 ರಿಂದ ಸೆಪ್ಟೆಂಬರ್ 30ರ ವರೆಗೆ 48485 ಮನೆ ಹಾನಿ ಸಂಭವಿಸಿದ್ದು, 42,661 ಮನೆಗಳಿಗೆ ಪರಿಹಾರ ವಿತರಿಸಲಾಗಿದೆ. ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಒಟ್ಟು 635.13 ಕೋಟಿ ಲಭ್ಯವಿದೆ ಎಂದರು.







ಕರ್ನಾಟಕ ಸರ್ಕಾರಕ್ಕೆ ಎನ್‌ಜಿಟಿ ಆದೇಶ; ಜಲಕಾಯ ಅಭಿವೃದ್ಧಿಗೆ ಬಳಸಲು ನಿರ್ದೇಶನ

ಚಂದಾಪುರ ಕೆರೆಗೆ ₹500 ಕೋಟಿ ಪರಿಹಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಚಂದಾಪುರ ಕೆರೆಗೆ ಸುತ್ತಮುತ್ತಲ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಕೈಗಾರಿಕೆಗಳ ಕೊಳಚೆ ನೀರು ಸೇರಿ ಅಪಾರ ಹಾನಿ ಉಂಟಾಗಿದ್ದು, ಈ ಪರಿಸರ ಹಾನಿ ಸರಿಪಡಿಸಲು ಕರ್ನಾಟಕ ಸರ್ಕಾರವು ಕೆರೆಗೆ ₹500 ಕೋಟಿ ಪರಿಹಾರ ನೀಡಬೇಕು ಎಂದು ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠ ಆದೇಶಿಸಿದೆ.

ಚಂದಾಪುರ ಕೆರೆ ಮಾಲಿನ್ಯ ಪ್ರಕರಣದ ವಿಚಾರಣೆ ನಡೆಸುತ್ತಿರುವ ಎನ್‌ಜಿಟಿ ಮುಖ್ಯಸ್ಥ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯೆಲ್, ನ್ಯಾಯಮೂರ್ತಿ ಸುಧೀರ್ ಅಗರವಾಲ್, ತಜ್ಞ ಸದಸ್ಯರಾದ ಪ್ರೊ. ಸೆಂಥಿಲ್ ವೇಲ್, ಡಾ.ಅಫ್ರೋಜ್ ಅಹ್ಮದ್ ಅವರನ್ನು ಒಳಗೊಂಡ ಪೀಠ ಈ ಆದೇಶ ಹೊರಡಿಸಿದೆ.

ಈ ಪರಿಹಾರದ ಮೊತ್ತವನ್ನು ಒಂದು ತಿಂಗಳಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಖಾತೆಯಲ್ಲಿ ಇಡಬೇಕು. ಈ ಮೊತ್ತವನ್ನು ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸಬೇಕು. ಕೆರೆಯ ಪುನರುಜ್ಜೀವನಕ್ಕೆ ಸಮಗ್ರ ಯೋಜನೆ ರೂಪಿಸಬೇಕು. ಒಂದು ವೇಳೆ ಈ ಮೊತ್ತ ಕಡಿಮೆಯಾದರೆ ಹೆಚ್ಚುವರಿ ಅನುದಾನವನ್ನು ಒದಗಿಸಬೇಕು. ಅಭಿವೃದ್ಧಿ ಕಾಮಗಾರಿ ನಡೆಸಿ ಆರು ತಿಂಗಳಲ್ಲಿ ವರದಿ ಸಲ್ಲಿಸಬೇಕು ಎಂದೂ ಪೀಠ ನಿರ್ದೇಶನ ನೀಡಿದೆ. ಪ್ರಕರಣದ ವಿಚಾರಣೆಯನ್ನು 2023ರ ಫೆಬ್ರುವರಿ 22ಕ್ಕೆ ಮುಂದೂಡಿದೆ.

ಕೆರೆಯ ಅಭಿವೃದ್ಧಿಯ ಮೇಲೆ ನಿಗಾ ವಹಿಸಲು ಕರ್ನಾಟಕ ಜೌಗು ಪ್ರದೇಶ ಪ್ರಾಧಿಕಾರದ ಮುಖ್ಯಸ್ಥರ ನೇತೃತ್ವದಲ್ಲಿ ಮೇಲ್ವಿಚಾರಣಾ ಸಮಿತಿಯನ್ನು ರಚಿಸಬೇಕು. ಈ ಸಮಿತಿಯಲ್ಲಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಸಚಿವಾಲಯದ ಪ್ರಾದೇಶಿಕ ಅಧಿಕಾರಿ, ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು, ಜಿಲ್ಲಾಧಿಕಾರಿ, ಕೆಐಎಡಿಬಿಯ ಅಧಿಕಾರಿ ಇರಬೇಕು. ಈ ಸಮಿತಿಯು ಒಂದು ತಿಂಗಳೊಳಗೆ ಸಭೆ ಸೇರಿ ರೂಪರೇಷೆ ಸಿದ್ಧಪಡಿಸಬೇಕು ಎಂದೂ ಪೀಠ ಸೂಚಿಸಿದೆ.

ಕೆರೆಯ ಅಭಿವೃದ್ಧಿಗೆ ಕ್ರಿಯಾಯೋಜನೆ ರೂಪಿಸುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಲಾಗಿತ್ತು. ಈ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ಮುಖ್ಯ ಕಾರ್ಯದರ್ಶಿಯವರು ವರದಿ ಸಲ್ಲಿಸಿದ್ದಾರೆ. ಸ್ಥಳೀಯ ಪ್ರಾಧಿಕಾರಗಳ ನಿರ್ಲಕ್ಷ್ಯದಿಂದ ಜಲಕಾಯದ ಪರಿಸರ ವ್ಯವಸ್ಥೆ ಮೇಲೆ ಹಾನಿ ಉಂಟಾಗಿದೆ. ಕೆರೆಯ ಮೀಸಲು ಪ್ರದೇಶದ ಸಂರಕ್ಷಣೆಯಲ್ಲೂ ಲೋಪ ಆಗಿದೆ ಎಂದು ಪೀಠ ಹೇಳಿದೆ.

‘ಕೊಳಚೆ ನೀರು ಕೆರೆಗೆ’

ಈ ಜಲಕಾಯವು 24.27 ಎಕರೆ ಪ್ರದೇಶದಲ್ಲಿದೆ. ಹೀಲಳಿಗೆ ಗ್ರಾಮದಲ್ಲಿ 7.2 ಎಕರೆ ಹಾಗೂ ಚಂದಾಪುರ ಪಟ್ಟಣದಲ್ಲಿ 17.25 ಎಕರೆ ಪ್ರದೇಶದಲ್ಲಿ ವ್ಯಾಪಿಸಿದೆ. ನಿರ್ಮಾಣ ಚಟುವಟಿಕೆಗಳಿಗಾಗಿ ಜಲಕಾಯದ ಎರಡು ಎಕರೆಯನ್ನು ಒತ್ತುವರಿ ಮಾಡಲಾಗಿದೆ. ಕೆರೆಯ ಮೀಸಲು ಪ್ರದೇಶದಲ್ಲಿ ಸರ್ಕಾರಿ ಆಸ್ಪತ್ರೆ ಹಾಗೂ ಅಂಗಡಿಗಳು ನಿರ್ಮಾಣವಾಗಿವೆ. ಕೆರೆಯ ಸುತ್ತ ಹಾಕಿರುವ ಬೇಲಿ ಕಿತ್ತು ಹೋಗಿದೆ. ಕೆರೆಯ ಪಕ್ಕದಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಇಲ್ಲ. ಹೀಗಾಗಿ, ಕೊಳಚೆ ನೀರು ನೇರವಾಗಿ ಜಲಕಾಯವನ್ನು ಸೇರುತ್ತಿದೆ. ಜಿಗಳಿ-ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಕೈಗಾರಿಕಾ ತ್ಯಾಜ್ಯವು ಕೆರೆಯನ್ನು ಸೇರುತ್ತಿದೆ. ಇದು ಸರ್ಕಾರ ರೂಪಿಸಿರುವ ನಿಯಮಕ್ಕೆ ವಿರುದ್ಧ. ಕೈಗಾರಿಕೆಗಳು ತ್ಯಾಜ್ಯ ನೀರನ್ನು ಜಲಕಾಯಕ್ಕೆ ಬಿಡುವಂತಿಲ್ಲ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಈ ಕೈಗಾರಿಕಾ ಪ್ರದೇಶದಲ್ಲಿ ಔಷಧ ಉತ್ಪಾದಿಸುವ ಕೈಗಾರಿಕೆಗಳು, ಪವರ್ ಕೋಟಿಂಗ್, ಎಲೆಕ್ಟ್ರೋಪ್ಲೇಟಿಂಗ್ ಸೇರಿದಂತೆ ಕೆಂಪು ವರ್ಗೀಕರಣದ 195 ಕೈಗಾರಿಕೆಗಳು ಇವೆ. ಬೆಂಗಳೂರು ನಗರದ ಜನರ ಜಲ ದಾಹವನ್ನು ನೀಗಿಸಲು ಕೆರೆಯಲ್ಲಿ ಕೊಳಚೆ ಬಾವಿಗಳನ್ನು ಕೊರೆದು ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಜಲಕಾಯದ ನೀರಿನ ಗುಣಮಟ್ಟ ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆ ವರದಿ ಸಲ್ಲಿಸಿದೆ ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ಸುದ್ದಿ 2 ನಿಮಿಷ

ಮುರುಘಾ ಶರಣರ ವಿರುದ್ಧ ಮತ್ತೊಂದು ಎಫ್‌ಐಆರ್

ಮೈಸೂರು: ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಇಲ್ಲಿನ ನಜರಬಾದ್ ಠಾಣೆಯಲ್ಲಿ ಗುರುವಾರ ತಡರಾತ್ರಿ ಪೋಕ್ಸೊ ಕಾಯ್ದೆಯಡಿ ಮತ್ತೊಂದು ಎಫ್‌ಐಆರ್ ದಾಖಲಾಗಿದೆ.

ಮಠದ ವಿದ್ಯಾರ್ಥಿ ನಿಲಯದಲ್ಲಿದ್ದ ಬಾಲಕಿಯು ಶ್ರೀಗಳ ವಿರುದ್ಧ ಲೈಂಗಿಕ ಕಿರುಕುಳದ ದೂರು ನೀಡಿದ್ದಾಳೆ.

ಮೈಸೂರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಎದುರು ಪೋಷಕರೊಂದಿಗೆ ಹಾಜರಾದ ಬಾಲಕಿಯು, ಶರಣರಿಂದ ತನಗಾಗಿರುವ ಕಿರುಕುಳದ ಬಗ್ಗೆ ಮಾಹಿತಿ ನೀಡಿದ್ದಳು.

ಮಕ್ಕಳ ಕಲ್ಯಾಣ ಸಮಿತಿಯ ಆದೇಶದ ಪ್ರಕಾರ ಎಫ್‌ಐಆರ್ ದಾಖಲಾಗಿದೆ ಎಂದು ಪೊಲೀಸ್ ಮೂಲಗಳು ಖಚಿತಪಡಿಸಿವೆ.



ಒಡಿಶಾ ಉತ್ಸವದ ಪೋಸ್ಟರ್ ಗುರುವಾರ ಬಿಡುಗಡೆ ಮಾಡಲಾಯಿತು.

ಇಂದಿನಿಂದ 3 ದಿನ ಒಡಿಶಾ ಉತ್ಸವ

ಬೆಂಗಳೂರು: ಒಡಿಯಾ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅಕ್ಟೋಬರ್ 14ರಿಂದ 16ರ ವರೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ‘ಒಡಿಶಾ ಉತ್ಸವ’ವನ್ನು ಹಮ್ಮಿಕೊಳ್ಳಲಾಗಿದೆ.

‘ಈ ಉತ್ಸವವನ್ನು ಒಡಿಶಾ ಸಂಗೀತ ನಾಟಕ ಅಕಾಡೆಮಿ, ಒಡಿಶಾ ಸಾಹಿತ್ಯ ಅಕಾಡೆಮಿ ಮತ್ತು ಒಡಿಶಾ ಲಲಿತ ಕಲಾ ಅಕಾಡೆಮಿ ಸಹೋಗದಲ್ಲಿ ಆಯೋಜಿಸಲಾಗಿದೆ. ಅಕ್ಟೋಬರ್ 14ರಂದು ಬೆಳಿಗ್ಗೆ 10.30ಕ್ಕೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಗುವುದು. ಇದೇ ಮೊದಲ ಬಾರಿಗೆ ಒಡಿಶಾ ರಾಜ್ಯದ ಹೊರಗಡೆ ಈ ಉತ್ಸವವನ್ನು ಆಯೋಜಿಸಲಾಗಿದೆ’ ಎಂದು ಒಡಿಯಾ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಹೆಚ್ಚುವರಿ ಕಾರ್ಯದರ್ಶಿ ರಂಜನ್ ಕುಮಾರ್ ದಾಸ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅಕ್ಟೋಬರ್ 14ರಂದು ಸಂಜೆ 6.30ಕ್ಕೆ ಭುವನೇಶ್ವರದ ರೇಡಿಯೊ ಚಾಕೊಲೇಟ್‌ನಿಂದ ‘ಅಹೆ ನೀಲಾ ಸೈಲಾ’ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. 15ರಂದು 6.30ಕ್ಕೆ ಒಡಿಶಿ ಗಾಯನ ಸಂಗೀತಾ ಪಾಂಡ, ರೂಪಕ್ ಪರಿದಾ, ವಿವಿಧ ಒಡಿಶಾ ಕಲಾ ಪ್ರಕಾರಗಳನ್ನು ಪ್ರದರ್ಶಿಸಲಾಗುತ್ತಿದೆ. 16ರಂದು ದಾಸ್ ಮತ್ತು ಲೋಕನಾಥ್ ದಾಸ್ ತಂಡದಿಂದ ಚೌ ನೃತ್ಯ, ಸಂಬಲ್‌ಪುರಿ, ಸಿಂಘಾರಿ ನೃತ್ಯ ಪ್ರದರ್ಶಿಸಲಾಗುವುದು. ಈ ಉತ್ಸವದಲ್ಲಿ ಎಲ್ಲರೂ ಮುಕ್ತವಾಗಿ ಭಾಗವಹಿಸಬಹುದು. ಎಲ್ಲರಿಗೂ ಉಚಿತ ಪ್ರವೇಶವಿದೆ’ ಎಂದು ಮಾಹಿತಿ ನೀಡಿದರು.

ಈ ಕಾರ್ಯಕ್ರಮದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಸುಧಾ ಮೂರ್ತಿ, ಆನೂರು ಅನಂತಕೃಷ್ಣ ಶರ್ಮ, ನಿರುಪಮಾ ರಾಜೇಂದ್ರ, ಪ್ರವೀಣ್.ಡಿ.ರಾವ್ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಚಿತ್ರಾವಳಿ



ಕಾಮೆಡ್‌ಕೆಸ್ ಇನೋವೇಷನ್ ಹಬ್ ಅನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಉದ್ಘಾಟಿಸಿದರು. ಕಾಮೆಡ್ ಕೆ ಮತ್ತು ಗೋಕುಲ ಎಜುಕೇಷನ್ ಫೌಂಡೇಷನ್‌ನ ಅಧ್ಯಕ್ಷ ಡಾ.ಎಂ.ಆರ್. ಜಯರಾಂ, ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಎಸ್. ಕುಮಾರ್, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಸದಸ್ಯ ಕಾರ್ಯದರ್ಶಿ ಡಾ. ರಾಜೀವ್ ಕುಮಾರ್, ಭಾರತೀಯ ಕೈಗಾರಿಕಾ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಅರ್ಜುನ್ ರಂಗ, ಫೆಡರೇಷನ್ ಆಫ್ ಕರ್ನಾಟಕದ ಅಧ್ಯಕ್ಷ ಗೋಪಾಲ ರೆಡ್ಡಿ ಮತ್ತಿತರರು ಇದ್ದಾರೆ.



ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿ ಕೆಂಪಾಪುರ ಗ್ರಾಮದಲ್ಲಿ ₹50 ಲಕ್ಷ ವೆಚ್ಚದಲ್ಲಿ ನಿರ್ಮಿಸುತ್ತಿರುವ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕ ಎಸ್. ಆರ್. ವಿಶ್ವನಾಥ್ ಗುದ್ದಲಿ ಪೂಜೆ ನೆರವೇರಿಸಿದರು. ಬಿಜೆಪಿ ಮುಖಂಡರಾದ ಚೊಕ್ಕನಹಳ್ಳಿ ವೆಂಕಟೇಶ್, ಕೆಂಪಾಪುರ ಗ್ರಾಮ ಪಂಚಾಯಿತಿ ಸದಸ್ಯ ಕಿರಣ್ ಕುಮಾರ್ ದಿಬ್ಬೂರು ಜಯಣ್ಣ, ಕೆ.ಸಿ.ಬಾಬು ಇದ್ದಾರೆ.

ಸಹಮತದ ಪ್ರಸ್ತಾವ ಸಲ್ಲಿಕೆಗೆ ಸೂಚನೆ

ಓಲಾ, ಉಬರ್ ಜೊತೆ ಸಭೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆಗೆ ನ್ಯಾಯಯುತ ದರ ವಿಧಿಸುವುದಕ್ಕೆ ಸಂಬಂಧಿಸಿದಂತೆ ಓಲಾ ಮತ್ತು ಉಬರ್ ಕಂಪನಿಗಳ ಜೊತೆ ಸಭೆ ನಡೆಸಿ ಸಹಮತದ ಪ್ರಸ್ತಾವನೆಯೊಂದನ್ನು ಸಲ್ಲಿಸಿ’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

‘ಓಲಾ, ಉಬರ್ ಮತ್ತು ರ್‍ಯಾಪಿಡೊ ಕಂಪನಿಯವರು ಆ್ಯಪ್ ಆಧಾರಿತ ಆಟೊರಿಕ್ಷಾ ಪ್ರಯಾಣಿಕರ ಸೇವೆಗಳನ್ನು ತಕ್ಷಣದಿಂದ ಸ್ಥಗಿತಗೊಳಿಸುವಂತೆ ಸಾರಿಗೆ ಇಲಾಖೆ ಆಯುಕ್ತರು ಹೊರಡಿಸಿರುವ ಆದೇಶ ರದ್ದುಗೊಳಿಸಬೇಕು’ ಎಂದು ಕೋರಿ ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ಉಬರ್ ಇಂಡಿಯಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸಲ್ಲಿಸಿರುವ ಪ್ರತ್ಯೇಕ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, ‘ಆಟೊರಿಕ್ಷಾ ಸೇವೆಯು ಟ್ಯಾಕ್ಸಿ ಸೇವೆಯಡಿ ಬರುವುದಿಲ್ಲ. ಅರ್ಜಿದಾರರು ಕರ್ನಾಟಕ ರಾಜ್ಯ ಬೇಡಿಕೆಯಿರುವ ಆಧಾರಿತ ಸಾರಿಗೆ ತಂತ್ರಜ್ಞಾನ ಅಗ್ರಿಗೇಟರ್ಸ್ ನಿಯಮಗಳು-2016ರ ನಿಯಮ 4ರ ಅಡಿ ಪರವಾನಗಿ ಪಡೆದಿಲ್ಲ. ಉಳಿದಂತೆ ಆಟೊರಿಕ್ಷಾ ಸೇವೆಗೆ ರಾಜ್ಯ ಸರ್ಕಾರ ನಿರ್ದಿಷ್ಟ ದರ ನಿಗದಿಪಡಿಸಿದೆ. ಆದರೆ, ಅದನ್ನು ಅರ್ಜಿದಾರ ಕಂಪನಿಗಳು ಪಾಲನೆ ಮಾಡುತ್ತಿಲ್ಲ’ ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸೇವೆ ಸ್ಥಗಿತಗೊಳಿಸಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ. ಹೆಚ್ಚಿನ ದರ ಸಂಗ್ರಹಿಸುತ್ತಿರುವ ಅಂಶವನ್ನು ನ್ಯಾಯಾಲಯ ವಿಚಾರಣೆಯಲ್ಲಿ ಪರಿಗಣಿಸಲಿದೆ. ಆದ್ದರಿಂದ, ದರ ವಿಧಿಸುವ ವಿಚಾರದಲ್ಲಿ ಒಮ್ಮತದ ಅಭಿಪ್ರಾಯಕ್ಕೆ ಬರಬೇಕು’ ಎಂದು ಮೌಖಿಕ ಸಲಹೆ ನೀಡಿತು.

‘ಪ್ರಕರಣದಲ್ಲಿ ಅಂತಿಮ ನಿರ್ಧಾರಕ್ಕೆ ಬರುವ ಮುನ್ನ ತಾತ್ಕಾಲಿಕ ಪರಿಹಾರ ಕಂಡುಕೊಳ್ಳುವುದು ಅನಿವಾರ್ಯವಿದೆ. ಹಾಗಾಗಿ, ರಾಜ್ಯ ಸರ್ಕಾರ ಮತ್ತು ಅರ್ಜಿದಾರರು ಸಭೆ ನಡೆಸಿ ಒಮ್ಮತ ಸಾಧಿಸಬೇಕು’ ಎಂದು ಸೂಚಿಸಿ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿತು. ‘ಸೇವೆ ಸ್ಥಗಿತಗೊಳಿಸುವುದಕ್ಕೆ ಸರ್ಕಾರ ಸಕಾರಣ ನೀಡಿಲ್ಲ. ಆಯುಕ್ತರ ಆದೇಶ ಏಕಪಕ್ಷೀಯವಾಗಿದೆ’ ಎಂಬುದು ಅರ್ಜಿದಾರ ಕಂಪನಿಗಳ ಪ್ರತಿಪಾದನೆ.

ಮುಂದುವರಿದ ಹಗ್ಗ ಜಗ್ಗಾಟ

ಓಲಾ, ಉಬರ್ ಮತ್ತು ರ್‍ಯಾಪಿಡೊ ಆ್ಯಪ್‌ನಲ್ಲಿ ಆಟೊರಿಕ್ಷಾ ಸೇವೆ ಮುಂದುವರಿದ್ದು, ಈ ಆ್ಯಪ್‌ಗಳನ್ನು ನಿರ್ವಹಿಸುವ ಅಗ್ರಿಗೇಟರ್ ಕಂಪನಿಗಳು ಮತ್ತು ಸಾರಿಗೆ ಇಲಾಖೆ ನಡುವೆ ಹಗ್ಗ ಜಗ್ಗಾಟವೂ ಮುಂದುವರಿದಿದೆ. ಈ ನಡುವೆ ಅಟೊ ಸೇವೆಗೆ ಅನುಕೂಲ ಮಾಡಿಕೊಡುವ ಬಗ್ಗೆಯೂ ಸಾರಿಗೆ ಇಲಾಖೆ ಚಿಂತನೆ ನಡೆಸಿದೆ.

ಆ್ಯಪ್ ಆಧಾರಿತ ಸೇವೆಗೆ ಜನರೂ ಒಗ್ಗಿಕೊಂಡಿದ್ದು, ಆಟೊ ಚಾಲಕರು ಕೂಡ ಇವುಗಳನ್ನೇ ಆಧರಿಸಿಕೊಂಡಿದ್ದಾರೆ. ಆದರೆ, ಬೇಕಾಬಿಟ್ಟಿ ದರ ವಿಧಿಸುತ್ತಿರುವುದುರಿಂದ ಪ್ರಯಾಣಿಕರು ತೊಂದರೆ ಅನುಭವಿಸುವಂತಾಗಿದ್ದು, ಇದಕ್ಕೆ ಕಡಿವಾಣ ಹಾಕಿ ಆಟೊ ಸೇವೆ ಮುಂದುವರಿಸುವ ಬಗ್ಗೆ ಆಲೋಚನೆ ನಡೆಸಲಾಗಿದೆ ಎಂದು ಸಾರಿಗೆ ಇಲಾಖೆ ಮೂಲಗಳು ಹೇಳಿವೆ.

ಜಿಲ್ಲಾಡಳಿತ ನಿಗದಿ ಮಾಡಿರುವ ದರ ಪಟ್ಟಿ ಪ್ರಕಾರ ಮೊದಲ 2 ಕಿಲೋ ಮೀಟರ್‌ಗೆ ₹30 ಮತ್ತು ನಂತರ ಪ್ರತಿ ಕಿಲೋ ಮೀಟರ್‌ಗೆ ₹15ರಂತೆ ದರ ಇದೆ. ಆ್ಯಪ್ ಆಧಾರಿತ ಸೇವೆಯಲ್ಲಿ ಹೆಚ್ಚು ಕಡಿಮೆ ಇದೇ ದರ ನಿಗದಿ ಮಾಡುವ ಸಾಧ್ಯತೆ ಇದೆ. ಆದರೆ, ಇದರ ಜತೆಗೆ ಜಿಎಸ್‌ಟಿ ಮತ್ತು ಕನ್ವಿನಿಯನ್ಸ್ ಶುಲ್ಕವನ್ನೂ ಸೇರಿಸಲು ಅಗ್ರಿಗೇಟರ್ ಕಂಪನಿಗಳು ಪ್ರಸ್ತಾಪಿಸಿದ್ದವು. ಈ ವಿಷಯದಲ್ಲಿ ಸಾರಿಗೆ ಇಲಾಖೆ ಮತ್ತು ಕಂಪನಿಗಳ ನಡುವೆ ಹಗ್ಗ ಜಗ್ಗಾಟ ಮುಂದುವರಿದಿದೆ. ಈ ವಿಷಯವನ್ನು ನ್ಯಾಯಾಲಯದ ಗಮನಕ್ಕೂ ತರಲು ಸಾರಿಗೆ ಇಲಾಖೆ ನಿರ್ಧರಿಸಿದೆ ಎಂದೂ ಮೂಲಗಳು ತಿಳಿಸಿವೆ.

ಅಗ್ರಿಗೇಟರ್ ಕಂಪನಿಗಳ ಜತೆ ಸಾರಿಗೆ ಇಲಾಖೆ ಕಾರ್ಯದರ್ಶಿ ಸಭೆ ನಡೆಸಿದರು. ಆ್ಯಪ್ ಆಧಾರಿತ ಸೇವೆ ಒದಗಿಸುತ್ತಿರುವ ಆಟೊರಿಕ್ಷಾಗಳ ಸಂಖ್ಯೆ ಎಷ್ಟು, ಸೇವೆಗೆ ವಿಧಿಸುತ್ತಿರುವ ದರದ ವಿವರಗಳನ್ನು ಒದಗಿಸುವಂತೆ ಕಂಪನಿಗಳನ್ನು ಸಾರಿಗೆ ಇಲಾಖೆ ಕೇಳಿದೆ. ಈ ಮಾಹಿತಿ ಆಧರಿಸಿ ದರ ನಿಗದಿ ಮತ್ತು ತಾತ್ಕಾಲಿಕ ಪರ್ಯಾಯ ವ್ಯವಸ್ಥೆ ಮಾಡಲಾಗುವುದು ಎಂದು ಅಧಿಕಾರಿಯೊಬ್ಬರು ಹೇಳಿದರು.





ಆಯುಕ್ತ ಕುಮಾರನಾಯಕ ವಿರುದ್ಧ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲು ತೀರ್ಮಾನ

ಸಭೆಗೆ ಹಾಜರಾಗದ ಬಿಡಿಎ ಆಯುಕ್ತ: ಅಸಮಾಧಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಪ್ಪಚ್ಚು ರಂಜನ್ ಅಧ್ಯಕ್ಷತೆಯಲ್ಲಿ ನಡೆದ ಸಭೆ
- ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಕೂಡ ಗೈರು

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆ ಮೂಲ ಸೌಕರ್ಯ ಕುರಿತ ವಿಧಾನಸಭೆ ಅರ್ಜಿಗಳ ಸಮಿತಿ ಸಭೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಗೈರಾಗಿದ್ದು ಸಮಿತಿ ಸದಸ್ಯರ ಅಸಮಾಧಾನಕ್ಕೆ ಕಾರಣವಾಯಿತು. ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲು ಸಮಿತಿ ತೀರ್ಮಾನಿಸಿತು.

ಅಪ್ಪಚ್ಚು ರಂಜನ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆಗೆ ಬಿಡಿಎ ಆಯುಕ್ತ ಕುಮಾರನಾಯಕ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಗೈರಾಗಿದ್ದರು.

ಸಭೆಗೆ ಹಾಜರಾಗಲು ಸಾಧ್ಯವಾಗದ ಬಗ್ಗೆ ರಾಕೇಶ್ ಸಿಂಗ್ ಸಭೆಗೆ ಮಾಹಿತಿ ನೀಡಿದ್ದರು. ಆದರೆ, ಕುಮಾರ ನಾಯಕ ಅವರು ಯಾವುದೇ ಮಾಹಿತಿ ನೀಡಿರಲಿಲ್ಲ. ಇದು ಸಮಿತಿಯ ಅಸಮಾಧಾನಕ್ಕೆ ಕಾರಣವಾಯಿತು. ಸಭೆಗೆ ಬರಲು ಸಾಧ್ಯವಾಗದ ಬಗ್ಗೆ ಪತ್ರ ಕಳುಹಿಸುವ ಸೌಜನ್ಯವನ್ನೂ ತೋರದೆ ಶಾಸಕಾಂಗ ಸಮಿತಿಗೆ ಅವಮಾನ ಮಾಡಿದ್ದಾರೆ ಎಂದು ಸಭೆ ಆಕ್ಷೇಪ ವ್ಯಕ್ತಪಡಿಸಿತು. ಅವರ ವಿರುದ್ಧ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು ಎಂದು ಅಪ್ಪಚ್ಚು ರಂಜನ್ 'ಪ್ರಜಾವಾಣಿ'ಗೆ ತಿಳಿಸಿದರು.

ಕೆಂಪೇಗೌಡ ಬಡಾವಣೆ ಮತ್ತು ಬಂಡೇಮಠ ಬಡಾವಣೆಗಳಿಗೆ ಮೂಲಸೌಕರ್ಯ ಒದಗಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಬೇಕಿದೆ. ಬಿಡಿಎ ಆಯುಕ್ತರೇ ಇಲ್ಲದೆ ಯಾವುದೇ ಪರಿಹಾರ ಮಾರ್ಗ ಕಂಡುಕೊಳ್ಳಲು ಆಗುವುದಿಲ್ಲ ಎಂದು ಸದಸ್ಯರು ಬೇಸರ ವ್ಯಕ್ತಪಡಿಸಿದರು.

ಅರ್ಜಿಗಳ ಸಮಿತಿ ಮುಂದೆ ಈ ಹಿಂದೆ ಬಿಡಿಎ ಅಧಿಕಾರಿಗಳು ಒಪ್ಪಿಕೊಂಡಿರುವಂತೆ 2022ರ ಡಿಸೆಂಬರ್ 21ರೊಳಗೆ ಕೆಂಪೇಗೌಡ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸಬೇಕಿದೆ. ಆದರೆ, ಪ್ರಸ್ತುತ ಶೇ 50ರಷ್ಟು ಕಾಮಗಾರಿಯೂ ಪೂರ್ಣಗೊಂಡಿಲ್ಲ. ಸಮಿತಿಯು ಬಡಾವಣೆಗೇ ಭೇಟಿ ನೀಡಿ ಈ ಹಿಂದೆ ಪರಿಶೀಲನೆ ನಡೆಸಿತ್ತು. ಕಾಮಗಾರಿ ಪ್ರಗತಿಯ ಬಗ್ಗೆ ಬಿಡಿಎ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಬೇಕಿತ್ತು.

'ಮೀಸಲಾತಿ: ಸ್ವಾಮೀಜಿ ಮಾತು ಕೇಳಬೇಡಿ'

ಪ್ರಜಾವಾಣಿ ವಾರ್ತೆ



ಬಸವ ಜಯ ಮೃತ್ಯುಂಜಯ ಸ್ವಾಮೀಜಿ

ಬೆಂಗಳೂರು: 'ಮೀಸಲಾತಿ ಕಲ್ಪಿಸುವ ವಿಷಯದಲ್ಲಿ ಸರ್ಕಾರ ಯಾವುದೇ ಸ್ವಾಮೀಜಿ ಮಾತುಗಳನ್ನು ಕೇಳುವುದು ಬೇಡ. ಬಡ ರೈತರು ಮತ್ತು ವಿದ್ಯಾರ್ಥಿಗಳ ಮಾತುಗಳನ್ನು ಆಲಿಸಿ. ಅವರ ಪರಿಸ್ಥಿತಿಯನ್ನೇ ಮಾನದಂಡವನ್ನಾಗಿ ಪರಿಗಣಿಸಿ ಮೀಸಲಾತಿ ಕಲ್ಪಿಸಲಿ' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸುಖವಾಗಿರುವ ಸ್ವಾಮೀಜಿಗೆ ಬಡವರ ಕಷ್ಟಗಳು ಗೊತ್ತಾಗುವುದಿಲ್ಲ. ಹೀಗಾಗಿ, ಅವರು ಸರ್ಕಾರದ ಮೇಲೆ ಮೀಸಲಾತಿಗೆ ಒತ್ತಡ ಹಾಕುವ ಪ್ರಯತ್ನ ಮಾಡುವುದಿಲ್ಲ. ನಿಧಾನವಾಗಿಯೇ ಸರ್ಕಾರ ಮೀಸಲಾತಿ ನೀಡಲಿ ಎನ್ನುವ ಧೋರಣೆ ಅವರದ್ದು' ಎಂದು ವಚನಾನಂದ ಸ್ವಾಮೀಜಿ ಹೆಸರು ಪ್ರಸ್ತಾಪಿಸದೆಯೇ ಅಸಮಾಧಾನ ವ್ಯಕ್ತಪಡಿಸಿದರು.

'ಸುಮಾರು 27 ವರ್ಷಗಳಿಂದ ಪಂಚಮಸಾಲಿ ಸಮಾಜ 2ಎ ಮೀಸಲಾತಿಗಾಗಿ ಹೋರಾಟ ನಡೆಸುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಹೋರಾಟ ತೀವ್ರ ಸ್ವರೂಪ ಪಡೆದಿದೆ. ಸದನದ ಹೊರಗೆ ಮತ್ತು ಒಳಗೆ ಹೋರಾಟ ಮಾಡಲಾಗಿದೆ. ಮೀಸಲಾತಿ ವಿಷಯದಲ್ಲಿ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಿಲ್ಲ. ಮೀಸಲಾತಿ ಏಕೆ ಕಲ್ಪಿಸುವುದಿಲ್ಲ ಎನ್ನುವುದನ್ನಾದರೂ ಸರ್ಕಾರ ಸ್ಪಷ್ಟಪಡಿಸಲಿ' ಎಂದು ಒತ್ತಾಯಿಸಿದರು.

'ಸರ್ಕಾರ ಅ.21ರ ಒಳಗೆ ಸರ್ವಪಕ್ಷಗಳ ಸಭೆ ಕರೆದು ತೀರ್ಮಾನ ಕೈಗೊಳ್ಳಬೇಕು. ಇಲ್ಲದಿದ್ದರೆ, ಬೆಳಗಾವಿ ಜಿಲ್ಲೆಯ ಹುಕ್ಕೇರಿಯಲ್ಲಿ 21ರಂದು ನಡೆಯಲಿರುವ ಲಿಂಗಾಯತ ಪಂಚಮಸಾಲಿ ಬೃಹತ್ ಸಮಾವೇಶದಲ್ಲಿ ವಿಧಾನ ಸೌಧ ಮುತ್ತಿಗೆಗೆ ಕರೆ ನೀಡಲಾಗುವುದು' ಎಂದು ತಿಳಿಸಿದರು.

ಸಿಇಟಿ: ಕೋರ್ಸ್ ಆಯ್ಕೆ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಇಟಿ ಅಭ್ಯರ್ಥಿಗಳು ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ ಮತ್ತು ಪಶು ಸಂಗೋಪನೆ, ಬಿ–ಫಾರ್ಮಾ, ಡಿ–ಫಾರ್ಮಾ ಕೋರ್ಸ್‌ಗಳ ಪ್ರವೇಶಕ್ಕಾಗಿ ಇಚ್ಛೆ, ಆಯ್ಕೆಗಳನ್ನು ದಾಖಲಿಸಲು ಅ.14ರಿಂದ ಅವಕಾಶ ಕಲ್ಪಿಸಲಾಗಿದೆ.

ಅಂದು ಮಧ್ಯಾಹ್ನ 1ರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಪೋರ್ಟಲ್ ತೆರೆಯಲಾಗುವುದು, ಮೊದಲ ಸುತ್ತಿನ ಸೀಟು ಹಂಚಿಕೆಯ ವಿವರವಾದ ವೇಳಾಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಕೆಇಎ ತಿಳಿಸಿದೆ.



ಕಾರ್ಯಕ್ರಮದಲ್ಲಿ ಸಿಪಿಆರ್ ತರಬೇತಿಯ ಪ್ರಾತ್ಯಕ್ಷಿಕೆ ನೀಡಲಾಯಿತು. ಡಾ.ರಂಜನ್ ಶೆಟ್ಟಿ, ಡಾ. ಕಾವ್ಯಾ ಮಲ್ಲಿಕಾರ್ಜುನ್, ಬಿ.ಆರ್. ರಂವಿಕಾಂತೇಗೌಡ, ಡಾ. ಸುದರ್ಶನ್ ಬಲ್ಲಾಳ್, ಡಾ. ಮನೀಶ್ ರೈ ಹಾಗೂ ಡಾ. ಮೇಬಲ್ ಇದ್ದಾರೆ.

'ನಗರದ ನಾಗರಿಕರಲ್ಲಿ ಹೃದಯದ ಸಮಸ್ಯೆ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಜೀವನ ಶೈಲಿ, ಪಾಶ್ಚಾತ್ಯ ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ನಗರದ ಜನರಲ್ಲಿ ಹೃದಯದ ಸಮಸ್ಯೆ ಹೆಚ್ಚಳವಾಗುತ್ತಿದೆ. ಆದ್ದರಿಂದ ಹೃದಯದ ಪ್ರಥಮ ಚಿಕಿತ್ಸೆ ವಿಧಾನಗಳನ್ನು ಪ್ರತಿಯೊಬ್ಬರೂ ಅರಿತಿರಬೇಕು' ಎಂದು ಮಣಿಪಾಲ್ ಆಸ್ಪತ್ರೆಗಳ ಸಮೂಹದ ಅಧ್ಯಕ್ಷ ಡಾ. ಎಚ್. ಸುದರ್ಶನ್ ಬಲ್ಲಾಳ್ ತಿಳಿಸಿದರು.

ಆಸ್ಪತ್ರೆಯು ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. 'ಎಲ್ಲ ವಯೋಮಾನದವರನ್ನೂ ಹೃದಯ ಸಮಸ್ಯೆ ಕಾಡಲಾರಂಭಿಸಿದೆ. ತುರ್ತು ಸಂದರ್ಭದಲ್ಲಿ ಚಿಕಿತ್ಸೆ ಒದಗಿಸಿದಲ್ಲಿ ವ್ಯಕ್ತಿ ಬದುಕುಳಿಯುವ ಸಾಧ್ಯತೆ ಇರುತ್ತದೆ. ಆದ್ದರಿಂದಲೇ ವಿವಿಧ ಸಂಚಾರ ವೃತ್ತಗಳಲ್ಲಿ ಕ್ಯೂಆರ್ ಕೋಡ್ ಫಲಕಗಳನ್ನು ಅಳವಡಿಸಲಾಗಿದೆ. ಬಿಬಿಎಂಪಿ ಮತ್ತು ಬೆಂಗಳೂರು ನಗರ ಪೊಲೀಸರ ಸಹಕಾರದಲ್ಲಿ ಅಳವಡಿಸಿರುವ ಕ್ಯೂಆರ್ ಕೋಡ್ ಫಲಕಗಳು, ಜನರಿಗೆ ಪ್ರಥಮ ಚಿಕಿತ್ಸೆ ಮತ್ತು ವೈದ್ಯಕೀಯ ಸೇವೆಗಳನ್ನು ಶೀಘ್ರ ನೀಡಲು ನೆರವಾಗುತ್ತವೆ' ಎಂದರು.

ಬೆಂಗಳೂರು ನಗರ ಸಂಚಾರ ಪೊಲೀಸ್ ಜಂಟಿ ಆಯುಕ್ತ ಬಿ.ಆರ್. ರವಿಕಾಂತೇಗೌಡ, 'ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಸಂಚಾರ ದೀಪಗಳಲ್ಲಿ ಹೃದಯದ ಆಕಾರ ಮೂಡಿಸಲಾಗುತ್ತಿದೆ. ಹೆಚ್ಚಿನ ಸಂಚಾರ ವೃತ್ತಗಳಲ್ಲಿ ಕ್ಯೂಆರ್ ಕೋಡ್ ಫಲಕ ಅಳವಡಿಸಿ, ಜಾಗೃತಿ ಮೂಡಿಸಲಾಗುವುದು' ಎಂದರು.

ಬನ್ನೇರುಘಟ್ಟದಲ್ಲಿ ಗಂಡು ಹುಲಿ ಸಾವು

ಪ್ರಜಾವಾಣಿ ವಾರ್ತೆ



ಹುಲಿ ಸುರೇಶ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ 13 ವರ್ಷದ ಗಂಡು ಹುಲಿ ಸುರೇಶ ಬುಧವಾರ ರಾತ್ರಿ ಮೃತಪಟ್ಟಿದೆ.

ಎರಡು ವರ್ಷಗಳಿಂದ ಹುಲಿ ಬೆನ್ನುಹುರಿಯ ಗಾಯ ಮತ್ತು ಹಿಂಭಾಗದ ಪಾರ್ಶ್ವವಾಯುವಿನಿಂದ ಅನಾರೋಗ್ಯಕ್ಕೆ ತುತ್ತಾಗಿತ್ತು. ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿ ಎರಡು ವರ್ಷದಿಂದ ಲೇಸರ್ ಮತ್ತು ಪೂರಕ ಚಿಕಿತ್ಸೆ ನೀಡಲಾಗಿತ್ತು.

ಕೆಲ ದಿನಗಳಿಂದ ಆಹಾರ ಸೇವಿಸದೆ ನಿತ್ರಾಣಗೊಂಡಿತ್ತು. ವೈದ್ಯರ ಸಲಹೆಯಂತೆ ದ್ರವರೂಪದ ಆಹಾರ ನೀಡಿ ನಿಗಾ ವಹಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಬುಧವಾರ ರಾತ್ರಿ ಮೃತಪಟ್ಟಿದೆ ಎಂದು ಬನ್ನೇರುಘಟ್ಟ ಉದ್ಯಾನದ ಪ್ರಕಟಣೆ ತಿಳಿಸಿದೆ.

BLDE (Deemed to be University)
Declared as Deemed to be University u/s 3 of UGC Act, 1956
Accredited with 'A' Grade by NAAC (Cycle-2)
The Constituent College
SHRI B. M. PATIL MEDICAL COLLEGE, HOSPITAL & RESEARCH CENTRE,
Ranked Top 50th Medical College in India by NIRF -2021
Smt. Bangaramma Sajjan Campus, B.M.Patil Road, VIJAYAPURA-586103, (KARNATAKA)
Ph: 08352-262770 Extn: 2329, 2330, www.bldedu.ac.in

Ph.D. Admission Notification 2022-23 (Batch - II)

BLDE (Deemed to be University) invites applications from eligible candidates for Ph.D. Programme in the Faculty of Medicine and Faculty of Allied Health Sciences.
For details related to specialization, eligibility and admission procedure, visit our website: www.bldedu.ac.in Last date for receiving applications: 31st October 2022, by 5.00pm

Sd/-
REGISTRAR







To know more, visit http://drivethefuture.tatamotors.com | Toll free number: 18002098282 | /officialtatamotorscars /TataMotors_Cars /tatamotorscars /TataMotorsCars

*Terms and conditions apply. This offer is available on select models. Please contact nearest TATA Motors Passenger Vehicles dealership for more details. Images and illustrations are indicative and for information purpose only. Festive discount mentioned is at the discretion of Tata Motors Limited. All features/specifications are not available in all variants and may vary for different variants. Specifications/features are subject to change without prior information. Please consult an authorised Tata Motors dealer for latest information on features/specifications before deciding to place an order. Colours may vary due to printing limitations. Local taxes and Octroi extra. Terms and conditions apply. Avail of Tata Motors Finance and get funding benefits on Extended Warranty. All offers are at sole discretion of Tata Motors and can be changed by Tata Motors without any prior notice. Offer available till stocks last. Express finance scheme from Tata Motors Finance/Low DP scheme from select financers. Finance available at sole discretion of financier.

PRERANA MOTORS	ADISHAKTI CARS	KEY MOTORS	KHT MOTORS	KROPEX AUTO	SREE AUTO
Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334	Hebbal: 7506023837; Dasarahalli: 9167982568	Kanakapura Road, Mysore Road, Kanakapura City, Bannerghatta Road, Sunkadakatte Magadi Road, Nelamangala: 7506023980	Whitefield: 7506023988; Domlur, Kolar: 7506024006	Hosur Road, Koramangala, Sarjapur road, Mahadevapura: 7506024016	Tumkur, Tiptur, Kunigal, Chikkaballapur: 7506024318



ವಿಶ್ವ ಮೊಟ್ಟೆ ದಿನ



ಮೊಟ್ಟೆಯಲ್ಲಿ ಪೌಷ್ಟಿಕಾಂಶ ಸಮೃದ್ಧವಾಗಿದೆ

ನೀವು ಪಡೆಯುವ ಪೋಷಕಾಂಶಗಳನ್ನು ಪಟ್ಟಿ ಮಾಡಲಾಗಿದೆ, ಹಾಗಾಗಿ ನಿಮ್ಮ ದೈನಂದಿನ ಆಹಾರವಾಗಿ ಮೊಟ್ಟೆಯನ್ನ ಒಂದು ಭಾಗವನ್ನಾಗಿ ಮಾಡಿಕೊಳ್ಳುವಿರಿ ಶೀಲಾಕೃಷ್ಣಸ್ವಾಮಿ

ದೈನಂದಿನ ಬದುಕಿನಲ್ಲಿ ಹೆಚ್ಚು ಚರ್ಚಿತವಾಗುವ ಆಹಾರಗಳಲ್ಲಿ ಮೊಟ್ಟೆಯು ಒಂದಾಗಿದೆ, ಎಲ್ಲಾ ಕಾಲಗಳಲ್ಲಿಯೂ ಉಪಯೋಗಿಸಬಹುದಾದ ಆಹಾರ ಕೂಡ ಇದಾಗಿದೆ, ಇದು ವರ್ಗೀಕರಣದ ಬಗ್ಗೆಯೇ ಇರಲಿ ಅಥವಾ ಆರೋಗ್ಯ ಮತ್ತು ರೋಗದೊಂದಗಿನ ಸಂಬಂಧವೇ ಆಗಿರಲಿ ಅಥವಾ ಇದು ಒಂದು ವಿಷಯವೇ ಆಗಿರಲಿ, ಮೊಟ್ಟೆ ಆಸಕ್ತಿದಾಯಕ ಭಕ್ಷ್ಯ ಮತ್ತು ಚರ್ಚೆಯ ವಿಷಯವಾಗಿದೆ.

ಮೊಟ್ಟೆ ಉತ್ಪಾದನೆಯಲ್ಲಿ ಭಾರತ ವಿಶ್ವದಲ್ಲಿ ಮೂರನೇ ಸ್ಥಾನ ಪಡೆದಿದೆ, ಇದು 2019-2020ರಲ್ಲಿ ಸುಮಾರು 114 ಬಿಲಿಯನ್ ಎಂದು ಅಂದಾಜಿಸಲಾಗಿದೆ, ರಾಷ್ಟ್ರೀಯ ಮೊಟ್ಟೆ ಸಮನ್ವಯ ಸಮಿತಿಯು ದೇಶಾದಾದ್ಯಂತ ಕೋಳಿ ಫಾರಂಗಳನ್ನು ಹೊಂದಿರುವ ಸುಮಾರು 25.000 ಜನರ ಸದಸ್ಯರನ್ನಾಗಿಸಿಕೊಂಡಿದೆ ಮತ್ತು ಕೆಲವು ದಶಕಗಳ ಹಿಂದೆ ಮೊಟ್ಟೆಯ ಬಗ್ಗೆ ಅನೇಕ ಪ್ರಚಾರ, ಅಭಿಯಾನಗಳ ಮೂಲಕ ಮೊಟ್ಟೆ ಸೇವನೆಯ ಬಗ್ಗೆ ನಾಗರೀಕರಲ್ಲಿ ಜಾಗೃತಿ ಹೆಚ್ಚುವಂತಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಸಾಮಾನ್ಯವಾಗಿ ಎಲ್ಲಾ ಪಕ್ಷಿ ಪ್ರಬೇಧಗಳು ಮೊಟ್ಟೆಗಳನ್ನ ಮಾತ್ರಇಡುತ್ತವೆಯಾದರೂ ನಾವು ಕೋಳಿ ಮೊಟ್ಟೆಗಳನ್ನ ಮಾತ್ರ ಬಳಸುತ್ತೇವೆ, ಭಾರತದಲ್ಲಿ ಸಸ್ಯಹಾರವನ್ನ ಗೌರವಿಸುವ ಬಳಸುವ ಹಲವು ವರ್ಗಗಳು, ಸಮಾಜಗಳು ಇದ್ದಾವೆಯಾದರೂ, ಮೊಟ್ಟೆಯನ್ನ ಮಾಂಸಹಾರಿಯನ್ನಾಗಿ ವಿಭಜಿಸಿದ್ದಾರೆ.

ಆದರೆ ಮೊಟ್ಟೆಗಳಲ್ಲಿ ಪ್ರಾಣಿಗಳ ಮಾಂಸವಿಲ್ಲದ ಕಾರಣ, ಅದು ಸಸ್ಯಹಾರಿ ಎಂದು ಇತರರು ವಾದಿಸುತ್ತಾರೆ, ಆದರೆ ತೀರ್ಪುಗಾರರು ಇನ್ನೂ ಈ ವಾದದ ಮೇಲೆ ಹೊರಗಿರುವಾಗ, ಮೊಟ್ಟೆಗಳನ್ನು ತಿನ್ನುವ ಸಸ್ಯಹಾರಿಗಳನ್ನ ವೈಜ್ಞಾನಿಕವಾಗಿ ಓವೊ- ಸಸ್ಯಹಾರಿಗಳು ಅಥವಾ ಸಾಮಾನ್ಯ ಪರಿಭಾಷೆಯಲ್ಲಿ ಎಗ್ಗೇರಿಯನ್ ಎಂದು ಕರೆಯಲಾಗುತ್ತದೆ.

■ ಮೊಟ್ಟೆಯಲ್ಲಿ ಪೋಷಣೆ (ಪೋಷಕಾಂಶಗಳು)

ದೈನಂದಿನ ಆಹಾರದಲ್ಲಿ ಪ್ರತಿಯೊಬ್ಬರು ಮೊಟ್ಟೆ ಬಳಸಬೇಕೆಂಬುದು ಕಡ್ಡಾಯವಲ್ಲ ಆದರೆ ಭಾರತೀಯ ಪೌಷ್ಟಿಕಾಂಶ ಸಂಸ್ಥೆ ಒಬ್ಬ ವ್ಯಕ್ತಿಗೆ ದಿನಕ್ಕೆ ಸರಾಸರಿ ಒಂದು ಮೊಟ್ಟೆಯನ್ನ ಶಿಫಾರಸ್ಸು ಮಾಡಿದೆ, ಆದರೆ ಮೊಟ್ಟೆಯನ್ನ ಸೇವಿಸಲು ಬಯಸುವವರಿಗೆ, ಒಂದು ಮೊಟ್ಟೆಯಲ್ಲಿ ಪೋಷಕಾಂಶದ ಸಾಂದ್ರತೆಯು ಹೆಚ್ಚಾಗಿರುತ್ತದೆ, ಏಕೆಂದರೆ ಕ್ಯಾಲೋರಿ ಎಣಿಕೆಯ ಅನುಪಾತದಲ್ಲಿ ಪ್ರತಿಯೊಂದು ಅಂಡಾಣುವು ಎಲ್ಲಾ ಅಗತ್ಯ ಅಮೈನೋ ಆಮ್ಲಗಳೊಂದಿಗೆ ಪ್ರೋಟಿನ್ ನದೈನಂದಿನ ಮೌಲ್ಯದ ಸುಮಾರು 12 ಪ್ರತಿಶತವನ್ನು ಒದಗಿಸುತ್ತದೆ, ಹಾಗೆ ಕೊಬ್ಬಿನಲ್ಲಿ ಕರಗುವ ಅನೇಕ ಜೀವಸತ್ವಗಳು ಮತ್ತು ನೀರಿನಲ್ಲಿ ಕರಗುವ ಜೀವಸತ್ವಗಳು ಮತ್ತು ಖನೀಜಗಳು ಮೊಟ್ಟೆಯಲ್ಲಿರುತ್ತವೆ.

ಒಂದು ಮೊಟ್ಟೆಯಲ್ಲಿರುವ ಒಟ್ಟು ಪ್ರೋಟಿನ್‌ನ ಸುಮಾರು 50ಪ್ರತಿಶತದಷ್ಟು ಭಾಗವು ಮೊಟ್ಟೆಯ ಬಿಳಿ ಭಾಗದಲ್ಲಿ ಇರುತ್ತದೆ ಮತ್ತು ಉಳಿದದ್ದು ಹಳದಿ ಲೋಳೆಯಲ್ಲಿರುತ್ತದೆ, ಆದ್ದರಿಂದ ಹಳದಿ ಲೋಳೆಯನ್ನು ತ್ಯಜಿಸಿದಾಗ, ಉಪಯುಕ್ತವಾದ ಪ್ರೋಟಿನ್ ಮತ್ತು ಇತರ ಪೋಷಕಾಂಶಗಳು ಅದರೊಂದಿಗೆ ಹೋಗುತ್ತವೆ.

ಮೊಟ್ಟೆಯ ಬಿಳಿ ಭಾಗದಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಕೊಬ್ಬನ್ನು ಹೊಂದಿರುವ ಹಳದಿ ಲೋಳೆಯಲ್ಲಿ ಹೆಚ್ಚಿನ ಕೊಬ್ಬು ಇರುತ್ತದೆ, ಮೊಟ್ಟೆಯ ಹಳದಿ ಲೋಳೆಯಲ್ಲಿ ವಿಟಮಿನ್ ಬಿ1, ಬಿ3, ಬಿ5, ಬಿ6, ಬಿ7, ಬಿ9, ಹೆಚ್ಚಿನ ಪ್ರಮಾಣದಲ್ಲಿ ಮೊಟ್ಟೆಯ ಬಿಳಿ ಭಾಗದಲ್ಲಿದೆ.

ಹೆಚ್ಚಿನ ವಿಟಮಿನ್ ಡಿ, ಮೊಟ್ಟೆಯ ಹಳದಿ ಲೋಳೆಯಲ್ಲಿ ಕಂಡುಬರುತ್ತದೆ, ಇದು ಈ ಪ್ರಮುಖ ಜೀವ ಸತ್ವಕ್ಕೆ ಕೆಲವೇ ನೈಸರ್ಗಿಕ ಆಹಾರ ಮೂಲಗಳಲ್ಲಿ ಒಂದಾಗಿದೆ.

ಇ.ಕೆ ಮತ್ತು ಕ್ಯಾರೋಟಿನಾಯ್ಡಗಳು 100 ಗ್ರಾಂ ಇಡೀ ಅಂಡಾಣುವಿನಲ್ಲಿ ೪೯.೪೦ ಮಿ, ಗ್ರಾಂ ಕ್ಯಾಲ್ಸಿಯಂ, 1.82 ಮಿ.ಗ್ರಾಂ ಕಬ್ಬಿಣ, 120 ಮಿ.ಗ್ರಾಂ ಸತು, 198 ಎಂಸಿಜಿ ವಿಟಮಿನ್ ಎ, 49.30 ಎಂಸಿಜಿ ಆಹಾರದಲ್ಲಿ ಪೋಲೆಟ್ ಮತ್ತು 1.80 ಎಂಸಿಜಿ ವಿಟಮಿನ್ ಬಿ 12 ಇದೆ, ಎರಡು ಪ್ರಮುಖ ಕ್ಯಾರೋಟಿನಾಯ್ಡ್‌ಗಳಾದ ಲ್ಯೂಟಿನ್ ಮತ್ತು ಜಿಯಾಕ್ಸಾಂಥಿನ್‌ಗಳನ್ನು ಸಹ ಒಳಗೊಂಡಿದೆ, ಮೊಟ್ಟೆಗಳ ಆಹಾರದ ನಾರಿನಾಂಶ ಮತ್ತು ವಿಟಮಿನ್ ಸಿ ಅನ್ನು ಹೊಂದಿರುವುದಿಲ್ಲ ಮತ್ತು ಅವು ಕಾರ್ಬೊಹೈಡ್ರೇಟ್‌ಗಳನ್ನು ಹೊಂದಿರುತ್ತದೆ.



■ ಮೊಟ್ಟೆಯಿಂದಾಗುವ ಪ್ರಯೋಜನಗಳು

ಮೊಟ್ಟೆಗಳಲ್ಲಿನ ಈ ಪೋಷಕಾಂಶಗಳು ಅನೇಕ ಪ್ರಯೋಜನಗಳನ್ನ ಹೊಂದಿವೆ, ಉದಾಹರಣೆಗೆ, ಮೊಟ್ಟೆಯ ಹಳದಿ ಲೋಳೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇರುವ ಕೋಲಿನ್ ಚಯಾಪಚಯ ಕ್ರಿಯೆಗೆ ಅಗತ್ಯವಾಗಿದೆ ಮತ್ತು ಮೆದುಳು ಮತ್ತು ನರಮಂಡಲದ ಕಾರ್ಯನಿರ್ವಹಣೆಗೆ ಅತ್ಯಗತ್ಯ, ಅಧ್ಯಯನಗಳು ಲ್ಯೂಟಿನ್ ಮತ್ತು ಝಿಯಾಕ್ಸಾಂಥಿನ್ ವಯಸ್ಸಿಗೆ ಸಂಬಂಧಿಸಿದ ಮಾಕ್ಯೂಲರ್ ಅಪಾಯವನ್ನ ಗಮನಾರ್ಹವಾಗಿ ಕಡಿಮೆ ಮಾಡುತ್ತದೆ ಎಂದು ತೋರಿಸಿವೆ.

ಇದು 65 ವರ್ಷಕ್ಕಿಂತ ಮೇಲ್ಪಟ್ಟ ಜನರ ಮೇಲೆ ಪರಿಣಾಮ ಬೀರುವ ಕುರುಡುತನಕ್ಕೆ ಪ್ರಮುಖ ಕಾರಣವಾಗಿದೆ, ಕಣ್ಣಿನ ಪೊರೆಯಾಗುವ ಸಾಧ್ಯತೆಯೂ ಕಡಿಮೆ ಇದೆ.

ಮೊಟ್ಟೆಯೂ ಪೋಷಕಾಂಶಗಳನ್ನ ಮಾತ್ರವಲ್ಲದೆ ಆರೋಗ್ಯಕ್ಕೆ ಮುಖ್ಯವಾದ ಜೈವಿಕ ಸಕ್ರಿಯ ಅಣುಗಳನ್ನೂ ಸಹ ಹೊಂದಿರುತ್ತದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ, ಬಾಯಿ ಅಥವಾ ದಂತ ಸಮಸ್ಯೆಗಳನ್ನು ಹೊಂದಿರುವವರಿಗೆ ಬೇಯಿಸಿದ ಮೊಟ್ಟೆಯು ಅಗಿಯಲು ಮತ್ತು ನುಂಗಲು ಸುಲಭವಾಗಿರುವುದರಿಂದ ಪೌಷ್ಟಿಕಾಂಶದ ಉತ್ತಮ ಮೂಲವಾಗಿದೆ.

ಆಹಾರದಲ್ಲಿನ ಮೊಟ್ಟೆಗಳನ್ನ ಯಾವಾಗಲೂ ಬೇಯಿಸಲಾಗುತ್ತದೆ ಮತ್ತು ಕಚ್ಚಾ ರೂಪದಲ್ಲಿ ಅಲ್ಲ, ಜೀರ್ಣತೆಯನ್ನ ಸುಧಾರಿಸಲು ಮತ್ತು ಸಾಲ್ಮೊನೆಲ್ಲಾ ಸೋಂಕನ್ನ ತಡೆಗಟ್ಟಲು, ಮೊಟ್ಟೆಗಳನ್ನು ಸಾಮಾನ್ಯವಾಗಿ ಬೇಯಿಸಿದ ಸ್ಕ್ರಾಂಬ್ಲ್, ಕರಿದ, ಬೇಯಿಸಿದ ಅಥವಾ ಅಮ್ಲೇಟ್ ಆಗಿ ಸೇವಿಸಲಾಗುತ್ತದೆ ಹಾಗೆ ಒಂದು ಮೊಟ್ಟೆಯಿಂದ ಏನೆಲ್ಲ ಭಕ್ಷಗಳನ್ನ ತಯಾರಿಸಬಹುದೆಂದರೆ ಮೊಟ್ಟೆಯ ಕಸ್ಟರ್ಡ್, ಕೇಕ್, ಕರಿ, ಬಿರಿಯಾನಿ, ಭುರ್ಜಿ, ನ್ಯೂಡಲ್ಸ್, ಸೂಪ್, ಸಲಾಡ್, ಪಾಸ್ತ, ಸೌಪ್ಲೆ, ಸ್ಯಾಂಡ್ವಿಚ್ ನಂತಹ ಹಲವಾರು ಭಕ್ಷ್ಯಗಳ ಒಂದು ಭಾಗವಾಗಿದೆ, ಹಾಗೆ ಕ್ವಿಚೆ ಮತ್ತು ಇನ್ನೂ ಅನೇಕ ಮೊಟ್ಟೆ ಆಧಾರಿತ ಪಾನೀಯಗಳು ಕೂಡ ಮೊಟ್ಟೆಯಿಂದ ಮಾಡಬಹುದಾಗಿದೆ.

ಅವುಗಳೆಂದರೆ ಎಗ್ ಕಾಫಿ, ಮೊಟ್ಟೆಯ ನೋಗ್ ಇವು ವಿಶ್ವದ ಕೆಲವು ಭೈಗಗಳಲ್ಲಿ ಜನಪ್ರಿಯವಾಗಿದೆ.

ಮಿಥ್ಯೆಯನ್ನು ಭೇದಿಸಲಾಗಿದೆ

ಅಂಡಾಣುವಿನ ಸುತ್ತಲಿನ ಅತ್ಯಂತ ಸಾಮಾನ್ಯ ಮಿಥ್ಯೆ ಹೃದಯ ಕಾಯಿಲೆಗೆ ಸಂಬಂಧಿಸಿದೆ, ಇತ್ತೀಚಿನವರೆಗೆ ಮೊಟ್ಟೆಯ ಹಳದಿ ಲೋಳೆ ತಮ್ಮ ತೂಕವನ್ನ ಪರೀಕ್ಷಿಸಿಕೊಳ್ಳುವ ಮತ್ತು ಸಾಮಾನ್ಯಕ್ಕಿಂತ ಹೆಚ್ಚಿನ ರಕ್ತದ ಕೊಲೆಸ್ಟ್ರಾಲ್ ಮಟ್ಟವನ್ನ ಹೊಂದಿರುವ ಪ್ರತಿಯೊಬ್ಬರಿಗೂ ಸಂಪೂರ್ಣವಾಗಿ ಇಲ್ಲ-ಇಲ್ಲ!


ಆಹಾರದಲ್ಲಿ ಸ್ಯಾಚುರೇಟೆಡ್ ಕೊಬ್ಬು ಮತ್ತು ಟ್ರಾನ್ಸ್ ಕೊಬ್ಬು ಹೃದಯಕ್ಕೆ ಆಹಾರ ಕೊಲೆಸ್ಟ್ರಾಲ್‌ಗಿಂತ ಹೆಚ್ಚು ಹಾನಿಕಾರಕವಾಗಿದೆ ಎಂದು ಇತ್ತೀಚಿನ ಸಂಶೋಧನೆ ಹೇಳುತ್ತದೆ, ಆದ್ದರಿಂದ ಮೊಟ್ಟೆಗಳು ಹೆಚ್ಚಿನ ಜನರ ಆಹಾರದಲ್ಲಿ ತೂಕವನ್ನ ಕಳೆದುಕೊಳ್ಳಲು ಅಥವಾ ತಮ್ಮ ರಕ್ತದ ಕೊಲೆಸ್ಟ್ರಾಲ್‌ಅನ್ನು ನಿಯಂತ್ರಿಸಲು ಸಹಕಾರಿಯಾಗಿದೆ, ಮೊಟ್ಟೆ ಮಕ್ಕಳಲ್ಲಿನ ಸಾಮಾನ್ಯ ಅಲರ್ಜಿಗಳಲ್ಲಿ ಒಂದಾಗಿದೆ. ಅದಾಗ್ಯೂ ಮಕ್ಕಳಲ್ಲಿ ಹೆಚ್ಚಿನವರು ಅಲರ್ಜಿಯನ್ನ ಮೀರಿಸುತ್ತಾರೆ, ಆದರೆ ಅವರಲ್ಲಿ ಕೆಲವರು ತಮ್ಮ ಜೀವನದುದ್ದಕ್ಕೂ ಎಲ್ಲಾ ರೂಪಗಳಲ್ಲೂ ಮೊಟ್ಟೆಗಳನ್ನ ತಪ್ಪಿಸುವ ಅಗತ್ಯವಿಲ್ಲ, ನಿಮಗೆ ಮೊಟ್ಟೆ ಅಲರ್ಜಿ ಇದ್ದರೆ, ಪ್ಯಾಕ್ ಮಾಡಿದ ಆಹಾರದಲ್ಲಿ ಮೊಟ್ಟೆಯ ಯಾವುದೇ ಭಾಗವನ್ನು ಸೇರಿಸಲಾಗಿದೆಯೇ ಅಥವಾ ಇಲ್ಲವೇ ಎಂದು ಪರಿಶೀಲಿಸಲು ಪ್ಯಾಕ್ ಮಾಡಿದ ಆಹಾರಗಳ ಮೇಲೆ ಆಹಾರ ಲೇಬಲ್‌ಗಳನ್ನು ಓದುವುದು ಮುಖ್ಯ.



ಹೆಚ್ಚುತ್ತಿರುವ ಪರಿಸರ ಪ್ರಜ್ಞೆಯೊಂದಿಗೆ, ನೈಸರ್ಗಿಕ ಆಹಾರಗಳನ್ನು ಸಂಗ್ರಹಿಸುವುದು ಒಂದು ಪ್ರವೃತ್ತಿಯಾಗಿ ಮಾರ್ಪಟ್ಟಿದೆ, ಕಿಕ್ಕಿರಿದ ಪಂಜರಗಳಲ್ಲಿ ಇರಿಸಲಾದ ಕೋಳಿಗಳು ಇಡುವ ಕಾರ್ಖಾನೆ ನಿರ್ಮಿತ ವಾಣಿಜ್ಯ ಮೊಟ್ಟೆಗಳಿಗಿಂತ ಮುಕ್ತ -ರೋಮಿಂಗ್ ಪಕ್ಷಿಗಳಿಂದ ಲಭ್ಯವಿರುವ ಮುಕ್ತ-ಶ್ರೇಣಿಯ ಮೊಟ್ಟೆಗಳಿಗೆ ಬೇಡಿಕೆ ಹೆಚ್ಚುತ್ತಿದೆ, ಚಿಪ್ಪಿನ ಬಣ್ಣವು ಮೊಟ್ಟೆಗಳ ಪೌಷ್ಟಿಕಾಂಶದ ಮೌಲ್ಯಕ್ಕೆ ಸ್ವಲ್ಪ ವ್ಯತ್ಯಾಸವನ್ನುಂಟು ಮಾಡುತ್ತದೆ.

ನೀವು ಬಯಸಿದರೆ ನಿಮ್ಮ ದೈನಂದಿನ ಆಹಾರದಲ್ಲಿ ಇಡೀ ಮೊಟ್ಟೆಯನ್ನು ಕಾವು ಕೊಡಿ, ಸಸ್ಯಹಾರಿಯಾಗಿ ಮುಂದುವರೆಯುವವರಿಗೆ, ನೀವು ಉತ್ತಮ ಗುಣಮಟ್ಟದ ಪ್ರೋಟಿನ್ ಮತ್ತು ಇತರ ಪೋಷಕಾಂಶಗಳನ್ನು ಪರ್ಯಾಯ ಆಹಾರ ಮೂಲಗಳಿಂದ ಪಡೆಯುತ್ತೀರಿ ಎಂದು ಖಚಿತಪಡಿಸಿಕೊಳ್ಳಿ ಪೌಷ್ಟಿಕತೆಗೆ ಸಂಬಂಧಿಸಿದ ಉತ್ತರಗಳಿಗಾಗಿ ಅರ್ಹ ಆಹಾರ ತಜ್ಞರೊಂದಿಗೆ ಮಾತನಾಡಿ.

ಲೇಖಕರು: ಪೌಷ್ಟಿಕತೆ ಮತ್ತು ಯೋಗಕ್ಷೇಮ ಸಲಹೆಗಾರರು



ಮೊಟ್ಟೆಯ ಬಗ್ಗೆ ಒಂದಿಷ್ಟು ವಾಸ್ತವಾಂಶಗಳು

ಮೊಟ್ಟೆಯಲ್ಲಿ ಏನೆಲ್ಲ ಇದೆ

■ ಪೌಷ್ಟಿಕಾಂಶದ ಮುಖ್ಯಕಾರ್ಯ

- **ಪ್ರೋಟಿನ್:** ಬೆಳವಣಿಗೆ, ಕೋಶಗಳು ಮತ್ತು ಅಂಗಾಂಗಗಳ ನಿರ್ವಹಣೆ ಮತ್ತು ಚಿಕಿತ್ಸೆ /ಗುಣಪಡಿಸುವಿಕೆ, ರಚನೆಯ ಭಾಗ ವಾಗಿರುವುದರ ಜೊತೆಗೆ ಸಾಗಾಣೆ, ಸಂಗ್ರಹಣೆ, ಹಾರ್ಮೋನುಗಳು, ಕಿಣ್ವಗಳು, ಪ್ರತಿಕಾಯಗಳು ಮತ್ತು ಶಕ್ತಿಗೆ ಬದಲಿ ಮೂಲವಾಗಿರುವುದು
- **ವಿಟಮಿನ್ 81:** ಕಾರ್ಬೋಹೈಡ್ರೇಟ್ ಚಯಾಪಚಯ ಇತ್ಯಾದಿ
- **ವಿಟಮಿನ್ 83:** ಚರ್ಮ ಮತ್ತು ನರಗಳ ಆರೋಗ್ಯ, ಸಹ-ಕಿಣ್ವಗಳು ಇತ್ಯಾದಿ
- **ವಿಟಮಿನ್ 85:** ಚಯಾಪಚಯ ಮತ್ತು ಇತರೆ
- **ವಿಟಮಿನ್ 86:** ಚಯಾಪಚಯ ಕ್ರಿಯೆ, ಕಿಣ್ವ ಪ್ರತಿಕ್ರಿಯೆ
- **ವಿಟಮಿನ್ 87:** ಚಾಯಪಚಯ
- **ವಿಟಮಿನ್ 89:** ಜೀವಕೋಶದ ಬೆಳವಣಿಗೆ ಮತ್ತು ಇತರೆ
- **ವಿಟಮಿನ್ ಬಿ 12:** ನರಗಳ ನಿರ್ವಹಣೆ, ಕೆಂಪು ರಕ್ತ ಕಣಗಳ ರಚನೆ, ಅನುವಂಶಿಕ ವಸ್ತು ಇತ್ಯಾದಿ
- **ವಿಟಮಿನ್ ಎ:** ದೃಷ್ಟಿ, ರೋಗ ನಿರೋಧಕ ಶಕ್ತಿ ಮತ್ತು ಇತ್ಯಾದಿ
- **ವಿಟಮಿನ್ ಡಿ:** ಕ್ಯಾಲ್ಸಿಯಮ್ ಹೀರಿಕೊಳ್ಳುವಿಕೆ ಇತ್ಯಾದಿ
- **ವಿಟಮಿನ್ ಇ:** ಉತ್ಕರ್ಷಣ ನಿರೋಧಕ, ರೋಗ ನಿರೋಧಕ ಶಕ್ತಿ ಮತ್ತು ಇತರೆ
- **ವಿಟಮಿನ್ ಕೆ:** ರಕ್ತ ಹೆಪ್ಪುಗಟ್ಟುವಿಕೆ
- **ಕ್ಯಾಲ್ಸಿಯಂ:** ರಚನೆ ಮತ್ತು ಮೂಳೆ ಹಾಗೂ ಹಲ್ಲುಗಳ ರಚನೆ ಮತ್ತು ನಿರ್ವಹಣೆ, ನರ ಸ್ನಾಯುವಿನ ಕಾಯ. ರಕ್ತ ಹೆಪ್ಪುಗಟ್ಟುವಿಕೆ ಮತ್ತು ಇತರೆ
- **ಸತು:** ಸತುವಿನ ಬೆಳವಣಿಗೆ, ರೋಗ ನಿರೋಧಕ ಶಕ್ತಿ
- **ಕಬ್ಬಿಣ:** ಹಿಮೋಗ್ಲೋಬಿನ್, ಶಕ್ತಿ ಚಯಾಪಚಯ ಕ್ರಿಯೆ, ರೋಗ ನಿರೋಧಕ ಶಕ್ತಿ ಇತ್ಯಾದಿ

ಮೊಟ್ಟೆಯು ಆರೋಗ್ಯ ಮತ್ತು ಸಂತೋಷದ ಮೂಲವಾಗಬಹುದು

ಒಂದು ಮೊಟ್ಟೆಯು ಅಡುಗೆ ಮನೆಯಲ್ಲಿ ಸುಲಭವಾಗಿ ಲಭ್ಯವಿರುವ ಪ್ರೋಟಿನ್‌ನ ಒಂದು ಸರಳ ಮೂಲವಾಗಿದೆ, ಒಂದು ಅಂದಾಜಿನ ಪ್ರಕಾರ ಭಾರತವು ಪ್ರತಿದಿನ 122 ಬಿಲಿಯನ್ ಮೊಟ್ಟೆಗಳನ್ನ ಉತ್ಪಾದಿಸುತ್ತದೆ, ಕೆಲವರು ತಮ್ಮ ಪೌಷ್ಟಿಕಾಂಶದ ಅವಶ್ಯಕತೆಗಾಗಿ ಮೊಟ್ಟೆಗಳನ್ನ ಸೇವಿಸುತ್ತಾರೆ, ಆದರೆ ಇತರರು ಅವುಗಳಿಂದ ತಯಾರಿಸಿದ ಭಕ್ಷ್ಯಗಳನ್ನ ಸವಿದು ಆನಂದಿಸುತ್ತಾರೆ.

■ ಪೌಷ್ಟಿಕಾಂಶದ ಮೌಲ್ಯ

ಶಾಲೆಯಲ್ಲಿ ಮಧ್ಯಾಹ್ನದ ಊಟದಿಂದ ಹಿಡಿದು ಮನೆಯ ಉಪಹಾರದವರೆವಿಗೂ, ಅನೇಕ ಜನರು ತಮ್ಮ ದೌನಂದಿನ ಪೌಷ್ಟಿಕಾಂಶದ ಅಂಶದಿಂದಾಗಿ, ಸರಾಸರಿಯಾಗಿ, ನಿಮ್ಮ ದೈನಂದಿನ ಅಗತ್ಯದ ಕಾರಣದಿಂದಾಗಿ ತಮ್ಮ ಆಹಾರ ಭಾಗವಾಗಿ ಮೊಟ್ಟೆಗಳನ್ನ ಆಯ್ಕೆ ಮಾಡುತ್ತಾರೆ, ಒಂದು ಮೊಟ್ಟೆಯು 82 ಪ್ರತಿಶತದಷ್ಟು ವಿಟಮಿನ್ ಡಿ-50 ಪ್ರತಿಶತ ಪೋಲೇಟ್ ಅನ್ನು ನೀಡುತ್ತದೆ ಎಂದು ಹೇಳಲಾಗುತ್ತದೆ, 25 ಪ್ರತಿಶತದಷ್ಟು ರಿಬೋಪ್ಲೇವಿನ್ (ವಿಟಮಿನ್ ಬಿ-2) ಮತ್ತು ೪೦ಪ್ರತಿಶತದಷ್ಟು ಸೆಲೆನಿಯಂ ವಿಟಮಿನ್ ಇರುತ್ತದೆ ಎಂದು ಅಂದಾಜಿಸಲಾಗಿದೆ. ಬೆನ್ ಕಾರ್ಲ್(ಸಾಪ್ಟವೇರ್ ಡೆವಲಪರ್) ತನ್ನ ದಿನವನ್ನ ಮೊಟ್ಟೆಗಳೊಂದಿಗೆ ಪ್ರಾರಂಭಿಸಲು ಇಷ್ಟಪಡುತ್ತಾರೆ "ಮೊಟ್ಟೆ ತುಂಬಾ ಒಳ್ಳೆಯ ಉಪಹಾರವಾಗಿದೆ, ಇದು ನಾನು ಲ್ಯಾಪ್ ಟಾಪ್ ಮುಂದೆ ಜೀವಂತವಾಗಿ ಕಳೆಯುವ ನೀರಸ ದಿನವನ್ನು ತಡೆಯುತ್ತದೆ'' ಎಂದು ಅವರು ಹೇಳುತ್ತಾರೆ

■ ವ್ಯಾಯಾಮ ಮತ್ತು ಊಟ

ವ್ಯಾಯಾಮ ಮಾಡುವಾಗ ಸರಿಯಾದ ಆಹಾರವನ್ನು ಸೇವಿಸುವುದು ಮತ್ತು ಸಾಕಷ್ಟು ದ್ರವವನ್ನು ಕುಡಿಯುವುದು ಅತ್ಯಗತ್ಯ, ಸರಿಯಾದ ಮತ್ತು ಕಾರ್ಬೋಹೈಡ್ರೇಟ್ ಗಳು ಸ್ನಾಯುಗಳ ದುರಸ್ತಿ ಮತ್ತು ಅಭಿವೃದ್ಧಿಗೆ ಸಹಾಯ ಮಾಡಲು ಮತ್ತು ಗ್ಲೈಕೋಜಿನ್ ಮರು ಸ್ಥಾಪಿಸಲು (ಪೂರಣ) ಸಹಾಯ ಮಾಡಲು ಕೆಲಸದ ನಂತರ ಅಗತ್ಯವಾಗಿದೆ. 2017ರಲ್ಲಿ ಅಂತರರಾಷ್ಟ್ರೀಯ ಕ್ರೀಡಾ ಪೌಷ್ಟಿಕಾಂಶದ ಸಮಾಜವು ವ್ಯಾಯಾಮದಲ್ಲಿ ಪ್ರೋಟಿನ್ ಪಾತ್ರದ ಬಗ್ಗೆ ಸ್ಪಷ್ಟವಾದ ಹೇಳಿಕೆಯೊಂದನ್ನ ತಯಾರಿಸಿದೆ, ಮೊಟ್ಟೆಗಳು ವ್ಯಾಯಾಮದ ಪೂರ್ವ ಆಹಾರವಾಗಿ ಹೆಚ್ಚು ಸೂಕ್ತವಾಗಿವೆ ಎಂದು ಹೇಳಿದೆ.

ಫಿಟ್ನೆಸ್ ಬಗ್ಗೆ ಉತ್ಸಾಹ ಹೊಂದಿರುವ ಹಾಗೂ ಫಿಟ್ನೆಸ್‌ನಲ್ಲಿ ಹೆಸರು ಮಾಡಿರುವ ಜೋಕೋಬ್ ಮೈಕ್ "ನಾನು ಮೊಟ್ಟೆಯನ್ನು ತಿನ್ನುವಾಗ ನಾನು ವ್ಯಾಯಾಮ ಮಾಡಲು ಪ್ರೇರೇಪಿಸಲ್ಪಡುತ್ತೇನೆ, ಬೇರೆ ಬೇರೆ ಊಟವನ್ನ ಮಾಡಿದ್ದೇನೆ, ಏಕೆಂದರೆ ನಾನು ನನ್ನ ದೇಹವನ್ನು ಆರೋಗ್ಯದಿಂದಿರಿಸಬೇಕು ಹಾಗೂ ಫಿಟ್ನೇಸ್ ಕಾಪಾಡಿಕೊಳ್ಳಬೇಕು ಆದರೆ ಮೊಟ್ಟೆಗಳಂತೆ ಇತರೆ ಏನೂ ಕೆಲಸ ಮಾಡುವುದಿಲ್ಲ, ವ್ಯಾಯಾಮ ನಂತರ ಕೃತಕ ಪ್ರೋಟಿನ್ ಪ್ರೇರಿತ ಪಾನಿಯಾಗಳಿಗಿಂತ ನಾನು ಮೊಟ್ಟೆಗಳಿಗೆ ಆದ್ಯತೆ ನೀಡುತ್ತೇನೆ ಎಂದು ಹೇಳಿದೆ.

■ ಮೊಟ್ಟೆಯಿಂದಾಗುವ ಇತರೆ ಪ್ರಯೋಜನಗಳು

ಮೊಟ್ಟೆಗಳು ಪ್ರಕೃತಿಯ ಅಧ್ಬುತ ಮತ್ತು ತಿನ್ನಬಹುದಾದ ಒಮೆಗಾ-3 ಕೊಬ್ಬಿನಾಮ್ಲಗಳು ಪೂರೈಕೆಯಾಗಿದೆ, ಇದು ಸರಾಸರಿ 18 ಮಿ.ಗ್ರಾಂ ಪ್ರತಿ ಸೇವನೆಗೆ ನೀಡುತ್ತದೆ. ಕೆ.ಎ.ಅಶ್ವತ್ ನಾರಾಯಣ್ ಎಂಬ ರಿಯಲ್ ಎಸ್ಟೇಟ್ ವೃತ್ತಿಯಲ್ಲಿರುವವರು, ಇವರು ಮೇದೋಜೀರಕ ಗ್ರಂಥಿಯ ಶಸ್ತ್ರಚಿಕಿತ್ಸೆಗೆ ಒಳಗಾದವರು, ಸಾಮಾನ್ಯ ಆಹಾರವನ್ನ ಸೇವಿಸಲು ಆಗುತ್ತಿರಲಿಲ್ಲ ಇದರ ಪರಿಣಾಮವಾಗಿ ಅವರಿಗೆ ಅಪೌಷ್ಟಿಕತೆ ಉಂಟಾಗಿ ತೊಂದರೆಗೆ ಸಿಲುಕಿದ್ದರು, ಆನಂತರ ವೈದ್ಯರ ಸಲಹೆ ಮೇರೆಗೆ ಮೊಟ್ಟೆಗಳನ್ನು ಸೇವಿಸಲು ಆರಂಭಿಸಿದರು, ಸಸ್ಯಹಾರಿಯಾಗಿರುವುದರಿಂದ ಇದು ಒಂದು ಪ್ರಮುಖ ಬದಲಾವಣೆಯಾಗಿತ್ತು, ಆದರೆ ಮೊಟ್ಟೆಗಳನ್ನು ತಿಂದ ನಂತರ ನಾನು ತೂಕ ಹೆಚ್ಚಿಸಿಕೊಳ್ಳಲು ಮತ್ತು ಆರೋಗ್ಯವಾಗಿರಲು ಪ್ರಾರಂಭಿಸಿದೆ ಅಂದಿನಿಂದ ಹಿಂತಿರುಗಿ ನೋಡಿಲ್ಲ ಎಂದು ಅವರು ಹೇಳುತ್ತಾರೆ.

ಮೊಟ್ಟೆಗಳು ವಿವಿಧ ರೀತಿಯ ಜೀವಸತ್ವಗಳು ಮತ್ತು ಖನಿಜಗಳನ್ನು ಹೊಂದಿರುತ್ತದೆ, ಇವೆಲ್ಲವೂ ಆರೋಗ್ಯವನ್ನು ಕಾಪಾಡಿಕೊಳ್ಳಲು, ರೆಟಿನಾ ಕಾರ್ಯನಿರ್ವಹಣೆಯಲ್ಲಿ ಮತ್ತು ನಿಮ್ಮ ವಯಸ್ಸಾದಂತೆ ಕ್ಷೀಣಿಸುವ ಕಣ್ಣಿನ ದೃಷ್ಟಿಯನ್ನು ಎದುರಿಸಲು ಪ್ರಮುಖ ಉತ್ಕರ್ಷಣ ನಿರೋಧಕಗಳಾಗಿ ಕಾರ್ಯನಿರ್ವಹಿಸುತ್ತವೆ. ಚಂದನ ಭಂಡಾರಿ ಹನ್ನೆರಡು ವರ್ಷದ ಬಾಲಕಿ, ಈಕೆ ತನ್ನ ದೃಷ್ಟಿಯನ್ನ ಹೆಚ್ಚಿಸಿಕೊಳ್ಳಲು ಇತರ ಪೌಷ್ಟಿಕ ಆಹಾರಗಳೊಂದಿಗೆ ಮೊಟ್ಟೆಗಳನ್ನ ಸೇವಿಸುವಂತೆ ಅವಳ ಕುಟುಂಬವು ಒತ್ತಾಯಿಸಿತು. ನಂತರ ಆಕೆ ಮೊಟ್ಟೆಗಳನ್ನು ತಿನ್ನಲು ಪ್ರಾರಂಭಿಸಿ ಈಗ ಆಕೆ ನಾನು ಮೊಟ್ಟೆಗಳನ್ನ ಪ್ರೀತಿಸುತ್ತೇನೆ ಮತ್ತು ಸಮತೋಲನ ಆಹಾರ ಮೊಟ್ಟೆಗಳೊಂದಿಗೆ, ನನ್ನ ದೃಷ್ಟಿ ಸುಧಾರಿಸುತ್ತಿದೆ ಎಂದು ಹೇಳುತ್ತಾಳೆ.

ಅಂಕುಶ್ ಭಾರದ್ವಾಜ್ ಎಂಬ ಫ್ರೀಲಾನ್ಸ್ ಕಂಟೆಂಟ್ ಬರಹಗಾರ, ನಾನು ಆರೋಗ್ಯ ಪ್ರಯೋಜನಗಳ ಬಗ್ಗೆ ಕಾಳಜಿವಹಿಸುವುದಿಲ್ಲ ಎಂದು ಹೇಳುತ್ತಾರೆ. ಆದರೆ ನಾನು ಮೊಟ್ಟೆಯನ್ನು ರುಚಿಗಾಗಿ ತಿನ್ನುತ್ತೇನೆ 'ಮೊಟ್ಟೆ ಮತ್ತು ನೂಡಲ್ಸ್ ನಮ್ಮ ಪ್ರಮುಖ ಆಹಾರವಾಗಿದೆ' ಎಂದು ಐಐಟಿ ವಿದ್ಯಾರ್ಥಿ ಪವನ್‌ಗುಪ್ತ ಹೇಳುತ್ತಾನೆ. ಹಾಸ್ಟೆಲ್‌ನಲ್ಲಿ ನಾವು ಪಡೆಯುವ ಏಕೈಕ ಪೋಷಣೆ ಅಂದರೆ ಮೊಟ್ಟೆಗಳಿಂದ ಮಾತ್ರ ಎಂದು ಹೇಳುತ್ತಾರೆ.

ಪೌಷ್ಟಿಕತೆ ಮತ್ತು ಶಕ್ತಿ ಹೆಚ್ಚಿಸುವ ರುಚಿಕರ ವಿಧಾನ

ಬೇಯಿಸಿದ ಮೊಟ್ಟೆಗಳೊಂದಿಗೆ ನಾಲ್ಕು ಸರಳ ಪಾಕ ವಿಧಾನಗಳನ್ನ ಜಯಂತಿಮಧುಕರ್ ತಿಳಿಸಿಕೊಟ್ಟಿದ್ದಾರೆ, ನೀವು ಓದುತ್ತ ಹೋದಂತೆ ನಿಮ್ಮ ನಾಲಿಗೆಯಲ್ಲಿ ನೀರೂರಿಸುತ್ತದೆ ಎಂಬ ಭರವಸೆ ನೀಡುತ್ತದೆ

■ ಬೀಟ್ರೂಟ್ ಮತ್ತು ಮೊಟ್ಟೆಯ ಸಲಾಡ್

ವ್ಯತಿರಿಕ್ತ ಬಣ್ಣಗಳು ಮತ್ತು ವಿನ್ಯಾಸಗಳು: ಆದರೆ ಬೀಟ್ರೂಟ್ ಮತ್ತು ಮೊಟ್ಟೆಗಳು ಪರಸ್ಪರ ಚೆನ್ನಾಗಿ ಹೊಂದಿಕೊಳ್ಳುತ್ತವೆ

ಬೇಕಾದ ಪದಾರ್ಥಗಳು: ನಾಲ್ಕು ಸಣ್ಣ ಬೀಟ್ರೂಟ್ ಬೇರುಗಳು, ಎರಡು ಚೆನ್ನಾಗಿ ಬೇಯಿಸಿದ ಮೊಟ್ಟೆಗಳು, ಒಂದು ಕಪ್ಪು ಕತ್ತರಿಸಿದ ಸಣ್ಣ ಈರುಳ್ಳಿ, ಅಲಂಕಾರಕ್ಕಾಗಿ ಅರಗುಲಾ ಎಲೆಗಳ ಕೆಲವು ಚಿಗುರುಗಳು, ರುಚಿಗೆ ತಕ್ಕಷ್ಟು ಉಪ್ಪು ಮತ್ತು ಕಾಳು ಮೆಣಸು, ಡ್ರೆಸ್ಸಿಂಗಾಗಿ ಒಂದು ಟೀ ಚಮಚ ಸಾಸಿವೆ ಮತ್ತು ತಣ್ಣಗೆ ಒತ್ತಿದ ಆಲೀವ್ ಎಣ್ಣೆ.



ತಯಾರಿಸುವ ವಿಧಾನ: ಬೀಟ್ರೂಟ್ ಬೇರುಗಳನ್ನು ಸಂಪೂರ್ಣವಾಗಿ ಕುದಿಸಿ ಸಿಪ್ಪೆ ಸುಲಿದು ತಣ್ಣಗಾಗಲು ಪಕ್ಕಕ್ಕಿಟ್ಟು, ನಂತರ ಅವುಗಳನ್ನು ಸಣ್ಣದಾಗಿ ಕತ್ತರಿಸಿ ಅವುಗಳನ್ನ ಕುದಿಸಬೇಕು ನಂತರ ಮೊಟ್ಟೆಗಳನ್ನ 10 ನಿಮಿಷ ಅಥವಾ ಅದಕ್ಕಿಂತ ಕಡಿಮೆ ಕಾಲ ಕುದಿಸಿ, ಮೊಟ್ಟೆಗಳನ್ನ ಎಚ್ಚರಿಕೆಯಿಂದ ಸಿಪ್ಪೆ ಸುಲಿದು ಮತ್ತು ಉದ್ದಕ್ಕೆ ಅರ್ಧಕ್ಕೆ ಇಳಿಸಿ, ಡ್ರಸ್ಸಿಂಗಾಗಿ ಸಾಸಿವೆ ಮತ್ತು ಎಣ್ಣೆಯನ್ನು ಜೊತೆಯಾಗಿ ಚೆನ್ನಾಗಿ ರುಬ್ಬಿ ಸಲಾಡ್ ಬೌಲ್ನಲ್ಲಿ ಉಪ್ಪು ಮತ್ತು ಮೆಣಸನ್ನ ಸೇರಿಸಿ ಬೀಟ್ರೂಟ್ ವೆಡ್ಜಗಳನ್ನ ಜೋಡಿಸಿ ಅದರ ಮೇಲೆ ಕತ್ತರಿಸಿದ ಸಣ್ಣ ಈರುಳ್ಳಿಯನ್ನ ಚಿಮುಕಿಸಿ ಡ್ರಸ್ಸಿಂಗ್ ಅನ್ನು ಸಲಾಡ್ ಮೇಲೆ ಮೊಟ್ಟೆಯ ಅರ್ಧ ಭಾಗಗಳನ್ನ ಜೋಡಿಸಿ, ಮೇಲೆ ಮೇಲೆ ಅರಗುಲಾ ಸ್ಪ್ರಿಂಗ್‌ಗಳಿಂದ ಅಲಂಕರಿಸಿ ಸಲಾಡ್ ಅನ್ನು ಖುಷಿಯಿಂದ ಬಡಿಸಿ.

■ ಕರಬೇವಿನ ಪುಡಿಯೊಂದಿಗೆ ಕಾರ್ನ್ ಮತ್ತು ಎಗ್ ಸೂಪ್

ಇದು ಏಷ್ಯನ್, ಪ್ರೇರಿತ ಸೂಪ್, ಮೃದುವಾಗಿ ಬೇಯಿಸಿದ ಮೊಟ್ಟೆಗಳು ಮತ್ತು ಪದಾರ್ಥಗಳ ಬಳಸಿ ತಯಾರಿಸಬಹುದಾದ ಪರಿಪೂರ್ಣ ಸೂಪು ಇದಾಗಿದೆ.

ತಯಾರಿಸುವ ವಿಧಾನ: ಒಂದು ಸಣ್ಣ ಕೆಂಪು ಈರುಳ್ಳಿ (ಸಣ್ಣದಾಗಿ ಕತ್ತರಿಸಿಕೊಳ್ಳಬೇಕು), ಒಂದು ಜಜ್ಜಿದ ಬೆಳ್ಳುಳ್ಳಿ ಲವಂಗ, ಒಂದು ಕ್ಯಾರೆಟ್ (ಚಿಕ್ಕದಾಗಿ ಕತ್ತರಿಸಿಕೊಳ್ಳಬೇಕು) ಒಂದು ಬಾಣಲೆಯಲ್ಲಿ ಎಣ್ಣೆಯನ್ನ ಬಿಸಿಮಾಡಿ ಅದರಲ್ಲಿ ಈರುಳ್ಳಿಯನ್ನ ಹುರಿಯಿರಿ, ಬೆಳ್ಳುಳ್ಳಿ ಮೆಣಸಿನ ಕಾಯಿಗಳನ್ನ ಸೇರಿಸಿ ನಂತರ ಒಂದು ನಿಮಿಷ ಹುರಿಯಿರಿ ನಂತರ ಕ್ಯಾರೆಟ್ ಮತ್ತು ನೀರನ್ನ ಸೇರಿಸಿ ಮತ್ತು ಅದನ್ನು ಹತ್ತು ನಿಮಿಷಗಳ ಕಾಲ ಅಥವಾ ಕ್ಯಾರೆಟ್‌ಗಳು ಬೇಯುವವರೆವಿಗೂ ಕುದಿಯಲು ಬಿಡಿ, ನಂತರ ಬ್ಲೆಂಡ ಮಾಡಿದ ಕಾರ್ನ್, ಸ್ವೀಟ್ ಕಾರ್ನ್ ತಿರುಳುಗಳು, ಕರಿಬೇವಿನ ಪುಡಿಯನ್ನು ಸೇರಿಸಿ ಮತ್ತು ಸೂಪ್ ಅನ್ನು ಐದು ನಿಮಿಷಗಳ ಕಾಲ ಕುದಿಯಲು ಬಿಡಿ, ಸೂಪ್ ಮತ್ತು ಮೆಣಸಿನಿಂದ ಪರಿಮಳಗೊಳಿಸಿ ಕೊತ್ತಂಬರಿ ಸೊಪ್ಪು ಮತ್ತು ಮೃದುವಾಗಿ ಬೇಯಿಸಿದ ಮೊಟ್ಟೆಯ ಹೋಳುಗಳಿಂದ ಅಲಂಕರಿಸಿ, ಬೌಲುಗಳಲ್ಲಿ ಸೂಪನ್ನ ಇರಿಸಿ ಬಡಿಸಿ.



■ ನೂಡಲ್ಸ್ ಮತ್ತು ಮೊಟ್ಟೆ ಖಾದ್ಯ

ಇದು ಹೊಸದಲ್ಲ, ಆದರೆ ಇದು ಎಂದಿಗೂ ಹಳೆಯದಾಗುವುದಿಲ್ಲ.

ಬೇಕಾದ ಪದಾರ್ಥಗಳು: ಒಂದು ಪಾಕೆಟ್ ನೂಡಲ್ಸ್(ಉತ್ತಮ ರುಚಿಗಾಗಿ ಮೊಟ್ಟೆ ನೂಡಲ್ಸ್), ನಾಲ್ಕು ಮೊಟ್ಟೆಗಳು (ಚೆನ್ನಾಗಿ ಬೇಯಿಸಿದ ಅಥವಾ ಮೃದುವಾಗಿ ಕುದಿಸಿದ), ಒಂದು ಟೇಬಲ್ ಚಮಚ ಎಣ್ಣೆ, ಒಂದು ಬೆಳ್ಳುಳ್ಳಿ ಲವಂಗ (ಜಜ್ಜಿದ), ಒಂದು ಚಮಚ ಶುಂಠಿ ಪೇಸ್ಟ್, ಎರಡು ಟೀಚಮಚ ಅರಿಶಿನ, 400 ಮಿಲಿ ನೀರು ಅಥವಾ ತರಕಾರಿ ಸ್ಟಾಕ್, ಒಂದು ಲೋಟ ತೆಂಗಿನ ಹಾಲು (ನೀರಿನೊಂದಿಗೆ ಸೇರಿಸುವುದು), ಎರಡು ಟೇಬಲ್ ಚಮಚ ಸೋಯ ಸಾಸ್, 150 ಗ್ರಾಂ ಸುಲಿದ ಬಟಾಣಿ, ಕೊತ್ತಂಬರಿ ಸೊಪ್ಪು ಚಿಗುರುಗಳು ಮತ್ತು ಅಲಂಕಾರಕ್ಕಾಗಿ ಹಸಿಮೆಣಸಿನ ಪಟ್ಟಿಗಳು, ರುಚಿಗೆ ತಕ್ಕಷ್ಟು ಉಪ್ಪು.



ತಯಾರಿಸುವ ವಿಧಾನ: ನಿಮ್ಮ ಆದ್ಯತೆಗೆ ಅನುಗುಣವಾಗಿ ಮೊಟ್ಟೆಯನ್ನು ಕುದಿಸಿ ಅಥವಾ ಎಂಟು ನಿಮಿಷಗಳ ಕಾಲ ಕುದಿಸಿ ನಂತರ ಮೊಟ್ಟೆಯ ಸಿಪ್ಪೆ ಸುಲಿದು ಪಕ್ಕಕ್ಕೆ ಇರಿಸಿ, ಒಂದು ಪಾತ್ರೆಗೆ ಸಾಕಷ್ಟು ನೀರು ತುಂಬಿಸಿ ಕುದಿಯಲು ಬಿಡಿ ನೂಡಲ್ಸ್ ಮತ್ತು ಚಿಟಿಕೆ ಉಪ್ಪನ್ನ ಸೇರಿಸಿ ಮತ್ತು ನೂಡಲ್ಸ್ ಐದು ನಿಮಿಷಗಳ ಕಾಲ ಅಥವಾ ಬೇಯುವವರೆವಿಗೂ ಕುದಿಸಿ, ನಂತರ ನೀರನ್ನ ಬಸಿದು ಕುದಿಸಿದ ನೂಡಲ್ಸ್ ಮೇಲೆ ಸ್ವಲ್ಪ ಎಣ್ಣೆ ಸುರಿದು ಬೆಳ್ಳುಳ್ಳಿ ಮತ್ತು ಶುಂಠಿ ಪೇಸ್ಟ್ ಅನ್ನು ಸೇರಿಸಿ ಒಂದು ನಿಮಿಷ ಹುರಿಯಿರಿ, ಅರಿಶಿನ ಪುಡಿಯನ್ನು ಸೇರಿಸಿ ಮತ್ತು ತೆಂಗಿನ ಹಾಲನ್ನು ಸೇರಿಸುವ ಮೊದಲು ಕೆಲವು ಸೆಕೆಂಡುಗಳ ಕಾಲ ಕಲಸಿ ಕಡಿಮೆ ಶಾಖದಲ್ಲಿ ಕುದಿಯಲು ಬಿಡಿ ಮತ್ತು ಸ್ವಲ್ಪ ಸಮಯದವರೆವಿಗೂ ಕುದಿಯಲು ಬಿಡಿ, ನಂತರ ಸುಲಿದ ಬಟಾಣಿ ಮತ್ತು ಅಣಬೆಗಳು ಸೇರಿಸಿ ಎರಡು ನಿಮಿಷಗಳ ಕಾಲ ಬೇಯಿಸಿ ನಂತರ ಸ್ಟೌವ್ ಆರಿಸಿ, ನೂಡಲ್ಸ್ ಅನ್ನು ಬೌಲ್‌ಗಳಿಗೆ ಹಾಕಿ ಮತ್ತು ಗ್ರೇವಿಯನ್ನು ಅದರ ಮೇಲೆ ಸುರಿಯಿರಿ, ನೂಡಲ್ಸ್‌ನ ಬಟ್ಟಲುಗಳ ಮೇಲೆ ಕೊತ್ತಂಬರಿ ಮತ್ತು ಹಸಿರು ಮೆಣಸಿನ ಕಾಯಿಗಳಿಂದ ಅಲಂಕರಿಸಿ ಅದೇ ಬಟ್ಟಲುಗಳಿಂದ ಬಡಿಸಿ.



■ ಅವಕಾಡೊ ಮತ್ತು ಮೊಟ್ಟೆಯ ಟೋಸ್ಟ್

ಶಕ್ತಿ ಪದಾರ್ಥಗಳಿಂದ ತುಂಬಿದ ಒಂದು ಸರಳ ಊಟ

ಬೇಕಾದ ಪದಾರ್ಥಗಳು: ಒಂದು ದೊಡ್ಡ ಅವಕಾಡೊ, ಎರಡು ಮೊಟ್ಟೆ (ಮೃದುವಾಗಿ ಬೇಯಿಸಿ), ನಾಲ್ಕು ಟೀ ಚಮಚ ನಿಂಬೆ ರಸ, ನಾಲ್ಕು ತುಂಡು ಬ್ರೆಡ್.

ತಯಾರಿಸುವ ವಿಧಾನ: ಒಂದು ಬಟ್ಟಲಿನಲ್ಲಿ ಅವಕಾಡೊವನ್ನು ನಿಂಬೆರಸ, ಮೆಣಸಿನ ಚಕ್ಕೆಗಳು ಮತ್ತು ಉಪ್ಪಿನಿಂದ ಸಿದ್ದಮಾಡಿ ನಿಮಗೆ ಇಷ್ಟವಾಗುವ ರೀತಿ ಬ್ರೆಡ್ ಟೋಸ್ಟ್ ಅನ್ನು ಅವಕಾಡೊ ಪೇಸ್ಟ್ ಸೇರಿಸಿ ಮೊಟ್ಟೆಯ ಅರ್ಧ ಭಾಗವನ್ನು ಚಕ್ಕೆಗಳಿಂದ ಅಲಂಕರಿಸಿ.

ಸಹಾಯಕ ಪ್ರಾಧ್ಯಾಪಕ ನೇಮಕಾತಿ ಅಕ್ರಮ • ಒಎಂಆರ್ ಪ್ರತಿ ಪರಿಶೀಲನೆ

500ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1,242 ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಸಂಬಂಧ ತನಿಖೆ ನಡೆಸುತ್ತಿರುವ ಸಿಸಿಬಿ ಪೊಲೀಸರು, 'ಇದುವರೆಗೂ 500ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಿದ್ದಾರೆ.

ಭೂಗೋಳಶಾಸ್ತ್ರ ವಿಷಯದ ಪ್ರಶ್ನೆ ಪತ್ರಿಕೆಯ 18 ಪ್ರಶ್ನೆಗಳು ಸೋರಿಕೆಯಾಗಿದ್ದ ಸಂಬಂಧ ಮಲ್ಲೇಶ್ವರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ಸಿಸಿಬಿ ಪೊಲೀಸರು, ಧಾರವಾಡ ಕರ್ನಾಟಕ ವಿಶ್ವ ವಿದ್ಯಾಲಯದ ಕುಲಸಚಿವರಾಗಿದ್ದ (ಮೌಲ್ಯಮಾಪನ) ಪ್ರೊ. ಎಚ್. ನಾಗರಾಜ್ ಹಾಗೂ ಅತಿಥಿ ಉಪನ್ಯಾಸಕಿ ಆರ್. ಸೌಮ್ಯ ಅವರನ್ನು ಈಗಾಗಲೇ ಬಂಧಿಸಿ ಮಾಹಿತಿ ಕಲೆಹಾಕಿದ್ದಾರೆ.

ಸಿಸಿಬಿ ತನಿಖೆ ನಡುವೆಯೇ ಮೌಲ್ಯಮಾಪನ ಪ್ರಕ್ರಿಯೆ ಪೂರ್ಣಗೊಳಿಸಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಅಧಿಕಾರಿಗಳು, ಅಂತಿಮ ಮೆರಿಟ್ ಪಟ್ಟಿಯನ್ನು ಅ. 6 ರಂದು ಪ್ರಕಟಿಸಿದ್ದಾರೆ. ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲು ತಯಾರಿ ನಡೆಸಿದ್ದಾರೆ.

ಅಂತಿಮ ಅರ್ಹತಾ ಪಟ್ಟಿಯಲ್ಲಿ ಹೆಸರಿರುವ ಅಭ್ಯರ್ಥಿಗಳ ಮೇಲೆ ಅನುಮಾನ ವ್ಯಕ್ತಪಡಿಸಿರುವ ಸಿಸಿಬಿ ಪೊಲೀಸರು, ಅವರೆಲ್ಲರನ್ನೂ ಒಬ್ಬೊಬ್ಬರಾಗಿ ವಿಚಾರಣೆ ಮಾಡುತ್ತಿದ್ದಾರೆ.

'ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಕೆಲ ಅಭ್ಯರ್ಥಿಗಳು ಅಕ್ರಮ ಎಸಗಿರುವ ಆರೋಪವಿದೆ. ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿ, ಅರ್ಹತೆ ಪಡೆದಿರುವ ಅಭ್ಯರ್ಥಿಗಳ ಪಟ್ಟಿಯನ್ನು ಈಗಾಗಲೇ ಕೆಇಎ ಅಧಿಕಾರಿಗಳಿಂದ ಪಡೆಯಲಾಗಿದೆ. ಆ ಪೈಕಿ 500ಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುತ್ತಿದೆ' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಅಭ್ಯರ್ಥಿಗಳ ಹಿನ್ನೆಲೆ, ಶೈಕ್ಷಣಿಕ ಪ್ರಗತಿ ಹಾಗೂ ಇತರೆ ಮಾಹಿತಿಗಳನ್ನು ವಿಚಾರಣೆ ವೇಳೆ ದಾಖಲಿಸಿಕೊಳ್ಳಲಾಗುತ್ತಿದೆ. ಅಗತ್ಯವಿದ್ದರೆ, ಪುನಃ ವಿಚಾರಣೆಗೆ ಕರೆಸಲಾಗುವುದೆಂದು ಹೇಳಿ ವಾಪಸು ಕಳುಹಿಸಲಾಗುತ್ತಿದೆ' ಎಂದರು.

'ಪರೀಕ್ಷೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಸದ್ಯಕ್ಕೆ ಯಾವುದೇ ಬಲವಾದ ಪುರಾವೆ ಸಿಕ್ಕಿಲ್ಲ. ಆದರೆ, ಅನುಮಾನವಿದೆ. ಎಸಿಪಿ ನೇತೃತ್ವದ ತಂಡ ಎಲ್ಲ ಆಯಾಮದಲ್ಲಿ ತನಿಖೆ ಮುಂದುವರಿಸಿದೆ' ಎಂದೂ ಹೇಳಿದರು.

ವಿಷಯವಾರು ಅಭ್ಯರ್ಥಿಗಳ ವಿಚಾರಣೆ: 'ನೇಮಕಾತಿ ಪರೀಕ್ಷೆಯ ವಿಷಯವಾರು ಅಭ್ಯರ್ಥಿಗಳ ಅಂಕಗಳನ್ನು ಪರಿಶೀಲಿಸಲಾಗಿದೆ. ಅನುಮಾನ ಬಂದ ಅಭ್ಯರ್ಥಿಗಳಿಗೆ ಮಾತ್ರ ನೋಟಿಸ್ ನೀಡಿ, ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

'ಕನ್ನಡ, ಇಂಗ್ಲಿಷ್, ಹಿಂದಿ, ಉರ್ದು, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಶಿಕ್ಷಣ, ಕಾನೂನು, ಸಮಾಜ ಕಾರ್ಯ, ಭೂಗೋಳ, ಭೂಗರ್ಭ ವಿಜ್ಞಾನ, ವಾಣಿಜ್ಯ, ನಿರ್ವಹಣಾ ವಿಜ್ಞಾನ, ಭೌತ ವಿಜ್ಞಾನ, ರಸಾಯನ ವಿಜ್ಞಾನ, ಜೈವಿಕ ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ಸಸ್ಯ ವಿಜ್ಞಾನ, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ವಿಜ್ಞಾನ, ಸಂಖ್ಯಾ ವಿಜ್ಞಾನ ಹಾಗೂ ಫ್ಯಾಷನ್ ತಂತ್ರಜ್ಞಾನ ವಿಷಯದ ಹಲವು ಅಭ್ಯರ್ಥಿಗಳಿಗೆ ನೋಟಿಸ್ ನೀಡಲಾಗಿದೆ. ಹಲವರ ವಿಚಾರಣೆಯೂ ಮುಗಿದಿದೆ' ಎಂದರು.

'ಒಎಂಆರ್ ಅಸಲಿ-ಕಾರ್ಬನ್ ಪ್ರತಿ ಪರಿಶೀಲನೆ'

'ಪರೀಕ್ಷೆ ಬರೆದಿರುವ ಅಭ್ಯರ್ಥಿಗಳ ಒಎಂಆರ್ ಅಸಲಿ ಪ್ರತಿಗಳನ್ನು ಕೆಇಎ ಅಧಿಕಾರಿಗಳಿಂದ ಪಡೆಯಲಾಗಿದೆ. ವಿಚಾರಣೆಗೆ ಬಂದ ಅಭ್ಯರ್ಥಿಗಳಿಂದ ಒಎಂಆರ್ ಕಾರ್ಬನ್ ಪ್ರತಿ ಮಾತ್ರ ಪಡೆಯಲಾಗುತ್ತಿದೆ. ಎರಡೂ ಪ್ರತಿಗಳೂ ಹೋಲಿಕೆ ಮಾಡಿ, ಅಭ್ಯರ್ಥಿಗಳನ್ನು ಪ್ರಶ್ನಿಸಲಾಗುತ್ತಿದೆ. ಜೊತೆಗೆ, ಎರಡೂ ಪ್ರತಿಗಳನ್ನು ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬರಬೇಕಿದೆ' ಎಂದು ಅಧಿಕಾರಿ ತಿಳಿಸಿದರು.

ಬ್ಲೂಟೂತ್ ಬಳಸಿ 6ನೇ ರ‍್ಯಾಂಕ್

ಪಿಎಸ್‌ಐ: ಸಂಚಾರ ಠಾಣೆ ಹೆಡ್ ಕಾನ್‌ಸ್ಟೆಬಲ್ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮ ಪ್ರಕರಣದಲ್ಲಿ ನಗರದ ಎಚ್‌ಎಎಲ್ ಸಂಚಾರ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಲಕ್ಕಪ್ಪ ಸೇರಿ ಮೂವರನ್ನು ಸಿಐಡಿ ಅಧಿಕಾರಿಗಳು ಗುರುವಾರ ವಶಕ್ಕೆ ಪಡೆದಿದ್ದಾರೆ.

'ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದ ಲಕ್ಕಪ್ಪ, ಒಎಂಆರ್ ಪ್ರತಿಯಲ್ಲಿ ಉತ್ತರ ಗುರುತಿಸಲು ಅಕ್ರಮವಾಗಿ ಬ್ಲೂಟೂತ್ ಉಪಕರಣ ಬಳಸಿದ್ದ. ಪತ್ರಿಕೆ-1ರಲ್ಲಿ (ಪ್ರಬಂಧ, ಭಾಷಾಂತರ, ಸಾರಾಂಶ ಬರಹ) 21.5 ಅಂಕ ಹಾಗೂ ಪತ್ರಿಕೆ-2ರಲ್ಲಿ (ಸಾಮಾನ್ಯ ಅಧ್ಯಯನ) 135 ಅಂಕ ಪಡೆದಿದ್ದ' ಎಂದು ಸಿಐಡಿ ಮೂಲಗಳು ಹೇಳಿವೆ. '200 ಅಂಕಗಳ ಪೈಕಿ ಒಟ್ಟು 156.5 ಅಂಕ ಪಡೆದಿದ್ದ ಲಕ್ಕಪ್ಪ, ಕಲ್ಯಾಣ ಕರ್ನಾಟಕ ಅಭ್ಯರ್ಥಿಗಳ ಆಯ್ಕೆ ಪಟ್ಟಿಯಲ್ಲಿ 6ನೇ ರ‍್ಯಾಂಕ್ ಪಡೆದಿದ್ದ' ಎಂದು ತಿಳಿಸಿವೆ.

57 ಹಾಗೂ 63ನೇ ರ‍್ಯಾಂಕ್: 'ಸಿಂದಗಿಯ ಶ್ರೀಶೈಲ ಬಿರಾದಾರ ಹಾಗೂ ಧಾರವಾಡದ ಶ್ರೀಮಂತ್ ಸಾತಪುರೆ ಅವರನ್ನೂ ವಶಕ್ಕೆ ಪಡೆಯಲಾಗಿದೆ. ಇವರಿಬ್ಬರೂ ಬ್ಲೂಟೂತ್ ಉಪಕರಣ ಬಳಸಿ ಪರೀಕ್ಷೆ ಬರೆದು ಅಕ್ರಮ ಎಸಗಿದ್ದರು' ಎಂದು ಸಿಐಡಿ ಮೂಲಗಳು ಹೇಳಿವೆ.

'ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಶ್ರೀಶೈಲ ಬಿರಾದಾರ್ 57ನೇ ರ‍್ಯಾಂಕ್ (ಪತ್ರಿಕೆ-1ರಲ್ಲಿ 35.5 ಅಂಕ ಹಾಗೂ ಪತ್ರಿಕೆ-2ರಲ್ಲಿ 108.75 ಅಂಕ) ಹಾಗೂ ಶ್ರೀಮಂತ್ ಸಾತಪುರೆ 63ನೇ ರ‍್ಯಾಂಕ್ (ಪತ್ರಿಕೆ 1ರಲ್ಲಿ 16.5 ಅಂಕ ಹಾಗೂ ಪತ್ರಿಕೆ 2ರಲ್ಲಿ 127.5 ಅಂಕ) ಪಡೆದಿದ್ದ' ಎಂದು ತಿಳಿಸಿವೆ. 'ಅಕ್ರಮದ ಪ್ರಮುಖ ಆರೋಪಿ ರುದ್ರಗೌಡ ಪಾಟೀಲ ಸಹಾಯದಿಂದ ಮೂವರು ಅಭ್ಯರ್ಥಿಗಳು ಬ್ಲೂಟೂತ್ ಮೂಲಕ ಪರೀಕ್ಷೆ ಬರೆದಿದ್ದರು. ಇದಕ್ಕಾಗಿ ರುದ್ರಗೌಡನಿಗೆ ಲಕ್ಷಾಂತರ ರೂಪಾಯಿ ಹಣ ನೀಡಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದಿವೆ.

PUBLIC NOTICE
DESTRUCTION OF MEDICAL RECORDS

It is hereby informed to all concerned that the Medical Records Department (MRD) has decided to destroy all normal discharge In-patient Medical Records for the period of December 2014 to December 2016. The destruction will be undertaken by ensuring strict adherence to all statutory guidelines applicable. Patients who want to obtain a copy of their original medical records can submit a written request along with Govt. ID proof and Hospital ID number to MRD on or before 14 November, 2022. No requests will be considered after this date. The medical records destruction will begin from 15 November, 2022.

If you have any queries regarding the destruction of medical records, please contact:

Ph: 080 43420144 or
Email: mrd.cmi@asterhospital.com

Aster CMI HOSPITAL
HEBBAL, BANGALORE

ಕೃಷಿ ಇಲಾಖೆ
ಜಂಟಿ ಕೃಷಿ ನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್ ಭವನ, ರಾಮನಗರ

ಸಂಖ್ಯೆ : ಜಕೃನಿ/ರಾನ/ಲೆಕ್ಕ-1/ಹೊ.ಗು.ಸಿ.ನೇ/2022-23 ದಿನಾಂಕ : 07-10-2022

ಟೆಂಡರ್ ಪ್ರಕಟಣೆ

2022-23 ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯ ಕೃಷಿ ಇಲಾಖೆಯ ಕಛೇರಿಗಳಲ್ಲಿ ಈ ಕೆಳಕಂಡಂತೆ ಹೊರಗುತ್ತಿಗೆ ಆಧಾರದ ಮೇರೆಗೆ ನೋಂದಾಯಿತ ಸಂಸ್ಥೆಗಳ ಮೂಲಕ ಸೇವೆ ಪಡೆಯಲು ದ್ವಿ ಲಕೋಟೆ ಮಾದರಿಯಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಇ-ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಟೆಂಡರ್‌ದಾರರು ಟೆಂಡರ್‌ಗೆ ಸಂಬಂಧಿಸಿದ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವಿಳಾಸ https://www.eproc.karnataka.gov.in ನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಕ್ರ.ಸಂ. 1 – ವಿವರ : ಜಂಟಿ ಕೃಷಿ ನಿರ್ದೇಶಕರು, ರಾಮನಗರ ಕಛೇರಿ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಕೆಳಕಂಡ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವುದು. 1) ಹುದ್ದೆಯ ವಿವರಗಳು : ಬೆರಳಚ್ಚುಗಾರರು. ಒಟ್ಟು ಹುದ್ದೆಗಳು : 07. 2) ವಾಹನ ಚಾಲಕರು. ಒಟ್ಟು ಹುದ್ದೆಗಳು : 06. 3) ಡಿ-ದರ್ಜೆ ನೌಕರರು. ಒಟ್ಟು ಹುದ್ದೆಗಳು : 11. ಕ್ರ.ಸಂ. 2 – 1) ಹುದ್ದೆಯ ವಿವರಗಳು : ಸಸ್ಯ ಆರೋಗ್ಯ ಚಿಕಿತ್ಸಾಲಯ ಯೋಜನೆಯಡಿ ತಾಂತ್ರಿಕ ಸಿಬ್ಬಂದಿ. ಒಟ್ಟು ಹುದ್ದೆಗಳು : 01. 2) ವಾಹನ ಚಾಲಕರು. ಒಟ್ಟು ಹುದ್ದೆಗಳು : 01. ಒಟ್ಟು 26 ಹುದ್ದೆಗಳು.

ಟೆಂಡರ್ ಮೊತ್ತ : ರೂ. 63,00,000/-.

ಟೆಂಡರ್ ಸಲ್ಲಿಸುವ ಅವಧಿ : 1) ಬಿಡ್ ಅಪ್‌ಲೋಡ್ ಮಾಡುವ ದಿನಾಂಕ : 07-10-2022 ರಿಂದ 07-11-2022 ರ ಅಪರಾಹ್ನ 5.30 ಗಂಟೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 10-11-2022. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ ; 15-11-2022.

ಸಹಿ/- ಜಂಟಿ ಕೃಷಿ ನಿರ್ದೇಶಕರು,
ರಾಮನಗರ ಜಿಲ್ಲೆ ರಾಮನಗರ.

ಡಿಐಪಿಆರ್/ರಾಮನಗರ/271/ಮಣಿಪಾಲ್/2022-23

ಶಾಲಾ ಪ್ರವೇಶಕ್ಕೆ ಆರು ವರ್ಷ: 2025–26ಕ್ಕೆ ಜಾರಿ

ಬೆಂಗಳೂರು: ಒಂದನೇ ತರಗತಿಗೆ ಪ್ರವೇಶ ಪಡೆಯಲು ಮಗುವಿಗೆ 6 ವರ್ಷಗಳು ಪೂರ್ಣಗೊಂಡಿರಬೇಕು. ಈ ನಿಯಮವನ್ನು 2025–26ರಿಂದ ಜಾರಿಗೊಳಿಸುವ ಚಿಂತನೆ ಇದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಪ್ರಕಾರ ಶಾಲಾ ಶಿಕ್ಷಣಕ್ಕೆ ಮಗು ಪ್ರವೇಶ ಪಡೆಯಲು 6 ವರ್ಷಗಳು ಪೂರ್ಣಗೊಂಡಿರುವುದು ಕಡ್ಡಾಯ. ಶಿಕ್ಷಣ ತಜ್ಞರ ಸಲಹೆಯೂ ಅದೇ ಆಗಿದೆ. 23 ರಾಜ್ಯಗಳು ಈಗಾಗಲೇ ನಿಯಮ ಅಳವಡಿಸಿಕೊಂಡಿವೆ. ರಾಜ್ಯದಲ್ಲೂ ಮುಂದಿನ ಶೈಕ್ಷಣಿಕ ವರ್ಷದಿಂದ ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿ ಅಳವಡಿಸಿಕೊಳ್ಳಲಾಗುವುದು. ಆ ಮಕ್ಕಳು ಎರಡು ವರ್ಷಗಳ ನಂತರ (2025–26) ಒಂದನೇ ತರಗತಿಗೆ ಪ್ರವೇಶ ಪಡೆಯಲು ಅನುಕೂಲವಾಗುತ್ತದೆ ಎಂದರು.

ಕೋವಿಡ್ ನಂತರದ ದಿನಗಳಲ್ಲಿ ಬಹಳಷ್ಟು ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದಾರೆ. ಅವರ ಕಲಿಕಾ ಮಟ್ಟ ಮೌಲ್ಯಮಾಪನ ಮಾಡಲು, ಕಲಿಕೆಯ ಸಾಮರ್ಥ್ಯ ವೃದ್ಧಿಸಲು 5 ಮತ್ತು 8ನೇ ತರಗತಿಗಳಿಗೆ ಸಾಮಾನ್ಯ ಪರೀಕ್ಷೆ ನಡೆಸುವ ಚಿಂತನೆ ಇದೆ ಎಂದರು.

ಶಿಕ್ಷಣ ಇಲಾಖೆ: ದೂರು, ಸಲಹೆ ದಾಖಲಿಸಲು ವೆಬ್‌ಪೋರ್ಟಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಇಲಾಖೆಯ ಕುಂದು-ಕೊರತೆ, ದೂರುಗಳು, ಸಲಹೆ, ಅಭಿಪ್ರಾಯಗಳನ್ನು ದಾಖಲಿಸಲು ಅನುಕೂಲವಾಗುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವೆಬ್ ಪೋರ್ಟಲ್ ರೂಪಿಸಿದ್ದು ಸಚಿವ ಬಿ.ಸಿ. ನಾಗೇಶ್ ಅವರು ಗುರುವಾರ ನೂತನ ಪೋರ್ಟಲ್ ಅನಾವರಣಗೊಳಿಸಿದರು.

ಇಲಾಖೆಯ ಕುರಿತು ಅಗತ್ಯ ಮಾಹಿತಿ ಒದಗಿಸುವ ಶಾಲಾ ಶಿಕ್ಷಣ ಸಚಿವರ ಜಾಲತಾಣ schooleducationminister.karnataka.gov.in ಪೋರ್ಟಲ್‌ಗೆ ಸಾರ್ವಜನಿಕರು, ಸಂಘ-ಸಂಸ್ಥೆಗಳು ಸಹ ಭೇಟಿ ನೀಡಿ, ದೂರು, ಸಲಹೆ , ಅಭಿಪ್ರಾಯ ನೀಡಬಹುದು. ಪೋರ್ಟಲ್ ಮೂಲಕ ಸಲ್ಲಿಕೆಯಾಗುವ ದೂರುಗಳನ್ನು ಶೀಘ್ರ ಪರಿಹರಿಸುವ, ದೂರಿನ ಸ್ಥಿತಿ-ಗತಿಗಳನ್ನು ಆನ್‌ಲೈನ್ ಮೂಲಕವೇ ಟ್ರ್ಯಾಕ್ ಮಾಡುವ ವ್ಯವಸ್ಥೆ ಅಭಿವೃದ್ಧಿಪಡಿಸಲಾಗಿದೆ. ವೆಬ್ ಪೋರ್ಟಲ್‌ನಲ್ಲಿ ರಾಜ್ಯದ ಶಾಲೆಗಳ ಸಂಖ್ಯೆ, ವಿದ್ಯಾರ್ಥಿಗಳು ಹಾಗೂ ಶಿಕ್ಷಕರ ಸಂಖ್ಯೆ, ಮಧ್ಯಾಹ್ನದ ಬಿಸಿಯೂಟ ಯೋಜನೆ ಸೇರಿದಂತೆ ಎಲ್ಲ ವಿವರ ಒದಗಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಆನ್‌ಲೈನ್ ಮೂಲಕ ಸೇವಾ ಸೌಲಭ್ಯ: ಶಿಕ್ಷಕರ ಕಲ್ಯಾಣ ನಿಧಿಯ 8 ಸೇವೆಗಳನ್ನು ಆನ್‌ಲೈನ್ ಮೂಲಕ ಒದಗಿಸುವ ತಂತ್ರಾಂಶ (http://kstbfonline.karnataka.gov.in) ಅಭಿವೃದ್ಧಿಪಡಿಸಲಾಗಿದೆ. ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ಸದಸ್ಯತ್ವ, ಶಿಕ್ಷಕರು, ವಿದ್ಯಾರ್ಥಿಗಳ ವೈದ್ಯಕೀಯ ಧನಸಹಾಯ, ಶಿಕ್ಷಕರ ಮಕ್ಕಳಿಗೆ ಉನ್ನತ ವ್ಯಾಸಂಗ ಧನ ಸಹಾಯ ಸೇರಿದಂತೆ ಇತರೆ ಸೇವೆಗಳನ್ನು ಪಡೆದುಕೊಳ್ಳಲು ಶಿಕ್ಷಕರು ತಾವು ಕುಳಿತ ಸ್ಥಳದಿಂದಲೇ ಅರ್ಜಿ ಸಲ್ಲಿಸುವ ಮೂಲಕ ಸೇವೆ ಪಡೆದುಕೊಳ್ಳಬಹುದು. ಶಿಕ್ಷಕರು ಈ ಸೇವೆಗಳಿಗಾಗಿ ಬೆಂಗಳೂರಿಗೆ ಅಲೆಯುವುದು ತಪ್ಪಲಿದೆ ಎಂದರು.

₹ 18.50 ಕೋಟಿ ತೆರಿಗೆ ವಾಪಸ್

ಶಿಕ್ಷಕರು, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿಯಿಂದ ಕಡಿತವಾಗಿದ್ದ ₹ 14 ಕೋಟಿ ತೆರಿಗೆ ಹಣವನ್ನು ಆದಾಯ ತೆರಿಗೆ ಇಲಾಖೆ ಬಡ್ಡಿ ಸಹಿತ ಮರಳಿಸಿದೆ.

ಕ್ಷೇಮಾಭಿವೃದ್ಧಿ ನಿಧಿ ಸಂಗ್ರಹದಲ್ಲಿದ್ದ ₹ 150 ಕೋಟಿಯಲ್ಲಿ ತೆರಿಗೆ ಹಣವನ್ನು ಆದಾಯ ತೆರಿಗೆ ಇಲಾಖೆ ಪಡೆದುಕೊಂಡಿತ್ತು. ಈ ಹಣ ವಿದ್ಯಾರ್ಥಿ ಹಾಗೂ ಶಿಕ್ಷಕರಿಂದಲೇ ಸಂಗ್ರಹಿಸಿದ್ದ ಹಣವಾದ ಕಾರಣ, ಅದು ಆದಾಯದ ವ್ಯಾಪ್ತಿಗೆ ಬರುವುದಿಲ್ಲ ಎಂದು ಶಿಕ್ಷಣ ಇಲಾಖೆ ಕೋರ್ಟ್ ಮೆಟ್ಟಿಲೇರಿತ್ತು. ಬಡ್ಡಿ ಸೇರಿಸಿ, ₹ 18.50 ಕೋಟಿ ಮರಳಿಸಲು ಕೋರ್ಟ್ ಆದೇಶ ನೀಡಿತ್ತು.

ಈ ಹಣವೂ ಸೇರಿದಂತೆ ಖಾತೆಯಲ್ಲಿ ₹ 31 ಕೋಟಿ ಇದ್ದು, ಶಿಕ್ಷಕರು, ವಿದ್ಯಾರ್ಥಿಗಳಿಗೆ ಖರ್ಚು ಮಾಡಲು ಕ್ರಿಯಾ ಯೋಜನೆ ರೂಪಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ ಆರ್. ವಿಶಾಲ್ ಸೂಚಿಸಿದ್ದಾರೆ.

ದರ್ಶನಕ್ಕೆ ತೆರೆದ ಹಾಸನಾಂಬೆ ದೇಗುಲ

ಹಾಸನ: ವರ್ಷದ ಬಳಿಕ, ನಗರದ ಹಾಸನಾಂಬೆ ದೇಗುಲದ ಬಾಗಿಲನ್ನು ಗುರುವಾರ ಮಧ್ಯಾಹ್ನ 12.12ಕ್ಕೆ ವಿಧ್ಯುಕ್ತವಾಗಿ ತೆರೆಯಲಾಗಿದ್ದು, ಅ.27ರ ವರೆಗೆ ಭಕ್ತರಿಗೆ ದರ್ಶನ ಕಲ್ಪಿಸಲಾಗಿದೆ.

ಪುಷ್ಪಾಲಂಕೃತ ದೇಗುಲದ ಆವರಣದಲ್ಲಿ ಬೆಳಿಗ್ಗೆಯಿಂದಲೇ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಂಡವು. ಸಂಪ್ರದಾಯದಂತೆ ತಳವಾರ ವಂಶದ ನರಸಿಂಹ ರಾಜ್ ಅರಸ್ ಅವರು ಬಾಳೆ ಕಂದು ಕಡಿದು ಬಾಗಿಲು ತೆರೆಯಲು ಅನುವು ಮಾಡಿದರು.

'ಬಾಗಿಲು ಮುಚ್ಚುವ ಸಂದರ್ಭದಲ್ಲಿ ಹಚ್ಚಿಟ್ಟ ದೀಪ, ಅರ್ಪಿಸಿದ ಹೂವು ಹಾಗೂ ನೈವೇದ್ಯಗಳು ಮುಂದಿನ ವರ್ಷ ಬಾಗಿಲು ತೆರೆಯುವ ಸಂದರ್ಭದಲ್ಲೂ ಹಾಗೆಯೇ ಇರುತ್ತವೆ' ಎಂಬ ನಂಬಿಕೆಯನ್ನು, ಮೊದಲ ದರ್ಶನ ಪಡೆದ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಪುಷ್ಟೀಕರಿಸಿದರು. 'ಕಳೆದ ವರ್ಷ ಬಾಗಿಲು ಮುಚ್ಚುವಾಗ ಹೇಗಿತ್ತೋ ಬಾಗಿಲು ತೆರೆದಾಗಲೂ ಹಾಗೆಯೇ ಇತ್ತು' ಎಂದು ತಿಳಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560020.

ಸಂ: ಬೆಂಅಪ್ರಾ/ನಯೋಸ/CLU-35/1608/2022-23 ದಿನಾಂಕ: 12.10.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ-ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ವಾಣಿಶ್ರೀ ವಿಶ್ವನಾಥ್ ರವರು # 14/1, ಅಪೂರ್ವ ಲೋಕ, ಸಿಂಗನಾಯಕನಹಳ್ಳಿ, ಯಲಹಂಕ ಹೋಬಳಿ, ಯಲಹಂಕ ತಾಲ್ಲೂಕು, ಬೆಂಗಳೂರು-560 064.	ಯಲಹಂಕ	ಹೆಸರಘಟ್ಟ	ಮೈಲಪ್ಪನ ಹಳ್ಳಿ	25(P)	05 ಎಕರೆ 20 ಗುಂಟೆ	ವ್ಯವಸಾಯ	ವಸತಿ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು, ಉದ್ಯಾನವನ ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು "ವ್ಯವಸಾಯ ವಲಯ" ದಿಂದ "ವಸತಿ" ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/127/2022-23 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.



ನಗರದಲ್ಲಿ ಗುರುವಾರ ಸಂಜೆ ಸುರಿದ ಮಳೆಯಿಂದಾಗಿ ಶಿವಾಜಿನಗರದ ರಸ್ತೆಯಲ್ಲಿ ನೀರು ನಿಂತಿತ್ತು – ಪ್ರಜಾವಾಣಿ ಚಿತ್ರ

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ-ಟೆಂಡರ್ ಸೂಚನೆ ಸಂ.: Y/E.29/2022-23/24 ದಿನಾಂಕ: 06.10.2022

ಕಾಮಗಾರಿಯ ವಿವರ	ಅಂದಾಜು ಮೌಲ್ಯ
(ಮರು-ಟೆಂಡರ್) ಮೈಸೂರು ವಿಭಾಗ: 3 ನಂ. ಲೆವೆಲ್ ಕ್ರಾಸಿಂಗ್‌ಗಳ ಇಂಟರ್‌ಲಾಕಿಂಗ್ ಕೊಡಗನೂರು-ತೊಳಹುಣಸೆ ಮಧ್ಯೆ (ಎಲ್‌ಸಿ ನಂ. 190, ಕುಂಸಿ-ಆನಂದಪುರಂ ಎಲ್‌ಸಿ ನಂ. 104 ಮತ್ತು ಎಲಿಯೂರು-ಬ್ಯಾಡರಹಳ್ಳಿ ನಿಲ್ದಾಣಗಳ ಮಧ್ಯೆ ಎಲ್‌ಸಿ ನಂ. 81)	ರೂ. 6,99,660/-

ಇ-ಟೆಂಡರ್ ಸೂಚನೆ ಸಂ.: Y/E.29/2022-23/25 ದಿನಾಂಕ: 06.10.2022

ಕಾಮಗಾರಿಯ ವಿವರ	ಅಂದಾಜು ಮೌಲ್ಯ
(ಮರು-ಟೆಂಡರ್) ಮೈಸೂರು ನ್ಯೂ ಗೂಡ್ಸ್ ಟರ್ಮಿನಲ್‌ನಲ್ಲಿ ಸರಕು ಸಾಗಣೆ ಪರೀಕ್ಷಾ ಸೌಲಭ್ಯಗಳ ಉನ್ನತೀಕರಣ/ವರ್ಧನೆ	ರೂ. 14,67,820/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.10.2022, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಿದ್ಯುತ್ ಇಂಜಿನಿಯರ್ ಮೈಸೂರು

PUB/418/AAD/PRB/SWR/2022-23

S.W.Railways SWRRLY SWRRLY

ಕುಂಭಮೇಳ: ಮೂರು ಜ್ಯೋತಿ ಯಾತ್ರೆಗಳ ಸಂಗಮ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ತಾಲ್ಲೂಕಿನ ತ್ರಿವೇಣಿ ಸಂಗಮದಲ್ಲಿ ನಾಲ್ಕು ದಿನಗಳ ಕುಂಭಮೇಳ ಆರಂಭಗೊಂಡಿದ್ದು ಮೊದಲ ದಿನವಾದ ಗುರುವಾರ ವಿವಿಧ ಜಿಲ್ಲೆಗಳಿಂದ ಹಾದು ಬಂದಿದ್ದ ಮೂರು ಜ್ಯೋತಿಯಾತ್ರೆಗಳು ಪಟ್ಟಣದಲ್ಲಿ ಸಂಗಮಿಸಿದವು.

ಚಾಮರಾಜನಗರ ಜಿಲ್ಲೆ ಮಹದೇಶ್ವರ ಬೆಟ್ಟದಲ್ಲಿ ಅ.6ರಂದು ಜ್ಯೋತಿಯಾತ್ರೆಗೆ ಚಾಲನೆ ನೀಡಲಾಗಿತ್ತು. ಪ್ರತ್ಯೇಕವಾಗಿ ಸಾಗಿ ಬಂದ ಜ್ಯೋತಿ ಯಾತ್ರೆ ಮೆರವಣಿಗೆ ಪಟ್ಟಣದಲ್ಲಿ ನಡೆಯಿತು. ಸಾವಿರಾರು ಜನ, ವಿದ್ಯಾರ್ಥಿಗಳು, ಕಲಾ ತಂಡಗಳ ಸದಸ್ಯರು ಭಾಗವಹಿಸಿದ್ದರು.

ತ್ರಿವೇಣಿ ಸಂಗಮದಲ್ಲಿ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕುಂಭ ಮೇಳಕ್ಕೆ ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಚಾಲನೆ ನೀಡಲಿದ್ದಾರೆ.

ಜೋರು ಮಳೆ: ರಸ್ತೆ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲದಿನಗಳಿಂದ ಮೋಡ ಕವಿದ ವಾತಾವರಣ ಕಂಡುಬರುತ್ತಿದ್ದು, ಬಿಡುವು ಕೊಡುತ್ತಲೇ ಮಳೆ ಜೋರಾಗಿ ಸುರಿಯುತ್ತಿದೆ. ಹಲವು ಪ್ರದೇಶಗಳಲ್ಲಿ ಗುರುವಾರವೂ ಮಳೆ ಸುರಿದು, ಪ್ರಮುಖ ರಸ್ತೆಗಳ ಮೇಲೆಯೇ ನೀರು ಹರಿಯಿತು.

ಹಲವೆಡೆ ಬುಧವಾರ ಸಂಜೆಯಿಂದ ರಾತ್ರಿಯವರೆಗೂ ಮಳೆ ಆಗಿತ್ತು. ಗುರುವಾರ ಬೆಳಿಗ್ಗೆ ಬಿಡುವು ನೀಡಿದ್ದ ಮಳೆ, ಮಧ್ಯಾಹ್ನ ಜೋರಾಗಿ ಸುರಿಯಿತು. ಕೆಲ ಗಂಟೆ ಬಿಡುವು ಕೊಟ್ಟು ಸಂಜೆಯಿಂದ ಪುನಃ ಮಳೆ ಆರಂಭವಾಯಿತು. ರಾತ್ರಿಯರೆಗೂ ಮಳೆ ಅಬ್ಬರವಿತ್ತು.

ರಾಜರಾಜೇಶ್ವರಿನಗರ, ಕೆಂಗೇರಿ, ದೀಪಾಂಜಲಿನಗರ, ಗಿರಿನಗರ, ಬನಶಂಕರಿ, ಬಸವನಗುಡಿ, ಬಸವೇಶ್ವರ ನಗರ, ರಾಜಾಜಿನಗರ, ಚಾಮರಾಜಪೇಟೆ, ಯಲಹಂಕ, ವಿದ್ಯಾರಣ್ಯಪುರ, ಹನುಮಂತನಗರ, ಶಾಂತಿನಗರ, ಅಶೋಕನಗರ, ವಿವೇಕನಗರ, ಸಂಪಂಗಿ ರಾಮನಗರ, ಶಾಂತಿನಗರ, ಚಿಕ್ಕಪೇಟೆ, ಮೆಜೆಸ್ಟಿಕ್, ಗಾಂಧಿನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಆಯಿತು.

ಯಶವಂತಪುರ, ಮಲ್ಲೇಶ್ವರ, ಶೇಷಾದ್ರಿಪುರ, ಎಂ.ಜಿ.ರಸ್ತೆ, ಶಿವಾಜಿ ನಗರ, ಕೋರಮಂಗಲ, ಮಡಿವಾಳ, ಜಯನಗರ, ಜೆ.ಪಿ.ನಗರ, ಪುಟ್ಟೇನಹಳ್ಳಿ, ಕನಕಪುರ ರಸ್ತೆ ಹಾಗೂ ಸುತ್ತಮುತ್ತ ಮಳೆ ಸುರಿಯಿತು.

'ಕೆಲವೆಡೆ ಮರದ ಕೊಂಬೆಗಳು ಬಿದ್ದ ಬಗ್ಗೆ ದೂರುಗಳು ಬಂದಿದ್ದವು. ಯಾವುದೇ ಹಾನಿ ಬಗ್ಗೆ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಬನ್ನೇರುಘಟ್ಟ ಜೈವಿಕ ಉದ್ಯಾನದ ವೈದ್ಯರ ಸಾಹಸ

ನೀರಾನೆ ಮರಿಗೆ ಮರುಜೀವ

ಪ್ರಜಾವಾಣಿ ವಾರ್ತೆ



ಬನ್ನೇರುಘಟ್ಟ ಜೈವಿಕ ಉದ್ಯಾನದ ನೀರಾನೆಗೆ ಅರಿವಳಿಕೆ ನೀಡಲಾಯಿತು

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸಾವು ಬದುಕಿನ ನಡುವೆ ಹೋರಾಟ ನಡೆಸಿದ್ದ ನೀರಾನೆ (ಹಿಪ್ಪೋಪೊಟಮಸ್) ಮರಿಯೊಂದಕ್ಕೆ ಉದ್ಯಾನದ ವೈದ್ಯರು ಮರುಜೀವ ನೀಡಿದ್ದಾರೆ. ತಾಯಿಯೊಂದಿಗೆ ಮರಿ ಆರೋಗ್ಯಕರವಾಗಿರುವುದು ಸಿಬ್ಬಂದಿಯಲ್ಲಿ ಸಂತಸ ತಂದಿದೆ.

ಜೈವಿಕ ಉದ್ಯಾನದ ಎರಡು ವರ್ಷದ ನೀರಾನೆ ಮರಿ ಸನಿಗೆ ಆರೋಗ್ಯದ ಸಮಸ್ಯೆ ಉಂಟಾಗಿತ್ತು. ಮೂರು ದಿನ ಮಲ ವಿಸರ್ಜನೆ ಮಾಡದೆ ಒದ್ದಾಡುತ್ತಿತ್ತು. ನೋವಿನಿಂದಾಗಿ ಆಹಾರ ಮತ್ತು ನೀರು ಸೇವಿಸಲಿಲ್ಲ. ತಾಯಿಯ ಹಾಲನ್ನು ಕುಡಿಯದೆ ನಿತ್ರಾಣವಾಯಿತು.

ಉದ್ಯಾನದ ವೈದ್ಯರು ಬಾಳೆಹಣ್ಣಿನಲ್ಲಿ ಭೇದಿ ಮಾತ್ರೆ ಹಾಕಿ ಮಲ ವಿಸರ್ಜನೆ ಮಾಡಿಸುವ ಪ್ರಯತ್ನ ಮಾಡಿದರೂ ಯಶಸ್ವಿಯಾಗಲಿಲ್ಲ. ಈ ಸಂದರ್ಭದಲ್ಲಿ ಉದ್ಯಾನದ ಕಾರ್ಯನಿರ್ವಹಣಾಧಿಕಾರಿ ಸುನೀಲ್ ಪನ್ವಾರ್ ಅವರ ಮಾರ್ಗದರ್ಶನದಂತೆ ಉದ್ಯಾನದ ಸಹಾಯಕ ನಿರ್ದೇಶಕ ಡಾ.ಉಮಾಶಂಕರ್ ನೇತೃತ್ವದಲ್ಲಿ ಕಾರ್ಯಾಚರಣೆ ಕೈಗೊಳ್ಳಲಾಯಿತು. ಏನಾದರೂ ಮಾಡಿ ಸನಿಯನ್ನು ಉಳಿಸಬೇಕೆಂಬುದು ಉದ್ಯಾನದ ಸಿಬ್ಬಂದಿಯ ಆಶಯವಾಗಿತ್ತು.

ನೀರಾನೆ ಮರಿಯ ಸಮಸ್ಯೆಯ ಬಗ್ಗೆ ದೇಶದ ಬೇರೆ ಬೇರೆ ಮೃಗಾಲಯಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಲಾಯಿತು. ಆಫ್ರಿಕಾ ಸೇರಿದಂತೆ ವಿದೇಶದ ಪಶುವೈದ್ಯರನ್ನು ಸಂಪರ್ಕಿಸಿದಾಗ ಅರಿವಳಿಕೆ ಮದ್ದು ನೀಡುವುದು ಅತ್ಯಂತ ಕ್ಲಿಷ್ಟಕರವಾದುದ್ದು ಎಂಬ ಮಾಹಿತಿ ದೊರೆಯಿತು. ಆಗ ಸವಾಲಿನ ಕೆಲಸವನ್ನು ಕೈಗೆತ್ತಿಕೊಳ್ಳಲಾಯಿತು. ಸನಿಯನ್ನು ತಾಯಿ ದಸ್ಯಳಿಂದ ಪ್ರತ್ಯೇಕ ಮಾಡಿ ಚಿಕಿತ್ಸೆ ನೀಡಲು ಪ್ರಾರಂಭಿಸಲಾಯಿತು ಎಂದು ಡಾ.ಉಮಾಶಂಕರ್ ಮಾಹಿತಿ ನೀಡಿದರು.

ಸನಿಗೆ ಗನ್ ಮೂಲಕ ಅರಿವಳಿಕೆ ನೀಡಲಾಯಿತು. 24 ನಿಮಿಷಗಳಲ್ಲಿ ಸನಿ ಪ್ರಜ್ಞೆ ತಪ್ಪಿತು ಎಂದು ತಿಳಿಸಿದರು.

ಉದ್ಯಾನದ ವೈದ್ಯರಾದ ಡಾ.ಉಮಾಶಂಕರ್, ಡಾ.ವಿಜಯ ಕುಮಾರ್, ಡಾ.ವಿಶಾಖ ನೇತೃತ್ವದಲ್ಲಿ 15 ಸಿಬ್ಬಂದಿ 45 ನಿಮಿಷಗಳಲ್ಲಿ ಮಲವನ್ನು ತೆಗೆದು ಹಾಕಿತು. ಸುಮಾರು 6 ಕೆ.ಜಿ ಮಲವನ್ನು ಕೈ ಹಾಕಿ ತೆಗೆಯಲಾಯಿತು. ಚಿಕಿತ್ಸೆ ಮುಗಿದ ನಂತರ ಅರಿವಳಿಕೆಯ ಪ್ರಭಾವವನ್ನು ಕಡಿಮೆ ಮಾಡುವ ಔಷಧ ನೀಡಲಾಯಿತು. ಚಿಕಿತ್ಸೆಗೆ ಸ್ಪಂದಿಸಿದ ಸನಿ ಒಂದೇ ನಿಮಿಷದಲ್ಲಿ ಎದ್ದು ಓಡಾಡಲು ಪ್ರಾರಂಭಿಸಿತು.

ಬೂಸಾ, ಹುಲ್ಲು ತಿಂದು ತಾಯಿಯ ಹಾಲು ಕುಡಿಯುವಂತಾಯಿತು. ಈ ಕಾರ್ಯ ಯಶಸ್ವಿಯಾಗುತ್ತಿದ್ದಂತೆ ವೈದ್ಯರು ನಿಟ್ಟುಸಿರು ಬಿಟ್ಟರು.

'ಕರ್ನಾಟಕ ಮೃಗಾಲಯದ ಇತಿಹಾಸದಲ್ಲಿ ಮೊದಲ ಬಾರಿಗೆ ಇಂತಹ ಪ್ರಯತ್ನ ಮಾಡಿ ಯಶಸ್ವಿಯಾಗಿದ್ದೇವೆ' ಎಂದು ಉದ್ಯಾನದ ಸಹಾಯಕ ನಿರ್ದೇಶಕ ಡಾ.ಉಮಾಶಂಕರ್ ತಿಳಿಸಿದರು.

ಸಾರಿಗೆ ಇಲಾಖೆ
ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು – 560 076.
ಸಾರಿಗೆ ಇಲಾಖೆ TRANSPORT DEPARTMENT

ಸಂಖ್ಯೆ : ಪ್ರಾಸಾಅ/ಇ-ಸಿಟಿ/ಸಾರಿಗೆ/2022-23 ದಿನಾಂಕ : 27-09-2022

ಟೆಂಡರ್ ಕಂ ಬಹಿರಂಗ ಹರಾಜು ಅಧಿಸೂಚನೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸರ್ಕಾರಕ್ಕೆ ಮೋಟಾರು ವಾಹನಗಳ ತೆರಿಗೆಯನ್ನು ಪಾವತಿಸದೇ ಮತ್ತು ವಾಹನದ ಮೂಲ ದಾಖಲೆಗಳನ್ನು ಹೊಂದದೇ ಸಂಚರಿಸುತ್ತಿದ್ದ ಈ ಮುಂದೆ ಕಾಣಿಸಿರುವ ವಾಹನಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು ನೋಟೀಸುಗಳನ್ನು ನೀಡದಾಗ್ಯೂ ಇದುವರೆವಿಗೂ ಸಂಬಂದಪಟ್ಟ ವಾಹನಗಳ ಮಾಲೀಕರಾಗಲಿ ಅಥವಾ ಚಾಲಕರಾಗಲೀ ಬಾಕಿ ತೆರಿಗೆಯನ್ನು ಪಾವತಿಸಿ, ಮೂಲ ದಾಖಲೆಗಳನ್ನು ಹಾಜರುಪಡಿಸಿ ವಾಹನಗಳನ್ನು ಬಿಡುಗಡೆಗೊಳಿಸಿಕೊಂಡಿರುವುದಿಲ್ಲ. ಆದುದರಿಂದ ಸದರಿ ವಾಹನಗಳನ್ನು ಬಹಿರಂಗ ಹರಾಜು ಮುಖೇನ ವಿಲೇವಾರಿ ಮಾಡಲು ತೀರ್ಮಾನಿಸಲಾಗಿದೆ.

ಸದರಿ ವಾಹನಗಳನ್ನು ಹೇಗಿದೆಯೋ ಅದೇ ಸ್ಥಿತಿಯಲ್ಲಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಕಾಯ್ದೆ 1957 ರ ನಿಯಮ 11(ಎ)(2) ರ ರೀತ್ಯಾ ಬಹಿರಂಗವಾಗಿ ದಿನಾಂಕ : 31-10-2022 ರ ಅಪರಾಹ್ನ 3.00 ಗಂಟೆಗೆ ಹರಾಜು ಮಾಡಲು ನಿರ್ಧರಿಸಲಾಗಿದೆ.

ಹರಾಜು ನಡೆಯುವ ಸ್ಥಳ : ಪ್ರಾದೇಶಿಕ ಸಾರಿಗೆ ಕಛೇರಿ, ಎಲೆಕ್ಟ್ರಾನಿಕ್ ಸಿಟಿ, ನಂ. 7ಬಿ, ವಾರ್ಡ್ ನಂ. 188, ಬಿ.ಟಿ.ಎಂ. 4ನೇ ಹಂತ, 2ನೇ ಬ್ಲಾಕ್, ಡಿ.ಸಿ. ಹಳ್ಳಿ ಬಸ್ ನಿಲ್ದಾಣದ ಹತ್ತಿರ, ಬೆಂಗಳೂರು – 560 076.

ಕ್ರ.ಸಂ.	ವಾಹನ ಸಂಖ್ಯೆ	ವಾಹನದ ವರ್ಗ	ವಾಹನ ನಿಲುಗಡೆ ಮಾಡಿದ ಸ್ಥಳ
01	KA 03-9497	A/R CAB	E-CITY BMTC DEPOT-19
02	KA 03A-3057	A/R CAB	E-CITY BMTC DEPOT-19
03	KA 04-3150	A/R CAB	E-CITY BMTC DEPOT-19
04	KA 05 A-2149	A/R CAB	E-CITY BMTC DEPOT-19
05	KA 02 B-4516	A/R CAB	E-CITY BMTC DEPOT-19
06	KA 02 B-0307	PSV	E-CITY BMTC DEPOT-19
07	KA 08-0752	LGV	E-CITY BMTC DEPOT-19
08	KA 08-D-0843	LGV	E-CITY BMTC DEPOT-19
09	KA 51-0244	LGV	E-CITY DRIVING TRACK
10	KA 01 C-5991	LGV	E-CITY DRIVING TRACK
11	KA 05 AB-2584	LGV	E-CITY DRIVING TRACK
12	KA 05 AA-3078	MAXICAB	E-CITY DRIVING TRACK
13	KA 01 D-7600	HPV	E-CITY DRIVING TRACK
14	KA 01 AA-9094	MOTOR CAR	E-CITY DRIVING TRACK
15	KA 16 A-4716	PSV	E-CITY DRIVING TRACK
16	KA 51 A-2360	LPV	E-CITY DRIVING TRACK
17	KL13 AL-3782	LGV	E-CITY DRIVING TRACK
18	KA 02 C-5002	MAXICAB	E-CITY DRIVING TRACK
19	KA 04 C-2367	A/R CAB	E-CITY DRIVING TRACK
20	KA22B-8350	HPV	E-CITY DRIVING TRACK
21	KA 01 AF-1215	MGV	E-CITY DRIVING TRACK
22	KA 06 B-7506	MAXICAB	E-CITY DRIVING TRACK
23	KA 03 C-2580	MAXICAB	E-CITY DRIVING TRACK
24	KA 03 C-2203	LPV	E-CITY DRIVING TRACK
25	KA38-3602	HPV	E-CITY DRIVING TRACK
26	KA 05 AA-4018	A/R CAB	CHANDAPURA BMTC DEPOT-32
27	KA 05 B-8097	A/R CAB	CHANDAPURA BMTC DEPOT-32
28	KA 05 AA-4960	MAXICAB	CHANDAPURA BMTC DEPOT-32
29	KA 02 AA-5216	A/R CAB	CHANDAPURA BMTC DEPOT-32
30	KA 04 A-2189	A/R CAB	CHANDAPURA BMTC DEPOT-32
31	KA 40-3699	MAXICAB	CHANDAPURA BMTC DEPOT-32
32	KA 05 AD-9099	MAXICAB	JIGANI BMTC DEPOT-27
33	KA 01 AD-1881	LPV	JIGANI BMTC DEPOT-27
34	KA 36-3798	LGV	RTO E-CITY OFFICE PREMISES
35	KA 05 B-1604	PSV	RTO E-CITY OFFICE PREMISES
36	KA 51 C-1659	MAXICAB	RTO E-CITY OFFICE PREMISES
37	KA 51-3043	MAXICAB	RTO E-CITY OFFICE PREMISES
38	KA 01 AF-3969	HGV	HUSKUR BMTC DEPOT-38
39	KA 42-1153	MAXICAB	HUSKUR BMTC DEPOT-38

ಇತರೆ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯ ಸೂಚನಾಫಲಕದಿಂದ ಪಡೆದುಕೊಳ್ಳುವುದು.

ಸಹಿ/- ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.

ವಾಸಾಇ/ಬೆಂ.ನ./2589/ಮಣಿಪಾಲ್/2022-23

MSIL **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಪಾನೀಯ ವಿಭಾಗ
ನಂ.36, ಎಂಎಸ್‌ಐಎಲ್ ಹೌಸ್, ಕನ್ನಿಂಗ್‌ಹ್ಯಾಂ ರಸ್ತೆ , ಬೆಂಗಳೂರು – 560 052. ದೂರವಾಣಿ : 22264021/25
ಇ-ಮೇಲ್: msil.liquor@msilonline.com ವೆಬ್‌ಸೈಟ್: www.msilonline.com

ಪತ್ರಿಕಾ ಪ್ರಕಟಣೆ

ಕೆಳಕಂಡ ಜಿಲ್ಲೆಗಳಲ್ಲಿ ಎಂಎಸ್‌ಐಎಲ್ ಮಳಿಗೆಗಳನ್ನು ಪ್ರಾರಂಭಿಸಲು ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಠ 250 ರಿಂದ 500 Sq.Ft ಕಾರ್ಪೊರೇಷನ್ ಸಿಟಿ (ಬೆಳಗಾವಿ, ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಮಂಗಳೂರು, ಮೈಸೂರು, ಕಲಬುರಗಿ, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರ) ವ್ಯಾಪ್ತಿಯಲ್ಲಿ 500 ರಿಂದ 1000 Sq.Ft ಮತ್ತು ಬೆಂಗಳೂರು ನಗರ ಬಿಬಿಎಂಪಿ ವ್ಯಾಪ್ತಿಯಲ್ಲಿ 1000 ರಿಂದ 1500 Sq.Ft ವರೆಗೆ ಜಾಗ ಹೊಂದಿರುವ ಮಳಿಗೆಗಳು ಬಾಡಿಗೆಗೆ ಬೇಕಾಗಿರುತ್ತವೆ. ಮಳಿಗೆಗಳು ಕಾಂಕ್ರೀಟ್ ಚಾವಣಿ ಹಾಗೂ ಶಟರ್ಸ್‌ನೊಂದಿಗೆ ವ್ಯಾಪಾರವಾಗುವಂತಹ ಸ್ಥಳಗಳಲ್ಲಿ ಇದ್ದು, ಅಬಕಾರಿ ನಿಯಮ (5) ರಡಿಯಲ್ಲಿ (100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಶಾಲಾ ಕಾಲೇಜು, ಆಸ್ಪತ್ರೆ, ಸರ್ಕಾರಿ ಕಛೇರಿ ಹಾಗೂ ಹರಿಜನ & ಗಿರಿಜನಗಳ ಕಾಲೋನಿ/ವಾಸಸ್ಥಳ ಇರಬಾರದು ಹಾಗೂ ರಾಜ್ಯ ಮತ್ತು ರಾಷ್ಟ್ರ ಹೆದ್ದಾರಿಯಿಂದ 220 ಮೀಟರ್ ಅಂತರ ಇರಬೇಕು) ಮುಕ್ತಿ ಹೊಂದಿರಬೇಕು ಮತ್ತು ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆಯಾಗಿರಬೇಕು. ಆಸಕ್ತಿಯುಳ್ಳ ಮಳಿಗೆ ಮಾಲೀಕರು ಈ ಪ್ರಕಟಣೆಯ ದಿನಾಂಕದಿಂದ 10 ದಿನಗಳೊಳಗೆ ಈ ಕೆಳಕಂಡವರನ್ನು ಸಂಪರ್ಕಿಸಬಹುದಾಗಿರುತ್ತದೆ. ಈ ಕುರಿತು ಎಂಎಸ್‌ಐಎಲ್ ಸಂಸ್ಥೆಯು ತೆಗೆದುಕೊಳ್ಳುವ ತೀರ್ಮಾನ ಅಂತಿಮವಾಗಿರುತ್ತದೆ.

ಕ್ರ. ಸಂ.	ಜಿಲ್ಲೆಯ ಹೆಸರು	ಬೇಕಾಗಿರುವ ಮಳಿಗೆಗಳ ಸಂಖ್ಯೆ	ಸಂಪರ್ಕಿಸಬೇಕಾದವರ ವಿವರ
1	ಬೆಂಗಳೂರು	61	ಸಮಾಲೋಚಕರು (ಬೆಂಗಳೂರು ನಗರ & ಗ್ರಾಮಾಂತರ ವಲಯ) ದೂರವಾಣಿ ಸಂಖ್ಯೆ: 9663225533 ವಿಳಾಸ: ಎಂಎಸ್‌ಐಎಲ್ ಕೇಂದ್ರ ಕಛೇರಿ, ನಂ.36, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು-52
2	ಚಿಕ್ಕಬಳ್ಳಾಪುರ	6	
3	ಕೋಲಾರ	13	
4	ಬೆಂಗಳೂರು ಗ್ರಾಮಾಂತರ	13	
5	ರಾಮನಗರ	9	
6	ತುಮಕೂರು	8	
7	ಮೈಸೂರು	18	ಶಾಖಾ ಮುಖ್ಯಸ್ಥರು, ಮೈಸೂರು ಶಾಖೆ ದೂರವಾಣಿ ಸಂಖ್ಯೆ: 9448878199 ವಿಳಾಸ: ಎಂಎಸ್‌ಐಎಲ್, ಮೈಸೂರು ಟ್ರೇಡ್ ಸೆಂಟರ್, 3ನೇ ಮಹಡಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು, ಮೈಸೂರು-570001
8	ಮಂಡ್ಯ	8	
9	ಹಾಸನ	10	
10	ಚಾಮರಾಜನಗರ	12	
11	ಬೆಳಗಾವಿ	19	ಶಾಖಾ ಮುಖ್ಯಸ್ಥರು, ಬೆಳಗಾವಿ ಶಾಖೆ ದೂರವಾಣಿ ಸಂಖ್ಯೆ: 9480812991 ವಿಳಾಸ: ಎಂಎಸ್‌ಐಎಲ್, ಮೊದಲನೇ ಮಹಡಿ, ಮುಜಾವರ್ ಆರ್ಕೇಡ್, ಮುಜಾವರ್ ಕಾಂಪೌಂಡ್, ಬೆಳಗಾವಿ
12	ವಿಜಯಪುರ	4	
13	ಧಾರವಾಡ	12	
14	ಗದಗ	13	
15	ಉತ್ತರ ಕನ್ನಡ	22	
16	ಬಳ್ಳಾರಿ	11	ಶಾಖಾ ಮುಖ್ಯಸ್ಥರು, ದಾವಣಗೆರೆ ಶಾಖೆ ದೂರವಾಣಿ ಸಂಖ್ಯೆ: 9480812960 ವಿಳಾಸ: ಎಂಎಸ್‌ಐಎಲ್ ನಂ.262/1, ನೆಲಮಹಡಿ, ಬಿಜೆ ಆರ್ಕೇಡ್, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಹತ್ತಿರ, ಪಿಬಿ ರೋಡ್, ದಾವಣಗೆರೆ-577002
17	ಚಿತ್ರದುರ್ಗ	9	
18	ದಾವಣಗೆರೆ	1	
19	ಹಾವೇರಿ	12	
20	ಶಿವಮೊಗ್ಗ	8	
21	ಬೀದರ್	4	ಶಾಖಾ ಮುಖ್ಯಸ್ಥರು, ಕಲಬುರಗಿ ಶಾಖೆ ದೂರವಾಣಿ ಸಂಖ್ಯೆ: 9845397282 ವಿಳಾಸ: ಎಂಎಸ್‌ಐಎಲ್, ಏಷ್ಯನ್ ಪ್ಲಾಜಾ, 3ನೇ ಮಹಡಿ, ತಿಮ್ಮಾಪುರಿ ಸರ್ಕಲ್, ಮುಖ್ಯ ರಸ್ತೆ, ಕಲಬುರಗಿ-585101
22	ಕಲಬುರಗಿ	6	
23	ಕೊಪ್ಪಳ	5	
24	ರಾಯಚೂರು	7	
25	ಯಾದಗಿರಿ	7	
26	ಚಿಕ್ಕಮಗಳೂರು	12	ಶಾಖಾ ಮುಖ್ಯಸ್ಥರು, ಮಂಗಳೂರು ಶಾಖೆ ದೂರವಾಣಿ ಸಂಖ್ಯೆ: 9611675383 ವಿಳಾಸ: ಎಂಎಸ್‌ಐಎಲ್, ನಂ.408, ಮಹೇಂದ್ರ ಆರ್ಕೇಡ್, 3ನೇ ಮಹಡಿ, ಕುದುಮಲ್ ರಂಗರಾವ್ ರೋಡ್, ಮಂಗಳೂರು-575003.
27	ದಕ್ಷಿಣ ಕನ್ನಡ	17	
28	ಕೊಡಗು	6	
29	ಉಡುಪಿ	14	

ಸಹಿ/- ಪ್ರಧಾನ ವ್ಯವಸ್ಥಾಪಕರು (ಪಾನೀಯ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❤ ಸುಭಾಷಿತ ❤

ಗಾಳಿ ಬೀಸುವುದರಿಂದ ಹೇಗೆ ಬಂಡೆಯು ಕದಲುವುದಿಲ್ಲವೋ ಹಾಗೇ ವಿವೇಕಿಗಳು ದೂಷಣೆ ಮತ್ತು ಪ್ರಶಂಸೆಯಿಂದ ವಿಚಲಿತರಾಗುವುದಿಲ್ಲ.

-ಗೌತಮ ಬುದ್ಧ

ನಾಲಿಗೆ ಚಪಲದ ಕೋಳಿಜಗಳ ರಾಷ್ಟ್ರನಾಯಕರ ಅವಹೇಳನ ಸಲ್ಲ

ದೇಶಕ್ಕೆ ಗಣನೀಯ ಕೊಡುಗೆ ನೀಡಿದ ನಾಯಕರ ಹೆಸರನ್ನು ಬೀದಿ ಜಗಳದ ಮಟ್ಟದ ರಾಜಕೀಯ ವಾಗ್ವಾದಕ್ಕೆ ಎಳೆತರುವ ಮೂಲಕ, ರಾಜಕೀಯ ಪಕ್ಷಗಳ ನಾಯಕರು ತಮ್ಮ ನಾಲಿಗೆ ಚಪಲ ತೋರಿಸಿದ್ದಾರೆ. ಕನಿಷ್ಠ ಲಜ್ಜೆಯನ್ನೂ ಗಾಳಿಗೆ ತೂರಿದ್ದಾರೆ. 'ಮಹಾತ್ಮ ಗಾಂಧಿ ಅವರ ಪಾದದ ದೂಳಿಗೆ ಜವಾಹರಲಾಲ್ ನೆಹರೂ ಅವರು ಸಮಾನರಾ. ನಾವು ಹೀಗೆ ಕೇಳಬಹುದಾ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಟೀಕಿಸಿರುವ ಕಾಂಗ್ರೆಸ್ ಪಕ್ಷಕ್ಕೆ ಪ್ರತಿಕ್ರಿಯಿಸುವ ಭರದಲ್ಲಿ ಅವರು, ಮಹಾತ್ಮನ ಪಾದ ದೂಳಿನೊಂದಿಗೆ ನೆಹರೂ ಅವರನ್ನು ತುಲನೆ ಮಾಡಿದ್ದಾರೆ. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು, ಮೋದಿ ಅವರ ಪಾದದ ದೂಳಿಗೂ ಸಿದ್ದರಾಮಯ್ಯ ಸಮಾನರಲ್ಲ ಎಂದು ಹೇಳಿದ್ದಾರೆ; ರಾಹುಲ್ ಗಾಂಧಿ ಅವರನ್ನು ಬಚ್ಚಾ ಎಂದೂ ಕರೆದಿದ್ದಾರೆ. ಈ ರೀತಿಯ ಪದಗಳ ಬಳಕೆ ತಮ್ಮ ಸ್ಥಾನಮಾನಕ್ಕೆ ಹಾಗೂ ವಯಸ್ಸಿನ ಹಿರಿತನಕ್ಕೆ ಹೊಂದುತ್ತದೆಯೇ ಎನ್ನುವುದರ ಬಗ್ಗೆ ಬಿಜೆಪಿಯ ಉನ್ನತ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಬೇಕು. 'ಯಡಿಯೂರಪ್ಪ ಅವರಷ್ಟು ಕೀಳು ಮಟ್ಟಕ್ಕೆ ಇಳಿಯುವುದಿಲ್ಲ' ಎನ್ನುತ್ತಲೇ ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರು ಕೂಡ ಪಾದ-ದೂಳಿನ ಹೋಲಿಕೆಯ ಮಾತು ಆಡಿದ್ದಾರೆ. ಸಿದ್ದರಾಮಯ್ಯ ಅವರು ಇಲ್ಲಿ ಜಾಣ್ಮೆ ತೋರಿದ್ದರೂ ಪಾದ-ದೂಳಿನ ಉಲ್ಲೇಖ ಅವರಿಗೆ ತಕ್ಕುದಲ್ಲ. ಉನ್ನತ ಸ್ಥಾನಗಳಲ್ಲಿ ಇರುವವರು ತಮ್ಮ ಸಾರ್ವಜನಿಕ ನಡವಳಿಕೆಯ ಮೂಲಕ ಸಮಾಜಕ್ಕೆ ಉತ್ತಮ ಮಾದರಿಗಳನ್ನು ಒದಗಿಸಬೇಕು. ನಿದರ್ಶನ ಆಗಬೇಕಾದವರೇ ಲಘುವಾಗಿ ಮಾತನಾಡ ತೊಡಗಿದರೆ ಸಾಮಾನ್ಯ ಕಾರ್ಯಕರ್ತರ ನಾಲಿಗೆಗೆ ಲಗಾಮು ಎಲ್ಲಿಂದ ಬರಬೇಕು?



ರಾಜಕೀಯ ಪಕ್ಷಗಳ ಮುಖಂಡರು ಮಾತಿನಲ್ಲಿ ಹದ್ದು ಮೀರದೆ, ಸಾರ್ವಜನಿಕ ಜೀವನದ ಘನತೆಯನ್ನು ಎತ್ತಿ ಹಿಡಿಯಬೇಕು

ಬಿಜೆಪಿಯ ನಾಯಕರು ನೆಹರೂ ಅವರನ್ನು ತಡವಿಕೊಳ್ಳುತ್ತಿರುವುದು ಇದೇ ಮೊದಲೇನಲ್ಲ. ಸ್ವತಂತ್ರ ಭಾರತದ ಎಲ್ಲ ಬಿಕ್ಕಟ್ಟುಗಳಿಗೂ ನೆಹರೂ ಅವರೇ ಕಾರಣ ಎಂದು ಬಿಂಬಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಿದ ನೆಹರೂ ದೇಶಕ್ಕೆ ನೀಡಿದ ಕೊಡುಗೆಗಳನ್ನು ಮರೆಮಾಚುವ ಪ್ರಯತ್ನ ನಡೆಸಲಾಗುತ್ತಿದೆ. ಆಧುನಿಕ ಭಾರತದ ನೀಲನಕಾಶೆಯನ್ನು ರೂಪಿಸಿ, ಅದನ್ನು ಕಾರ್ಯರೂಪಕ್ಕೆ ತರಲು ಶ್ರಮಿಸಿದ ನೆಹರೂ ಸ್ವಾತಂತ್ರ್ಯ ಚಳವಳಿಯಲ್ಲೂ ಸಕ್ರಿಯರಾಗಿದ್ದರು. ಗಾಂಧಿಯ ನಂತರ ಜನರನ್ನು ಪ್ರಭಾವಿಸಿದ ಬಹುದೊಡ್ಡ ನಾಯಕನ ಕೊಡುಗೆಯನ್ನು ಸ್ಮರಿಸಿಕೊಳ್ಳುವ ಸಜ್ಜನಿಕೆ ತೋರದೆ ಹೋದರೂ, ಕೃತಘ್ನರಂತೆ ವರ್ತಿಸುವುದು ನೈತಿಕತೆಯೂ ಅಲ್ಲ, ಜನಪರ ರಾಜಕಾರಣವೂ ಅಲ್ಲ. ದೇಶದ ವಿಭಜನೆಗೆ ನೆಹರೂ ಅವರನ್ನು ಹೊಣೆಗಾರರನ್ನಾಗಿ ಮಾಡುವುದು ಕೂಡ ಹೊಣೆಗೇಡಿತನದ ವರ್ತನೆ ಹಾಗೂ ಇತಿಹಾಸದ ಅಪವ್ಯಾಖ್ಯಾನ. ನೆಹರೂ ಅವರನ್ನು ಸ್ವತಃ ಮಹಾತ್ಮ ಗಾಂಧಿ ಗೌರವದಿಂದ ಕಂಡಿದ್ದರು ಹಾಗೂ ತಮ್ಮ ಆಶೋತ್ತರಗಳ ವಾರಸುದಾರರನ್ನಾಗಿ ಹಲವು ಸಂದರ್ಭಗಳಲ್ಲಿ ಬಿಂಬಿಸಿದ್ದರು. ಇತಿಹಾಸವನ್ನು ತಿರುಚಿ ನೆಹರೂ ಅವರನ್ನು ತಪ್ಪಾಗಿ ಚಿತ್ರಿಸುವುದರಿಂದ ನೆಹರೂ ಕೊಡುಗೆಯನ್ನು ಮರೆಮಾಚುವುದು ಸಾಧ್ಯವಿಲ್ಲ. ಗಾಂಧಿ ಅವರ ಪಾದದ ದೂಳಿಗೆ ನೆಹರೂ ಅವರನ್ನು ಹೋಲಿಸುವುದು ದೇಶದ ಮೊದಲ ಪ್ರಧಾನಿಗೆ ತೋರುವ ಅಗೌರವ ಮಾತ್ರವಲ್ಲ, ಮಹಾತ್ಮನಿಗೆ ಮಾಡುವ ಅವಮಾನವೂ ಹೌದು ಎನ್ನುವುದನ್ನು ನಾಯಕರು ನೆನಪಿನಲ್ಲಿಟ್ಟುಕೊಳ್ಳಬೇಕು. ಇತರ ಪಕ್ಷಗಳ ಮುಖಂಡರು ಕೂಡ ಟೀಕೆಗಳಿಗೆ ತಿರುಗೇಟು ನೀಡುವ ಭರದಲ್ಲಿ ಕೀಳು ಅಭಿರುಚಿ ಪ್ರದರ್ಶಿಸಿದ್ದು ಇದೆ. ಇದೇ ರೀತಿ ಮುಂದುವರಿದರೆ ಸಾರ್ವಜನಿಕ ಸಂವಾದದ ಗುಣಮಟ್ಟವು ಪಾತಾಳಕ್ಕೆ ಕುಸಿಯುತ್ತದೆ. ಬಿಜೆಪಿ ಮಾತ್ರವಲ್ಲ, ಕಾಂಗ್ರೆಸ್ ಸೇರಿದಂತೆ ಇತರ ಎಲ್ಲ ಪಕ್ಷಗಳ ಮುಖಂಡರು ಮಾತಿನಲ್ಲಿ ಹದ್ದು ಮೀರದೆ, ಸಾರ್ವಜನಿಕ ಜೀವನದ ಘನತೆಯನ್ನು ಎತ್ತಿ ಹಿಡಿಯಬೇಕು. ಪ್ರತಿಸ್ಪರ್ಧಿ ಪಕ್ಷಗಳ ಮುಖಂಡರು ಕೀಳಾಗಿ ಮಾತನಾಡುವ ರೀತಿಯಲ್ಲಿ ಪ್ರಚೋದನೆಯನ್ನೂ ಮಾಡಬಾರದು.

ಗಾಂಧಿ, ನೆಹರೂ ಸೇರಿದಂತೆ ಯಾರೊಬ್ಬರೂ ಟೀಕೆಗೆ ಅತೀತರಲ್ಲ. ಸಾರ್ವಜನಿಕ ಜೀವನದಲ್ಲಿ ಇರುವವರು ಟೀಕೆಟಿಪ್ಪಣಿಗಳಿಗೆ ತೆರೆದ ಮನಸ್ಸನ್ನು ಹೊಂದಿರುವುದು ಅಗತ್ಯ. ಆದರೆ, ಆ ಟೀಕೆಗಳು ರಚನಾತ್ಮಕ ನೆಲೆಗಟ್ಟಿನಲ್ಲಿರಬೇಕೇ ಹೊರತು ಚಾರಿತ್ರ್ಯಹರಣದ ರೂಪ ಪಡೆಯಬಾರದು. ಅದರಲ್ಲೂ ಈಗ ನಮ್ಮೊಡನೆ ಇಲ್ಲದಿರುವ ನಾಯಕರ ವ್ಯಕ್ತಿತ್ವ ಮತ್ತು ಸಾಧನೆಯನ್ನು ವಿಶ್ಲೇಷಿಸುವಾಗ ವಿವೇಕ ಮತ್ತು ಸಂಯಮ ಅತ್ಯಗತ್ಯ. ನೆಹರೂ ಅಥವಾ ಗಾಂಧಿ ಒಂದು ಪಕ್ಷಕ್ಕೆ ಸೀಮಿತವಾದ ನಾಯಕರಲ್ಲ; ಸ್ವಾತಂತ್ರ್ಯ ಚಳವಳಿಯನ್ನು ಮುನ್ನಡೆಸುವ ಮೂಲಕ ಇಡೀ ದೇಶದ ಗೌರವ ಮತ್ತು ಕೃತಜ್ಞತೆಗೆ ಪಾತ್ರರಾದ ನೇತಾರರು. ಅಂಥ ನಾಯಕರನ್ನು ರಾಜಕಾರಣದ ಬೀದಿಜಗಳಕ್ಕಾಗಿ ಬಳಸಿಕೊಳ್ಳುವುದು ತೀರಾ ಹೀನಾಯವಾದ ನಡವಳಿಕೆ. ನರೇಂದ್ರ ಮೋದಿ ಅವರ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ ಎನ್ನುವ ಕಾರಣಕ್ಕಾಗಿ ಕಾಂಗ್ರೆಸ್‌ನ ಸಿದ್ದರಾಮಯ್ಯ ಅವರನ್ನು ಬಿಜೆಪಿ ನಾಯಕರು ತರಾಟೆಗೆ ತೆಗೆದುಕೊಂಡಿದ್ದಾರೆ. ಬಿಜೆಪಿ ನಾಯಕರ ಬಗ್ಗೆ ಕಾಂಗ್ರೆಸ್‌ನವರೂ ಮಾತಿನ ದಾಳಿ ನಡೆಸುತ್ತಿದ್ದಾರೆ. ಈ ಮಾತು ಹಾಗೂ ಪ್ರತಿಮಾತು ರಾಜಕೀಯ ಜೀವನದಲ್ಲಿ ಸಹಜ. ಆದರೆ, ಈ ಕೋಳಿಜಗಳದಲ್ಲಿ ಈಗ ಇತಿಹಾಸದ ಪುಟಗಳಿಗೆ ಸೇರಿರುವ ನಾಯಕರನ್ನು ಬಳಸಿಕೊಳ್ಳುವುದು ಯಾರಿಗೂ ಶೋಭೆ ತರುವ ವರ್ತನೆಯಲ್ಲ. ಜನರ ಭಾವಕೋಶದಲ್ಲಿ ಅಚ್ಚೊತ್ತಿರುವ ಉದಾತ್ತ ನಾಯಕರ ಬಿಂಬಗಳನ್ನು ಗಾಸಿಗೊಳಿಸುವ ಪ್ರಯತ್ನಗಳು ನಿಲ್ಲಬೇಕು. ಇಂಥ ನಿರಾಕರಣೆಯ ಪ್ರವೃತ್ತಿ ಮುಂದುವರಿಯುತ್ತಾ ಹೋದರೆ, ಏನನ್ನೂ ಯಾರನ್ನೂ ಉಳಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಎದುರಾಳಿಗೆ ಕೆಸರು ಎರಚುವ ಪ್ರಯತ್ನದಲ್ಲಿ ಆ ಕೊಳಕು ತಮ್ಮ ಕೈಗಳಿಗೂ ಅಂಟುತ್ತದೆ ಎನ್ನುವುದನ್ನು ರಾಜಕಾರಣಿಗಳು ಅರ್ಥ ಮಾಡಿಕೊಳ್ಳಬೇಕು.

ನಿವೃತ್ತಿ ಎನ್ನುವುದು ಅಲ್ಪವಿರಾಮವಷ್ಟೇ, ಪೂರ್ಣವಿರಾಮವಲ್ಲ

ನಿವೃತ್ತಿ ಘೋಷಣೆ: ಯಾವುದು ಸಕಾಲ?



ವಿಶ್ಲೇಷಣೆ

ಸುಧೀಶ್ ವೆಂಕಟೇಶ್

ಇತ್ತೀಚೆಗೆ 56 ವರ್ಷಗಳನ್ನು ಪೂರ್ಣಗೊಳಿಸಿದ ನನ್ನ ಆತ್ಮೀಯ ಮಿತ್ರರೊಬ್ಬರು ನೌಕಾಪಡೆಯಲ್ಲಿ 35 ವರ್ಷ ಸೇವೆ ಸಲ್ಲಿಸಿದ ನಂತರ ನಿವೃತ್ತಿ ಪಡೆದರು. 'ರಿಟೈರ್‌ಮೆಂಟ್ ಅಹೋಯ್' ಎನ್ನುವ ಶೀರ್ಷಿಕೆಯ ಟಿಪ್ಪಣಿಯನ್ನು ಬರೆಯುವ ಮೂಲಕ ಈ ಪ್ರಮುಖ ಗಳಿಗೆಯನ್ನು ಸಂಭ್ರಮಿಸಲು ನಿರ್ಧರಿಸಿದರು. ಇದೇ ವೇಳೆ, ತಮ್ಮ ಮೂರನೇ ನವೋದ್ಯಮದ ಷೇರುಗಳನ್ನು ಬಿಡುಗಡೆ ಮಾಡಲು ಸಿದ್ಧತೆ ನಡೆಸುತ್ತಿರುವ 79ರ ಹರೆಯದ ಯಶಸ್ವಿ ಮತ್ತು ನಿರ್ಭೀತ ಉದ್ಯಮಿಯೊಬ್ಬರ ಕುರಿತು ಓದಲು ನನಗೆ ಅವಕಾಶ ಸಿಕ್ಕಿತು. ಇದು, ಡಾಟ್‌ಕಾಮ್ ಉತ್ತುಂಗದಲ್ಲಿದ್ದ ಸಮಯದಲ್ಲಿ ನಾನು ನೋಡಿದ್ದ 'ಮೂವತ್ತರ ಹರೆಯದಲ್ಲೇ ನಿಮಗೆ ನಿವೃತ್ತಿಯಾಗಬೇಕೆ? ಹಾಗಾದರೆ, ಅರ್ಜಿ ಸಲ್ಲಿಸಿ' ಎಂಬ ಉದ್ಯೋಗ ನೇಮಕಾತಿ ಜಾಹೀರಾತನ್ನು ನೆನಪಿಸಿತು. ಈ ಮೂರು ನಿವೃತ್ತಿಗಳು ನನ್ನಲ್ಲಿ ಕೆಲವು ಪ್ರಶ್ನೆಗಳನ್ನು ಹುಟ್ಟುಹಾಕಿದವು. ನಿವೃತ್ತಿ ಘೋಷಿಸಲು ಸೂಕ್ತ ಸಮಯ ಎನ್ನುವುದು ಇದೆಯೇ?

ಉದ್ಯೋಗದಲ್ಲಿ ಉತ್ತುಂಗದಲ್ಲಿರುವಾಗ ವಿರಾಮ ತೆಗೆದುಕೊಳ್ಳುವುದನ್ನು ಕೆಲವರು ಸೂಕ್ತವಾದ ನಿರ್ಧಾರ ಎಂದು ಪರಿಗಣಿಸುತ್ತಾರೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ ಆಷ್ಲೆ ಬಾರ್ಟಿ. ಅದ್ಭುತ ಪ್ರತಿಭೆಯ ಟೆನಿಸ್ ಆಟಗಾರ್ತಿಯಾಗಿ ಗುರುತಿಸಿಕೊಂಡಿದ್ದ ಹಾಗೂ ಮೂರು ಗ್ರ್ಯಾನ್ ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿದ್ದ ಇವರು 25ನೇ ವಯಸ್ಸಿನಲ್ಲಿಯೇ ನಿವೃತ್ತರಾದರು. ನಿವೃತ್ತರಾಗುವ ಸಮಯದಲ್ಲಿ ಅವರು ಹೀಗೆ ಹೇಳಿದ್ದರು: 'ವಿಂಬಲ್ಡನ್ ಗೆಲ್ಲುವುದು ಎಂದರೆ ಕನಸಿನ ಪರಾಕಾಷ್ಠೆಯನ್ನು ತಲುಪುವುದು ಎಂದರ್ಥ. ನನಗೆ ಭಾರಿ ಸಂತಸವಾಗಿದೆ ಮತ್ತು ನಿವೃತ್ತಿಗೆ ನಾನು ಸಿದ್ಧಳಾಗಿದ್ದೇನೆ, ಅಲ್ಲದೆ ನಿವೃತ್ತಿಯಾಗಲು ಇದು ಸರಿಯಾದ ಸಮಯ ಎನ್ನುವುದು ನನ್ನ ಹೃದಯದ ಮಾತಾಗಿದೆ'.

ಈ ತಲೆಮಾರಿನ ಅತ್ಯುನ್ನತ ರಿಟೇಲರ್ ಹಾಗೂ ಟೆಸ್ಕೊ ಸಂಸ್ಥೆಯ ಸಿಇಒ ಆಗಿದ್ದ ಸರ್ ಟೆರಿ ಲೀಹಿ ಅವರು, ತಮ್ಮ ಸಂಸ್ಥೆಯು ವಿಶ್ವದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದ ರಿಟೇಲ್ ಕಂಪನಿಯಾಗಿ ಗುರುತಿಸಿಕೊಂಡಿದ್ದ ಸಂದರ್ಭದಲ್ಲೇ ತಮ್ಮ 56ನೇ ವರ್ಷದಲ್ಲಿ ನಿವೃತ್ತಿ ಘೋಷಿಸಿಕೊಂಡರು. ಸಂಬಂಧಿತ ವ್ಯಕ್ತಿಗೆ ನಿವೃತ್ತಿಯ ಸಮಯವು ಸಂತಸ ತಂದರೂ, ಆ ವ್ಯಕ್ತಿಯು ಇನ್ನಷ್ಟು ಕಾಲ ಮುಂದುವರಿದು ಇನ್ನೂ ಒಂದಷ್ಟು ಸಾಧನೆ ಮಾಡಬೇಕಿತ್ತು ಎಂದು ಇತರರು ಭಾವಿಸುವುದು ಸಹಜವೇ. ಆದರೆ ಸಂಪೂರ್ಣವಾಗಿ ವೈಯಕ್ತಿಕವಾಗಿರುವ ಈ ಆಯ್ಕೆಯನ್ನು ನಾವು ಗೌರವಿಸಬೇಕು.

ಸಾಧ್ಯವಿರುವಷ್ಟು ಮಟ್ಟಿಗೆ ಮುಂದುವರಿಯುವುದು ಕೆಲವರ ಇಚ್ಛೆ. ಅಮೆರಿಕದ ವಿಶ್ವವಿದ್ಯಾಲಯಗಳ ವಿಜ್ಞಾನಿಗಳು ತಮ್ಮ 90ರ ಹರೆಯದಲ್ಲಿಯೂ ಬೋಧನೆ ಮತ್ತು ಸಂಶೋಧನೆಯಲ್ಲಿ ತೊಡಗುವುದು ಅಚ್ಚರಿಯ ವಿಷಯವೇನಲ್ಲ. ಟೆಕ್ಸಾಸ್ ವಿಶ್ವವಿದ್ಯಾಲಯದ ಜಾನ್ ಬಿ ಗುಡ್ ಇನಫ್ ಮತ್ತು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಸ್ಯುಕುರೊ ಮನಾಬೆ ಅವರಿಗೆ ತಮ್ಮ ಜೀವಿತಾವಧಿಯಲ್ಲಿ ಮಾಡಿದ ಸಾಧನೆಗಾಗಿ ನೊಬೆಲ್ ಪ್ರಶಸ್ತಿಯೂ ದೊರೆತಿದೆ. ಪ್ರಸಿದ್ಧ ಕನ್ನಡ ನಿಘಂಟುಕಾರ ಮತ್ತು ಶತಾಯುಷಿ ಜಿ.ವೆಂಕಟಸುಬ್ಬಯ್ಯ ಅವರು 90ನೇ ಇಳಿ ವಯಸ್ಸಿನಲ್ಲಿಯೂ ಸಂಶೋಧನೆ ನಡೆಸಿ ಲೇಖನಗಳನ್ನು ಪ್ರಕಟಿಸುತ್ತಿದ್ದರು. ಕಲೆ, ಸಂಗೀತ, ವಿಜ್ಞಾನದಂತಹ ಪಾಂಡಿತ್ಯ ಕ್ಷೇತ್ರಗಳಲ್ಲಿನ ವೃತ್ತಿಯ ದೀರ್ಘಾಯುಷ್ಯವು ಮುಂದಿನ ತಲೆಮಾರುಗಳಿಗೆ ಸೃಜನಶೀಲತೆಯನ್ನು ಒದಗಿಸುವುದಲ್ಲದೆ ಅಮೂಲ್ಯ ತರಬೇತಿಯನ್ನೂ ನೀಡುತ್ತದೆ.

ಕೆಲವರು ನಿವೃತ್ತಿಯಾಗುವುದೇ ಇಲ್ಲ, ಏಕೆಂದರೆ ಅವರು ಬೇರೆ ಏನನ್ನೂ ಯೋಚಿಸಲಾರರು. ಇದು ಕೆಲವು ಸನ್ನಿವೇಶಗಳಲ್ಲಿ ವೈಫಲ್ಯ ಎನಿಸುತ್ತದೆ ಹಾಗೂ ಕೆಲವು ಸಂಸ್ಕೃತಿಗಳಲ್ಲಿ ಇದು ಎದ್ದು ಕಾಣುತ್ತದೆ. ಭಾರತದ ಪ್ರಸಿದ್ಧ ಶಿಕ್ಷಣ ತಜ್ಞ ಎನಿಸಿರುವ ಹಾಗೂ ಸರ್ಕಾರದಲ್ಲಿ ದೊಡ್ಡ ಹುದ್ದೆಯಲ್ಲಿ ಸೇವೆ ಸಲ್ಲಿಸಿದ ನಂತರ ತಳಮಟ್ಟದಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ವಯಂಸೇವಾ ಸಂಸ್ಥೆಯೊಂದನ್ನು (ಎನ್‌ಜಿಒ) ಸ್ಥಾಪಿಸಿದ್ದ ವ್ಯಕ್ತಿಯೊಬ್ಬರು ತಮ್ಮ ಪರಿಶುದ್ಧ ಹಿಂದಿ ಭಾಷೆಯಲ್ಲಿ ಹೀಗೆ ಹೇಳಿದ್ದರು: 'ಜಿಸ್ಕೊ ಬಿಸ್ತರ್ ಪಕಡ್ನಾ ಹೈ, ವೋ ಅಭೀ ಭೀ ಕುರ್ಸಿ ಪಕ್ಡೆ ಹುವೆ ಹೈಂ' (ಯಾರು ಹಾಸಿಗೆ ಹಿಡಿಯಬೇಕೋ ಅವರು ಕುರ್ಚಿ ಹಿಡಿದುಕೊಂಡು ಕೂತಿದ್ದಾರೆ). ಅವರು ಹೇಳಿದ ಈ ಮಾತನ್ನು ಭಾಷಾಂತರಿಸಿದರೆ ಅದು ಅಷ್ಟೊಂದು ಪರಿಣಾಮಕಾರಿ ಎನಿಸದು. ಆದರೆ ಸಮಯ ಮೀರಿದ ನಂತರವೂ ಜನರು ಕುರ್ಚಿಗೆ ಅಂಟಿಕೊಂಡರೆ ಆಗುವ ಅಡ್ಡಪರಿಣಾಮಗಳನ್ನು ಇದು ಸೂಚಿಸುತ್ತದೆ. ಕುತೂಹಲಕಾರಿ ವಿಷಯವೆಂದರೆ, ಅವಕಾಶ ಸಿಕ್ಕ ಕಡೆ ಇನ್ನೂ ಹೆಚ್ಚಿನ ಅವಧಿಯ ತನಕ ಉಳಿದುಕೊಳ್ಳುವ ಜನರು, 'ಬಿಟ್ಟುಹೋಗಲು ಸಂಸ್ಥೆಯು ನನ್ನನ್ನು ಬಿಡುತ್ತಿಲ್ಲ' ಎಂಬ ತರ್ಕವನ್ನು ಮುಂದಿಡುತ್ತಾರೆ. ಮಾರುಕಟ್ಟೆಗಳು, ಜನರ ವರ್ತನೆ, ತಂತ್ರಜ್ಞಾನದ ಸಮಕಾಲೀನ ಹಾಗೂ ಆಳವಾದ ಅರಿವು ಬೇಕಿರುವಲ್ಲಿ ಆಡಳಿತಾತ್ಮಕ ಹಾಗೂ ಕಾರ್ಯಾಚರಣೆ ಹುದ್ದೆಗಳಿಂದ ಹಳಬರು ಗೌರವಯುತವಾಗಿ ಹಿಂದೆ ಸರಿಯಬೇಕು. ಅಲ್ಲಿ ಅವರು ಸಲಹೆಗಾರ ಅಥವಾ ಮೇಲ್ವಿಚಾರಣೆಯ ಹುದ್ದೆಗಳಿಗೆ ಸೀಮಿತರಾಗಬೇಕು.

ಕೆಲವರು ನಿಗದಿತ ಉದ್ದೇಶದ ಬಗ್ಗೆ, ಸಂಸ್ಥೆ ಅಥವಾ ಕಚೇರಿಯೊಂದಿಗೆ ಎಷ್ಟು ಆಳವಾದ ಬಂಧವನ್ನು ಹೊಂದಿರುತ್ತಾರೆ ಎಂದರೆ, ಅದನ್ನು ತ್ಯಜಿಸಲು ಅವರಿಗೆ ವಿಪರೀತ ಹೆದರಿಕೆಯಾಗುತ್ತದೆ. 'ವಾಟ್ ಟು ಎಕ್ಸ್‌ಪೆಕ್ಟ್ ವೆನ್ ಯು ಆರ್ ರಿಟೈರಿಂಗ್' ಎಂಬ ಪುಸ್ತಕವನ್ನು ಬರೆದಿರುವ ಕೆನಡಾ ಮೂಲದ ಲೇಖಕ ರಿಲಿ ಮೋಯ್ನೆಸ್ ನಷ್ಟದ ಭೀತಿಯನ್ನು ಐದು ಪ್ರಕಾರಗಳಾಗಿ ವರ್ಗೀಕರಿಸಿದ್ದಾರೆ. ಅವೆಂದರೆ, ದಿನಚರಿ, ಅಸ್ಮಿತೆ, ಉದ್ದೇಶ, ಅಧಿಕಾರ ಮತ್ತು ಸಂಬಂಧಗಳು. ನಿವೃತ್ತಿ ಎಂದರೆ ಕೆಲವರಿಗೆ ತಮ್ಮ ದಿನಚರಿಯಿಂದ ಹಠಾತ್ ಆಗಿ ನಿರ್ಗಮಿಸಿದಂತೆ ಭಾಸವಾಗಬಹುದು. ಮುಕ್ತ ಹಾಗೂ ಮೇಲ್ವಿಚಾರಣೆ ಇಲ್ಲದ ಕಾಲದ ಹೊಳಪು ಬೇಗನೇ ಹೊರಟುಹೋಗಿ ಮಂಕುತನ ಆವರಿಸುತ್ತದೆ, ತಮ್ಮ ಯೋಗ್ಯತೆಯ ಪ್ರಶ್ನೆ ಉದ್ಭವಿಸುತ್ತದೆ. ಕೆಲಸ ಮತ್ತು ಕಚೇರಿಯು ಜನರಿಗೆ ಅಸ್ಮಿತೆ, ಉದ್ದೇಶ, ಅಧಿಕಾರ ಮತ್ತು ಸಂಬಂಧಗಳನ್ನು ಒದಗಿಸುತ್ತದೆ. ಅಲ್ಲದೆ ಯಾವುದೇ ವ್ಯಕ್ತಿಯು ಇತರ ಆಸಕ್ತಿಗಳು ಹಾಗೂ ಒಡನಾಟಗಳನ್ನು ಬೆಳೆಸಿಕೊಳ್ಳದೇ ಹೋದಲ್ಲಿ ನಿವೃತ್ತಿಯು ಆತಂಕಕಾರಿ ಎನಿಸಬಹುದು.

ನಿವೃತ್ತಿ ಎನ್ನುವುದು ಅಲ್ಪವಿರಾಮವಷ್ಟೇ, ಪೂರ್ಣವಿರಾಮವಲ್ಲ. ನಿವೃತ್ತಿಯಿಂದ ಒಂದು ಯೋಜಿತ ಪರಿವರ್ತನೆ ಸಂಭವಿಸಿದಲ್ಲಿ ಅದು ಪ್ರಯೋಜನಕಾರಿ ಎನಿಸಬಲ್ಲದು. ಕೆಲವು ಸಂದರ್ಭಗಳಲ್ಲಿ ಇಂತಹ ಪರಿವರ್ತನೆಗೆ ಅವಕಾಶವಿದೆ. ಉದಾಹರಣೆಗೆ, ಸಕ್ರಿಯ ರಾಜಕಾರಣದಿಂದ ದೂರವಾದವರನ್ನು ರಾಜ್ಯಪಾಲರನ್ನಾಗಿ ನೇಮಿಸುವುದು ಸರ್ವೇ ಸಾಮಾನ್ಯ. ಶೈಕ್ಷಣಿಕ ವಲಯದಲ್ಲಿ ವಿಶ್ರಾಂತ ಮತ್ತು ಅತಿಥಿ ಉಪನ್ಯಾಸಕರ ಸ್ಥಾನಗಳಿವೆ. ಹಿರಿಯ ಅಧಿಕಾರಿಗಳು ಚಿಂತಕರ ಚಾವಡಿಯಲ್ಲಿ ಇರುವ ಸ್ಥಾನಗಳನ್ನು ಅಲಂಕರಿಸುತ್ತಾರೆ. ಕಾರ್ಪೊರೇಟ್ ವಲಯದ ಎಕ್ಸಿಕ್ಯುಟಿವ್‌ಗಳು ಆಡಳಿತ ಮಂಡಳಿಗಳಲ್ಲಿ ಸ್ವತಂತ್ರ ನಿರ್ದೇಶಕರಾಗಿ ಆಡಳಿತ ನಿರ್ವಹಣೆಯ ಪಾತ್ರವನ್ನು ವಹಿಸುತ್ತಾರೆ.

ಆದರೆ, ಕೆಲವು ವ್ಯಕ್ತಿಗಳು ನಿವೃತ್ತಿಯ ನಂತರ ಬೇರೆಯೇ ಬದುಕನ್ನು ಸಾಗಿಸಲು ಬಹಳ ಎಚ್ಚರದಿಂದ ಪೂರ್ವಸಿದ್ಧತೆ ನಡೆಸಿಕೊಳ್ಳುತ್ತಾರೆ. ಅನೇಕ ಯಶಸ್ವಿ ಅಧಿಕಾರಿಗಳು ಮತ್ತು ಕಾರ್ಪೊರೇಟ್ ಸಂಸ್ಥೆಗಳ ಎಕ್ಸಿಕ್ಯುಟಿವ್‌ಗಳು ಸಂಸ್ಥೆಗಳು ಮತ್ತು ಸಮಾಜದ ಒಳಿತಿಗಾಗಿ ಸೇವೆ ನೀಡುವ ಮೂಲಕ ಸಂತಸ, ಆತ್ಮತೃಪ್ತಿಯ ಬದುಕು ಸಾಗಿಸುವುದಿದೆ. ಹಣಕಾಸು ಕಾರ್ಯದರ್ಶಿಯಂತಹ ಗೌರವಯುತ ಹುದ್ದೆಯನ್ನು ಅಲಂಕರಿಸಿದ್ದ ಹಸ್ಮುಕ್ ಅಧಿಯಾ ಅವರು ನಿವೃತ್ತಿಯ ನಂತರ ಸರ್ಕಾರದ ಪ್ರಮುಖ ಹುದ್ದೆಯನ್ನು ನಿರಾಕರಿಸಿದರು ಹಾಗೂ ಅದರ ಬದಲಿಗೆ ಆಧ್ಯಾತ್ಮಿಕತೆ ಮತ್ತು ತಮ್ಮ ಮಗನ ಆರೈಕೆಗೆ ಸಮಯ ಮೀಸಲಿಡಲು ನಿರ್ಧರಿಸಿದರು.

ಜೀವಿತಾವಧಿ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಜನರು ತಮ್ಮ ಬದುಕಿನ ಮೂರನೇ ಒಂದರಷ್ಟು ಸಮಯವನ್ನು ನಿವೃತ್ತಿಯ ನಂತರ ಕಳೆಯುತ್ತಾರೆ. ನಿವೃತ್ತಿ ಎನ್ನುವುದು ನಮ್ಮ ಬದುಕಿನ ದೊಡ್ಡ ಸಾಹಸವಾಗಿದೆ. ಇದಕ್ಕಾಗಿ ಮನಸ್ಸನ್ನು ಸನ್ನದ್ಧಗೊಳಿಸಲು ಅಗತ್ಯವಾದ ಸಮಯ ವ್ಯಯಿಸುವುದಕ್ಕೆ ಇದು ಸಕಾಲ.

ಲೇಖಕ: ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಮುಖ್ಯ ಸಂವಹನ ಅಧಿಕಾರಿ



ಚುರುಮುರಿ



ಪ್ರಗತಿಸಂಕರ!

• ಚಂದ್ರಕಾಂತ ವಡ್ಡು

'ಹಲೋ... ನಾನು ಉಮಾಶಂಕರ ಮಾತಾಡ್ತಿದ್ದೀನಿ' ಆ ಕಡೆಯ ದನಿ. 'ಯಾರು? ಎಲ್ಲಿಂದ?' ತಿಂಗಳೇಶನಿಗೆ ಪತ್ತೆ ಹತ್ತಲಿಲ್ಲ. 'ನಾನಪಾ... ನಿನ್ನ ಕ್ಲಾಸ್‌ಮೇಟು, ಪ್ರಗತಿಶಂಕರ, ಮರೆತುಬಿಟ್ಟೆಯಾ?'

'ಹೋ... ಹೋ...! ಎಲ್ಲಿಗೆಬಂತು ನಿನ್ನ ಪ್ರಗತಿಪರ ಹೋರಾಟ?'

'ಹೋರಾಟ ನಿರಂತರ. ಈಗ 'ಭಾರತ್ ಜೋಡೊ ಯಾತ್ರೆ'ಯಲ್ಲಿದ್ದೇನೆ'.

ಕಾಲೇಜು ದಿನಗಳಲ್ಲಿಯೇ ಕಮ್ಯುನಿಸ್ಟ್ ಪಕ್ಷ ಸೇರಿ ಪ್ರಗತಿಶಂಕರ ಆಗಿದ್ದ ಈ ಉಮಾಶಂಕರ ಈಗ ಪ್ರಗತಿಪರ (ಕಾಂಗ್ರೆಸ್‌ವಾದಿ) ಹೋರಾಟಗಾರ ಅಂತ ಖಾತರಿ ಆಯಿತು. ಆದರೆ ಸಿದ್ರಾಮಯ್ಯ ಬಣನೋ, ಡಿಕೆಶಿ ಬಣನೋ ತಿಳಿಯಲಿಲ್ಲ!

'ನಾಳೆ ಯಾತ್ರೆ ನಮ್ಮೂರಿಗೂ ಬರುತ್ತಿದೆ. ಭೇಟಿಯಾಗೋಣ' ತಿಂಗಳೇಶನಿಗೆ ಸಹಪಾಠಿಯನ್ನು ಕಾಣುವ ತವಕ. 'ಅಯ್ಯೋ... ದೋಸ್ತ, ಇವೊತ್ತು ಜೋಡೊ ಯಾತ್ರೆಯ ಕೊನೆಯ ದಿನ. ನಾಳೆ ನಾನು ಮತ್ತೊಂದು ಯಾತ್ರೆ ಒಪ್ಪಿಕೊಂಡು ಬಿಟ್ಟಿದ್ದೇನೆ. ಮೂರು ದಿನ 'ಜನಸಂಕಲ್ಪ ಯಾತ್ರೆ'ಯಲ್ಲಿ ಭಾಗವಹಿಸಬೇಕು'.

'ಹಾಗಾದರೆ ನಿನ್ನ ನಡಿಗೆ ಸರಿಯಾದ ದಾರಿಯಲ್ಲೇ ಸಾಗಿದೆ. ಇದೊಂಥರಾ 'ಜೋಡೊ ಸಂಕಲ್ಪ ಯಾತ್ರೆ'. ಆದರೆ ನಿನ್ನ ಹೆಸರು ಮಾತ್ರ ಸರಿಯಿಲ್ಲ. 'ಪ್ರಗತಿಸಂಕರ' ಅಂತ ಬದಲಿಸಿಕೊ'.

'ನಿನ್ನ ವ್ಯಂಗ್ಯ ಅರ್ಥವಾಗುತ್ತೆ. ಆದರೆ ಈಗ ನಾವಿರುವುದೇ ಸಂಕರ ಕಾಲಘಟ್ಟ. ಚುನಾವಣೆ ಪರ್ವ ಬೇರೆ. ಸಂಕರ ಸರ್ಕಾರ, ಸಂಕರ ಸಂಗೀತ, ಸಂಕರ ಸಾಹಿತ್ಯ, ಸಂಕರ ತಳಿ, ಸಂಕರ ಬೆಳೆ...'

'ಹೌದೌದು, ಇನ್ನೆಲ್ಲಿಯ ಪ್ರಗತಿಶಂಕರ?! ಅದಿರಲಿ, ನಿನ್ನಿಂದ ಒಂದು ಉಪಕಾರ ಆಗಬೇಕಲ್ಲ...'

'ಓಹೋ, ಏನು? ಏನಾಗಬೇಕು ಹೇಳು' ಚುನಾವಣಾ ವರ್ಷದಲ್ಲಿ ಮತದಾರನ ಸಕಲ ಅಹವಾಲಿಗೆ ಕಿವಿಯಾಗುವ ರಾಜಕಾರಣಿಯ ಉಮೇದು ಶಂಕರನ ದನಿಯಲ್ಲಿ. 'ಏನಿಲ್ಲ... ರಾಹುಲ್ ಗಾಂಧಿಯ ಪಾದದ ದೂಳು ಬೇಕಿತ್ತು'

'ಗೊತ್ತಾಯ್ತು ಬಿಡು, ನಿನ್ನ ಉದ್ದೇಶ. ರಾಹುಲ್ ದೂಳು ಹೇಗೋ ತರ್ತೀನಿ. ಮೋದಿಯವರದೂ ಸಿಕ್ಕೀತು. ಆದರೆ ಮಹಾತ್ಮ ಗಾಂಧಿ ಮತ್ತು ನೆಹರೂ ಪಾದದ ದೂಳು ಎಲ್ಲಿ ಸಿಗುತ್ತದೆ? ಅದಿಲ್ಲದೆ ಯಾರ ಪಾದದ ದೂಳಿಗೆ ಯಾರು ಸಮ ಅಂತ ಅಳೆಯುವುದಾದರೂ ಹೇಗೆ?'

ದಿನದ ಟ್ವೀಟ್

ಇದೊಂದು ದೊಡ್ಡ ವಿಷಯವೇ?



ಈ 21ನೇ ಶತಮಾನದಲ್ಲೂ ನಮ್ಮ ನಾಡಿನ ರಾಜಕೀಯ ನಾಯಕರು ದಲಿತರ ಮನೆಗೆ ಹೋಗಿ ಹೋಟೆಲ್ ತಿಂಡಿ ತಿಂದು, ಅದನ್ನೇ ಏನೋ ದೊಡ್ಡ ಸಮಾಜ ಸುಧಾರಣೆಯ ಹಾಗೆ ಬಿಂಬಿಸುತ್ತಾರೆ ಅಂದರೆ ಏನರ್ಥ? ದಲಿತರ ಮನೆಗೆ ಹೋಗೋದೇ ದೊಡ್ಡ ವಿಷಯ ಎಂದಾದರೆ, ನಮ್ಮ ಸಮಾಜದಲ್ಲಿ ಸಮಾನತೆ ಎಲ್ಲಿ ಇದೆ? ಜಾತಿ ಆಧಾರಿತ ಮೀಸಲಾತಿ ಏಕೆ ಅಂತ ಪ್ರಶ್ನೆ ಮಾಡುವವರಿಗೆ ಇದು ಉತ್ತರ ನೀಡುತ್ತೆ.

ಪ್ರತಾಪ್ ಕಣಗಾಲ್, ಮುಖ್ಯಸ್ಥ, ಜೆಡಿಎಸ್ ಐ.ಟಿ. ಘಟಕ

ಕಿಡಿನುಡಿ

ನಿಮಗೆ ಗೊತ್ತೇ? ನಮ್ಮ ದೇಶದ ಶೇಕಡ 48ರಷ್ಟು ರಾಜಕಾರಣಿಗಳ ಮೇಲೆ ಕ್ರಿಮಿನಲ್ ಆರೋಪಗಳಿವೆ. ಇದು ದೇಶದ ರಾಜಕೀಯ ವ್ಯವಸ್ಥೆಯ ಬಗ್ಗೆ ಬಹಳಷ್ಟನ್ನು ಹೇಳುತ್ತದೆ ಎಂದು ಭಾವಿಸಿದ್ದೇನೆ!



ಸಂಯುಕ್ತಾ ಹೆಗಡೆ, ಕಲಾವಿದೆ

25 ವರ್ಷಗಳ ಹಿಂದೆ

ಮಂಗಳವಾರ 14-10-1997

• **ಭಾರತ-ಬ್ರಿಟನ್ ಬಾಂಧವ್ಯ: ರಾಣಿ ಮೆಚ್ಚುಗೆ**

ನವದೆಹಲಿ, ಅ. 13 (ಪಿಟಿಐ, ಯುಎನ್ಐ)- ಬ್ರಿಟನ್ ಮತ್ತು ಭಾರತದ ನಡುವಿನ ನಿಕಟವಾದ ದ್ವಿಪಕ್ಷೀಯ ಬಾಂಧವ್ಯದ ಕುರಿತು ಬ್ರಿಟನ್‌ನ ರಾಣಿ ಎರಡನೇ ಎಲಿಜಬೆತ್ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಒಂದು ವಾರದ ಭೇಟಿಗಾಗಿ ಭಾರತಕ್ಕೆ ಆಗಮಿಸಿರುವ ಅವರು ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಅವರನ್ನು ಇಂದು ಭೇಟಿ ಮಾಡಿ ಮಾತುಕತೆ ನಡೆಸಿದರು.

ಮೂವತ್ತು ನಿಮಿಷಗಳ ಕಾಲ ನಡೆದ ಮಾತುಕತೆಯಲ್ಲಿ ಭಾರತದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆ, ಕೇಂದ್ರ ಹಾಗೂ ರಾಜ್ಯಗಳ ನಡುವಿನ ಸಂಬಂಧದ ಬಗ್ಗೆ ಚರ್ಚಿಸಲಾಯಿತು.

• **ಜೆಎಂಎಂ ಹಗರಣ ವಿಚಾರಣೆ ತಡೆಗೆ ಕೋರ್ಟ್ ನಕಾರ**

ನವದೆಹಲಿ, ಅ. 13 (ಪಿಟಿಐ)- ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಹಾಗೂ ಇತರ ಏಳು ಆರೋಪಿಗಳು ಭಾಗಿ ಆಗಿರುವ ಜಾರ್ಖಂಡ್ ಮುಕ್ತಿ ಮೋರ್ಚಾ ಲಂಚ ಪ್ರಕರಣದ ವಿಚಾರಣೆಯನ್ನು ತಡೆಹಿಡಿಯಲು ಸುಪ್ರೀಂ ಕೋರ್ಟ್ ಇಂದು ನಿರಾಕರಿಸಿತು.

50 ವರ್ಷಗಳ ಹಿಂದೆ

ಶನಿವಾರ, 14-10-1972

• **ಅಧಿಕಗೊಳ್ಳುತ್ತಿರುವ ಸಿ.ಐ.ಎ ಚಟುವಟಿಕೆ; ನಿರಂತರ ಎಚ್ಚರಿಕೆಗೆ ಕರೆ**

ನವದೆಹಲಿ, ಅ. 13- ದೇಶದಲ್ಲಿ 'ಸಿಐಎ' ಚಟುವಟಿಕೆಗಳು ಅಧಿಕಗೊಂಡಿವೆಯಾದ ಕಾರಣ ನಾವು ನಿರಂತರ ಎಚ್ಚರಿಕೆಯಿಂದಿರಬೇಕೆಂದು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ತಿಳಿಸಿದರು.

ಅಮೆರಿಕದ 'ಸಿಐಎ' ಸೇರಿದಂತೆ ವಿದೇಶಿ ಗೂಢಚರ ಸಂಸ್ಥೆಗಳ ಚಟುವಟಿಕೆಗಳಿಂದ ಉಂಟಾಗಿರುವ ಅಪಾಯಕಾರಿ ಪರಿಸ್ಥಿತಿಯನ್ನು ಸರ್ಕಾರ ಪರಿಶೀಲಿಸುತ್ತಿದೆಯೆಂದೂ ಕೇಂದ್ರ ಗೃಹಸಚಿವ ಶಾಖೆಗೆ ಸಂಬಂಧಿಸಿದ ಸಂಸತ್ ಸಲಹಾ ಸಮಿತಿಗೆ ತಿಳಿಸಿದರು.

• **ಅರಮನೆ ಪರಭಾರೆ: ಅಟಾರ್ನಿ ಜನರಲ್ ಅಭಿಪ್ರಾಯಕ್ಕೆ ಕೇಂದ್ರದ ಮನವಿ**

ನವದೆಹಲಿ, ಅ. 13- ಮೈಸೂರಿನ ಮಾಜಿ ಮಹಾರಾಜರ ಮೂರು ಅರಮನೆಗಳನ್ನು ಪರಭಾರೆ ಮಾಡಬಾರದೆಂಬ ಷರತ್ತನ್ನು ತೆಗೆದುಹಾಕುವ ಪ್ರಶ್ನೆ ಬಗ್ಗೆ ಕಾನೂನು ತಜ್ಞರ ಭಿನ್ನಾಭಿಪ್ರಾಯವಿರುವುದರಿಂದ, ಈ ಪ್ರಶ್ನೆಯ ಬಗ್ಗೆ ಅಟಾರ್ನಿ ಜನರಲ್ ನಿರೇನ್ ಡೇ ಅವರ ಅಭಿಪ್ರಾಯ ಕೋರಲಾಗಿದೆಯೆಂದು ಪ್ರಧಾನಿಯವರು ಇಂದು ಗೃಹಖಾತೆಗೆ ಸೇರಿದ ಸಮಾಲೋಚನಾ ಸಮಿತಿಗೆ ತಿಳಿಸಿದರು.

ಸಂಗತ

ಉದ್ಯೋಗ ಗಳಿಕೆ: ಅರಿಯಿರಿ ವಾಸ್ತವ

ಉದ್ಯೋಗದ ಕುರಿತು ಅವಾಸ್ತವಿಕ ನೆಲೆಗಟ್ಟಿನಲ್ಲಿ ಚಿಂತಿಸುತ್ತಿರುವ ವಿದ್ಯಾರ್ಥಿಸಮೂಹಕ್ಕೆ ವಾಸ್ತವ ಮನಗಾಣಿಸುವ ಅಗತ್ಯ ಇದೆ

• **ಎಚ್.ಕೆ.ಶರತ್**

ಎಂಜಿನಿಯರಿಂಗ್ ಅಂತಿಮ ಸೆಮಿಸ್ಟರ್‌ನಲ್ಲಿ ಇದ್ದಾಗಲೇ 'ಕ್ಯಾಂಪಸ್ ಸೆಲೆಕ್ಷನ್' ಮೂಲಕ ಕೆಲಸ ದಕ್ಕಿಸಿಕೊಂಡಿದ್ದ ಯುವತಿ, ಆರು ತಿಂಗಳುಗಳಿಂದ ಮನೆಯಿಂದಲೇ ಕೆಲಸ (ವರ್ಕ್ ಫ್ರಮ್ ಹೋಮ್) ನಿರ್ವಹಿಸುತ್ತಿದ್ದಳು. ವರ್ಷಕ್ಕೆ ₹ 12 ಲಕ್ಷ ವೇತನ ಸಿಗುವ ಈ ಕೆಲಸಕ್ಕೆ ನೇಮಿಸಿಕೊಳ್ಳುವ ಸಲುವಾಗಿ ನಡೆಸಿದ ಸಂದರ್ಶನದ ವೇಳೆ, ತನ್ನ ಕೌಟುಂಬಿಕ ಹಿನ್ನೆಲೆ ಹಾಗೂ ಪದವಿ ಓದು ಪೂರ್ಣಗೊಳಿಸಲು ತನಗೆ ಎದುರಾದ ಆರ್ಥಿಕ ಸಮಸ್ಯೆಗಳ ಕುರಿತೂ ವಿವರಿಸಿದ್ದಳು.


ಉದ್ಯೋಗಕ್ಕೆ ಸೇರಿದಾಗಿನಿಂದಲೂ ಮನೆಯಿಂದಲೇ ಕೆಲಸ ನಿರ್ವಹಿಸಲು ಅನುವು ಮಾಡಿಕೊಟ್ಟಿದ್ದ ಸಂಸ್ಥೆ, ಇನ್ನು ಮುಂದೆ ಕಚೇರಿಗೆ ಬಂದು ಕೆಲಸ ನಿರ್ವಹಿಸುವಂತೆ ಸೂಚಿಸಿತು. ಆರೋಗ್ಯದ ಸಮಸ್ಯೆ ಇರುವುದಾಗಿ ತಿಳಿಸಿ, ಮನೆಯಿಂದಲೇ ಕೆಲಸ ಮಾಡಲು ಮತ್ತಷ್ಟು ದಿನ ಅವಕಾಶ ಕಲ್ಪಿಸುವಂತೆ ತಾನು ಕಾರ್ಯನಿರ್ವಹಿಸುವ ವಿಭಾಗದ ಮುಖ್ಯಸ್ಥರಿಗೆ ಮನವಿ ಮಾಡಿಕೊಂಡಳು. ಏನಾಗಿದೆ ಎಂಬುದನ್ನು ವಿವರವಾಗಿ ತಿಳಿಸುವಂತೆ ಅವರು ಕೇಳಿದಾಗ, ಯುವತಿಯಿಂದ ಬಂದ ಉತ್ತರವು ವಿಭಾಗದ ಮುಖ್ಯಸ್ಥರಿಗೆ ಸಮಾಧಾನಕರವಾಗಿ ತೋರಲಿಲ್ಲವೇನೋ... ಕಚೇರಿಗೆ ಬಂದು ಕೆಲಸ ಮಾಡಲು ಇಷ್ಟವಿರದ ಕಾರಣಕ್ಕೆ ಸಲ್ಲದ ನೆಪ ಹೇಳುತ್ತಿದ್ದಾಳೆ ಎಂದು ಅವರಿಗೆ ಅನಿಸಿರಬಹುದು. ಇದೀಗ ತಮ್ಮ ನಿರೀಕ್ಷೆಗೆ ತಕ್ಕಂತೆ ಇಲ್ಲದ ಹಾಗೂ ಕಚೇರಿಗೆ ಬಂದು ಕೆಲಸ ನಿರ್ವಹಿಸಲು ಸಿದ್ಧಳಿಲ್ಲದ ಯುವತಿಯನ್ನು ಕೆಲಸದಿಂದ ತೆಗೆಯುವ ಕುರಿತು ಆ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದವರು ಯೋಚಿಸುತ್ತಿದ್ದಾರಂತೆ. ಹಾಗಂತ ಆ ಯುವತಿ ತನ್ನ ಮನೆಯಲ್ಲಿ ಹೇಳಿಕೊಂಡಿದ್ದಾಳೆ.

'ಕ್ಯಾಂಪಸ್ ಸೆಲೆಕ್ಷನ್' ಮೂಲಕ ವರ್ಷಕ್ಕೆ ₹ 4.50 ಲಕ್ಷ ವೇತನ ಸಿಗುವ ಉದ್ಯೋಗಕ್ಕೆ ಆಯ್ಕೆಯಾಗಿದ್ದ, ಎರಡು ತಿಂಗಳ ಹಿಂದಷ್ಟೇ ಎಂಜಿನಿಯರಿಂಗ್ ಪದವಿ ಮುಗಿಸಿದ್ದ ವಿದ್ಯಾರ್ಥಿ, ಸೇರಿದ ಒಂದು ವಾರಕ್ಕೇ ಕೆಲಸ ತ್ಯಜಿಸಿದ. ಸಿವಿಲ್ ಎಂಜಿನಿಯರಿಂಗ್ ಓದಿ ಸಾಫ್ಟ್‌ವೇರ್ ಕಂಪನಿಯ ಕೆಲಸಕ್ಕೆ ಸೇರಿದ್ದ ಅವನಿಗೆ, ಕೆಲಸದ ಒತ್ತಡ ಮತ್ತು ಕಚೇರಿ ವಾತಾವರಣಕ್ಕೆ ಹೊಂದಿಕೊಳ್ಳುವುದು ಕಷ್ಟವಾಯಿತು. ಮೊದಲು ಸಿಕ್ಕಿದ ಕೆಲಸ ಬಿಡಬೇಡ ಎಂದು ಪೋಷಕರು ಸಲಹೆ ನೀಡಿದ್ದಕ್ಕೆ, ತನಗೆ ಸಿವಿಲ್ ಎಂಜಿನಿಯರ್ ಆಗಲು ಇಷ್ಟ ಎಂಬ ಕಾರಣ ಮುಂದೊಡ್ಡಿದ್ದ. ಇದೀಗ ಸಿವಿಲ್ ಎಂಜಿನಿಯರಿಂಗ್ ಕೆಲಸವನ್ನೇ ಮಾಡುತ್ತಿರುವ ಆತ, ಬೇರೆ ಬೇರೆ ಶಿಫ್ಟ್‌ಗಳಲ್ಲಿ ಕೆಲಸ ಮಾಡಲು ಸೂಚಿಸುತ್ತಿರುವುದರಿಂದ ಈ ಕೆಲಸವನ್ನೂ ಬಿಡುವುದಾಗಿ ಹೇಳುತ್ತಿದ್ದಾನೆ.

ಎಂಜಿನಿಯರಿಂಗ್ ಕಾಲೇಜೊಂದರ ಎದುರು ಇರುವ ಕ್ಯಾಂಟೀನ್‌ನಲ್ಲಿ ತಿಂಡಿ ತಿನ್ನಲು ಬಂದಿದ್ದ ವಿದ್ಯಾರ್ಥಿನಿಯರಿಬ್ಬರು, ನೇಮಕಾತಿಗಾಗಿ ಕಾಲೇಜಿಗೆ ಬರುವ ಕಂಪನಿಗಳ ಕುರಿತು ಮಾತನಾಡುತ್ತಿದ್ದರು. ಅವರ ಪೈಕಿ ಒಬ್ಬಳು ಸಾಫ್ಟ್‌ವೇರ್ ಕಂಪನಿಯೊಂದರ ಹೆಸರು ಹೇಳಿ, ತನಗೆ ಈ ಕಂಪನಿಯಲ್ಲಿ ಕೆಲಸ ಮಾಡುವುದಕ್ಕೆ ಇಷ್ಟವಿಲ್ಲ ಎಂದಳು. ಸಾಫ್ಟ್‌ವೇರ್ ಕ್ಷೇತ್ರದಲ್ಲಿ ತನ್ನದೇ ಛಾಪು ಮೂಡಿಸಿರುವ ಈ ಸಂಸ್ಥೆಗೆ ಸೇರಲು ಇಷ್ಟವಿಲ್ಲ ಎಂದ ತನ್ನ ಗೆಳತಿಯ ಮಾತು ಕೇಳಿ ಅಚ್ಚರಿ ವ್ಯಕ್ತಪಡಿಸಿದ ಮತ್ತೊಬ್ಬಳು, 'ನನಗೇನಾದ್ರೂ ಆ ಕಂಪನಿಯಲ್ಲಿ ಕೆಲಸ ಸಿಕ್ಕರೆ ಖಂಡಿತ ಅಲ್ಲಿಗೆ ಸೇರ್ತೀನಪ್ಪ. ನಿನಗೇಕೆ ಆ ಕಂಪನಿ ಇಷ್ಟ ಇಲ್ಲ' ಎಂದು ಕೇಳಿದಳು. 'ನನ್ನ ಇಬ್ಬರು ಕಸಿನ್ಸ್ ಅಲ್ಲಿ ಕೆಲ್ಸ ಮಾಡ್ತಾ ಇದ್ದಾರೆ. ಅಲ್ಲಿ ಸಿಕ್ಕಾಪಟ್ಟೆ ಕೆಲ್ಸ ಮಾಡುಸ್ಕೊತಾರಂತೆ' ಎನ್ನುವ ಪ್ರತಿಕ್ರಿಯೆ ಬಂತು.

ಕೊರೊನಾ ಕಾರಣಕ್ಕೆ ಮುನ್ನೆಲೆಗೆ ಬಂದ ಆನ್‌ಲೈನ್ ಶಿಕ್ಷಣ ಮತ್ತು ಮನೆಯಿಂದಲೇ ಕೆಲಸ ನಿರ್ವಹಿಸುವ ಪರಿಕಲ್ಪನೆಯು ಯುವಜನರ ಮೇಲೆ ಬೀರಿರುವ ಮತ್ತು ಬೀರುತ್ತಲೇ ಇರುವ ಪರಿಣಾಮದ ಕುರಿತು ಶೈಕ್ಷಣಿಕ ವ್ಯವಸ್ಥೆ, ಉದ್ಯೋಗದಾತರು ಹಾಗೂ ಪೋಷಕರು ಗಂಭೀರವಾಗಿ ಚಿಂತಿಸಬೇಕಿರುವ ಅಗತ್ಯ ಇರುವುದನ್ನು ಈ ನಿದರ್ಶನಗಳು ಮನಗಾಣಿಸುತ್ತವೆ.

ಆರರಿಂದ ಎಂಟು ಗಂಟೆಗಳ ಕಾಲ ಕೆಲಸದಲ್ಲಿ ತೊಡಗಿಕೊಳ್ಳಲು ಬೇಕಿರುವ ಮನಃಸ್ಥಿತಿ ರೂಢಿಸಿಕೊಳ್ಳಲು, ಆಗಷ್ಟೇ ಪದವಿ ಪೂರ್ಣಗೊಳಿಸಿ ಉದ್ಯೋಗಕ್ಕೆ ಸೇರುತ್ತಿರುವ ಯುವಸಮುದಾಯ



ಪರದಾಡುತ್ತಿದೆ. ಕೆಲ ವರ್ಷಗಳಿಂದ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಹೊಸಬರಿಗೆ ಹೆಚ್ಚೆಚ್ಚು ಉದ್ಯೋಗಾವಕಾಶಗಳು ಲಭ್ಯವಾಗುತ್ತಿರುವುದರಿಂದ ಬಹುತೇಕ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಕಡಿಮೆ ವೇತನದ ಕೆಲಸಗಳತ್ತ ಮುಖ ಮಾಡಲು ಸಿದ್ಧರಿಲ್ಲ. ಇನ್ನು ಉತ್ತಮ ವೇತನ ದೊರಕುವಲ್ಲೂ ಕೆಲಸದ ಒತ್ತಡ ವಿದ್ದರೆ ಅದನ್ನು ನಿಭಾಯಿಸಲಾಗದೆ ಕೆಲಸ ತೊರೆಯುವ ನಿರ್ಧಾರ ಕೈಗೊಳ್ಳುತ್ತಿದ್ದಾರೆ.

ಮುಂಬರುವ ದಿನಗಳಲ್ಲಿ ಆರ್ಥಿಕ ಹಿಂಜರಿತ ಎದುರಾಗಬಹುದು ಎಂಬ ಮಾತನ್ನು ಆರ್ಥಿಕ ತಜ್ಞರು ಹೇಳುತ್ತಿದ್ದಾರೆ. ಅದು ನಿಜವಾದರೆ, ಆಗ ಮಾನವ ಸಂಪನ್ಮೂಲದ ಬೇಡಿಕೆ- ಪೂರೈಕೆಯ ಸರಪಳಿಯಲ್ಲಿ ಉಂಟಾಗಬಹುದಾದ ಪಲ್ಲಟಗಳಿಂದಾಗಿ ಕಡಿಮೆ ಉದ್ಯೋಗಾವಕಾಶಗಳಿಗಾಗಿ ಹೆಚ್ಚು ಮಂದಿ ಸ್ಪರ್ಧಿಸಬೇಕಾದ ಒತ್ತಡ ಸಾಫ್ಟ್‌ವೇರ್ ಕ್ಷೇತ್ರದಲ್ಲೂ ನಿರ್ಮಾಣವಾಗುವ ಸಾಧ್ಯತೆ ಇದೆ. ಇವನ್ನೆಲ್ಲ ಮನಗಂಡು, ಉದ್ಯೋಗದ ಕುರಿತು ಅವಾಸ್ತವಿಕ ನೆಲೆಗಟ್ಟಿನಲ್ಲಿ ಚಿಂತಿಸುತ್ತಿರುವ ವಿದ್ಯಾರ್ಥಿಸಮೂಹಕ್ಕೆ ವಾಸ್ತವ ಮನಗಾಣಿಸುವ ಅಗತ್ಯ ಇದೆ. ಇಲ್ಲವಾದಲ್ಲಿ ಮುಂದೆ ಔದ್ಯೋಗಿಕ ಕ್ಷೇತ್ರದಲ್ಲಿ ಎದುರಾಗಬಹುದಾದ ಸವಾಲುಗಳನ್ನು ಮೆಟ್ಟಿ ನಿಲ್ಲಲಾಗದೆ ಯುವಸಮೂಹ ಹತಾಶೆಗೆ ಒಳಗಾಗುವ ಸ್ಥಿತಿ ನಿರ್ಮಾಣವಾಗಬಹುದು.

ವಾಚಕರ ವಾಣಿ

ಮರೆಯಬಾರದ ಶಕ್ತಿಕೂಟಗಳು

'ಗಾಂಧೀಜಿ ಒಬ್ಬರಿಂದಲೇ ಸ್ವಾತಂತ್ರ್ಯ ಬಂದಿಲ್ಲ... ಇತರ ಹೋರಾಟಗಾರರನ್ನು ಸ್ಮರಿಸಿದರೆ ಗಾಂಧೀಜಿಗೆ ಅಪಮಾನ ಮಾಡಿದಂತೆ ಅಲ್ಲ' ಎಂದು ಬಿಜೆಪಿ ಮುಖಂಡ ಬಿ.ಎಲ್.ಸಂತೋಷ್ ಹೇಳಿದ್ದಾರೆ. ಅವರ ವಾದಸರಣಿಯನ್ನೇ ಮುಂದುವರಿಸಿ ನಾವು ಹೀಗೂ ಹೇಳಬಹುದು: ಗೋಡ್ಸೆ ಒಬ್ಬಾತನಿಂದಲೇ ಗಾಂಧೀಜಿಯ ಹತ್ಯೆ ಆಗಿಲ್ಲ. ಆತನ ಬೆನ್ನ ಹಿಂದೆ ಇದ್ದ ಇತರ ಶಕ್ತಿಕೂಟಗಳನ್ನು ನಾವೆಂದೂ ಮರೆಯುವಂತಿಲ್ಲ.

ಕೆ.ರಂಜನ್ ಗೌಡ, ಕೆ.ಆರ್.ನಗರ

ರೇಷ್ಮೆ ಇಲಾಖೆ ವಿಲೀನ ಸಲ್ಲ

ರೇಷ್ಮೆ ಇಲಾಖೆ ಮತ್ತು ತೋಟಗಾರಿಕೆ ಇಲಾಖೆಯನ್ನು ಕೃಷಿ ಇಲಾಖೆಯ ಜೊತೆ ವಿಲೀನಗೊಳಿಸಿ ಎರಡು ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ರದ್ದುಗೊಳಿಸುವ ತೀರ್ಮಾನವನ್ನು ಕಂದಾಯ ಸಚಿವರ ನೇತೃತ್ವದ ಸಂಪುಟ ಉಪಸಮಿತಿ ಕೈಗೊಂಡಿರುವುದು ಸಂಪೂರ್ಣವಾಗಿ ರೈತವಿರೋಧಿಯಾಗಿದೆ. ರೇಷ್ಮೆ ಕೃಷಿಯು ಹಳೆ ಮೈಸೂರು ಭಾಗದ ಸುಮಾರು ಏಳೆಂಟು ಜಿಲ್ಲೆಗಳ ಕೃಷಿಕರ ಜೀವನಾಡಿಯಾಗಿದ್ದು, ಪ್ರಮುಖ ಬೆಳೆಯಾಗಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ.ವಿಶ್ವೇಶ್ವರಯ್ಯನವರ ದೂರದೃಷ್ಟಿಯಿಂದ ಅಸ್ತಿತ್ವಕ್ಕೆ ಬಂದ ಅತ್ಯಂತ ಹಳೆಯ ಇಲಾಖೆಯಾಗಿದೆ. ವಿಶ್ವೇಶ್ವರಯ್ಯನವರು ಇಟಲಿ ತಜ್ಞರಾದ ವಾಷಿಂಗ್ಟನ್ ಮೋರಿ ಎಂಬುವರನ್ನು ಮೊದಲ ನಿರ್ದೇಶಕರನ್ನಾಗಿ ನೇಮಿಸಿ ರೈತರ ಶ್ರೇಯೋಭಿವೃದ್ಧಿಗೆ ಭದ್ರ ಬುನಾದಿ ಹಾಕಿದರು. ಇದರಿಂದ 'ಮೈಸೂರು ರೇಷ್ಮೆ' ಖ್ಯಾತಿ ಪಡೆಯಿತಲ್ಲದೆ, ಇಂದು ರಾಜ್ಯದಲ್ಲಿ ಒಂದೂವರೆ ಲಕ್ಷ ಕುಟುಂಬಗಳು ರೇಷ್ಮೆ ಕೃಷಿಯನ್ನು ಅವಲಂಬಿಸಿ ಜೀವನ ಸಾಗಿಸುತ್ತಿವೆ. ಇಲಾಖೆಯಲ್ಲಿ ಮಂಜೂರಾದ ಹುದ್ದೆಗಳ ಅರ್ಧದಷ್ಟು ಹುದ್ದೆಗಳು ಖಾಲಿ ಇವೆ. ಸರ್ಕಾರವು ಅವುಗಳನ್ನು ತುಂಬುವ ಬದಲಿಗೆ ಇರುವ ಹುದ್ದೆಗಳನ್ನೂ ರದ್ದುಪಡಿಸಿ ಇಲಾಖೆಯನ್ನು ಮುಚ್ಚಲು ಹೊರಟಿರುವ ಕ್ರಮ ಸರಿಯಲ್ಲ. ಇಲಾಖೆಯನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಿ ಮೈಸೂರು ರೇಷ್ಮೆಯ ಅಸ್ಮಿತೆಯನ್ನು ಸರ್ಕಾರ ಉಳಿಸಲಿ.

ಯಲುವಹಳ್ಳಿ ಸೊಣ್ಣೇಗೌಡ, ಚಿಕ್ಕಬಳ್ಳಾಪುರ

ನಿರ್ಧರಿಸಲು ನೀವಾರು?

ರಾಜ್ಯದ ಮಹಾನ್
ಮೇಧಾವಿ ರಾಜಕಾರಣಿಗಳೇ
ಯಾರ ಪಾದಕ್ಕೆ
ಯಾರು ಸಮವೆಂದು
ನಿರ್ಧರಿಸಲು ನೀವಾರು?
ಅವರಿವರನ್ನು ಟೀಕಿಸಿ
ಜರಿಯುವುದನ್ನು ಬಿಟ್ಟು
ನಿಮ್ಮ ಆದರ್ಶ
ತತ್ವಗಳಿಗೆ ಬದ್ಧರಾಗಿ
ಬದುಕುವುದ ಕಲಿಯಿರಿ.

ಬೋರೇಗೌಡ ಜೆ.ಬಿ.
ಜಕ್ಕನಹಳ್ಳಿ, ಕೆ.ಆರ್.ಪೇಟೆ

ಸಂಬಂಧ ಬೆಳೆಸುವುದು ಅರ್ಥಪೂರ್ಣ

ಚುನಾವಣೆ ಹತ್ತಿರ ಬರುತ್ತಿರುವಾಗ ರಾಜಕೀಯ ನಾಯಕರ ಕಾರ್ಯಚಟುವಟಿಕೆಗಳು ಚುರುಕುಗೊಳ್ಳುತ್ತವೆ. ಪರಿಶಿಷ್ಟ ಸಮುದಾಯದವರ ಮನೆಗೆ ಹೋಗಿ ಊಟ ಮಾಡುವುದು ಇಂತಹ ಕಾರ್ಯಗಳಲ್ಲಿ ಒಂದು. ಹೀಗಾಗಿ, ಅದು ಸಾಮಾನ್ಯ ಸಂಗತಿಯೇ ವಿನಾ ಅದರಲ್ಲಿ ಯಾವ ವಿಶೇಷವೂ ಇಲ್ಲ. ಅದಕ್ಕೆ ಬದಲಾಗಿ, ಅವರೊಂದಿಗೆ ಸಂಬಂಧ ಬೆಳೆಸುವುದು ಹೆಚ್ಚು ಅರ್ಥಪೂರ್ಣ. ಗ್ರಾಮೀಣ ಪ್ರದೇಶಗಳಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತ ಇದೆ. ಅದನ್ನು ಸಂಪೂರ್ಣವಾಗಿ ನಿವಾರಿಸಲು ಪ್ರಯತ್ನಿಸಬೇಕು. ರಾಜಕೀಯ ಲಾಭಕ್ಕೋಸ್ಕರ ಆ ಸಮುದಾಯಗಳನ್ನು ಬಳಸಿಕೊಳ್ಳುವುದೊಂದೇ ಉದ್ದೇಶ ಆಗಬಾರದು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಪರಿಸರಸ್ನೇಹಿ ಇಂಧನ: ಬೇಕು ಒತ್ತು

ಕಾರ್ಬನ್ ಬಾಂಬ್ ಕುರಿತ ನಾಗೇಶ ಹೆಗಡೆ ಅವರ ಲೇಖನ (ಪ್ರ.ವಾ., ಅ. 13) ಎಚ್ಚರಿಕೆಯ ಸಂದೇಶದಂತಿದೆ. ವಾತಾವರಣದಲ್ಲಿ ಇಂಗಾಲದ ಡೈಆಕ್ಸೈಡ್, ಮೀಥೇನ್ ಅನಿಲ ಹೆಚ್ಚಾಗಿ ಭೂತಾಪಮಾನ ಏರಿದೆ. ಅಮೆರಿಕದಂಥ ಮುಂದುವರಿದ ದೇಶಗಳು ಅತಿ ಹೆಚ್ಚು ಕಾರ್ಬನ್ ಬಾಂಬ್ ಸಿಡಿಸಿ ವಾಯುಮಾಲಿನ್ಯ ಉಂಟುಮಾಡುತ್ತಿವೆ.

ಇರುವುದೊಂದೇ ಭೂಮಿಯಲ್ಲಿ ಸಕಲ ಜೀವರಾಶಿಗಳೂ ಬದುಕುವುದಕ್ಕೆ ಪೂರಕವಾಗಿ ಪೆಟ್ರೋಲ್ ಮಾಲಿನ್ಯವನ್ನು ಕಡಿಮೆ ಮಾಡಬೇಕಾಗಿದೆ. ಪೆಟ್ರೋಲ್ ಇಂಧನಕ್ಕೆ ಪರ್ಯಾಯವಾಗಿ ಪರಿಸರಸ್ನೇಹಿ ಸೌರ, ವಾಯು, ಜಲ, ಜೈವಿಕ ಇಂಧನಕ್ಕೆ ಹೆಚ್ಚು ಒತ್ತು ನೀಡುವುದರಿಂದ ಕಾರ್ಬನ್ ಬಾಂಬ್‌ಗೆ ಕಡಿವಾಣ ಹಾಕಬಹುದು. ಎಲ್ಲ ದೇಶಗಳು ಪರಿಸರಸ್ನೇಹಿ ಪರ್ಯಾಯ ಇಂಧನಕ್ಕೆ ಸೂಕ್ತ ಯೋಜನೆ ರೂಪಿಸಿ ಭೂಮಿಯನ್ನು ರಕ್ಷಿಸಬೇಕಾಗಿದೆ.

ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಆಮಿಷಗಳಿಗೆ ಬಲಿಯಾಗುವುದು ಬೇಡ

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ನ್ಯಾಯಾಂಗದಲ್ಲಿಯೂ ಹುಳುಕುಗಳು ಇವೆ ಎಂದಿರುವುದಲ್ಲದೆ, ಶಾಸಕಾಂಗದಲ್ಲಿನ ಭ್ರಷ್ಟಾಚಾರದ ಬಗ್ಗೆಯೂ ಪ್ರಸ್ತಾಪಿಸಿ ತಮ್ಮ ಅಸಹನೆಯನ್ನು ವ್ಯಕ್ತಪಡಿಸಿದ್ದಾರೆ. ಶೇ 40 ಕಮಿಷನ್ ಸದ್ದು ಮಾಡುತ್ತಿರುವ ಸಂದರ್ಭದಲ್ಲಿ ಅವರ ಮಾತು ಮುಖ್ಯವಾಗಿದೆ. ವಿಧಾನಪರಿಷತ್ ಚುನಾವಣೆಯಲ್ಲಿ ಹಣ ಕೊಟ್ಟು ಗೆದ್ದ ಬಗ್ಗೆಯೂ ನಿರ್ಭೀತಿಯಿಂದ ಅವರು ಮಾತನಾಡಿದ್ದಾರೆ.

ಇದನ್ನೆಲ್ಲಾ ಮನಗಂಡೇ ಮತ ಹಾಕುವವರಿಗೆ 'ಅಯ್ಯೋ ಐದು ವರ್ಷಗಳಿಗೊಮ್ಮೆ ಬರುವ ಈ ಅವಕಾಶವನ್ನು ಏಕೆ ತಪ್ಪಿಸಿಕೊಳ್ಳಬೇಕು, ಅವರು ನೂರಾರು ಕೋಟಿ ಕೊಳ್ಳೆ ಹೊಡೆಯುವುದಿಲ್ಲವೇ? ಅದರಲ್ಲಿ ನಮಗೂ ಕೊಡಲಿ' ಎಂಬ ಧೋರಣೆ. 'ಐದು ವರ್ಷಗಳಿಗೊಮ್ಮೆ ಮಾತ್ರ ಅಲ್ಲವೇ, ಮತದಾರ ಪ್ರಭುವಿಗೆ ಇಂತಿಷ್ಟು ಎಸೆದರೆ ಆಯಿತು' ಎಂಬುದು ರಾಜಕೀಯ ವ್ಯಕ್ತಿಗಳ ಧೋರಣೆ. ಜನ ಎಚ್ಚೆತ್ತುಕೊಳ್ಳದಿದ್ದರೆ ರಾಜಕಾರಣಿಗಳು ತಾನೇ ಏನು ಮಾಡಿಯಾರು? ಅದಕ್ಕೇ, ಪ್ರಬುದ್ಧ ಕ್ಷೇತ್ರ ಎನಿಸಿಕೊಳ್ಳುವ ಶಿಕ್ಷಕರು ಮತ್ತು ಪದವೀಧರರ ಕ್ಷೇತ್ರದಲ್ಲೂ ಗಿಫ್ಟ್, ಮದ್ಯ, ಮಾಂಸಾಹಾರ ಕೊಟ್ಟೇ ಮತ ಪಡೆಯಬೇಕಾದ ಅನಿವಾರ್ಯ ಸೃಷ್ಟಿಯಾಗಿರುವುದು.

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎಸ್‌ಸಿ–ಎಸ್‌ಟಿ ಮೇಲಿನ ದೌರ್ಜನ್ಯ ಪ್ರಕರಣ

ಕರ್ನಾಟಕದಲ್ಲಿ ಶಿಕ್ಷೆ ಪ್ರಮಾಣ ಕನಿಷ್ಠ, ಶೂನ್ಯ

• ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.


ರಾಜ್ಯದಲ್ಲಿ 2021ರಲ್ಲಿ ಪರಿಶಿಷ್ಟ ಪಂಗಡದ ಜನರ ಮೇಲೆ ನಡೆದ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಒಂದೂ ಪ್ರಕರಣದಲ್ಲಿ ಶಿಕ್ಷೆಯಾಗಿಲ್ಲ. 2021ರಲ್ಲಿ ವಿಲೇವಾರಿಯಾದ ಪ್ರಕರಣಗಳಲ್ಲಿ ಖುಲಾಸೆ ಪ್ರಮಾಣ ಶೇ 99.8ರಷ್ಟಿದೆ. ಉಳಿದ ಪ್ರಕರಣಗಳು ವಜಾ ಆಗಿವೆ. ಪರಿಶಿಷ್ಟ ಜಾತಿಯ ಜನರ ಮೇಲಿನ ದೌರ್ಜನ್ಯದ ಪ್ರಕರಣಗಳಲ್ಲೂ ನ್ಯಾಯದಾನದ ಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಒಟ್ಟಾರೆ ದಲಿತ ಸಮುದಾಯದ ಜನರ ಮೇಲೆ ದೌರ್ಜನ್ಯ ನಡೆದ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣ ರಾಜ್ಯದಲ್ಲಿ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ದಲಿತರ ಮೇಲಿನ ನ್ಯಾಯದಾನದಲ್ಲಿ ರಾಜ್ಯವು ಕೊನೆಯ ಸ್ಥಾನದಲ್ಲಿದೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆಯು 2018ರಿಂದ ಸತತ ಏರಿಕೆಯಾಗಿದೆ. ಆದರೆ, ಇದೇ ಅವಧಿಯಲ್ಲಿ ಇಂತಹ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಇದು ದೇಶದ ಬೇರೆಲ್ಲಾ ರಾಜ್ಯಗಳಿಗೆ ಹೋಲಿಸಿದರೆ, ಇಂತಹ ಪ್ರಕರಣಗಳಲ್ಲಿ ನ್ಯಾಯದಾನದ ಮಟ್ಟದ ಅತ್ಯಂತ ಕನಿಷ್ಠ ಮಟ್ಟಕ್ಕೆ ಕುಸಿದಿದೆ.

ರಾಜ್ಯದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರ ಮೇಲೆ ದೌರ್ಜನ್ಯ ನಡೆದ 458 ಪ್ರಕರಣಗಳು 2021ರಲ್ಲಿ ದಾಖಲಾಗಿವೆ. ಇವುಗಳಲ್ಲಿ ಒಟ್ಟು 128 ಪ್ರಕರಣಗಳು ನ್ಯಾಯಾಲಯದಲ್ಲಿ ವಿಲೇವಾರಿಯಾಗಿವೆ. 128ರಲ್ಲಿ ಒಂದು ಪ್ರಕರಣ ಮಾತ್ರ ವಜಾ ಆಗಿದ್ದರೆ, 127 ಪ್ರಕರಣಗಳಲ್ಲಿ ಆರೋಪಿಗಳು ಖುಲಾಸೆ ಆಗಿದ್ದಾರೆ. ಆ ವರ್ಷದಲ್ಲಿ ವಿಲೇವಾರಿಯಾದ ಎಲ್ಲಾ ಪ್ರಕರಣಗಳಲ್ಲಿ ಎಲ್ಲವೂ ಸಾಕ್ಷ್ಯ ಕೊರತೆಯ ಕಾರಣಕ್ಕೆ ಖುಲಾಸೆ ಆಗಿವೆ. ತನಿಖೆ ಮತ್ತು ಆರೋಪ ಪಟ್ಟಿ ಸಲ್ಲಿಸುವಲ್ಲಿ ಆಗಿರುವ ಲೋಪಗಳಿಂದ ಹೀಗೆ ಆಗಿದೆ. ಹೀಗಾಗಿ ಒಂದೂ ಪ್ರಕರಣದಲ್ಲಿ ಶಿಕ್ಷೆಯಾಗಿಲ್ಲ.

ಪರಿಶಿಷ್ಟ ಜಾತಿಯ ಜನರ ಮೇಲೆ ದೌರ್ಜನ್ಯಕ್ಕೆ ಸಂಬಂಧಿಸಿದಂತೆ, 2021ರಲ್ಲಿ ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಪ್ರಕರಣಗಳಲ್ಲಿ ಶಿಕ್ಷೆಯಾಗಿದ್ದು ಶೇ 1.6ರಷ್ಟು ಪ್ರಕರಣಗಳಲ್ಲಿ ಮಾತ್ರ. 2021ರಲ್ಲಿ 632 ಪ್ರಕರಣಗಳನ್ನು ನ್ಯಾಯಾಲಯಗಳು ವಿಲೇವಾರಿ ಮಾಡಿವೆ. ಅವುಗಳಲ್ಲಿ 10 ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ. ಒಟ್ಟು 613 ಪ್ರಕರಣಗಳಲ್ಲಿ ಖುಲಾಸೆಯಾಗಿದೆ. 9 ಪ್ರಕರಣಗಳು ವಿವಿಧ ಕಾರಣಗಳಿಗೆ ವಜಾ ಆಗಿವೆ.


ಶಿಕ್ಷೆ ಪ್ರಮಾಣ ಪಾತಾಳಕ್ಕೆ



2,029 ರಾಜ್ಯದಲ್ಲಿ 2021ರಲ್ಲಿ ಪರಿಶಿಷ್ಟ ಜಾತಿಯ ಜನರ ಮೇಲೆ ದೌರ್ಜನ್ಯ ನಡೆದ ಪ್ರಕರಣಗಳ ಸಂಖ್ಯೆ

458 ರಾಜ್ಯದಲ್ಲಿ 2021ರಲ್ಲಿ ಪರಿಶಿಷ್ಟ ಪಂಗಡದ ಜನರ ಮೇಲೆ ದೌರ್ಜನ್ಯ ನಡೆದ ಪ್ರಕರಣಗಳ ಸಂಖ್ಯೆ

ಉತ್ತರ ಪ್ರದೇಶದಲ್ಲಿ ಗರಿಷ್ಠ, ರಾಜ್ಯದಲ್ಲೇ ಕನಿಷ್ಠ



ಕರ್ನಾಟಕಕ್ಕೆ ಹೋಲಿಸಿದರೆ, ಬೇರೆ ರಾಜ್ಯಗಳಲ್ಲಿ ನ್ಯಾಯಾಲಯಗಳು ವಿಲೇವಾರಿ ಮಾಡಿದ ಪ್ರಕರಣಗಳಲ್ಲಿ ಶಿಕ್ಷೆಯಾದ ಪ್ರಮಾಣ ಹೆಚ್ಚು. ಉತ್ತರ ಪ್ರದೇಶದಲ್ಲಿ ಶಿಕ್ಷೆಯಾದ ಪ್ರಕರಣಗಳ ಪ್ರಮಾಣ ಶೇ 76.3ರಷ್ಟಿದ್ದರೆ, ಜಾರ್ಖಂಡ್‌ನಲ್ಲಿ ಶೇ 53.8ರಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ. ದೇಶದ ಎಲ್ಲಾ ನ್ಯಾಯಾಲಯಗಳಲ್ಲಿ ವಿಲೇವಾರಿಯಾದವುಗಳಲ್ಲಿ ಶಿಕ್ಷೆಯಾದ ಪ್ರಕರಣಗಳ ಪ್ರಮಾಣ ಶೇ 36ರಷ್ಟಿದೆ. ಶಿಕ್ಷೆಯ ಪ್ರಮಾಣವು ರಾಜ್ಯದಲ್ಲಿ ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಇದೆ. ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಶಿಕ್ಷೆಯ ಪ್ರಮಾಣದಲ್ಲಿ ಒಡಿಶಾವು ಕರ್ನಾಟಕಕ್ಕಿಂತ ಕೆಳಮಟ್ಟದಲ್ಲಿದೆ

ದಲಿತರಿಗೆ ಅಪಮಾನದ ಮೇಲೆ ಅಪಮಾನ

ಮುಖ್ಯಮಂತ್ರಿಗಳು, ಸಚಿವರು, ರಾಜಕೀಯ ನಾಯಕರು ಹಾಗೂ ಅಧಿಕಾರಿಗಳು ಪರಿಶಿಷ್ಟ ಸಮುದಾದವರ ಮನೆಯಲ್ಲಿ ಊಟ, ವಾಸ್ತವ್ಯ ಮಾಡುವ ಮೂಲಕ ಜಾತಿ ತಾರತಮ್ಯ ನಿವಾರಣೆಗೆ ಯತ್ನಿಸುತ್ತಿದ್ದರೂ, ಆ ಸಮುದಾಯಗಳ ಮೇಲಾಗುತ್ತಿರುವ ದೌರ್ಜನ್ಯಗಳು ನಿಂತಿಲ್ಲ. ರಾಜ್ಯದಲ್ಲಿ ಸರಿಸುಮಾರು ಒಂದು ತಿಂಗಳ ಅವಧಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಜನರ ಮೇಲೆ ಹಲವು ದೌರ್ಜನ್ಯ ಪ್ರಕರಣಗಳು ನಡೆದಿವೆ. ಕೋಲಾರದ ಉಳ್ಳೇರಹಳ್ಳಿಯಲ್ಲಿ ಪರಿಶಿಷ್ಟ ಜಾತಿಯ ಬಾಲಕನು ದೇವರ ಗುಜ್ಜುಕೋಲು ಮುಟ್ಟಿದ ಪ್ರಕರಣದಿಂದ ಆರಂಭಿಸಿ, ತುಮಕೂರಿನ ನಿಟ್ಟೂರು ಗ್ರಾಮದಲ್ಲಿ ಪರಿಶಿಷ್ಟ ಸಮುದಾಯದ ಕುಟುಂಬವೊಂದಕ್ಕೆ ದೇವಸ್ಥಾನದಲ್ಲಿ ಪೂಜೆಯ ನಿರಾಕರಣೆವರೆಗೆ ಹಲವು ಘಟನೆಗಳು ನಡೆದಿವೆ.

ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ತಿಡಿಗೋಳ ಗ್ರಾಮದಲ್ಲಿ ರಥ ಮುಟ್ಟಿದ ಕಾರಣಕ್ಕೆ ಪರಿಶಿಷ್ಟ ಜಾತಿಯ ಯುವಕರ ಮೇಲೆ ಲಿಂಗಾಯತ ಸಮುದಾಯದ ಯುವಕರು ಹಲ್ಲೆ ಮಾಡಿದ್ದಾರೆ. ಈ ಘಟನೆ ನಡೆದು ಎರಡು ವಾರ ಕಳೆದರೂ, ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರ ಮೇಲಿನ ಅಘೋಷಿತ ಬಹಿಷ್ಕಾರ ಕೊನೆಗೊಂಡಿಲ್ಲ.

ತುಮಕೂರಿನ ಗುಬ್ಬಿ ತಾಲ್ಲೂಕಿನ ನಿಟ್ಟೂರು ಗ್ರಾಮದಲ್ಲಿ ಪೂಜೆ ಮಾಡಲು ಮುಳುಕಟ್ಟಮ್ಮ ದೇವಸ್ಥಾನದ ಅರ್ಚಕರು ಪರಿಶಿಷ್ಟ ಸಮುದಾಯದ ಕುಟುಂಬಕ್ಕೆ ಅವಕಾಶ ನೀಡಿಲ್ಲ ಎಂದು ಮಂಗಳವಾರ ವರದಿಯಾಗಿತ್ತು. ದೇಗುಲದ ಒಳಗೆ ಪ್ರವೇಶಿಸುವಾಗ ಗದರಿಸಿ ಹೊರಗಡೆ ನಿಲ್ಲುವಂತೆ ಅರ್ಚಕರು ಸೂಚಿಸಿದ್ದರು ಎಂದು ಕುಟುಂಬ ಸದಸ್ಯರು ಆರೋಪಿಸಿದ್ದರು. ಪ್ರಕರಣ ಗಂಭೀರವಾಗುತ್ತಿದ್ದಂತೆಯೇ ರಾಜಿಗೆ ಯತ್ನಿಸಿದ ದೇವಸ್ಥಾನದ ಟ್ರಸ್ಟಿಗಳು ಮಾತುಕತೆ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಮುಂದಾದರು. ಸಮಾಜಕಲ್ಯಾಣ ಇಲಾಖೆ ಅಧಿಕಾರಿಗಳು ಭೇಟಿ ನೀಡಿದ ಬಳಿಕ, ಎಲ್ಲರಿಗೂ ಮುಕ್ತ ಪ್ರವೇಶ ಕಲ್ಪಿಸಲು ಟ್ರಸ್ಟ್ ನಿರ್ಧರಿಸಿತು. ಕುಟುಂಬವು ಈ ಘಟನೆಯಿಂದ ಎದುರಾದ ಅಪಮಾನವನ್ನು ಮೆಟ್ಟಿ ನಿಂತಿದ್ದರಿಂದ ಎಲ್ಲ ವರ್ಗದವರಿಗೂ ದೇಗುಲ ಮುಕ್ತವಾಗಿದೆ.


ಉಳ್ಳೇರಹಳ್ಳಿಯಲ್ಲಿ ಪ್ರತಿಭಟನಕಾರರು ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಿದರು

ಚಿಕ್ಕಮಗಳೂರಿನ ಆಲ್ದೂರು ಸಮೀಪದ ಹುಣಸೆಹಳ್ಳಿಪುರದ ಎಸ್ಟೇಟ್‌ನಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಒಂದೇ ಕುಟುಂಬದ ಹತ್ತಕ್ಕೂ ಹೆಚ್ಚು ಕಾರ್ಮಿಕರನ್ನು ಕೂಡಿಹಾಕಿದ ಘಟನೆ ನಾಲ್ಕು ದಿನಗಳ ಹಿಂದೆಯಷ್ಟೇ ನಡೆಯಿತು. ಹೆಣ್ಣುಮಕ್ಕಳೂ ಸೇರಿದಂತೆ ಎಲ್ಲರನ್ನೂ ಥಳಿಸಿ, ಮೊಬೈಲ್ ಕಿತ್ತುಕೊಂಡು, ದನಗಳ ರೀತಿ ಕೂಡಿಹಾಕಿ ಹಿಂಸಿಸಿ ಅನಾಗರಿಕವಾಗಿ ನಡೆಸಿಕೊಳ್ಳಲಾಯಿತು ಎಂದು ದೂರಿನಲ್ಲಿ ಹೇಳಲಾಗಿದೆ. ಮಕ್ಕಳು, ಹೆಣ್ಣುಮಕ್ಕಳನ್ನು ಅವಾಚ್ಯ ಪದಗಳಿಂದ ನಿಂದಿಸಲಾದ ವಿಡಿಯೊ ಹರಿದಾಡಿತು. ಈ ಘಟನೆಯಲ್ಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಎಸ್ಟೇಟ್ ಮಾಲೀಕರು ಪ್ರತಿದೂರು ದಾಖಲಿಸಿದ್ದಾರೆ.

ಇವೆಲ್ಲಕ್ಕೂ ಮುನ್ನ ದೊಡ್ಡ ಸುದ್ದಿಯಾಗಿದ್ದು ಕೋಲಾರದ ಉಳ್ಳೇರಹಳ್ಳಿಯ ಘಟನೆ. ಗ್ರಾಮದೇವತೆ ಭೂತಮ್ಮನ ಮೆರವಣಿಗೆ ವೇಳೆ ಪರಿಶಿಷ್ಟ ಜಾತಿಯ ಬಾಲಕನೊಬ್ಬ ಗುಜ್ಜುಕೋಲು ಮುಟ್ಟಿದ್ದರಿಂದ ದೇವರಿಗೆ ಅಪಚಾರವಾಯಿತು ಎಂಬುದಾಗಿ ಗ್ರಾಮಸ್ಥರು ಭಾವಿಸಿದರು. ಬಾಲಕನ ಮೇಲೆ ಹಲ್ಲೆ ನಡೆಸಿದ್ದಲ್ಲದೇ, ₹60 ಸಾವಿರ ದಂಡ ವಿಧಿಸಲಾಗಿತ್ತು. ದಂಡದ ಹಣ ಪಾವತಿಸಲು ಶಕ್ತರಲ್ಲದ ಬಾಲಕನ ಕುಟುಂಬ ಅಂತಿಮವಾಗಿ ಪೊಲೀಸರ ಮೊರೆ ಹೋಗಬೇಕಾಯಿತು.

ಈ ಘಟನೆಯ ಕಹಿ ಮಾಸುವ ಮುನ್ನವೇ, ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ಗುಟ್ಲೂರು ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ವ್ಯಕ್ತಿ ಮೇಲೆ ಪ್ರಬಲ ಜಾತಿಯ ಜನರು ಹಲ್ಲೆ ನಡೆಸಿದರು ಎಂಬುದಾಗಿ ದೂರು ದಾಖಲಾಯಿತು. ಪರಿಶಿಷ್ಟ ಜಾತಿಯ ಮುನಿರಾಜು ಎಂಬುವರು ಪೆದ್ದಪಲ್ಲಿ ಗಂಗಮ್ಮ ದೇವಸ್ಥಾನದಲ್ಲಿ ಪೂಜೆ ಮಾಡಿದ್ದೇ ಪ್ರಬಲ ಜಾತಿಯವರಲ್ಲಿ ಸಿಟ್ಟು ತರಿಸಿತ್ತು. ಪೂಜೆ ಮಾಡಿದ್ದಕ್ಕೆ ಆ ವ್ಯಕ್ತಿಯನ್ನು ಥಳಿಸಲಾಗಿತ್ತು. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಕೋಲಾರದ ಜಿಲ್ಲಾಸ್ಪತ್ರೆಗೆ ಸೇರಿಸಬೇಕಾಯಿತು.


ಒಂದು ವಾರದ ಹಿಂದೆಯಷ್ಟೇ, ಬೀದರ್‌ನ ಕಮಲನಗರ ತಾಲ್ಲೂಕಿನ ಮುರ್ಗ (ಕೆ) ಗ್ರಾಮದಲ್ಲಿ ಅನಾರೋಗ್ಯದಿಂದ ಮೃತಪಟ್ಟ ಪರಿಶಿಷ್ಟ ಸಮುದಾಯದ ವ್ಯಕ್ತಿಯ ಅಂತ್ಯಸಂಸ್ಕಾರವನ್ನು ಮತ್ತೊಂದು ಸಮುದಾಯ ವಿರೋಧಿಸಿದ ಘಟನೆ ನಡೆಯಿತು. ಶವಸಂಸ್ಕಾರಕ್ಕೆ ಸರ್ಕಾರ ಮಂಜೂರು ಮಾಡಿದ್ದ ಜಮೀನಿನಲ್ಲಿ ಅಂತ್ಯಕ್ರಿಯೆಗೆ ಮುಂದಾಗಿದ್ದರೂ, ಆ ಜಾಗವು ಮನೆಗಳಿಗೆ ಸಮೀಪದಲ್ಲೇ ಇದೆ ಎಂಬ ಕಾರಣಕ್ಕೆ ವಿರೋಧ ವ್ಯಕ್ತಪಡಿಸಲಾಗಿತ್ತು.

ಕೋಲಾರ ತಾಲ್ಲೂಕಿನ ದಾವನಹಳ್ಳಿಯಲ್ಲಿ ದಸರಾ ಪ್ರಯುಕ್ತ ಗಂಗಮ್ಮ ದೇವಿಯ ಉತ್ಸವ ಮೂರ್ತಿ ಮೆರವಣಿಗೆ ಕಾರ್ಯಕ್ರಮವಿತ್ತು. ಉತ್ಸವಮೂರ್ತಿಯ ಮೆರವಣಿಗೆ ಯಾವ ಮಾರ್ಗದಲ್ಲಿ ಸಾಗಬೇಕು ಎಂಬ ವಿಚಾರದಲ್ಲಿ ವಾಗ್ವಾದ ಶುರುವಾಯಿತು. ಮೆರವಣಿಗೆಯು ಪರಿಶಿಷ್ಟರ ಮನೆಗಳ ಬಳಿಗೆ ಏಕೆ ಕೊನೆಯಲ್ಲಿ ಸಾಗಬೇಕು ಎಂದು ಸಮುದಾಯದ ಕೆಲವು ಪ್ರಶ್ನಿಸಿದರು. ಸಂಪ್ರದಾಯ ಬದಲಿಸಬೇಡಿ ಎಂದು ಮತ್ತೊಂದು ಗುಂಪಿನವರು ವಾದಿಸಿದರು. ಹೀಗಾಗಿ ಎರಡೂ ಗುಂಪಿನ ನಡುವೆ ಘರ್ಷಣೆ ನಡೆಯಿತು. 11 ಪರಿಶಿಷ್ಟರ ಮೇಲೆ ಕೊಲೆ ಯತ್ನ ಪ್ರಕರಣ ದಾಖಲಿಸಲಾಯಿತು.

ಒಂದು ತಿಂಗಳ ಅವಧಿಯಲ್ಲಿ ಕೋಲಾರ ಜಿಲ್ಲೆಯೊಂದರಲ್ಲೇ ಇಂತಹ ಮೂರು ಘಟನೆಗಳು ಸರದಿಯಂತೆ ನಡೆದಿವೆ. ಬಹುತೇಕ ಘಟನೆಗಳು ದೇವಸ್ಥಾನ, ಉತ್ಸವ, ಪೂಜೆಗೆ ಸಂಬಂಧಿಸಿವೆ.

ಆಧಾರ: ಎನ್‌ಸಿಆರ್‌ಬಿಯ 'ಭಾರತದಲ್ಲಿ ಅಪರಾಧ' ವರದಿಗಳು, ವಿವಿಧ ಪ್ರಕರಣಗಳ ಎಫ್‌ಐಆರ್‌ಗಳು

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು



ಮುಂದಿನ ವರ್ಷ ಕರ್ನಾಟಕ ವಿಧಾನಸಭೆಗೆ ನಡೆಯುವ ಚುನಾವಣೆ ಮೇಲೆ ಭಾರತ್ ಜೋಡೊ ಯಾತ್ರೆಯು ಪರಿಣಾಮ ಬೀರಲಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 249

ಹಿಮವಂತನಿಗೆ ವಸಿಷ್ಠನ ಉಪದೇಶ

ಪಾರ್ವತಿಯನ್ನು ಶಿವನಿಗೆ ಕೊಡಲು ಇಚ್ಛಿಸದ ಹಿಮವಂತ ದಂಪತಿಗಳ ಮನವೊಲಿಸಲು ವಸಿಷ್ಠ ಪ್ರಯತ್ನಿಸುತ್ತಾನೆ. 'ಬುದ್ಧಿವಂತನಾದ ಶತ್ರು ಹೇಳುವ ಮಾತು ಮನೋಹರವಾಗಿರುತ್ತೆ. ಆದರೆ ಅದನ್ನು ನಂಬಿದರೆ ಅಹಿತವಾಗುತ್ತದೆ. ಮಿತ್ರ ಹೇಳುವ ಮಾತು ಮೊದಲಿಗೆ ಒಳ್ಳೆಯದಾಗಿ ಕಾಣದಿದ್ದರೂ, ಕೊನೆಯಲ್ಲಿ ಹಿತವಾಗಿರುತ್ತದೆ' ಎಂದು ಮನದಟ್ಟು ಮಾಡಿಸುತ್ತಾನೆ.

'ಎಲೈ ಶೈಲರಾಜ, ಶಂಕರನಲ್ಲಿ ಬ್ರಹ್ಮ ನಿರ್ಮಿಸಿದ ಲೌಕಿಕವಾದ ತುಚ್ಛ ಸಂಪತ್ತುಗಳಾವುವೂ ಇಲ್ಲ. ಆತ್ಮಜ್ಞಾನವೆಂಬ ಸಮುದ್ರದಲ್ಲಿ ಸದಾ ಅವನು ಮುಳುಗಿರುತ್ತಾನೆ. ಹೀಗಾಗಿ ಜ್ಞಾನಸ್ವರೂಪನೂ ಆನಂದಮಯನೂ ಆದ ಈಶ್ವರನಿಗೆ ಬಾಹ್ಯವಸ್ತುಗಳಲ್ಲಿ ಆಸೆಗಳಿಲ್ಲ. ಗೃಹಸ್ಥನಾದವ ತನ್ನ ಪುತ್ರಿಯನ್ನು ಐಶ್ವರ್ಯಗಳುಳ್ಳವನಿಗೆ ಕೊಡುವುದು ಪುಣ್ಯದ ಕೆಲಸ. ದರಿದ್ರನಿಗೆ ಕನ್ಯೆಯನ್ನು ಕೊಡುವುದು ಪಾಪದ ಕೆಲಸ. ಆದರೆ ಶಂಕರ ದರಿದ್ರನಲ್ಲ. ಧನಪತಿಯಾದ ಕುಬೇರನೇ ಅವನ ಸೇವಕನಾಗಿದ್ದಾನೆಂದರೆ, ಶಿವ ಅದೆಷ್ಟು ಶ್ರೀಮಂತ ಅಂತ ಊಹಿಸು. ಬ್ರಹ್ಮಸೃಷ್ಟಿಯ ಈ ಕೃತಕ ಲೋಕದಲ್ಲಿ ಶಿವನೊಬ್ಬನೇ ಶಾಶ್ವತ. ಅವನು ಆದಿ-ಅಂತ್ಯವಿಲ್ಲದ ಚಿರಂಜೀವಿ. ಭ್ರೂಲೀಲೆಯಿಂದ ಶಿವ ಜಗತ್ತನ್ನು ಸೃಷ್ಟಿಸಲೂಬಹುದು, ಸಂಹರಿಸಲೂಬಹುದು. ಅವನೇ ಬ್ರಹ್ಮ, ವಿಷ್ಣು, ರುದ್ರ ಎಂಬ ಮೂರು ರೂಪಗಳನ್ನು ಧರಿಸಿ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುತ್ತಿದ್ದಾನೆ. ಶಿವನ ಅಂಶದಿಂದಲೇ ತ್ರಿದೇವಿಯರೂ ಜನ್ಮ ತಾಳಿದ್ದಾರೆ. ವಾಕ್ಕಿನ ಅಧಿದೇವತೆಯಾದ ವಾಣಿಯು ಪರಮೇಶ್ವರ ಮುಖದಿಂದ ಜನಿಸಿದರೆ, ಸಕಲೈಶ್ವರ್ಯರೂಪಳಾದ ಲಕ್ಷ್ಮಿಯು ಹೃದಯದಿಂದ ಜನಿಸಿದಳು. ಪರಮೇಶ್ವರಿಯು ಸಮಸ್ತ ದೇವತೆಗಳ ತೇಜಸ್ಸನ್ನೊಳಗೊಂಡವಳು. ಅವಳು ಮಹಿಷಾಸುರಮರ್ದಿನಿಯ ರೂಪದಿಂದ ಆವಿರ್ಭವಿಸಿದವಳು.

'ಕಾಳಿಯೇ ಮತ್ತೆ ಬೇರೆ ಕಲ್ಪದಲ್ಲಿ ದಕ್ಷನ ಮಗಳಾಗಿ ಜನಿಸಿ, ಸತೀದೇವಿಯಾದಳು. ದಕ್ಷ ಅವಳನ್ನು ಹರನಿಗೆ ಮದುವೆ ಮಾಡಿಕೊಟ್ಟ. ಯಜ್ಞಸಂದರ್ಭದಲ್ಲಿ ತಂದೆ ಆಡಿದ ಪತಿನಿಂದೆಯ ಮಾತನ್ನು ಕೇಳಿ ಸತೀದೇವಿ ಯೋಗದಿಂದ ದೇಹವನ್ನು ತ್ಯಜಿಸಿದಳು. ಅವಳೇ ಈಗ ನಿನ್ನ ಪತ್ನಿಯಾದ ಮೇನಾದೇವಿಯ ಉದರದಲ್ಲಿ ಜನಿಸಿ, ಪಾರ್ವತಿಯಾಗಿರುವಳು. ಎಲೈ ಹಿಮವಂತ, ಕಾಳಿಕಾದೇವಿ ಪ್ರತಿಜನ್ಮದಲ್ಲಿಯೂ ಶಿವನ ಪತ್ನಿಯೇ ಆಗಿರುವಳು. ಸತೀದೇವಿಯ ಅಸ್ಥಿ ಮತ್ತು ಚಿತಾಭಸ್ಮಗಳನ್ನು ಶಂಕರ ಪ್ರೀತಿಯಿಂದ ಸದಾ ಧರಿಸುತ್ತಾನೆ. ನೀನೇ ಸ್ವ ಇಚ್ಛೆಯಿಂದ ನಿನ್ನ ಪುತ್ರಿಯನ್ನು ಶಿವನಿಗೆ ಕೊಡು. ಇಲ್ಲದಿದ್ದರೆ ಅವಳೇ ತಾನಾಗಿ ಹರನ ಬಳಿಗೆ ಹೋಗುತ್ತಾಳೆ. ಇದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ.

'ಶಿವನ ಅಪ್ಪಣೆಯಂತೆ ನಾವು ನಿನ್ನ ಬಳಿ ಬಂದಿದ್ದೇವೆ. ನಿಶ್ಚಿಂತನಾಗಿ ಪಾರ್ವತಿಯನ್ನು ರುದ್ರನಿಗೆ ಕೊಡು. ಅದರಿಂದ ನಿನಗೆ ಒಳ್ಳೆಯದಾಗುವುದು. ಈಶ್ವರಸಂಕಲ್ಪ ಎಂದಿಗೂ ಸುಳ್ಳಾಗುವುದಿಲ್ಲ. ದೇವೇಂದ್ರನೊಡನೆ ಎಲ್ಲ ಪರ್ವತಗಳ ರೆಕ್ಕೆಗಳನ್ನು ಲೀಲೆಯಿಂದ ಕತ್ತರಿಸಿದವನು. ಪಾರ್ವತಿಯು ಮೇರುಶಿಖರವನ್ನು ಲೀಲೆಯಿಂದಲೇ ಭೇದಿಸಿದವಳು. ಒಂದೇ ವಸ್ತುವಿನಿಂದ ಸಕಲೈಶ್ವರ್ಯಗಳೂ ನಾಶವಾಗುತ್ತವೆ ಎಂದು ಅನಾದಿಯಿಂದ ಗಾದೆಯೇ ಇದೆ. ಇದಕ್ಕೆ ಅನರಣ್ಯ ಎಂಬ ಚಕ್ರವರ್ತಿಯ ವೃತ್ತಾಂತವೇ ಸಾಕ್ಷಿ' ಎಂದ ವಸಿಷ್ಠ.


ವಸಿಷ್ಠಮುನಿ ಹೇಳಿದ ಮಾತನ್ನು ಕೇಳಿ ಹಿಮವಂತ, 'ಅನರಣ್ಯರಾಜ ಯಾರು? ಯಾವ ವಂಶದವನು? ಅನರಣ್ಯನ ವೃತ್ತಾಂತವೇನು?' ಎಂದು ಕೇಳಿದ.

ಇಲ್ಲಿಗೆ ಪಾರ್ವತೀಖಂಡದಲ್ಲಿ ಮೂವತ್ತಮೂರನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಣ್ಣಿನಲ್ಲಿ ಹೂತುಹೋಗಿದ್ದ ಮಡಕೆಯೊಂದನ್ನು ಹೊರತೆಗೆಯುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮಡಕೆಯ ಮುಚ್ಚಳವನ್ನು ತೆರೆದಾಗ, ಅದರಲ್ಲಿ ಒಂದು ಹಾವು ಮತ್ತು ಒಂದು ಕಪ್ಪೆ ಇರುವುದು ಗೊತ್ತಾಗುತ್ತದೆ. ಅವನ್ನು ಹೊರಬಿಟ್ಟಾಗ, ಹೂಜಿಯ ತುಂಬಾ ಚಿನ್ನದ ನಾಣ್ಯಗಳು ಮತ್ತು ಆಭರಣಗಳು ಇರುವುದು ಕಾಣುತ್ತದೆ. 'ಮಂಗಳೂರಿನ ಸೆಂಟ್ರಲ್ ಮಾರ್ಕೆಟ್ ಜೀರ್ಣೋದ್ಧಾರ ಕಾಮಗಾರಿಯ ಸಂದರ್ಭದಲ್ಲಿ ಈ ಮಡಕೆ ಪತ್ತೆಯಾಗಿದೆ. ಹಲವು ವರ್ಷಗಳಿಂದ ಮುಚ್ಚಿದ ಸ್ಥಿತಿಯಲ್ಲಿ ಇರುವ ಮಡಕೆಯಲ್ಲಿ ಹಾವು ಹೇಗೆ ಜೀವಂತವಾಗಿದೆ?' ಎಂದು ಹಲವರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಇದು ಸುಳ್ಳು ಸುದ್ದಿ.



ಇದು ತಿರುಚಲಾದ ಮಾಹಿತಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಇದು ಮಂಗಳೂರಿಗೆ ಸಂಬಂಧಿಸಿದ ವಿಡಿಯೊ ಅಲ್ಲ. ಈ ವಿಡಿಯೊವನ್ನು ಟರ್ಕಿಯಲ್ಲಿ ಚಿತ್ರಿಸಲಾಗಿದೆ. ಟ್ರೆಶರ್ ಪಾತ್ ಎಂಬ ಯುಟ್ಯೂಬ್ ಚಾನೆಲ್ ಮತ್ತು ಫೇಸ್‌ಬುಕ್ ಪೇಜ್‌ನ ನಿರ್ವಾಹಕರು ಈ ವಿಡಿಯೊವನ್ನು ಚಿತ್ರೀಕರಿಸಿದ್ದಾರೆ. ನಿಧಿ ಶೋಧಕ್ಕೆ ಸಂಬಂಧಿಸಿದ ವಿಡಿಯೊವನ್ನು ಈ ಗುಂಪು ಪ್ರಸಾರ ಮಾಡುತ್ತದೆ. ನಿಧಿಗಳಿಗೆ ಸಂಬಂಧಿಸಿದಂತೆ ಟರ್ಕಿಯಲ್ಲಿರುವ ಕಾನೂನುಗಳ ಬಗ್ಗೆ ಅರಿವು ಮೂಡಿಸಲು ಈ ವಿಡಿಯೊ ಚಿತ್ರೀಕರಿಸಲಾಗಿತ್ತು. ಆದರೆ, ಅದು ಮಂಗಳೂರಿನದ್ದು ಎಂದು ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗಿದೆ ಎಂದು ದಿ ಲಾಜಿಕಲ್ ಇಂಡಿಯನ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು — ಗುರುರಾಜ ಕರಜಗಿ



ಅಭ್ಯಾಸದಿಂದ ಸತ್ವವಿಕಾಸ

ನಾಯಕನಿಗಿರಲಿ ರಣವಿಜಯ ಪರಿಭವ ಗಣನೆ
|ಆಯವದರಿಂ ಭಟನ ಸತ್ತ್ವ ಶಿಕ್ಷಣಕ್ಕೆ||
ಸ್ವೀಯ ಸತ್ತ್ವವಿಕಾಸ ನಿಜಶಕ್ತಿಯಭ್ಯಾಸ |
ಶ್ರೇಯಸಿಗೆ ಸೋಪಾನ- ಮಂಕುತಿಮ್ಮ || 735 |

ಪದ-ಅರ್ಥ: ರಣವಿಜಯ = ಯುದ್ಧದಲ್ಲಿ ಜಯ, ಪರಿಭವ = ಸೋಲು, ಗಣನೆ = ಲೆಕ್ಕಾಚಾರ, ಆಯವದರಿಂ = ಆಯವು(ಅವಕಾಶ) + ಅದರಿಂ (ಅದರಿಂದ), ಭಟನ = ಸೈನಿಕನ, ಸ್ವೀಯ = ಸ್ವಂತದ, ನಿಜಶಕ್ತಿಯಭ್ಯಾಸ = ನಿಜಶಕ್ತಿಯ (ಸ್ವಂತಶಕ್ತಿಯ) + ಅಭ್ಯಾಸ, ಸೋಪಾನ = ಮೆಟ್ಟಿಲು.

ವಾಚ್ಯಾರ್ಥ: ಯುದ್ಧದಲ್ಲಿ ಜಯ-ಅಪಜಯಗಳ ಲೆಕ್ಕ ನಾಯಕನಿಗೆ ಇರಲಿ. ಅದು ಸೈನಿಕನ ಸತ್ವದ ಶಿಕ್ಷಣಕ್ಕೆ ಒಂದು ಅವಕಾಶ. ಇರುವ ಶಕ್ತಿಯ ಅಭ್ಯಾಸವೇ ಸ್ವಂತದ ಶಕ್ತಿಯ ವಿಕಾಸ. ಅದೇ ಶ್ರೇಯಸ್ಸಿನ ಮೆಟ್ಟಿಲು.

ವಿವರಣೆ: ಅವನೊಬ್ಬ ಸೊಣಕಲ ಯುವಕ. ಯಾವಾಗಲೂ ನೆಗಡಿ, ಕೆಮ್ಮು, ಜ್ವರ. ಚಿಕ್ಕ ಕೆಲಸ ಮಾಡಿದರೂ ಏದುಸಿರು ಬರುತ್ತಿತ್ತು. ಅವನಿದ್ದ ಊರು ಕಾಡಿನ ಪಕ್ಕದ್ದು. ಅವನ ರಾಜ್ಯದ ಕಡೆಯ ಊರು. ವೈರಿ ಸೈನಿಕರ ದಾಳಿಯಾದರೆ ಈ ಊರೇ ಮೊದಲು ಬಲಿ. ಇವನ ರಾಜ್ಯದ ಸೈನ್ಯದ ನಾಯಕ, ಇವನೂರಿನವನೇ. ಈ ಯುವಕನ ಕಷ್ಟ ನೋಡಲಾಗದೆ, ಅವನನ್ನು ಸೈನ್ಯಕ್ಕೆ ಸೇರಿಸಿಕೊಂಡ. ಅವನಿಗೊಂದು ಕೆಲಸ. ದಿನನಿತ್ಯ ಬೆಟ್ಟದ ಮೇಲೇರಿ ಹೋಗಿ, ಅಲ್ಲಿದ್ದ ಒಂದು ಎತ್ತರದ ಮರವನ್ನು ಹತ್ತಿ, ತಮ್ಮ ರಾಜ್ಯದ ಧ್ವಜವನ್ನು ಕೊಂಬೆಗೆ ಕಟ್ಟಿ, ಜೋರಾಗಿ ಕಹಳೆ ಊದಿ ಬರುವುದು. ಸಂಜೆ ಮತ್ತೆ ಹೋಗಿ ಧ್ವಜ ಇಳಿಸಿಕೊಂಡು, ಕಹಳೆ ಊದಿ ಬರುವುದು. ಅವನಿಗೆ ಯುದ್ಧದ ಯಾವ ಶಿಕ್ಷಣವೂ ಇಲ್ಲ. ಮನಸ್ಸಿಲ್ಲದ ಮನಸ್ಸಿನಿಂದ ಯುವಕ ಒಪ್ಪಿದ. ಮೊದಲನೆಯ ದಿನ ಬೆಟ್ಟ ಹತ್ತುವುದು ಅಸಾಧ್ಯವೆಂದು ತೋರಿತು. ನಿಂತು, ನಿಂತು, ಉಸಿರು ಹಿಡಿದುಕೊಂಡು ಹತ್ತಿದ. ಮರ ಹತ್ತುವುದು ಮತ್ತೂ ಕಷ್ಟ. ಹೇಗೋ ಹತ್ತಿದ. ಕಹಳೆ ಊದಲು ಉಸಿರೇ ಇಲ್ಲ. ಮರದಮೇಲೇ ಕುಳಿತು ಸುಧಾರಿಸಿಕೊಂಡು ಊದಿದ. ಮತ್ತೆ ಸಂಜೆ ಅಲ್ಲಿಗೆ ಹೋಗುವುದು ಅಸಾಧ್ಯವೆಂದೇ ಕಂಡಿತು. ಆದರೇನು ಮಾಡುವುದು, ನಾಯಕನ ಆಜ್ಞೆ ಇದೆಯಲ್ಲ. ಕಷ್ಟಪಟ್ಟು ಹತ್ತಿದ. ಹೀಗೆ ಒದ್ದಾಡಿಕೊಂಡೇ ಒಂದು ವರ್ಷ ಕೆಲಸ ಮಾಡಿದ. ಯುದ್ಧವಾಗಲೇ ಇಲ್ಲ. ನಾಯಕನ ಬಳಿ ಹೋಗಿ ಗೋಳು ಹೇಳಿಕೊಂಡ. ನನ್ನಿಂದ ಸೈನ್ಯಕ್ಕೆ, ರಾಜ್ಯಕ್ಕೆ ಏನು ಪ್ರಯೋಜನ? ಯುದ್ಧದ ತರಬೇತಿಯಾಗಿದ್ದರೆ ಏನಾದರೂ ಸೇವೆಯಾಗುತ್ತಿತ್ತು ಎಂದ. ನಾಯಕ ನಕ್ಕು ಹೇಳಿದ, "ಈಗ ನಿನ್ನ ಆರೋಗ್ಯ ಸುಧಾರಿಸಿದೆ, ದೇಹ ಬಲವಾಗಿದೆ, ಯಾವ ರೋಗವೂ ಕಾಡುತ್ತಿಲ್ಲ. ನಾನು ಹೇಳಿದ ಕೆಲಸ, ಯುದ್ಧಕ್ಕೆ ಯಾವ ಪ್ರಯೋಜನವಿಲ್ಲದೆ ಹೋದರೂ, ನಿನ್ನ ದೇಹ ಪಟುವಾಗಲು ಸಾಧನವಾಯಿತು". ಈ ಕಗ್ಗದ ಆಂತರ್ಯದ ಅರ್ಥ ಇದೇ.

ಯುದ್ಧದಲ್ಲಿ ಜಯವಾಯಿತೋ, ಅಪಜಯವಾಯಿತೋ ಎನ್ನುವುದು ನಾಯಕ ಮಾಡುವ ಲೆಕ್ಕ. ಯುದ್ಧಕ್ಕೆ ಸಿದ್ಧನಾಗುವುದು, ಸೈನಿಕನಿಗೊಂದು ಶಿಸ್ತು. ಆ ಶಿಸ್ತು ಅವನನ್ನು ಗಟ್ಟಿಮಾಡುತ್ತದೆ, ಮನಸ್ಸನ್ನು ಹುರಿಗೊಳಿಸಿ ಸತ್ವವನ್ನು ಬೆಳೆಸುತ್ತದೆ. ನಿತ್ಯದ ಅಭ್ಯಾಸ, ಪರಿಶ್ರಮ ಅವನ ಸ್ವಂತ ಶಕ್ತಿಯ ವಿಕಾಸವನ್ನುಂಟುಮಾಡುತ್ತದೆ. ಸ್ವಶಕ್ತಿಯ ವಿಕಾಸ, ಆತ್ಮವಿಕಾಸವನ್ನು ಕುದುರಿಸುತ್ತದೆ. ಆತ್ಮವಿಕಾಸ ಬಲಿತಾಗ, ಯಶಸ್ಸು ಹಿಂಬಾಲಿಸಿ ಬರುತ್ತದೆ. ಹಾಗೆಯೇ ನಿತ್ಯಜೀವನವೆಂಬ ಯುದ್ಧದಲ್ಲಿ ಸೈನಿಕರಾದ ನಮ್ಮೆಲ್ಲರಿಗೂ ಒಂದು ಶಿಸ್ತು, ವ್ಯವಸ್ಥೆ ಇದ್ದರೆ, ವ್ಯಕ್ತಿಯಾಗಿ, ದೇಶವಾಗಿ ಯಶಸ್ಸು ಸಾಧ್ಯವಾಗುತ್ತದೆ.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಅಕ್ಟೋಬರ್ 14, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಪಂಚಮಿ ಗಂ. 28-53 ನಕ್ಷತ್ರ: ರೋಹಿಣಿ ಗಂ. 20-47 ಯೋಗ: ವ್ಯತೀಪಾತ ಗಂ. 13-57, ಕರಣ: ಕೌಲವ ಗಂ. 15-57, ಕನ್ಯಾ ಮಾಸದ 27 ನೇ ದಿನ.
ರಾಹುಕಾಲ : ಬೆಳಿಗ್ಗೆ 10-30 – 12:00 ಸೂರ್ಯೋದಯ : 06-24 ಸೂರ್ಯಾಸ್ತ : 06-09
ಮುಸ್ಲಿಂ ದಿನಾಂಕ : 17 ರಬಿಉಲ್ಲಾವಲ್
ದಿನ ವಿಶೇಷ : ಈದ್-ಇ-ಮೌಲಾದ್ (ಮುಸ್ಲಿಂ)
ಅದೃಷ್ಟ ಸಂಖ್ಯೆ : 4, 9

ಮೇಷ: ವಿದ್ಯಾರ್ಥಿಗಳಿಗೆ ನಿರಂತರತೆ ಅಭ್ಯಾಸಬಲ ಅನಿವಾರ್ಯ. ಆದಾಯ ಹಂತಹಂತವಾಗಿ ಅಭಿವೃದ್ಧಿದಾಯವಾಗಿದ್ದು, ಧನ ಸಂಗ್ರಹಕ್ಕೆ ಸಾಧಕವಾಗಲಿದೆ. ಸರಕಾರಿ ಕಾರ್ಯಗಳು, ಕೋರ್ಟ್ ವಿಲೇವಾರಿ ಸುಖಾಂತ್ಯ ಪಡೆಯುವುವು.

ವೃಷಭ: ಕಂಟ್ರಾಕ್ಟ್ ವೃತ್ತಿಯವರಿಗೆ ಮನೋಬಯಕೆ ಪೂರ್ತಿಗೊಳ್ಳುವುದು. ಧನಾಗಮನ ನಿರಂತರವಾಗಿ ಇರಲಿದೆ. ಗೃಹ ಬಳಕೆಯ, ಆಲಂಕಾರಿಕ ಸಾಮಗ್ರಿಗಳ ಖರೀದಿ ಮಾಡುವಿರಿ. ಹೈನು ವ್ಯವಸಾಯದಲ್ಲಿ ಆದಾಯ ವೃದ್ಧಿ.

ಮಿಥುನ: ಕುಟುಂಬದ ಹಾಗೂ ಸ್ನೇಹಿತರ ನಡುವಿನ ಸಂಬಂಧಗಳು ಈ ದಿನ ಇನ್ನಷ್ಟು ಉತ್ತಮಗೊಳ್ಳುವುದು. ರಾಜಕೀಯ ವಿಷಯದಲ್ಲಿ ಹಣಾಹಣಿ ಸ್ಪರ್ಧೆಗಿಳಿಯಬೇಕಾಗುತ್ತದೆ. ಧಾರ್ಮಿಕತೆಯನ್ನು ಅನುಸರಿಸುವುದರಿಂದ ಶುಭ.

ಕರ್ಕಾಟಕ: ಯಾವುದೇ ಕಾರಣಗಳಿಲ್ಲದೇ ಅಥವಾ ಕ್ಷುಲ್ಲಕ ಕಾರಣಕ್ಕಾಗಿ ಸಹೋದರರಲ್ಲಿ ಭಿನ್ನಾಭಿಪ್ರಾಯ ಮೂಡಬಹುದು. ಶತ್ರುಗಳ ಉಪಟಳದಿಂದ ತಪ್ಪಿಸಿಕೊಳ್ಳಲು ಹರಸಾಹಸ ಮಾಡಬೇಕಾಗುತ್ತದೆ. ಶ್ರೀ ರಾಮನನ್ನು ಪ್ರಾರ್ಥಿಸಿ

ಸಿಂಹ: ಹೊಸ ಮನೆ ನಿರ್ಮಾಣಕ್ಕಾಗಿ ಹೆಚ್ಚಿನ ತಯಾರಿಯನ್ನು ನಡೆಸಲು ಸುದಿನ. ನಿಮ್ಮೆಣಿಕೆಯಂತೆ ಎಲ್ಲಾ, ಕೆಲಸಕಾರ್ಯಗಳು ಸಾಫಲ್ಯ ಕಂಡು ಮನಸ್ಸು ಸಂತಸದ ಸಾಗರವೆನಿಸೀತು. ಕಾರ್ಯಸಾಧನೆ ಅನುಕೂಲವಾಗುವುದು.

ಕನ್ಯಾ: ಪದವೀಧರರಿಗೆ ತಮ್ಮ ಉದ್ಯೋಗದ ಅನ್ವೇಷಣೆಯಲ್ಲಿ ಹೊಸ ರೀತಿಯ ಬೆಳವಣಿಗೆ ಕಂಡು ಬರಲಿದೆ. ಸಾಂಸಾರಿಕವಾಗಿ ನಿಮ್ಮ ನಿರ್ಣಯಗಳಿಗೆ ಸಕಾರಾತ್ಮಕ ಬೆಂಬಲ ದೊರೆಯಲಿದೆ. ಪತ್ನಿಯ ಆರೋಗ್ಯದಲ್ಲಿ ಸುಧಾರಣೆ.

ತುಲಾ: ಅಧಿಕಾರಿಗಳ ಸಂಪರ್ಕದಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿ ಪುಷ್ಟಿ ದೊರೆಯಲಿದೆ. ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಕೆಲಸದಲ್ಲಿ ವಿಘ್ನಗಳು ಎದುರಾಗಲಿದೆ. ಪರೋಪಕಾರಕ್ಕಾಗಿ ಮೀಸಲಿಡಬೇಕಾಗಬಹುದು.

ವೃಶ್ಚಿಕ: ಬದುಕಿನ ಸಾರ ತಿಳಿಯುವುದು ಬಹಳ ವಿಚಾರದ ವಿಷಯವಾದರೂ, ಇಂದು ನಿಮಗೆ ಅದರ ಬಗ್ಗೆ ಹೆಚ್ಚಿನ ಆಲೋಚನೆ ಬೇಡ. ಮಗಳ ಮದುವೆಯ ವಿಚಾರದಲ್ಲಿ ಇಂದು ನೀವು ಇಡುವ ಹೆಜ್ಜೆ ಬಹಳ ಪ್ರಮುಖವಾಗಿರುವುದು.

ಧನು: ನಿಮ್ಮ ವ್ಯವಹಾರದಲ್ಲಿ ಸ್ವಲ್ಪ ನಿಗೂಢತೆ ಕಾಣುವಿರಿ. ಆದರೆ ಎಲ್ಲವೂ ಸದ್ಯದಲ್ಲೇ ಉತ್ತಮ ಫಲಿತಾಂಶವನ್ನು ಪಡೆಯಲಿದೆ. ಹಳದಿ ವಸ್ತ್ರದ ಉಡುಗೆ ಇಂದು ಶುಭ ತರಲಿದೆ. ವ್ಯಾಪಾರದಲ್ಲಿ ಹೆಚ್ಚಿನ ನೆಮ್ಮದಿ ಪಡೆಯುವಿರಿ.

ಮಕರ: ನಿಮ್ಮ ಪ್ರತಿಷ್ಠೆಯನ್ನು ಕಾಪಾಡಲು ಮತ್ತು ವೃದ್ಧಿಸಿಕೊಳ್ಳಲು ನಿಮ್ಮವರ ಜೊತೆಯಲ್ಲಿ ಹೊಂದಿಕೊಳ್ಳುವುದು ಅಗತ್ಯ ಮತ್ತು ಅನಿವಾರ್ಯ. ಏಕಾಗ್ರತೆಯನ್ನು ಧ್ಯಾನ ಮಾಡುವ ಮೂಲಕ ವೃದ್ಧಿಸಿಕೊಳ್ಳುವ ಪ್ರಯತ್ನ ಮಾಡಿ.


ಕುಂಭ: ನಿಮ್ಮ ಉದಾತ್ತ ಚಿಂತನೆಯ ಲಾಭವನ್ನು ನಿಮ್ಮ ಸುತ್ತ ಮುತ್ತಲಿನವರು ಪಡೆಯುವ ಸುದಿನವಾಗಿದೆ. ಹಣಕಾಸಿನ ಬಗ್ಗೆ ಚಿಂತಿಸಬೇಕಾಗುವುದಿಲ್ಲ. ತಂದೆ-ತಾಯಿಯ ಆರೈಕೆಯಿಂದ ಪುಣ್ಯ ಸಂಪಾದನೆಯು ನಡೆಯುವುದು.

ಮೀನ: ಈ ದಿನ ನಿಮ್ಮ ಸುತ್ತಲಿನವರ ಸಂತೋಷಕ್ಕೆ ಕಾರಣರಾಗುವಿರಿ. ಮಗಳ ವಿದೇಶ ಪ್ರಯಾಣದ ತಯಾರಿಯಲ್ಲಿ ಭಾಗಿಯಾಗುವಿರಿ ಪ್ರೀತಿಯನ್ನು ವ್ಯಕ್ತಪಡಿಸಲು ಇದು ಸುದಿನ. ರೋಮಾಂಚನಕಾರಿ ವಿಷಯಗಳು ನಿಮಗಾಗಿ ಕಾದಿದೆ.

ಪದಬಂಧ 5108 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಡುವಿರುವ ಲಾಯದಿಂದ ತಪ್ಪಿಸಿಕೊಳ್ಳುವಿಕೆ! (4)
3.ವರ್ಣವುಳ್ಳ ಅಕ್ಷರಮಾಲೆ (4)
5.ಕನಕವನ್ನು ನೋಡುತ್ತಿರುವ ತಿಳಿಗೇಡಿ! (3)
7.ಸರಾಗವಾಗಿ ಕೆಲಸ ಮಾಡುತ್ತಿರುವ ಮೋಚಿ (4)
9.ಅಶೋಕ ವೃಕ್ಷದ ಹತ್ತಿರ ತೋಡಿಕೊಂಡ ವ್ಯಸನ (2)
10.ಭಕ್ತಿಯನ್ನು ಸಲ್ಲಿಸುವವ ತಿರುಗಿದ್ದಾನಲ್ಲಾ? (2)
11.ದಿನಮಣಿ ಹಾಗೂ ರಜನೀಕರ ಒಟ್ಟಿಗಿದ್ದಾರೆ (4)
13.ವನದ ಹತ್ತಿರ ಕಟ್ಟಿರುವ ಮನೆ (3)
17.ಬರ ಬಂದಾಗಿನ ನಗ್ನತೆ (4)
18.ಹಸುವಿನ ಸಮೀಪ ಆಡುತ್ತಿರುವ ಚಿಕ್ಕ ಮಗು (4)

ಮೇಲಿಂದ ಕೆಳಕ್ಕೆ
1.ಪದ ಹಾಡಿ ಬಹುಮಾನವಾಗಿ ಪಡೆದ ಬಿಲ್ಲೆ (3)
2.ನಿನ್ನೆ ನುಡಿದಿರುವ ಸತ್ಯ (2)
3.ಮನಸ್ಸನ್ನು ಸೆಳೆದ ಕಾಡು ಹೂ (4)
4.ಅಕ್ಕಪಕ್ಕದವರು ಕಲಿಸಿರುವ ಎಣಿಕೆ (2)
6.ನಿಖರವಾಗಿ ವ್ಯಕ್ತವಾದ ಮರುಕ (4)
7.ಮುದ್ರಣದಲ್ಲಿ ಕಾಣಿಸಿದ ಕಡಲು (3)
8.ಭಕ್ತನಲ್ಲಿ ನೆತ್ತರು ಸುರಿಯುತ್ತಿದೆಯಲ್ಲಾ? (4)
12.ಚಂದದಿಂದ ವಂತಿಗೆ ನೀಡುವವನು (4)
14.ಇದು ಕನಸಲ್ಲ!ಸತ್ಯ! (3)
15.ಹಾದಿಹೋಕನು ತೋರಿಸಿದ ರಸ್ತೆ (2)
16.ಸಂದೇಹ ಪಡುವವನ ಶರೀರ (2)



5107ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಭಿಮಾನ 3.ವಿದಾಯ
4.ಗಗನ 6.ಕಾಟಾಚಾರ
8.ಯಥೋಚಿತ 10.ಸ್ವರ
11.ಸುಂಕ 12.ಅಂತರಂಗ
14.ಹರಿಗೋಲು 15.ಲಾವಣಿ
16.ತೊಗಟೆ 17.ಗೆಳೆತನ

ಮೇಲಿಂದ ಕೆಳಕ್ಕೆ:
2.ನಗರ 3.ವಿನಯ
5.ದೂತ 7.ಚಾಕರ
9.ಚಿಲುಕ 10.ಸ್ವಗತ
11.ಸುಂದರಿ 12.ಅಂಬು
13.ಗಲಾಟೆ 14.ಹಣಿಗೆ

ಸುಡೊಕು 5494

			5		6			7
	9			4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5493 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಮಹಿಳೆಯರನ್ನು ಹಿಜಾಬ್‌ನಿಂದ ಮುಕ್ತಗೊಳಿಸಿ: ಹರಿಯಾಣ ಗೃಹ ಸಚಿವ

ಚಂಡೀಗಡ (ಪಿಟಿಐ): 'ಪುರುಷರು ತಮ್ಮ ಮನಸ್ಸನ್ನು ಬಲಪಡಿಸಿಕೊಂಡು, ಮಹಿಳೆಯರನ್ನು ಹಿಜಾಬ್‌ನಿಂದ ಮುಕ್ತಗೊಳಿಸಬೇಕು' ಎಂದು ಹರಿಯಾಣದ ಗೃಹ ಸಚಿವ ಅನಿಲ್ ವಿಜ್ ಗುರುವಾರ ತಿಳಿಸಿದ್ದಾರೆ.

ಹಿಜಾಬ್ ಕುರಿತು ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಭಿನ್ನ ತೀರ್ಪು ಪ್ರಕಟಿಸುವುದಕ್ಕೂ ಮುನ್ನ ವಿಜ್ ಅವರು ಈ ಕುರಿತು ಟ್ವೀಟ್ ಮಾಡಿದ್ದಾರೆ.

'ಮಹಿಳೆಯರನ್ನು ನೋಡಿ ಉತ್ಸಾಹ ನಿಯಂತ್ರಿಸಲು ಸಾಧ್ಯವಾಗದ ಪುರುಷರಿಂದಾಗಿಯೇ ಒತ್ತಾಯಪೂರ್ವಕವಾಗಿ ಹಿಜಾಬ್ ಧರಿಸುವಂತಾಗಿದೆ. ಇಲ್ಲಿ ಮಹಿಳೆಯರೇ ಶಿಕ್ಷೆ ಅನುಭವಿಸುವಂತಾಗಿದೆ' ಎಂದಿದ್ದಾರೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ

ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ(ವಿ)ಹುಬ್ಬಳ್ಳಿ

ಇ-ಟೆಂಡರ ಅಧಿಸೂಚನೆ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಿಕ ಆದೇಶ 1999-2000 ರ ಪ್ರಕಾರ ಆಕ್ಟ 2000 ರ ನಿಯಮದಂತೆ ಕರ್ನಾಟಕ ವಿದ್ಯುತ್ ಪರೀವೀಕ್ಷಕರಿಂದ ಗುತ್ತಿಗೆದಾರಿಕೆ ಪರವಾನಿಗೆ ಹೊಂದಿರುವ / ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ /ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರರು ಮಹಾನಗರ ಪಾಲಿಕೆಯಲ್ಲಿ ಸಹ ನೋಂದಣಿಯಾಗಿರುವ ಇ-ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರಗಳಲ್ಲಿ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು:- 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು. 2) ಇ.ಎಂ.ಡಿ. ಹಣವನ್ನು ಆನ್‌ಲೈನ್ ಮೂಲಕ ಸಂದಾಯ ಮಾಡುವುದು.

ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ (ವಿದ್ಯುತ್) ಇವರ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: ಹುಬ್ಬಳ್ಳಿ ಕಚೇರಿ 0836-2351024 ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ: http://www.eproc.karnataka.gov.in ರಲ್ಲಿ ಪಡೆಯಬಹುದು. ಕಾಮಗಾರಿಯು 14ನೇಹಣಕಾಸು ಯೋಜನೆಯ ಕಾಮಗಾರಿಯಾಗಿದೆ.ಟೆಂಡರ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ-ಪ್ರೋಕ್ಯೂರಮೆಂಟನಲ್ಲಿ ದಿನಾಂಕ: 13-10-2022 ರಿಂದ ಪಡೆಯಬಹುದು. ಒಂದು ವೇಳೆ ಸದರಿ ಟೆಂಡರಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ-ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಅಲ್ಪಾವಧಿ ಟೆಂಡರ್ ಕಾಮಗಾರಿ

1 Indent No (1) 139708 ಅಂದಾಜು ಮೊತ್ತ :ರೂ 49,42,000.00, ಕಾಮಗಾರಿ ನಿರ್ವಹಣೆ: 01 ತಿಂಗಳು
- ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 20-10-2022 ಸಂಜೆ 4.00 ಗಂಟೆಯವರೆಗೆ
- ಟೆಂಡರ ತೆರೆಯುವ ದಿನಾಂಕ : 21-10-2022 ಸಂಜೆ 4.30 ಗಂಟೆ.


ಪೂರ್ಣಾವಧಿ ಟೆಂಡರ್ ಕಾಮಗಾರಿ

2. Indent No (1) 139709 ಅಂದಾಜು ಮೊತ್ತ :ರೂ 3,99,500.00, ಕಾಮಗಾರಿ ನಿರ್ವಹಣೆ: 02 ತಿಂಗಳು
- ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : 29-10-2022 ಸಂಜೆ 4.00 ಗಂಟೆಯವರೆಗೆ
- ಟೆಂಡರ ತೆರೆಯುವ ದಿನಾಂಕ : 31-10-2022 ಸಂಜೆ 4.30 ಗಂಟೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ವಿ)
ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ವಾ.ಸಾ.ಇ/ಧಾರವಾಡ/655/2022-23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಜಿಲ್ಲಾ ಬಾಲಭವನ ಆವರಣ, ಚಿತ್ರದುರ್ಗ-577501
E-mail: dcpocta@gmail.com Ph: 08194-234992



ಪೋಷಕರ ಪತ್ತೆಗಾಗಿ ಮನವಿ

ಮಗುವನ್ನು ಮುರುಘ ಮಠದ ಅಕ್ಕಮಹಾದೇವಿ ವಸತಿ ನಿಲಯದಿಂದ ರಕ್ಷಿಸಿ, ಹಾಲಿ ವಿಶೇಷ ಮಡಿಲು ದತ್ತು ಕೇಂದ್ರ, ಚಿತ್ರದುರ್ಗದ ನಿವಾಸಿಯಾಗಿದ್ದು, ಮಗುವಿನ ತಂದೆ-ತಾಯಿ ಮತ್ತು ಸಂಬಂಧಿಕರ ಪತ್ತೆಗಾಗಿ ಪ್ರಕಟಣೆ ಹೊರಡಿಸಲಾಗಿದೆ. (1) ಬಾಲಕಿಯ ಹೆಸರು:- ಚಿಗುರು. (2) ವಯಸ್ಸು: 4.5 ವರ್ಷ. ಗೊತ್ತಿರುವ ಭಾಷೆ:- ಕನ್ನಡ. (3) ಬಾಲಕಿ ಸಿಕ್ಕಿದ ಸ್ಥಳ: ಚಿತ್ರದುರ್ಗದ ಮುರುಘ ಮಠದ ಅಕ್ಕಮಹಾದೇವಿ ವಸತಿ ನಿಲಯ. (4) ಮೈಬಣ್ಣ:- ಗೋದಿ ಬಣ್ಣ. (6) ತೂಕ: 16 ಕೆ.ಜಿ. (7) ಗುರುತಿಸುವ ಚಿಹ್ನೆ: ದುಂಡುಮುಖ. (8) ಬಾಲಕಿಯ ಎತ್ತರ:- 104 ಸೆ.ಮೀ. (9) ಬಾಲಕಿಯ ಆರೋಗ್ಯ ಸ್ಥಿತಿ:- ಉತ್ತಮ. (1) ಪೋಷಕರು ಪತ್ತೆಯಾದರೆ ಸಂಪರ್ಕಿಸುವ ವಿಳಾಸ:- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಅಥವಾ ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ, ಚಿತ್ರದುರ್ಗ. ಮೊ ಸಂ: 8970072609.

ಸಹಿ/-ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು.
ಚಿತ್ರದುರ್ಗ.

DIPR/CTA/MCA/608/2022-23

ಹಿಜಾಬ್: ಭಿನ್ನಮತದ ತೀರ್ಪು

ಒಂದನೇ ಪುಟದಿಂದ

ನ್ಯಾಯಮೂರ್ತಿ ಸುಧಾಂಶು ಧುಲಿಯಾ ಅವರು ಹಿಜಾಬ್ ನಿಷೇಧಿಸಿ ಕರ್ನಾಟಕ ಸರ್ಕಾರ ಹೊರಡಿಸಿರುವ ಫೆಬ್ರುವರಿ 5ರ ಅಧಿಸೂಚನೆಯನ್ನು ರದ್ದುಪಡಿಸಿದರು. ಇಬ್ಬರು ನ್ಯಾಯಮೂರ್ತಿಗಳು ವಿಭಿನ್ನ ಅಭಿಪ್ರಾಯ ತಳೆದರು. ಆದ್ದರಿಂದ ಪ್ರಕರಣದ ವಿಚಾರಣೆಗೆ ವಿಸ್ತೃತ ಪೀಠ ರಚಿಸುವಂತೆ ನ್ಯಾಯಪೀಠ ಮುಖ್ಯ ನ್ಯಾಯಮೂರ್ತಿಗಳಿಗೆ ಶಿಫಾರಸು ಮಾಡಿತು.

'ಅಗತ್ಯ ಧಾರ್ಮಿಕ ಪದ್ಧತಿ ಕುರಿತು ವಿವಾದ ಸೃಷ್ಟಿಸುವ ಅಗತ್ಯ ಇರಲಿಲ್ಲ ಮತ್ತು ಹೈಕೋರ್ಟ್ ತಪ್ಪು ನಿರ್ಧಾರ ಕೈಗೊಂಡಿದೆ' ಎಂದು ಸುಧಾಂಶು ಧುಲಿಯಾ ಅಭಿಪ್ರಾಯಪಟ್ಟರು. 'ಹಿಜಾಬ್ ಧರಿಸುವುದು ಆಯ್ಕೆಗೆ ಬಿಟ್ಟದ್ದು. ಅದಕ್ಕಿಂತ ಹೆಚ್ಚೂ ಇಲ್ಲ ಕಡಿಮೆಯೂ ಇಲ್ಲ' ಎಂದಿರುವ ಅವರು, 'ಇಂತಹ ನಿರ್ಬಂಧಗಳನ್ನು ಹೇರುವ ಮೂಲಕ ನಾವು ವಿದ್ಯಾರ್ಥಿನಿಯರ ಜೀವನ ಸುಧಾರಿಸುತ್ತಿದ್ದೇವೆಯೇ ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿದೆ' ಎಂದರು.

'ಹೆಣ್ಣು ಮಕ್ಕಳಿಗೆ ಶಾಲೆ ಗೇಟ್ ಪ್ರವೇಶಿಸುವ ಮುನ್ನ ಹಿಜಾಬ್ ತೆಗೆಯುವಂತೆ ಹೇಳುವುದು ಮೊದಲಿಗೆ ಆಕೆಯ ಖಾಸಗೀತನ, ನಂತರ ಆಕೆಯ ಘನತೆಯ ಮೇಲೆ ಧಕ್ಕೆ ತಕ್ಕಂತೆ. ಕೊನೆಗೆ, ಆಕೆಗೆ ಜಾತ್ಯತೀತ ಶಿಕ್ಷಣದಿಂದ ವಂಚಿತರನ್ನಾಗಿ ಮಾಡಲಾಗುತ್ತಿದೆ. ಇದು ಸಂವಿಧಾನದ ಪರಿಚ್ಛೇದ 19 (1) (ಎ) ರ ಅಭಿವ್ಯಕ್ತಿ ಸ್ವಾತಂತ್ರ್ಯ, ಪರಿಚ್ಛೇದ 21ರ ಜೀವಿಸುವ ಹಕ್ಕು ಮತ್ತು ಪರಿಚ್ಛೇದ 25 (1) ರ ಧಾರ್ಮಿಕ ಆಚರಣೆ ಹಕ್ಕುಗಳ ಸ್ಪಷ್ಟ ಉಲ್ಲಂಘನೆ ಆಗಿದೆ' ಎಂದು ಅವರು ಹೇಳಿದರು.

ಇನ್ನೊಂದೆಡೆ, ನ್ಯಾಯಮೂರ್ತಿ ಹೇಮಂತ್ ಗುಪ್ತ, 'ವಿದ್ಯಾರ್ಥಿಗಳು ತಮಗೆ ಶಿಕ್ಷಣದ ಹಕ್ಕು ಇದ್ದು, ಅದನ್ನು ತಮ್ಮ ಇಚ್ಛೆ ಹಾಗೂ ತಮಗೆ ಇಷ್ಟವಾದ ರೀತಿಯಲ್ಲಿ ಪಡೆದುಕೊಳ್ಳುತ್ತೇವೆ ಎಂದು ಹೇಳಲಾಗದು' ಎಂದರು.

'ಜಾತ್ಯತೀತತೆ ಎಲ್ಲ ಪ್ರಜೆಗಳಿಗೆ ಅನ್ವಯವಾಗುತ್ತದೆ. ಆದ್ದರಿಂದ ಒಂದು ಧಾರ್ಮಿಕ ಸಮುದಾಯಕ್ಕೆ ಅವರ ಧಾರ್ಮಿಕ ಚಿಹ್ನೆಗಳನ್ನು ಬಳಸಲು ಅನುಮತಿ ನೀಡುವುದು ಜಾತ್ಯತೀತ ಮನೋಭಾವಕ್ಕೆ ಧಕ್ಕೆ ತರುತ್ತದೆ. ಆದ್ದರಿಂದ, ಸರ್ಕಾರದ ಆದೇಶವನ್ನು ಜಾತ್ಯತೀತ ಅಥವಾ 1983ರ ಕರ್ನಾಟಕ ಶಿಕ್ಷಣ ಕಾಯ್ದೆಯ ಉದ್ದೇಶಗಳ ಉಲ್ಲಂಘನೆ ಅಲ್ಲ' ಎಂದರು. 'ಅಲ್ಲದೆ, ರಾಜ್ಯ ಸರ್ಕಾರದ ಅನುದಾನದಿಂದ ನಡೆಯುವ ಜಾತ್ಯತೀತ ಶಾಲೆಗಳಲ್ಲಿ ಧಾರ್ಮಿಕ ನಂಬಿಕೆಗಳಿಗೆ ಅವಕಾಶ ನೀಡಲಾಗದು' ಎಂದು ಅವರು ತಮ್ಮ ತೀರ್ಪನ್ನು ಸಮರ್ಥಿಸಿಕೊಂಡರು.

'ಸರ್ಕಾರಿ ಕಾಲೇಜುಗಳ ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಎಲ್ಲ ವೈಯಕ್ತಿಕ ಹಾಗೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮಾರ್ಚ್ 15ರಂದು ತಿರಸ್ಕರಿಸಿದ್ದ ಹೈಕೋರ್ಟ್‌ನ ತ್ರಿಸದಸ್ಯ ಪೀಠ, 'ಈ ವಿಷಯವನ್ನು ದೇಶದಾದ್ಯಂತ ವಿವಾದದ ವಿಷಯವನ್ನಾಗಿ ಮಾಡಿರುವ ಹಿಂದೆ ಕಾಣದ ಕೈಗಳು ಅಡಗಿವೆ' ಎಂಬ ಸಂಶಯ ವ್ಯಕ್ತಪಡಿಸಿತ್ತು.

ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ 22 ಅರ್ಜಿದಾರರು, 'ವಿದ್ಯಾರ್ಥಿಗಳಿಗೆ ಕಡ್ಡಾಯವಾದ ಸಮವಸ್ತ್ರ ರೂಪಿಸಿ ಕರ್ನಾಟಕ ಸರ್ಕಾರ ಕಾಯ್ದೆ ಅಥವಾ ನಿಯಮ ಜಾರಿಗೊಳಿಸಿಲ್ಲ. ಹಾಗಾಗಿ, ಹಿಜಾಬ್ ಧರಿಸುವುದನ್ನು ನಿಷೇಧಿಸಿರುವುದು ಸರಿಯಲ್ಲ. ಹಿಜಾಬ್ ಧರಿಸುವುದನ್ನು ಸಂವಿಧಾನದ ಅಡಿ ಖಾತರಿಪಡಿಸಲಾದ ಗೋಪ್ಯತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಆತ್ಮಸಾಕ್ಷಿಯ ಮೂಲಭೂತ ಹಕ್ಕುಗಳ ಅಡಿಯಲ್ಲಿ ರಕ್ಷಿಸಲಾಗಿದೆ. ಆದರೆ, ಅದನ್ನು ಅರಿಯದೇ ಹೈಕೋರ್ಟ್ ಪ್ರಮಾದವೆಸಗಿದೆ' ಎಂದು ಆಕ್ಷೇಪಿಸಿದ್ದರು.

'ಹಿಜಾಬ್ ಹಕ್ಕು ಶಾಲಾ ಗೇಟ್ ಬಳಿ ಮೊಟಕುಗೊಳ್ಳಲ್ಲ'

ಒಂದನೇ ಪುಟದಿಂದ

'ಎಲ್ಲ ಅರ್ಜಿದಾರರು (ವಿದ್ಯಾರ್ಥಿನಿಯರು) ಕೇಳುತ್ತಿರುವುದು ಹಿಜಾಬ್ ಧರಿಸುವ ಅನುಮತಿಯನ್ನಷ್ಟೇ. ಪ್ರಜಾಪ್ರಭುತ್ವದಲ್ಲಿ ಇದನ್ನು ಕೇಳುವುದು ಕೂಡಾ ತಪ್ಪೇ. ಇದು ಸಾರ್ವಜನಿಕ ಆದೇಶ, ನೈತಿಕ ಅಥವಾ ಆರೋಗ್ಯ ಅಥವಾ ಸಂವಿಧಾನದ ಭಾಗ ಮೂರರ ಯಾವುದೇ ನಿಯಮದ ವಿರುದ್ಧವಾಗಿದೆಯೇ ಈ ಎಲ್ಲ ಪ್ರಶ್ನೆಗಳಿಗೆ ಹೈಕೋರ್ಟ್ ತೀರ್ಪಿನಲ್ಲಿ ಸಮರ್ಪಕ ಉತ್ತರ ನೀಡಲಾಗಿಲ್ಲ' ಎಂದಿದ್ದಾರೆ.

'ಕರ್ನಾಟಕದ ಯಾವುದೇ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಹಿಜಾಬ್ ಧರಿಸಲು ಯಾವುದೇ ನಿರ್ಬಂಧ ಹೇರುವಂತಿಲ್ಲ' ಎಂದಿರುವ ನ್ಯಾಯಮೂರ್ತಿ, 'ನಮ್ಮ ಸಂವಿಧಾನದಲ್ಲಿ ಹಿಜಾಬ್ ಧರಿಸುವುದು ಒಂದು ಆಯ್ಕೆ. ಇದು ಅಗತ್ಯ ಧಾರ್ಮಿಕ ಪದ್ಧತಿಯಾಗಿಲ್ಲದೆ ಇರಬಹುದು. ಆದರೂ ಅದು ಪ್ರಜ್ಞೆ, ನಂಬಿಕೆ ಮತ್ತು ಅಭಿವ್ಯಕ್ತಿಯ ವಿಷಯವಾಗಿದೆ' ಎಂದಿದ್ದಾರೆ.

'ಒಂದೊಮ್ಮೆ ಆಕೆ (ಮುಸ್ಲಿಂ ವಿದ್ಯಾರ್ಥಿನಿ) ತರಗತಿ ಒಳಗೆ ಕೂಡ ಹಿಜಾಬ್ ಧರಿಸಲು ಬಯಸಿದಲ್ಲಿ, ಆಕೆಯನ್ನು ತಡೆಯಲಾಗದು. ಇದು ಆಕೆಯ ಆಯ್ಕೆಯಾಗಿರಬಹುದು ಇಲ್ಲವೇ, ಇದು ಆಕೆಯ ಸಾಂಪ್ರದಾಯಿಕ ಕುಟುಂಬ ಆಕೆಯನ್ನು ಶಾಲೆಗೆ ಕಳುಹಿಸಲು ಅನುಮತಿ ನೀಡಿರುವ ಷರತ್ತಾಗಿರಬಹುದು. ಈ ಪ್ರಕರಣಗಳಲ್ಲಿ ಹಿಜಾಬ್ ಆಕೆಯ ಶಿಕ್ಷಣದ ಮಾರ್ಗವಾಗಿರುತ್ತದೆ' ಎಂದಿದ್ದಾರೆ.

ಪ್ರಸ್ತುತ ಪ್ರಕರಣದಲ್ಲಿ ನಮ್ಮ ಸಮೃದ್ಧ ಸಂಸ್ಕೃತಿಯ ವೈವಿಧ್ಯತೆಯ ಮಹತ್ವ ಉಲ್ಲೇಖಿಸುವುದು ಅಗತ್ಯ ಎಂದು ಅವರು ಹೇಳಿದರು. 'ಗ್ರಾಮಗಳಲ್ಲಿ ಮತ್ತು ಅರೆ ಪಟ್ಟಣ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಹೊರಡುವ ಮುನ್ನ ಮನೆ ಕೆಲಸಗಳಲ್ಲಿ ತಾಯಿಗೆ ನೆರವಾಗಬೇಕು. ಶಿಕ್ಷಣ ಪಡೆಯಲು ಹೆಣ್ಣು ಮಕ್ಕಳು ಎದುರಿಸುವ ಕಷ್ಟಗಳು ಗಂಡು ಮಕ್ಕಳಿಗಿಂತ ಹೆಚ್ಚು ಇರುತ್ತದೆ ಎಂದು ಅವರು ಹೇಳಿದರು.

'ಶಾಲೆಗಳಲ್ಲಿ ಧಾರ್ಮಿಕ ಸಂಕೇತ ಸರಿಯಲ್ಲ'

ಒಂದನೇ ಪುಟದಿಂದ

ಮೇಲ್ಮನವಿ ವಜಾ ಮಾಡಿ ಪ್ರತ್ಯೇಕ ಆದೇಶ ಹೊರಡಿಸಿರುವ ಅವರು, 'ವಿದ್ಯಾರ್ಥಿಗಳ ಮುಂದೆ ತಮ್ಮ ಧಾರ್ಮಿಕ ನಂಬಿಕೆಯನ್ನು ಸೃಜಿಸಲು ಹಲವು ವರ್ಷಗಳಿವೆ. ವಿದ್ಯಾರ್ಥಿ ಜೀವನದ ನಂತರ ಈ ಕೆಲಸ ಮಾಡಬಹುದು. ಆದರೆ, ಸರ್ಕಾರಿ ಆದೇಶ ಸಂವಿಧಾನದ ಧ್ಯೇಯಗಳಿಗೆ ಅನುಗುಣವಾಗಿರುವುದರಿಂದ ಅದರಲ್ಲಿ ತಪ್ಪು ಕಂಡು ಹಿಡಿಯಲು ಆಗದು' ಎಂದಿದ್ದಾರೆ.

'ಒಬ್ಬ ವಿದ್ಯಾರ್ಥಿ ನಿರ್ದಿಷ್ಟ ವಸ್ತ್ರ ಧಾರಣೆಯಿಂದ ಒಂದು ಧಾರ್ಮಿಕ ನಂಬಿಕೆಯನ್ನು ಪ್ರತಿಬಿಂಬಿಸಿದ್ದಲ್ಲಿ ಇತರ ವಿದ್ಯಾರ್ಥಿಗಳು ಕೂಡ ತಮ್ಮ ನಂಬಿಕೆ ಹಾಗೂ ವಿಶ್ವಾಸವನ್ನು ಸೂಚಿಸಲು ಅವಕಾಶ ಕಲ್ಪಿಸಿದಂತೆ ಆಗುತ್ತದೆ. ಇದು ಶಿಕ್ಷಣಕ್ಕಾಗಿ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣ ಕಲ್ಪಿಸುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ವಿದ್ಯಾರ್ಥಿಗಳು ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಯೋಚಿಸದೆ, ಶಿಕ್ಷಣದ ಬಗ್ಗೆ ಗಮನ ಕೇಂದ್ರೀಕರಿಸಲು, ಶಿಸ್ತು ಮೂಡಿಸಲು, ಶಾಲೆಗಳಲ್ಲಿ ಕಲಹಗಳನ್ನು ತಪ್ಪಿಸಲು, ಮಕ್ಕಳಲ್ಲಿ ಏಕತೆಯ ಭಾವ ಮೂಡಿಸಲು, ಪೋಷಕರ ಮೇಲೆ ಆರ್ಥಿಕ ಒತ್ತಡ ಕಡಿಮೆಗೊಳಿಸಲು ಹಾಗೂ ಶಿಕ್ಷಣ ಸಂಸ್ಥೆಗಳ ನಡುವೆ ಸಮಾನತೆ ಕಾಪಾಡಲು ವಸ್ತ್ರಸಂಹಿತೆ ನೆರವಾಗುತ್ತದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

'ಈ ಎಲ್ಲ ವಿದ್ಯಾರ್ಥಿಗಳು 14 ವರ್ಷ ಮೇಲ್ಪಟ್ಟವರಾದ ಕಾರಣ ಅವರಿಗೆ ಪರಿಚ್ಛೇದ 21ರ ಶಿಕ್ಷಣದ ಹಕ್ಕು ಅನ್ವಯವಾಗುವುದಿಲ್ಲ. ಈ ಪರಿಚ್ಛೇದದ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಹಕ್ಕು ಒದಗಿಸಲಾಗಿದೆ. ಆದರೆ, ತಮ್ಮ ಧರ್ಮದ ಭಾಗವಾಗಿ ಜಾತ್ಯತೀತ ಶಾಲೆಗಳಲ್ಲಿ ವಸ್ತ್ರಸಂಹಿತೆಗೆ ಹೆಚ್ಚುವರಿಯಾಗಿ ಏನನ್ನಾದರೂ ಧರಿಸುವಂತಿಲ್ಲ' ಎಂದು ಅವರು ಹೇಳಿದ್ದಾರೆ.

'ವಿದ್ಯಾರ್ಥಿಗಳು ಸಹೋದರತೆ, ಭ್ರಾತೃತ್ವದ ವಾತಾವರಣದಲ್ಲಿ ಬೆಳೆಯಬೇಕು. ಬಂಡಾಯ ಅಥವಾ ಪ್ರತಿಭಟನೆಯ ವಾತಾವರಣದಲ್ಲಿ ಅಲ್ಲ' ಎಂದ ಅವರು, ಈ ಆದೇಶದ ಮೂಲಕ ಕರ್ನಾಟಕ ಸರ್ಕಾರ ಹೆಣ್ಣು ಮಕ್ಕಳಿಗೆ ಶಿಕ್ಷಣದ ಹಕ್ಕನ್ನು ನಿರ್ಬಂಧಿಸುತ್ತಿದೆ ಎಂದು ಹೇಳಲಾಗದು' ಎಂದು ಪ್ರತಿಪಾದಿಸಿದ್ದಾರೆ.

'ರಾಜ್ಯ ಸರ್ಕಾರವು ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಧಾರ್ಮಿಕ ಸಂಕೇತಗಳನ್ನು ಧರಿಸದಂತೆ ಆದೇಶ ಹೊರಡಿಸುವ ಅಧಿಕಾರ ಹೊಂದಿದೆ. ಆದ್ದರಿಂದ, ಹಿಜಾಬ್ ಧರಿಸದಂತೆ ನಿರ್ಬಂಧಿಸುವ ಸರ್ಕಾರಿ ಆದೇಶ ಸರಿ ಇದೆ' ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

'ಹಿಜಾಬ್ ನಿಷೇಧ ಮುಂದುವರಿಯಲಿದೆ'

ಒಂದನೇ ಪುಟದಿಂದ

ಎಲ್ಲರಿಗೂ ಸಮವಸ್ತ್ರ ಕಡ್ಡಾಯವಿದ್ದಾಗ, ಧಾರ್ಮಿಕ ಸೂಚಕ ಬಟ್ಟೆಗಳನ್ನು ಧರಿಸಲು ಅವಕಾಶ ನೀಡುವುದು ಸರಿಯಲ್ಲ ಎನ್ನುವುದು ಸರ್ಕಾರದ ನಿಲುವು ಎಂದು ವಿವರಿಸಿದರು.

ತರಗತಿಗಳಲ್ಲಿ ಹಿಜಾಬ್ ನಿಷೇಧಿಸಿದ್ದ ಆದೇಶ ಪ್ರಶ್ನಿಸಿ ಉಡುಪಿಯ ಕೆಲ ವಿದ್ಯಾರ್ಥಿನಿಯರು ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್ ಸರ್ಕಾರದ ಆದೇಶ ಎತ್ತಿಹಿಡಿದಿತ್ತು. ನಂತರ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ತೀರ್ಪು ಬರುವವರೆಗೂ ನಿಷೇಧದ ಆದೇಶ ಜಾರಿಯಲ್ಲಿರುತ್ತದೆ ಎಂದರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1/ವಿ.ವಿ.ಲೆ.ಶಿ/ಟೆಂಡರು/2022-23/1028
ದಿನಾಂಕ 11-10-2022.

ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ **ಡಿ.ಎಂ.ಎಫ್, ಕೆ.ಕೆ.ಆರ್.ಡಿ.ಬಿ ಮತ್ತು ಶಾಸಕರ ಸ್ಥಳಿಯ ಪ್ರದೇಶಾಭಿವೃದ್ಧಿ ಯೋಜನೆ** ಅಡಿಯಲ್ಲಿ ಅನುಮೋದನೆಗೊಂಡ ಕಟ್ಟಡ ನಿರ್ಮಾಣದ ಒಟ್ಟು 08 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 02** ಕಾಮಗಾರಿಗಳನ್ನು ಮತ್ತು **ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 01** ಕಾಮಗಾರಿಗಳನ್ನು ಕಾಯ್ದಿರಿಸಲಾಗಿದೆ.

ಟೆಂಡರ್ ನಮೂನೆಗಳನ್ನು www.eproc.karnataka.gov.in/e-portal/index.seam ಅಂತರ್ಜಾಲದಲ್ಲಿ ದಿನಾಂಕ 13-10-2022 ರಿಂದ ದಿನಾಂಕ 27-10-2022 ರಂದು ಸಂಜೆ 4.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 27-10-2022 ರ 16.00 ಗಂಟೆಯವರಗೆ** ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 28-10-2022 ರಂದು 17.00 ಗಂಟೆಗೆ** ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (www.eproc.karnataka.gov.in/e-portal/index.seam) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/542/ಎಂಸಿಎ/2022-23

ಕರ್ನಾಟಕ ಸರ್ಕಾರ
ನಗರಸಭಾ ಕಾರ್ಯಾಲಯ, ಉಡುಪಿ

ಸಂಖ್ಯೆ:ಉನಸ:ಬಿ4:ಸಿಆರ್:2022-23 ದಿನಾಂಕ: 12.10.2022

ಟೆಂಡರು ಪ್ರಕಟಣೆ

2022-23ನೇ ಸಾಲಿನ ನಗರಸಭಾ ನಿದಿಯಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ **Standard Bid Document K.W - 3** ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಆಪ್‌ಲೋಡ್ ಮಾಡಿರುವಂತೆ) **e-procurement** ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ **www.udupicity.mrc.gov.in** ನಿಂದ ಪಡೆದುಕೊಳ್ಳಬಹುದು.

(1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 27.10.2022 ಸಂಜೆ 5.00** ಗಂಟೆಗೆ (2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ: **28.10.2022 ಸಂಜೆ 5.01 ಗಂಟೆಗೆ** (3) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ ಅರ್ಹ ಬಿಡ್ಡುದಾರರಿಗೆ ಪ್ರತ್ಯೇಕ ತಿಳಿಸಲಾಗುವುದು.

ಕಾಮಗಾರಿಗಳ ವಿವರ: (1) ಉಡುಪಿ ನಗರಸಭೆಯ ಒಳಚರಂಡಿ ಕೊಳವೆ ಮತ್ತು ಆಳುಗುಂಡಿಗಳ (ಸಲಾಕೆ ಉಪಯೋಗಿಸಿ), ಒಳಚರಂಡಿ ವಿಭಾಗದ ನೈರ್ಮಲ್ಯ ಯಂತ್ರ **1 ಸಂಖ್ಯೆಯ** ಜೆಟ್‌ಸಕ್ ವಾಹನ ಸಂಖ್ಯೆ (KA 19 C 2143) ಹಾಗೂ ಒಳಚರಂಡಿ ವಿಭಾಗದ ಮ್ಯಾನ್ ಹೋಲ್ ಡಿಸಿಲ್ಟಿಂಗ್ ವಾಹನ ಟಾಟಾ ಏಸ್ ವಾಹನ ಸಂಖ್ಯೆ (KA20AA 3740) ಇದರ ದೈನಂದಿನ ವಾರ್ಷಿಕ ನಿರ್ವಹಣೆ ಕಾಮಗಾರಿ. DMA/2022-23/OW/WORK_INDENT139227, ಅಂದಾಜು ಮೊತ್ತ: **ರೂ. 86,00,000.00**, ಇ.ಎಂ.ಡಿ: **1,29,000.00**, ಟ್ರಾನ್ಸಾಕ್ಷನ್ ಫೀ: ಇ-ಪೋರ್ಟಲ್ ನಂತೆ, ಕಾಮಗಾರಿ ಪೂರ್ತಿಗೊಳಿಸುವ ಅವಧಿ: 1 ವರ್ಷ

ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ https:/eproc/karnataka.gov.in/eportal/index.seam ನಿಂದ ಟೆಂಡರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು.

ಸಹಿ/- ಅಧ್ಯಕ್ಷರು, ಉಡುಪಿ ನಗರಸಭೆ ಸಹಿ/- ಪೌರಾಯುಕ್ತರು, ಉಡುಪಿ ನಗರಸಭೆ

ವಾಸಾಇ/ಸನಿಉ/ಎಂಸಿಎ/494/22-23 ದಿ: 13.10.2022

ಕರ್ನಾಟಕ ಸರ್ಕಾರ
ಶಿವಮೊಗ್ಗ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ:ಎ6/ಬಿಜಿಟಿ/ಟೆಂಡರ್/ಸಿಆರ್-11/2022-23 ದಿನಾಂಕ:12.10.2022.

ಮರು ಇ-ಟೆಂಡರ್ ಪ್ರಕಟಣೆ.(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2022-23 ನೇ ಸಾಲಿನಲ್ಲಿ ಕೆಎಫ್‌ಡಿಎಫ್-ಪ್ಲೆಕ್ಸಿಫಂಡ್ ಯೋಜನೆಯಡಿ ಶಿವಮೊಗ್ಗ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ ಬರುವ ಅರಣ್ಯ ಪ್ರದೇಶಗಳಲ್ಲಿ 2023ನೇ ಸಾಲಿನ ಮಳೆಗಾಲದಲ್ಲಿ ನೆಡುತೋಪು ರಚನೆಗೆ ಅಗತ್ಯವಾದ ಪೂರ್ವಭಾವಿ ಕಾಮಗಾರಿಗಳಾದ ಮುಂಗಡ ಗುಂಡಿ ತೆಗೆಯುವ (ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು ಸೇರಿದಂತೆ) ಕಾಮಗಾರಿಗಳನ್ನು ನಿರ್ವಹಿಸುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2022-23 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ಸ್ಥಳದಿಂದ 20 ಕಿ.ಮೀ ವ್ಯಾಪ್ತಿಯಲ್ಲಿ ಸ್ವಂತ ಸಸ್ಯಕ್ಷೇತ್ರ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19.10.2022 ರ ಸಂಜೆ 4.30 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿವಮೊಗ್ಗ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಎಂಸಿಎ/ಶಿ/61/10/21-22/1077

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ
(ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ)

ಸಂ: ಕಾ.ಇಂ/ಭ.ಕಾ/ವಿ-2/ರಾಬೆ/4705/2022-23/288 ದಿನಾಂಕ:12.10.2022

ಅಲ್ಪಾವಧಿ ಟೆಂಡರ್ ಪ್ರಕಟಣೆ IFT-03
(ಇ-ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ)

ಮಾನ್ಯ ಆಡಳಿತಾಧಿಕಾರಿಗಳು ಭದ್ರಾಕಾಡಾ, ಶಿವಮೊಗ್ಗ ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಇಂಜಿನಿಯರಿಂಗ್ ವಿಭಾಗ-2 ಭದ್ರಾಕಾಡಾ ರಾಣೇಬೆನ್ನೂರು ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆ/ಪಂಚಾಯಿತಿ ರಾಜ್ಯ ಇಂಜಿನಿಯರಿಂಗ್ ಇಲಾಖೆ/ಜಲಸಂಪನ್ಮೂಲ ಇಲಾಖೆಯಲ್ಲಿ ನೋಂದಾಯಿತರಾದ 4ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 4705 ಲೆಕ್ಕ ಶೀರ್ಷಿಕೆಯಡಿಯಲ್ಲಿ ರೂ.144.80 ಲಕ್ಷ ಮೊತ್ತದ 17 ಅಚ್ಚುಕಟ್ಟು ರಸ್ತೆ ಕಾಮಗಾರಿಗೆ ಟೆಂಡರ್‌ನ್ನು KW-1 ದಾಖಲಾತಿಯನ್ವಯ ಏಕ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ದಿನಾಂಕ:12-10-2022 ಸಂಜೆ 4.30 ರಿಂದ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ಭಾಗವಹಿಸಬಹುದಾಗಿದೆ. ವಿಚಾರಣೆಗೆ ಕೊನೆಯ ದಿನಾಂಕ:19-10-2022 ಬೆಳಿಗ್ಗೆ 11.00ರ ವರೆಗೆ, ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ:20-10-2022 ಬೆಳಿಗ್ಗೆ 11.00 ಗಂಟೆಗೆ ಟೆಂಡರ್ ತೆರೆಯುವ ದಿನಾಂಕ:21-10-2022 ಬೆಳಿಗ್ಗೆ 11.30 ಗಂಟೆ.

ಹೆಚ್ಚಿನ ಮಾಹಿತಿಗಾಗಿ (http://eproc.karnataka.gov.in) ಮತ್ತು ದೂರವಾಣಿ ಸಂಖ್ಯೆ:08373-297346 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಇಂಜಿನೀಯರಿಂಗ್ ವಿಭಾಗ-2 ಭದ್ರಾಕಾಡಾ, ರಾಣೇಬೆನ್ನೂರು-581115.

1069

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಹಾವೇರಿ

ನಂ, ಪಂರಾಇಂವಿ/ಹಾವೇರಿ/ಪಿಬಿ-2/ಟೆಂಡರ್/2022-23/3806 ದಿ:12-10-2022

ಅಲ್ಪಾವಧಿ ಟೆಂಡರ ಪ್ರಕಟಣೆ ನಂ: 30/2022-23 (2ನೇ ಕರೆ)
(E.GOK ಇ-ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

ಲೆಕ್ಕ ಶೀರ್ಷಿಕೆ 5054 ವಿಶೇಷ ಅಭಿವೃದ್ಧಿ ಯೋಜನೆಯಡಿ ರಾಣೇಬೆನ್ನೂರ ತಾಲೂಕಿನಲ್ಲಿ ರಸ್ತೆ ಕಾಮಗಾರಿಗೆ ಟೆಂಡರ ಕರೆಯಲಾಗಿದೆ.

1) **ಪ್ಯಾಕೇಜ್-3** : (1) ಚಳಗೇರಿ ಗ್ರಾಮದ ವ್ಯಾಪ್ತಿಯಲ್ಲಿ ವಿವಿಧ ರಸ್ತೆ ಅಭಿವೃದ್ಧಿ (2) ಕೋಡಿಯಾಲ ಗ್ರಾಮದ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ (3) ನದಿಹರಳಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ (4) ಐರಣಿ ಗ್ರಾಮ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ **(INDENT91187/Call-2)**

(1) ಇ-ಪ್ರಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಡೌನಲೋಡ್ ಮಾಡುವ ದಿನಾಂಕ : **12-10-2022** (2) ಟೆಂಡರ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಅಭಿಯಂತರರವರ ಕಛೇರಿಯಲ್ಲಿ ದಿನಾಂಕ : **20-10-2022** 11:00 ಗಂಟೆಗೆ (3) ಇ-ಪ್ರಕ್ಯೂರಮೆಂಟ್ ಮೂಲಕ ಭರ್ತಿಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **02-11-2022**ರ 16:00 ಗಂಟೆವರೆಗೆ (4) ಇ-ಪ್ರೋಕ್ಯೂರಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : **03-11-2022**ರ 17:00 ಗಂಟೆಗೆ (5) ಇ-ಪ್ರೋಕ್ಯೂರಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ : **07-11-2022**ರ 11:00 ಗಂಟೆಗೆ

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ-ಪ್ರಕ್ಯೂರಮೆಂಟ್ ಪ್ಲಾಟ್‌ಫಾರಂನಲ್ಲಿ **www.eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ವಾಸಾಸಂಇ/ಹಾವೇರಿ/ಎಂ.ಸಿ.ಎ/304/2022-23 ಪಂ.ರಾ.ಇಂ. ವಿಭಾಗ, ಹಾವೇರಿ

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ
1ನೇ ಗೇಟ್, 7ನೇ ಮಹಡಿ, ಎಂ. ಎಸ್. ಬಿಲ್ಡಿಂಗ್ ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001

ಸಂಖ್ಯೆ: ಆಸಾಂನಿ/ಲೆಕ್ಕ-2/44/2022-23/16608 ದಿನಾಂಕ: 01/10/2022

ಇ-ಪ್ರೊಕ್ಯೂರ್‌ಮೆಂಟ್ ಬಿಡ್ ಆಹ್ವಾನ

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ (ಆಸಾಂನಿ), ಎಂ.ಎಸ್. ಬಿಲ್ಡಿಂಗ್, ಬೆಂಗಳೂರು ಇಲ್ಲಿನ ಕೇಂದ್ರ ಕಚೇರಿ , ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿ ಮತ್ತು ತಾಲ್ಲೂಕು ಕಚೇರಿಗಳಿಗೆ ಮಾನವ ಸಂಪನ್ಮೂಲ ಸೇವೆ ಒದಗಿಸಲು ಅನುಬಂಧ-1 ರಲ್ಲಿ ಪಟ್ಟಿಮಾಡಿದಂತೆ ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಡಿ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ವೇಳಾಪಟ್ಟಿ

ಟೆಂಡರ್ ಆಧಾರ ಸಂಖ್ಯೆ	ಅಧಿಸೂಚನೆ ಸಂಖ್ಯೆ: ಆಸಾಂನಿ/ಲೆಕ್ಕ-2/44/2022-23/ ದಿನಾಂಕ: 01/10/2022
ಇ-ಟೆಂಡರ್ ದಾಖಲೆಗಳನ್ನು ವೆಬ್‌ಸೈಟ್ http://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು	10/10/2022
ಪ್ರಿ-ಬಿಡ್ ಮೀಟಿಂಗ್ ದಿನಾಂಕ ಸ್ಥಳ:	12/10/2022 ಬೆಳಿಗ್ಗೆ 11.30 ಕ್ಕೆ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, 1ನೇ ಗೇಟ್, 7ನೇ ಮಹಡಿ, ಎಂ. ಎಸ್. ಬಿಲ್ಡಿಂಗ್ ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001
ವಿಚಾರಣೆಗೆ ಕೊನೆಯ ದಿನಾಂಕ: 14/10/2022 ರಂದು ಸಂಜೆ 5.00 ಗಂಟೆಗೆ ವಿಚಾರಣೆಗಾಗಿ ಸಂಪರ್ಕಿಸಿ: ಡಾ. ವಿ ಮುನಿರಾಜು, ಜಂಟಿ ನಿರ್ದೇಶಕರು (ಆಡಳಿತ), ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, 1ನೇ ಗೇಟ್, 7ನೇ ಮಹಡಿ, ಎಂ. ಎಸ್. ಬಿಲ್ಡಿಂಗ್, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001 ಸಂಪರ್ಕ ಸಂಖ್ಯೆ : 080-22353849	
ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ನಲ್ಲಿ ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	17/10/2022 ರಂದು ಸಂಜೆ 5.00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	19/10/2022 ರಂದು ಬೆಳಿಗ್ಗೆ 11.30ಕ್ಕೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	21/10/2022 ರಂದು ಬೆಳಿಗ್ಗೆ 11.30ಕ್ಕೆ
ಟೆಂಡರ್ ತೆರೆಯುವ ಸ್ಥಳ ಮತ್ತು ಸಂವಹನಕ್ಕಾಗಿರುವ ವಿಳಾಸ	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, 1ನೇ ಗೇಟ್, 7ನೇ ಮಹಡಿ, ಎಂ. ಎಸ್. ಬಿಲ್ಡಿಂಗ್ ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001
ಇಎಂಡಿ ಮೊತ್ತ	ರೂ.24,90,000/-
ಯೋಜನಾ ಮೊತ್ತ (ಅಂದಾಜು)	ರೂ.9,96,00,000/-

ಸೂಚನೆ: ಈ "ಟೆಂಡರ್" ಗೆ ಸಂಬಂಧಿಸಿದಂತೆ ಎಲ್ಲಾ ಸಂವಹನಗಳು ಟೆಂಡರ್ ಅಧಿಸೂಚನೆ ಸಂ. ಆಸಾಂನಿ/ಲೆಕ್ಕ-2/44/2022-23/ದಿನಾಂಕ: 01/10/2022 ಇದನ್ನು ಹೊಂದಿರಬೇಕು.

ತಾಂತ್ರಿಕ/ ಆರ್ಥಿಕ ಬಿಡ್ ತೆರೆಯುವುದು: ತಾಂತ್ರಿಕ ಬಿಡ್‌ಗೆ ಸ್ಪಂದಿಸುವ ಬಿಡ್ಡುದಾರರ ಆರ್ಥಿಕ ಬಿಡ್‌ನ್ನು ಮಾತ್ರ ಸೂಚಿಸಿದ ದಿನಾಂಕದಂದು ತೆರೆಯಲಾಗುವುದು ಅಥವಾ ಸ್ಪಂದಿಸಿದ ಬಿಡ್ಡುದಾರರಿಗೆ ಮುಂದಿನ ದಿನಾಂಕವನ್ನು ಸೂಚಿಸಲಾಗುವುದು/ತಿಳಿಸಲಾಗುವುದು.

ಸಹಿ/-
ನಿರ್ದೇಶಕರು ಹಾಗು ಅಧ್ಯಕ್ಷರು
ಇ-ಟೆಂಡರ್ ಅಂಗೀಕರಿಸುವ ಪ್ರಾಧಿಕಾರ
ಆಸಾಂನಿ, ಬೆಂಗಳೂರು

DIPR/CP/VCPL/2575/2022-23

ಸಹಕಾರ ಇಲಾಖೆ
ಸಹಕಾರ ಸಂಘಗಳ ನಿಬಂಧಕರ ಕಛೇರಿ,
ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು-52. ದೂರವಾಣಿ ಸಂಖ್ಯೆ: 080-22269636 / 22355284
ಇ-ಮೇಲ್: rcs-ka@nic.in, yeshtrust@gmail.com

ಸಂಖ್ಯೆ: ಆರ್‌ಸಿಎಸ್/107/2022-23 ದಿನಾಂಕ : 12-10-2022

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದಲ್ಲಿ ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಯೋಜನೆಯ ಅನುಷ್ಠಾನಕ್ಕಾಗಿ **Third Party Agency (TPA)** ಹಾಗೂ ಇತರೆ ಸೇವೆಗಳನ್ನು ಒದಗಿಸುವುದು (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ).

1) ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ದಾಖಲೆಯನ್ನು ಪ್ರಕಟಿಸುವುದು ದಿನಾಂಕ: 12-10-2022 ಪ್ರಕಟಿಸಿದೆ. 2) ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ: 12-10-2022 ಸಮಯ ಸಂಜೆ 5.00 ಗಂಟೆಗೆ. 3) ಪ್ರೀ ಬಿಡ್ ಸಭೆಯ ದಿನಾಂಕ: 21-10-2022 ಸಮಯ ಬೆಳಗ್ಗೆ 11.00 ಗಂಟೆಗೆ. 4) ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ : 28-10-2022 ಸಮಯ ಸಂಜೆ 5.00. 5) ತಾಂತ್ರಿಕ ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ : 29-10-2022 ಸಮಯ ಸಂಜೆ 5.01 ಗಂಟೆಗೆ. 6) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಇರುವ ಸಾಮರ್ಥ್ಯದ ಬಗ್ಗೆ ಟೆಂಡರ್ ದಾರರಿಂದ ಪ್ರಾತ್ಯಾಕ್ಷಿಕೆ ದಿನಾಂಕ: 29-10-2022 ಸಮಯ ಸಂಜೆ 3.30 ಗಂಟೆಗೆ. 7) ತಾಂತ್ರಿಕವಾಗಿ ಅರ್ಹರಾದ ಟೆಂಡರ್‌ದಾರರ ಘೋಷಣೆ ದಿನಾಂಕ: 29-10-2022 ಸಮಯ ಸಂಜೆ 5.30 ಗಂಟೆಗೆ. 8) ಆರ್ಥಿಕ ಟೆಂಡರ್ ಬಿಡ್‌ಗಳನ್ನು ತೆರೆಯುವ ದಿನಾಂಕ 31-10-2022 ಸಮಯ ಬೆಳಗ್ಗೆ 11.00 ಗಂಟೆಗೆ.

ಟೆಂಡರುದಾರರು ಟೆಂಡರ್ ದಾಖಲೆಯನ್ನು ಕರ್ನಾಟಕ ಸರ್ಕಾರದ ಇ- ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಲ್ಲಿ ಕಾಣಬಹುದಾಗಿದೆ ಮತ್ತು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ-ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಇ-ಆಡಳಿತ ಇಲಾಖೆ, ಅರವಿಂದ ಭವನ, ನೃಪತುಂಗ ರಸ್ತೆ, ಆರ್.ಬಿ.ಐ. ಎದುರು, ಬೆಂಗಳೂರು -560 001.

ಸಹಿ/- ಸಹಕಾರ ಸಂಘಗಳ ನಿಬಂಧಕರು
ಕರ್ನಾಟಕ ರಾಜ್ಯ, ಬೆಂಗಳೂರು.

DIPR/CP/RO2585/AAPL/2022-23

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

2022-23 ನೇ ಸಾಲಿನ ಅಪ್ರೆಂಟೀಸ್ ತರಬೇತಿಗೆ ಇಂಜಿನಿಯರಿಂಗ್ ಪದವೀಧರ / ಡಿಪ್ಲೋಮಾ 2019 (ಅಕ್ಟೋಬರ್ ತಿಂಗಳ ನಂತರ), 2020, 2021 ಮತ್ತು 2022ನೇ ಸಾಲಿನಲ್ಲಿ ಉತ್ತೀರ್ಣ ಹೊಂದಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ https://bescom.karnataka.gov.in
(Department of Corporate Office / Administration & Human Resource/Training) ಗೆ ಭೇಟಿ ನೀಡಿ.

ಸಹಿ/- ಪ್ರಧಾನ ವ್ಯವಸ್ಥಾಪಕರು (ಆ & ಮಾ.ಸಂ.),
ಕಂಪನಿ ಕಾರ್ಯಾಲಯ, ಬೆ.ವಿ.ಕಂ, ಬೆಂಗಳೂರು.-560001.

ನಗರ ಸಭೆ, ರಬಕವಿ - ಬನಹಟ್ಟಿ
ಜಿಲ್ಲಾ : ಬಾಗಲಕೋಟ) ಕಾರ್ಯಾಲಯ : ರಾಮಪೂರ (ಕರ್ನಾಟಕ ರಾಜ್ಯ
Off. : 08353-230236,

ಕ್ರ.ಸಂ.: ನಸರಬ/ಲೋವಿ/15th Finance Tied(WS&SWM) Grant/ಇಟೆಂಪ್ರ/2022-23 ದಿನಾಂಕ: 13-10-2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸನ್ 2022-23 ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ Tied(WS&SWM) Grant ಅನುದಾನದಲ್ಲಿ ನಗರಸಭೆ, ರಬಕವಿ-ಬನಹಟ್ಟಿ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ತಿದ್ದುಪಡಿ ಅಧಿನಿಯಮ/ನಿಯಮಗಳ ಪ್ರಕಾರ ಸ್ಟ್ಯಾಂಡರ್ಡ್ ಬಿಡ್‌ರಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಿವಿಲ್ ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://eproc.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ 27-10-2022 ರ ಸಂಜೆ 4-30 ಗಂಟೆ ಒಳಗಾಗಿ ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಬಹುದು. ಹಾಗೂ ಟೆಂಡರ್‌ಗಳನ್ನು ದಿನಾಂಕ 28-10-2022 ರಂದು ತೆರೆಯಲಾಗುವದು. ಹೆಚ್ಚಿನ ವಿವರಗಳಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಈ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಇಂಡೆಂಟ್ ನಂಬರ್	ಅನುದಾನ	ಪ್ಯಾಕೇಜ್ ನಂಬರ್	ಪ್ಯಾಕೇಜ್ ಮೊತ್ತ	ಇಎಂಡಿ ಮೊತ್ತ	ಕಾಮಗಾರಿ ಅವಧಿ	ಗುತ್ತಿಗೆದಾರರ ದರ್ಜೆ
DMA/2022-23/OW/WORK_INDENT 139681	15ನೇ ಹಣಕಾಸು ಯೋಜನೆ Tied(WS&SWM) Grant	ಪ್ಯಾಕೇಜ ನಂ.1	12,00,000	30,000	120 ದಿನ	ಸಿವಿಲ್ 2ನೇ ದರ್ಜೆ ಹಾಗೂ ಮೇಲ್ಪಟ್ಟು
DMA/2022-23/OW/WORK_INDENT 139682	15ನೇ ಹಣಕಾಸು ಯೋಜನೆ Tied(WS&SWM) Grant	ಪ್ಯಾಕೇಜ ನಂ.2	19,45,000	48,625	120 ದಿನ	ಸಿವಿಲ್ 2ನೇ ದರ್ಜೆ ಹಾಗೂ ಮೇಲ್ಪಟ್ಟು

ಸಹಿ/- ಪೌರಾಯುಕ್ತರು
ನಗರಸಭೆ, ರಬಕವಿ-ಬನಹಟ್ಟಿ

ಸಹಿ/- ಅಧ್ಯಕ್ಷರು
ನಗರಸಭೆ, ರಬಕವಿ-ಬನಹಟ್ಟಿ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು

ಸಂ. ಕಾನಿಅ/ಗ್ರಾನೀಸ&ನೈ/ವಿರಾ/ತಾ.ಶಾ/JJM-2022-23/ಇ-ಟೆಂಡರ/2022-23/ ದಿನಾಂಕ: 12-10-2022

ಇ-ಪ್ರೋಕ್ಯೂರಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-1,2, 3 & 4 (Standard Bid Document) ನಿಬಂಧನೆಗಳೊಪಟ್ಟಂತೆ ಪಂಚಾಯತರಾಜಇಂಜನೀಯರಿಂಗಇಲಾಖೆಯಲ್ಲಿ ಸಿವಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆಕುರಿತು ಇ-ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2022-23 ನೇ ಸಾಲಿನ Jal Jeevan Mission(JJM) ಯೋಜನೆ ಅಡಿಯ ಕೇಂದ್ರ&ರಾಜ್ಯ (90%), ಮತ್ತು ಸಮುದಾಯ ವಂತಿಕೆ(10%) ಅನುದಾನದಡಿಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರು ಸರಬರಾಜುಯೋಜನೆ ಕಾಮಗಾರಿಗಳಿಗೆ ಐಟಂವಾರುಟರ್ನಕೀ ಆಧಾರದ ಮೇಲೆ ಇ-ಟೆಂಡರಆಹ್ವಾನಿಸಲಾಗಿದೆ.

1]ಇ-Payment/NEFT ಮುಖಾಂತರಅರ್ಜಿ ಸ್ವೀಕರಿಸುವ ದಿನಾಂಕ : 15-10-2022, 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ : 15-10-2022, 3] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 29-10-2022 ಸಂಜೆ 5:30 ಗಂಟೆವರೆಗೆ, 4] ತಾಂತ್ರಿಕ ಬಿಡ್‌ತೆರೆಯುವ ದಿನಾಂಕ: 31-10-2022 ಮುಂಜಾನೆ 11:00 ಗಂಟೆ ಸಾಧ್ಯವಿದ್ದಲ್ಲಿ, 5] ಆರ್ಥಿಕ ಬಿಡ್‌ತೆರೆಯುವ ದಿನಾಂಕ : 01-11-2022 ಮುಂಜಾನೆ 11:00 ಗಂಟೆ ಸಾಧ್ಯವಿದ್ದಲ್ಲಿ

Indent Nos.:- **Lingasugur:** 47876 SC Reserved, 47877 SC Reserved, 47878 SC Reserved, 47879, SC Reserved, 47880 SC Reserved, 47881 SC Reserved, 47882 SC Reserved, 47883, 47884, 47885, 47886, 47887, 47889, 47890, 47891, 47892, 47893, 47895, 47898, 47900, 47902, 47903, 47904, 47905, 47906, 47907, 47909, 47911, 47913, 47914, 47915, 47916, 47917, 47919, 47920, 47921, 47922, 47923, 47924, 47925, 47926, 47927, 47929, 47930, 47931, 47932, 47933, 47934, 47935, 47937, 47938, 47939, 47940, 47941, 47942, 47943, 47944, 47945, 47946, 47947, 47948, 47949, 47951, 47952, 47953, 47954, 47955, **Manvi:** 47297/CALL-2 SC Reserved, 47973 SC Reserved, 47974 SC Reserved, 47978 SC Reserved, 47979 SC Reserved, 47980 ST Reserved, 47981, 47988, 47990, 47996, 47984, 47985, 47993,48084 HKRDB, 48085 HKRDB ST Reserved, 48086 HKRDB SC Reserved, **Raichur :** 41270//CALL-2, 46323/CALL-2, 47313, 47956 SC Reserved, 47957, 47958, 47959, 47960, 47961, 47962, 47963, 47964, 47965, 47966, 47967, 47968, 47969, 47970, 47971, 47972, **Sindhanur:** 48030, 48033, 48019, 48031, 48029, 48024, 48028, 48032, 48026, 48015 ST Reserved, 48016 ST Reserved, 48017 SC Reserved, 48025, 48023, 48021, 48034, ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ http://eproc.karnataka.gov.inಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ನೀ.ಸ & ನೈ ವಿಭಾಗ, ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/356/ಎಂ.ಸಿ.&ಎ/2022-23

ಶತಮಾನದಿಂದ ವಂಚಿತ ಸೌಲಭ್ಯ ಈಗ ಲಭ್ಯ: ಮೋದಿ

ಉನಾ, ಚಂಬಾ (ಹಿಮಾಚಲ ಪ್ರದೇಶ) (ಪಿಟಿಐ): ಕಳೆದ ಶತಮಾನದಲ್ಲಿ ಬೇರೆ ದೇಶಗಳಲ್ಲಿ ಲಭ್ಯವಿದ್ದ ಸೌಲಭ್ಯಗಳನ್ನು ದೇಶದ ಜನರಿಗೆ ನೀಡಲು ಈ ಹಿಂದಿನ ಸರ್ಕಾರಗಳು ವಿಫಲವಾಗಿದ್ದವು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಆರೋಪಿಸಿದರು. ಇದೇ ವರ್ಷಾಂತ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವ ಹಿಮಾಚಲ ಪ್ರದೇಶದ ಉನಾ ಹಾಗೂ ಚಂಬಾದಲ್ಲಿ ಹಲವು ಯೋಜನೆಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಉನಾದಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಅವರು ಚಾಲನೆ ನೀಡಿದರು.

ಬಳಿಕ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ಪ್ರತೀ ಚುನಾವಣೆಯಲ್ಲಿ ಬೇರೆ ಬೇರೆ ಪಕ್ಷಗಳನ್ನು ಚುನಾಯಿಸುವ ಪ್ರವೃತ್ತಿ ಹಿಮಾಚಲ ಪ್ರದೇಶದಲ್ಲಿ ಈ ಬಾರಿ ಕೊನೆಯಾಗಲಿದೆ ಎಂದು ಆಶಿಸಿದರು. ಕೇಂದ್ರ ಹಾಗೂ ಹಿಮಾಚಲ ಪ್ರದೇಶ, ಎರಡೂ ಕಡೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇರುವುದರ (ಡಬಲ್ ಎಂಜಿನ್) ಅನುಕೂಲವನ್ನು ಒತ್ತಿ ಹೇಳಿದ ಅವರು, ಈ ಕಾರಣದಿಂದ ಅಭಿವೃದ್ಧಿಯ ಮಹಾಯಾಗಕ್ಕೆ ರಾಜ್ಯ ಸಾಕ್ಷಿಯಾಗಿದೆ ಎಂದರು.


ಉನಾದಲ್ಲಿ ವಂದೇ ಭಾರತ್ ರೈಲಿಗೆ ಮೋದಿ ಚಾಲನೆ –ಪಿಟಿಐ ಚಿತ್ರ

ವಂದೇ ಭಾರತ್ ರೈಲು ಹಿಮಾಚಲ ಪ್ರದೇಶದ ಅಂಬ್ ಅಂದೌರಾದಿಂದ ದೆಹಲಿಗೆ ವಾರಕ್ಕೆ ಆರು ದಿನ ಸಂಚರಿಸಲಿದ್ದು, ಇದು ಸರಣಿಯ ನಾಲ್ಕನೇ ರೈಲು.

ನರ ಬಲಿ: ಆರೋಪಿಗಳಿಗೆ ಕಸ್ಟಡಿ

ಕೊಚ್ಚಿ (ಪಿಟಿಐ): ಕೇರಳದ ಪತ್ತನಂತಿಟ್ಟ ಜಿಲ್ಲೆಯ ಎಲಾಂತೂರ್‌ನಲ್ಲಿ ನಡೆದಿರುವ ಇಬ್ಬರು ಮಹಿಳೆಯರ ಶಂಕಿತ ನರ ಬಲಿ ಪ್ರಕರಣದ ಮೂವರು ಪ್ರಮುಖ ಆರೋಪಿಗಳನ್ನು 12 ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ವಹಿಸಿ ಇಲ್ಲಿನ ನ್ಯಾಯಾಲಯ ಆದೇಶಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಕ್ಷಿಗಳ ಸಂಗ್ರಹ ಮತ್ತು ಮುಂದಿನ ವಿಚಾರಣೆಗಾಗಿ ಆರೋಪಿಗಳಾದ ಶಫಿ (52), ಭಾಗವಲ್ ಸಿಂಗ್ (68) ಮತ್ತು ಆತನ ಹೆಂಡತಿ ಲೈಲಾ (59) ಅವರನ್ನು ಪೊಲೀಸ್ ಕಸ್ಟಡಿಗೆ ವಹಿಸಿ ನ್ಯಾಯಾಲಯ ಗುರುವಾರ ಆದೇಶ ನೀಡಿದೆ.

'ಈ ಭೀಕರ ಅಪರಾಧಕ್ಕೆ ಇನ್ನೆಷ್ಟು ಮಂದಿ ಬಲಿಯಾಗಿದ್ದಾರೆ ಎಂಬುದರ ತನಿಖೆ ನಡೆಸಬೇಕಿದೆ. ಅಲ್ಲದೆ ಮೃತ ಮಹಿಳೆಯ ಚಿನ್ನಾಭರಣಗಳು ನಾಪತ್ತೆಯಾಗಿದ್ದು, ಆರೋಪಿ ಗಳು ಅವುಗಳನ್ನು ಮಾರಾಟ ಮಾಡಿರಬಹುದು ಅಥವಾ ಒತ್ತೆ ಇಟ್ಟಿರಬಹುದು. ಅವುಗಳನ್ನು ಪತ್ತೆ ಮಾಡಬೇಕಿರುವ ಕಾರಣ ಆರೋಪಿ ಗಳನ್ನು ಪೊಲೀಸ್ ಕಸ್ಟಡಿಗೆ ವಹಿಸಬೇಕು' ಎಂದು ಪೊಲೀಸರು ನ್ಯಾಯಾಲಯವನ್ನು ಕೋರಿದರು.

30ಗಳಲ್ಲಿ ಬೆಳೆ ಹಾನಿ ಪರಿಹಾರಕ್ಕೆ ಸೂಚನೆ

ಒಂದನೇ ಪುಟದಿಂದ

ಹೆಚ್ಚುವರಿ ಪರಿಹಾರ ವಿತರಣೆಗೆ ಸುತ್ತೋಲೆ ಹೊರಡಿಸಲು ವಿಪತ್ತು ನಿರ್ವಹಣೆ ಆಯುಕ್ತರಿಗೆ ನಿರ್ದೇಶನ ಕೊಡಲಾಗಿದೆ ಎಂದರು.

ಮಳೆಗೆ ಕೆರೆಗಳು ಒಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮೂಲಸೌಕರ್ಯ ಹಾನಿಗೆ ಸಂಬಂಧಿಸಿ ಅದರ ತೀವ್ರತೆ ಆಧರಿಸಿ ಎನ್‌ಡಿಆರ್‌ಎಫ್ ಮಾರ್ಗಸೂಚಿ ಅನ್ವಯ ದುರಸ್ತಿ, ಹೆಚ್ಚುವರಿ ನೆರವು ಅಗತ್ಯವಿರುವ ಕಾಮಗಾರಿಗಳು, ಸಂಪೂರ್ಣ ಪುನರ್ ನಿರ್ಮಾಣದ ಕಾಮಗಾರಿ ಗುರುತಿಸಿ ಕ್ರಮ ಜರುಗಿಸಬೇಕೆಂದು ಸೂಚಿಸಿದರು.

ಸೇತುವೆಗಳ ದುರಸ್ತಿ, ಅಗತ್ಯವಿದ್ದರೆ ಮರು ನಿರ್ಮಾಣ ಮಾಡಬೇಕು. ವಿದ್ಯುತ್ ಕಂಬ, ಟ್ರಾನ್ಸ್‌ಫಾರ್ಮರ್ ಗಳನ್ನು 24 ಗಂಟೆಯೊಳಗೆ ಸರಿಪಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಹೊಳೆ, ಹಳ್ಳಗಳ ವ್ಯಾಪ್ತಿಯಲ್ಲಿ ಎಲ್ಲ ರೀತಿಯ ಮುನ್ನೆಚ್ಚರಿಕೆ ವಹಿಸಬೇಕು ಎಂದೂ ತಿಳಿಸಿದರು.

ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಪಿ, ಜಿಪಂ ಸಿಇಒ ಹರ್ಷಲ್ ಭೋಯರ್, ಎಸ್ಪಿ ಡಾ. ಅರುಣ್ ಕೆ., ಉಪವಿಭಾಗಾಧಿಕಾರಿ ಸಿದ್ದರಾಮೇಶ್ವರ ಇದ್ದರು.

ಸಂಕ್ಷಿಪ್ತ ಸುದ್ದಿ

'ಪಕ್ಷದ ಚಿಹ್ನೆ, ಹೆಸರು ಹಂಚಿಕೆ ಮಾಡುವಲ್ಲಿ ಪಕ್ಷಪಾತ'

ನವದೆಹಲಿ (ಪಿಟಿಐ): ಪಕ್ಷದ ಚಿಹ್ನೆ ಹಾಗೂ ಹೆಸರು ಹಂಚಿಕೆ ಮಾಡುವಲ್ಲಿ ಪಕ್ಷಪಾತ ಮಾಡಲಾಗಿದೆ ಎಂದು ಆರೋಪಿಸಿ ಶಿವಸೇನಾದ ಉದ್ಧವ್ ಠಾಕ್ರೆ ಬಣವು ಗುರುವಾರ ಆರೋಪಿಸಿದೆ.

'ಚುನಾವಣಾ ಆಯೋಗದ ಕೆಲವು ಕ್ರಮಗಳು ಪಕ್ಷಪಾತ ಧೋರಣೆಯಿಂದ ಕೂಡಿರುವುದು ಆತಂಕ ತಂದಿದೆ' ಎಂದು ಉದ್ಧವ್ ಠಾಕ್ರೆ ಬಣದ ವಕೀಲರಾದ ವಿವೇಕ್ ಸಿಂಗ್ ಚುನಾವಣಾ ಆಯೋಗಕ್ಕೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಖರ್ಗೆಗೆ ಬಹಿರಂಗ ಬೆಂಬಲ: ತರೂರ್ ಅತೃಪ್ತಿ

ನವದೆಹಲಿ (ಪಿಟಿಐ): ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕೆಲವು ಮುಖಂಡರು ಬಹಿರಂಗವಾಗಿ ಬೆಂಬಲ ಸೂಚಿಸಿದ್ದಾರೆ ಮತ್ತು ಅವರ ಪರವಾಗಿ ಪ್ರಚಾರ ಸಭೆಗಳನ್ನು ನಡೆಸಿದ್ದಾರೆ. ಈ ಮೂಲಕ ಎಲ್ಲರಿಗೂ ಸಮಾನ ಅವಕಾಶ ಎಂಬ ಸ್ಥಿತಿಯನ್ನು ಇಲ್ಲವಾಗಿಸಿದ್ದಾರೆ ಎಂದು ಶಶಿ ತರೂರ್ ಗುರುವಾರ ಹೇಳಿದ್ದಾರೆ. ಖರ್ಗೆ ಮತ್ತು ತರೂರ್ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಹುದ್ದೆಗೆ ಸ್ಪರ್ಧಿಸಿದ್ದಾರೆ.

ಕೆಲವು ಪ್ರತಿನಿಧಿಗಳ ಸಂಪರ್ಕ ವಿವರಗಳು ಮತದಾರರ ಪಟ್ಟಿಯಲ್ಲಿ ಇಲ್ಲ. ಹಾಗಾಗಿ, ಹಲವರನ್ನು ಭೇಟಿಯಾಗುವುದು ಸಾಧ್ಯವಾಗಿಲ್ಲ. ಕೆಲವರ ಹೆಸರು ಮಾತ್ರ ಇದೆ, ಸಂಪರ್ಕ ಸಂಖ್ಯೆ ಇಲ್ಲ. ಕೆಲವರ ವಿಳಾಸ ಇಲ್ಲ. ಹಾಗಾಗಿ ಮತ ಕೇಳುವುದು ಸಾಧ್ಯವಾಗಿಲ್ಲ ಎಂದು ತರೂರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗುಜರಾತ್ ಎಎಪಿ ನಾಯಕ ಇಟಾಲಿಯಾ ಬಂಧನ–ಬಿಡುಗಡೆ

ನವದೆಹಲಿ (ಪಿಟಿಐ): ಪ್ರಧಾನಿ ಮೋದಿ ಮತ್ತು ಮಹಿಳೆಯರ ವಿರುದ್ಧದ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪ ಪ್ರಕರಣ ಸಂಬಂಧ ರಾಷ್ಟ್ರೀಯ ಮಹಿಳಾ ಆಯೋಗದ ಎದುರು ಹಾಜರಾಗಿ ಹೇಳಿಕೆ ನೀಡಿದ ನಂತರ ಎಎಪಿ ಗುಜರಾತ್ ಘಟಕದ ಅಧ್ಯಕ್ಷ ಗೋಪಾಲ್ ಇಟಾಲಿಯಾ ಅವರನ್ನು ಗುರುವಾರ ದೆಹಲಿ ಪೊಲೀಸರು ವಶಕ್ಕೆ ಪಡೆದರು.

ಮೂರು ಗಂಟೆಯ ಬಳಿಕ ಅವರನ್ನು ಬಿಡುಗಡೆ ಮಾಡಲಾಯಿತು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನನ್ನ ಕಕ್ಷಿದಾರರು, 101 ಮ್ಯಾನ್ ಹೌಸ್, ಎಸ್ ವಿ ರೋಡ್, ವಿಲೆ ಪರ್ಲೆ (ಪಶ್ಚಿ), ಮುಂಬೈ – 400 056, ಮಹಾರಾಷ್ಟ್ರ ವಿಳಾಸದಲ್ಲಿ ತನ್ನ ನೋಂದಾಯಿತ ಕಚೇರಿ ಹೊಂದಿರುವ **ಮ್ಯಾನ್ ಇಂಡಸ್ಟ್ರೀಸ್ (ಇಂಡಿಯಾ)** ಲಿಮಿಟೆಡ್ ಎಂಬ ಪಬ್ಲಿಕ್ ಲಿಮಿಟೆಡ್ ಕಂಪನಿಯ ಮಾಲಿಕತ್ವದಲ್ಲಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಉದ್ದೇಶಿಸಿರುತ್ತಾರೆ ಮತ್ತು ಸದರಿ ಸ್ವತ್ತಿಗೆ ಸಂಬಂಧಿತ ಹಕ್ಕು ಬಾಧ್ಯತೆಗಳನ್ನು ಪರಿಶೀಲಿಸಲು ನನ್ನನ್ನು ನಿಯೋಜಿಸಿದ್ದಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮತ್ತು/ಅಥವಾ ಸ್ವತ್ತಿನ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ, ವೈಯಕ್ತಿಕವಾಗಿಯಾಗಲಿ, ಸಂಸ್ಥೆಗಾಗಲಿ, ಸಂಘಕ್ಕಾಗಲಿ, ಸೊಸೈಟಿಗಾಗಲಿ, ಕಂಪನಿಗಾಗಲಿ (ಕಾರ್ಪೊರೇಟ್ ಅಥವಾ ಕಾರ್ಪೊರೇಟ್ ಅಲ್ಲದ) ಯಾವುದೇ ರೀತಿಯ ಹಕ್ಕು, ಬಾಧ್ಯತೆ, ಹಿತಾಸಕ್ತಿ, ಫಲಾನುಭ, ಕ್ಲೇಮ್ ಅಥವಾ ಡಿಮಾಂಡ್‌ಗಳಿದ್ದಲ್ಲಿ, ಮಾರಾಟ, ವಿನಿಮಯ, ಉಡುಗೊರ, ಭೋಗ್ಯ, ಭಾಡಿಗೆ, ಲೈಸನ್ಸ್, ಅಸೈನ್‌ಮೆಂಟ್, ಅಡಮಾನ, ಚಾರ್ಜ್, ಲೀನ್, ಟ್ರಸ್ಟ್, ಫ್ಯಾಮಿಲಿ ಅರೇಂಜ್‌ಮೆಂಟ್/ಸೆಟ್ಲ್‌ಮೆಂಟ್, ಋಣಭಾರ, ವಂಶಾವಳಿ, ಬಿಕ್ವೆಸ್ಟ್, ಈಸ್‌ಮೆಂಟ್, ಸ್ವಾಧೀನ, ನಿರ್ವಹಣೆ, ಅಭಿವೃದ್ಧಿ ಹಕ್ಕುಗಳು, ಯಾವುದೇ ನ್ಯಾಯಾಲದ ಆದೇಶ/ಡಿಕ್ರಿ/ತೀರ್ಪು, ಒಪ್ಪಂದ, ಯಾವುದೇ ಅರ್ಥೈಸಿಕೊಳ್ಳುವಿಕೆ ವಿಧಾನದ ಕ್ಲೇಮ್‌ಗಳನ್ನು ಹೊಂದಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯ ಪ್ರಕಟಗೊಂಡ ದಿನಾಂಕದಿಂದ ಹತ್ತು (10) ದಿನಗಳೊಳಗೆ ಪೂರಕ ದಾಖಲಾತಿಗಳ ಸಮೇತ ಈ ಕೆಳಗೆ ಸಹಿ ಹಾಕಿರುವವರ ಗಮನಕ್ಕೆ ತರುವುದು. ನಿಗದಿತ ಕಾಲಾವಧಿಯೊಳಗೆ ಯಾವುದೇ ಕ್ಲೇಮ್‌ಗಳು ಸಲ್ಲಿಕೆಯಾಗದಿದ್ದಲ್ಲಿ, ಸದರಿ ಸ್ವತ್ತಿಗೆ ಯಾವುದೇ ಅನ್ಯ ಕ್ಲೇಮ್‌ಗಳಿರುವುದಿಲ್ಲ ಎಂದು ಪರಿಭಾವಿಸಲಾಗುತ್ತದೆ ಮತ್ತು ನನ್ನ ಕಕ್ಷಿದಾರರು ಸದರಿ ಷೆಡ್ಯೂಲ್ ಸ್ವತ್ತಿನ ಖರೀದಿದಗೆ ಸಂಬಂಧಿತ ವ್ಯವಹಾರವನ್ನು ಪೂರ್ಣಗೊಳಿಸಿಕೊಳ್ಳಲು ಹಕ್ಕುಬದ್ಧರಾಗಿರುತ್ತಾರೆ ಎಂದು ಪರಿಗಣಿಸಲಾಗುತ್ತದೆ. ನಿಗದಿತ ಸಮಯ ಮೀರಿದ ನಂತರ ಸಂದಾಯವಾಗುವ ಯಾವುದೇ ಕ್ಲೇಮ್ ಮತ್ತು/ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಂತಹವುಗಳು ನನ್ನ ಕಕ್ಷಿದಾರರ ಮೇಲೆ ಯಾವುದ ನಿರ್ಬಂಧಗಳನ್ನು ರೂಪಿಸುವುದಿಲ್ಲ.

ಷೆಡ್ಯೂಲ್ ಪ್ರಾಪರ್ಟಿ

ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಕಸಬಾ ಹೋಬಳಿ, ಗಿಣಿಗೇರಾ ಗ್ರಾಮದ ಸರ್ವೆ ನಂ. 276/4, 276/5, 276/10ಪಿ, 276/11, 277/1ಪಿ, 277/3, 278/3, 278/3ಪಿ, 279/2, 280/3ಪಿ, 280/4ಪಿ ಗಳಲ್ಲಿರುವ ಮತ್ತು ಬಸಾಪುರ ಗ್ರಾಮದ ಸರ್ವೆ ನಂ. 93/2ಪಿ, 94/1ಪಿ, 94/ಬಿ(ಪಿ2), 97/ಪಿ, 98/ಪಿ, 99/ ಎ ಇಂದ ಎಚ್, 100ಪಿ ಗಳಲ್ಲಿರುವ ಒಟ್ಟಾರೆ 72 ಎಕರೆ 39 ಗುಂಟಾ, ಬಸಾಪುರ ಗ್ರಾಮದ ಸರ್ವೆ ನಂ. 92/ಪಿ ಯಲ್ಲಿರುವ 10 ಎಕರೆ, ಬಸಾಪುರ ಗ್ರಾಮ ಸರ್ವೆ ನಂ. 92ಭಾಗ ದಲ್ಲಿರುವ (ಸರ್ಕಾರಿ ಜಮೀನು) 20 ಎಕರೆ, 14 ಗುಂಟಾ, ಒಟ್ಟಾರೆ 103 ಎಕರೆ 13 ಗುಂಟಾ ವಿಸ್ತೀರ್ಣವುಳ್ಳ ಖಾಲಿ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ.

ಸಹಿ/– ರಿಷಿಕೇಶ ಮಾಧವ, ವಕೀಲರು
ನಂ.91, ನೆಲಮಹಡಿ, ನವನೀತ, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಕೋಕೊನಟ್ ಗಾರ್ಡನ್, ನಾಗರಭಾವಿ ಮುಖ್ಯರಸ್ತೆ, ಬೆಂಗಳೂರು – 560 072 ಇ–ಮೇಲ್: rishikeshmadhav.adv@gmail.com
ದಿನಾಂಕ: 14–10–2022 ಮೊಬೈಲ್: +91-9620195434

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560012.
ದೂರವಾಣಿ: 080–23 460 460 (5 ಲೈನ್ಸ್), ಫ್ಯಾಕ್ಸ್: 080–23461576 ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.07/2022 ದಿನಾಂಕ: 13–10–2022

ಅಧಿಸೂಚನೆ

ಕರ್ನಾಟಕದಲ್ಲಿನ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಹಾಗೂ ಕರ್ನಾಟಕದ ವಿದ್ಯಾರ್ಥಿಗಳಿಗೆ ಆಯುಷ್ ಕೋರ್ಸುಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ – 2022–23

1) ಸರ್ಕಾರವು ತನ್ನ ಆದೇಶ ಸಂಖ್ಯೆ ಆಕುಕ 124 ಆರ್‌ಜಿಯು ಬೆಂಗಳೂರು ದಿನಾಂಕ 28–06–2017 ರಲ್ಲಿ, ಎಲ್ಲಾ ಸರ್ಕಾರಿ, ಖಾಸಗಿ (ಅಲ್ಪ ಸಂಖ್ಯಾತವೂ ಸೇರಿದಂತೆ), ಕಾಲೇಜುಗಳಲ್ಲಿನ ಸರ್ಕಾರಿ, ಖಾಸಗಿ, ಎನ್‌ಆರ್‌ಐ, ಮತ್ತು ಇತರೆ ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ಏಕರೂಪದ ಕೌನ್ಸಿಲಿಂಗ್ ಅನ್ನು ನಡೆಸಲು ನಿರ್ದೇಶಿಸಿದೆ.
2) ಸರ್ಕಾರದ ನಿರ್ದೇಶನದಂತೆ, 2022–23ನೇ ಸಾಲಿಗೆ ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕಪಪ್ರಾ) UGNEET-2022 ರಲ್ಲಿ ಅರ್ಹತೆಯನ್ನು ಪಡೆದಿರುವ ಹಾಗು ಅರ್ಹತಾ ಮಾನದಂಡಗಳನ್ನು ಪೂರೈಸುವ ಎಲ್ಲಾ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. UGNEET-2022 ರಲ್ಲಿ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು ಮಾತ್ರ ವೈದ್ಯಕೀಯ / ದಂತ ವೈದ್ಯಕೀಯ / ಆಯುಷ್ ಕೋರ್ಸುಗಳ ಪ್ರವೇಶಕ್ಕೆ ನೊಂದಣಿ ಮಾಡಿಕೊಳ್ಳಲು ಅರ್ಹರಿರುತ್ತಾರೆ.
3) ಇದಲ್ಲದೆ, ಕರ್ನಾಟಕ ಆಯುಷ್ ಇಲಾಖೆಯ ದಿನಾಂಕ 13–10–2022ರ ಪತ್ರದ ಅನ್ವಯ, ಸರ್ಕಾರಿ, ಸರ್ಕಾರಿ ಅನುದಾನಿತ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳಲ್ಲಿನ ಪ್ರವೇಶಕ್ಕಾಗಿ 15% ಸೀಟು ಅಖಿಲ ಭಾರತ ಕೋಟ ಮತ್ತು 85% ಸೀಟುಗಳು ರಾಜ್ಯ ಹಾಗು ಯೂನಿಯನ್ ಟೆರಿಟರಿ ಸೀಟುಗಳಾಗಿರುತ್ತದೆ. ಈ ನಿರ್ದೇಶನದಂತೆ ಕರ್ನಾಟಕ ರಾಜ್ಯದ ಖಾಸಗಿ ಆಯುಷ್ ಕಾಲೇಜುಗಳಲ್ಲಿ ಲಭ್ಯವಾಗುವ ಸೀಟುಗಳು ಮತ್ತು ಆಡಳಿತ ಮಂಡಳಿಯ ಕೋಟದ ಸೀಟುಗಳನ್ನೂ ಸಹ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಹಂಚಿಕೆ ಮಾಡಲಾಗುವುದು. UGNEET-2022 ರಲ್ಲಿ ಅರ್ಹತೆಯನ್ನು ಪಡೆದಿರುವ ಅಭ್ಯರ್ಥಿಗಳು ಆಯುಷ್ ಸೀಟುಗಳಿಗೂ ಸಹ ನೊಂದಯಿಸಿಕೊಳ್ಳಬಹುದು.
4) ಕರ್ನಾಟಕೇತರ ಅಭ್ಯರ್ಥಿಗಳಿಗೆ ಯಾವುದೇ ಮೀಸಲಾತಿಯ ಸವಲತ್ತುಗಳು ಅನ್ವಯಿಸುವುದಿಲ್ಲ. ಆದ್ದರಿಂದ UGNEET- 2022 ರಲ್ಲಿ ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿರುವ ಕನಿಷ್ಠ ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ (50th Percentile) ಅರ್ಹತೆಯನ್ನು ಪಡೆಯಬಹುದಾಗಿದೆ ಹಾಗೂ ಪ್ರವೇಶಕ್ಕಾಗಿ ನೊಂದಣಿಯನ್ನು ಮಾಡಿ ಕೊಳ್ಳಬಹುದಾಗಿದೆ. SC / ST / OBC ಅರ್ಹತಾ ಮಾನದಂಡಗಳು ಕರ್ನಾಟಕ SC / ST / OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ.
5) UGNEET-2022 ಮಾಹಿತಿ ಪುಸ್ತಕದಲ್ಲಿ ನೀಡಿರುವ ಶೈಕ್ಷಣಿಕ ಅರ್ಹತೆಗಳನ್ನು ಹಾಗು ಇತರೆ ಮಾನದಂಡಗಳನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್: **http://kea.kar.nic.in** ನಲ್ಲಿ ಪ್ರಚುರ ಪಡಿಸಲಾಗಿದೆ. ಅಭ್ಯರ್ಥಿಗಳು ವೈದ್ಯಕೀಯ, ದಂತವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳ ಪ್ರವೇಶಕ್ಕಾಗಿ ನೊಂದಣಿ ಮಾಡಿಕೊಳ್ಳುವ ಮೊದಲು ಶೈಕ್ಷಣಿಕ ಅರ್ಹತೆ, ವಿವಿಧ ವರ್ಗಗಳ ಸೀಟುಗಳಿಗೆ ನಿಗದಿಪಡಿಸಿರುವ ಅರ್ಹತಾ ಮಾನದಂಡಗಳು ಮತ್ತು ಅಂತಹ ಸೀಟುಗಳಿಗೆ ನಿಗದಿಪಡಿಸಿರುವ ಅಭ್ಯರ್ಥಿಯ ಅರ್ಹತೆ ಹಾಗೂ ಇತ್ಯಾದಿ ಮಾನದಂಡಗಳನ್ನು ಓದಿಕೊಂಡು ನೊಂದಣಿ ಮಾಡಿಕೊಳ್ಳಲು ಸೂಚಿಸಿದೆ.
6) **ಆನ್‌ಲೈನ್ ಮೂಲಕ ನೊಂದಣಿ ಹಾಗು ಅರ್ಜಿ ಸಲ್ಲಿಸಲು ಪೋರ್ಟಲ್ ಅನ್ನು ದಿನಾಂಕ: 14–10–2022 ರ ಮಧ್ಯಾಹ್ನ 1.00 ರಿಂದ ತೆರೆಯಲಾಗಿದ್ದು, ಆಸಕ್ತ ಅರ್ಹ ಅಭ್ಯರ್ಥಿಗಳು ದಿನಾಂಕ: 19–10–2022 ರ ಸಂಜೆ 4.00 ರೊಳಗಾಗಿ ಆನ್‌ಲೈನ್ ಮೂಲಕ ನೊಂದಣಿ ಮಾಡಿ ಶುಲ್ಕವನ್ನು ಪಾವತಿಸಬಹುದಾಗಿದೆ. ಶುಲ್ಕ ಪಾವತಿಸಿದ ಅಭ್ಯರ್ಥಿಗಳು ದಿನಾಂಕ: 20–10–2022 ರ ರಾತ್ರಿ 11.59 ರವರೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ.**
7) ನೊಂದಣಿ ಶುಲ್ಕ, ದಾಖಲಾತಿ ಪರಿಶೀಲನೆಯ ವೇಳಾಪಟ್ಟಿ, ದಾಖಲಾತಿ ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲಾತಿಗಳು, ಹಾಗೂ ಇತರೆ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿಕೊಂಡು ನೊಂದಣಿ ಮಾಡಿ, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ದಾಖಲಾತಿ ಪರಿಶೀಲನೆಗೆ ಹಾಜರಾಗಬಹುದು.

ನೊಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವ ಕರ್ನಾಟಕದ ಅಭ್ಯರ್ಥಿಗಳಿಗೆ ಮಾಹಿತಿ

ಈಗಾಗಲೇ ಯುಜಿಸಿಇಟಿ–2022ಕ್ಕೆ ನೊಂದಣಿ ಮಾಡಿ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವವರು, ವೈದ್ಯಕೀಯ / ದಂತವೈದ್ಯಕೀಯ / ಆಯುಷ್ ಕೋರ್ಸುಗಳ ಪ್ರವೇಶಾತಿಗಾಗಿ ಕೆಇಎ ವೆಬ್‌ಪೋರ್ಟಲ್‌ನಲ್ಲಿ ಯುಜಿಸಿಇಟಿ–2022ಕ್ಕೆ ದಾಖಲಿಸಿದ್ದ USER ID ಮತ್ತು ಪಾಸ್‌ವರ್ಡ್ ದಾಖಲಿಸಿ, ಯುಜಿನೀಟ್ 2022ರ ರೋಲ್ ನಂಬರ್ ಅನ್ನು ನೊಂದಣಿಯಲ್ಲಿ ದಾಖಲಿಸಿ, OTP ಯನ್ನು ದಾಖಲಿಸಿ. ನಂತರ ಶುಲ್ಕವನ್ನು ಪಾವತಿಸಿ, ಅರ್ಜಿಯಲ್ಲಿನ ಮಾಹಿತಿಗಳನ್ನು ಪೂರ್ಣಗೊಳಿಸಿ, ಡಿಕ್ಲರೇಶನ್ ಮಾಡಬೇಕು. ತದ ನಂತರ ಅರ್ಜಿ ನಮೂನೆಯ ಮುದ್ರಿತ ಪ್ರತಿ ಪ್ರಿಂಟ್ ತೆಗೆದುಕೊಂಡು ಅರ್ಜಿಯಲ್ಲಿ ಮುದ್ರಿತವಾಗಿರುವ ನೀಟ್ ರೋಲ್ ನಂಬರ್ ಅನ್ನು ಪರಿಶೀಲಿಸಿಕೊಳ್ಳಿ.

- ಯುಜಿಸಿಇಟಿ–2022 ರಲ್ಲಿ ರ‍್ಯಾಂಕ್ ಅನ್ನು ಪಡೆದು ಸಿಇಟಿ–2006ರ ನಿಯಮದಂತೆ ಈಗಾಗಲೇ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿ, ಯುಜಿನೀಟ್ ಗಾಗಿ ಯಾವುದೇ ಬದಲಾವಣೆಯನ್ನು ಅರ್ಜಿಯಲ್ಲಿ ಮಾಡದಿರುವವರು ಅಥವಾ ಹೆಚ್ಚುವರಿಯಾಗಿ ಕ್ಲೇಮ್ ಮಾಡದಿರುವವರು, ವೈದ್ಯಕೀಯ / ದಂತವೈದ್ಯಕೀಯ ಕೋರ್ಸುಗಳಿಗೆ ಮತ್ತೊಮ್ಮೆ ದಾಖಲೆಗಳ ಪರಿಶೀಲನೆಗೆ ಹಾಜರಾಗುವಂತಿಲ್ಲ, ಆದರೆ ನಿಗದಿ ಪಡಿಸುವ ದಿನಾಂಕಗಳಂದು UG NEET-2022 Verification Slip ಅನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು.
- CET-2006 ನಿಯಮಗಳ ಅನ್ವಯ ಒಂದು ವೇಳೆ ಮೀಸಲಾತಿಗೆ ಸಂಬಂಧಿಸಿದ ಬದಲಾವಣೆ ಮಾಡಿಕೊಂಡಲ್ಲಿ ಅಥವಾ Linguistic Minority ಸೀಟುಗಳನ್ನು ಅಥವಾ Religious Minority ಅಥವಾ NRI Ward ಸೀಟುಗಳನ್ನು ಅಥವಾ St. John Medical College, Bangalore, (Category-2 to Category-8) ನಲ್ಲಿರುವ ನಿರ್ದಿಷ್ಟ ಸೀಟುಗಳನ್ನು ಪಡೆಯಲು ಅರ್ಹರಿದ್ದಲ್ಲಿ ಕೆಇಎ ವೆಬ್‌ಪೋರ್ಟಲ್ ನಲ್ಲಿ ನಿಗದಿತ ಲಿಂಕ್ ಅನ್ನು ಆಯ್ಕೆ ಮಾಡಿ, ಕ್ಲೇಮ್ ಮಾಡಿ, ನಂತರ ಕ್ಲೇಮ್‌ಗೆ ಸಂಬಂಧಿಸಿದ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ನಿಗದಿತ ದಿನಾಂಕಗಳಂದು ಪರಿಶೀಲನೆಗೆ ಹಾಜರಾಗಬೇಕು.

ಕರ್ನಾಟಕೇತರ ಅಭ್ಯರ್ಥಿಗಳಿಗೆ ಮಾಹಿತಿ

ಕರ್ನಾಟಕೇತರ ಅಭ್ಯರ್ಥಿಗಳು, ಯುಜಿನೀಟ್ 2022 ರಲ್ಲಿ ಅರ್ಹತೆಯನ್ನು ಪಡೆದಿದ್ದರೆ, ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಾತಿಗಾಗಿ, ಅಭ್ಯರ್ಥಿಗಳು ಮೊದಲು ಕೆಇಎ ವೆಬ್‌ಪೋರ್ಟಲ್ ನಲ್ಲಿ ನೊಂದಣಿ ಮಾಡಿ, ಶುಲ್ಕವನ್ನು ಪಾವತಿಸಬೇಕು. ನಂತರ 12ನೇ ತರಗತಿಯ ಅಂಕಗಳನ್ನು ಕೆಇಎ ಪೋರ್ಟಲ್ ನಲ್ಲಿ ದಾಖಲಿಸಿ ಅಂಕಪಟ್ಟಿಯನ್ನು upload ಮಾಡಬೇಕು. ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಅವಶ್ಯಕತೆ ಇರುವುದಿಲ್ಲ.

ಆದರೆ OCI / PIO / NRI / Foreign Nationals ಅಭ್ಯರ್ಥಿಗಳು, ಕರ್ನಾಟಕೇತರ ಅಭ್ಯರ್ಥಿಗಳು Religious Minority or NRI Ward seats ಸೀಟುಗಳನ್ನು ಅಥವಾ St. John Medical College, Bangalore, (Category-2 to Category-8) ನಲ್ಲಿ ನಿರ್ದಿಷ್ಟ ಸೀಟುಗಳನ್ನು ಪಡೆಯಲು ಅರ್ಹರಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಮಾತ್ರ ನಿಗದಿತ ದಿನಾಂಕಗಳಂದು ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕು.

8) 2022–23ನೇ ಸಾಲಿಗೆ ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ವೈದ್ಯಕೀಯ / ದಂತವೈದ್ಯಕೀಯ ಕಾಲೇಜುಗಳಲ್ಲಿನ ವೈದ್ಯಕೀಯ ದಂತವೈದ್ಯಕೀಯ ಕೋರ್ಸುಗಳು, ಖಾಸಗಿ ಮತ್ತು ಅಲ್ಪ ಸಂಖ್ಯಾತ ವೈದ್ಯಕೀಯ / ದಂತ ವೈದ್ಯಕೀಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟದ ಸೀಟುಗಳು, ಖಾಸಗಿ ವೈದ್ಯಕೀಯ / ದಂತ ವೈದ್ಯಕೀಯ (KPCF, KRLMPCA, AMPCK) ಸೀಟುಗಳಿಗೆ Karnataka Selection of Candidates for Admission to Government Seats in Professional Educational Institutions Rules, 2006 as amended from time to time ಹಾಗೂ as per the guidelines of MCI / DCI / Ministry of Health and Family Welfare, GOI / Government of India / Director Medical Education, Karnataka / Entrance Test Committee ಅನ್ವಯ KPCF, KRLMPCA, AMPCK ಕಾಲೇಜುಗಳಿಗೆ ಸರ್ಕಾರವು ನಿಗದಿಪಡಿಸುವ ಸೀಟುಗಳಿಗೆ ಏಕರೂಪದ ಕೌನ್ಸಿಲಿಂಗ್ ಅನ್ನು ನಡೆಸಲಾಗುವುದು.
9) UG-NEET-2022 ರಲ್ಲಿ ಅರ್ಹತೆಯನ್ನು ಪಡೆದ ಮಾತ್ರಕ್ಕೆ, ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ / ನಿಗದಿತ ಪ್ರಮಾಣ ಪತ್ರಗಳನ್ನು ಸಲ್ಲಿಸದಿದ್ದಲ್ಲಿ ಅಭ್ಯರ್ಥಿಯು ಯಾವುದೇ ಹಕ್ಕನ್ನು ಹೊಂದುವುದಿಲ್ಲ.
10) ಮುಂದುವರಿದು, ನೊಂದಣಿ ಮಾಡಿಕೊಂಡು ದಾಖಲಾತಿ ಪರಿಶೀಲನೆಯನ್ನು ಯಶಸ್ವಿಯಾಗಿ ಪೂರೈಸುವ ಅಭ್ಯರ್ಥಿಗಳು ಮಾತ್ರ ಕರ್ನಾಟಕದಲ್ಲಿನ ಸರ್ಕಾರಿ / ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ / ದಂತ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ. ನೊಂದಣಿ ಮಾಡದಿರುವ ಅಥವಾ ನೊಂದಣಿ ಮಾಡಿ ದಾಖಲಾತಿಗಳನ್ನು ಪರಿಶೀಲಿಸಿಕೊಳ್ಳದೆ ಇರುವ ಅಭ್ಯರ್ಥಿಗಳು ಪ್ರಾಧಿಕಾರದಿಂದಾಗಲೀ ಅಥವಾ ಕಾಲೇಜುಗಳಿಂದಾಗಲೀ ಸೀಟುಗಳನ್ನು ತೆಗೆದುಕೊಳ್ಳಲು ಅನುಮತಿಸಲಾಗುವುದಿಲ್ಲ, mop-up ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಯಬಹುದಾದ ಸೀಟುಗಳನ್ನು ಆಯಾ ಕಾಲೇಜುಗಳಿಗೆ ವರ್ಗಾಯಿಸಲಾಗುತ್ತದೆ. ಈ ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು, ಪ್ರಾಧಿಕಾರವು ಕಳುಹಿಸುವ ನೊಂದಣಿ ಮಾಡಿಕೊಂಡು ದಾಖಲಾತಿ ಪರಿಶೀಲನೆಯನ್ನು ಮಾಡಿಸಿದ ಆದರೆ ಯಾವುದೇ ಸೀಟುಗಳನ್ನು ಹಂಚಿಕೆ ಪಡೆಯದೇ ಇರುವ ಅಭ್ಯರ್ಥಿಗಳ ಪಟ್ಟಿಯ ಅನುಕ್ರಮದಂತೆ ಕಾಲೇಜುಗಳಲ್ಲಿ ಸೀಟುಗಳನ್ನು ಭರ್ತಿಮಾಡಿಕೊಳ್ಳಲಾಗುತ್ತದೆ. (ಭಾರತ ಸರ್ಕಾರದ ಸೂಚನೆಗಳ ಅನ್ವಯ)

ಸೂಚನೆ: UG-NEET-2022 ರಲ್ಲಿ ಅರ್ಹತೆ ಪಡೆದ ಎಲ್ಲಾ ಅಭ್ಯರ್ಥಿಗಳು ಕರ್ನಾಟಕ ರಾಜ್ಯದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶ ಪಡೆಯಲು ಅರ್ಹರಾಗಲು ಆನ್‌ಲೈನ್ ಮೂಲಕ ನೊಂದಾಯಿಸಿಕೊಳ್ಳಲು ಮತ್ತು ದಾಖಲೆಗಳ ಪರಿಶೀಲನಾ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಸೂಚಿಸಿದೆ.

ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್: **http://kea.kar.nic.in** ಗಮನಿಸಲು ಕೋರಿದೆ.

ಸಹಿ/–
(ಎಸ್. ರಮ್ಯ, ಭಾ.ಆ.ಸೇ)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/2596/2022–23



ಸಲ್ವಾರ್ ಸೂಟ್‌ಗಳು • ಸೀರೆಗಳು • ಕುರ್ತಾಗಳು • ಕುರ್ತಾ ಸೆಟ್‌ಗಳು • ಡ್ರೆಸ್ ಮೆಟೀರಿಯಲ್‌ಗಳು • ಟ್ಯೂನಿಕ್‌ಗಳು • ಕಫ್ತಾನ್‌ಗಳು

ಬೆಂಗಳೂರು: ಈಗ ಎಲೆಕ್ಟ್ರಾನಿಕ್ ಸಿಟಿ, ನೀಲಾದ್ರಿ ರಸ್ತೆ | ಜಿ. ಟಿ. ವರ್ಲ್ಡ್ ಮಾಲ್, ಮಾಗಡಿ ರಸ್ತೆ ರಲ್ಲಿ | ಬಸವೇಶ್ವರ ನಗರ | ಬಿಇಎಲ್ ರಸ್ತೆ | ಬ್ರಿಗೇಡ್ ಒರಾಯನ್ ಮಾಲ್ ಕಮರ್ಷಿಯಲ್ ಸ್ಟ್ರೀಟ್ – 01 | ಕಮರ್ಷಿಯಲ್ ಸ್ಟ್ರೀಟ್ – 02 | ಕಾಸ್ಮೋಸ್ ಮಾಲ್ ಎಲಿಮೆಂಟ್ಸ್ ಮಾಲ್ | ಗರುಡ ಮಾಲ್ | ಹೆಚ್ ಎಸ್ ಆರ್ ಬಡಾವಣೆ ಇಂದಿರಾನಗರ (100 ಅಡಿ ರಸ್ತೆ) | ಜೆ.ಪಿ. ನಗರ | ಜಯನಗರ 4ನೇ ಬ್ಲಾಕ್ – 01 | ಜಯನಗರ 4ನೇ ಬ್ಲಾಕ್ – 02 | ಕಮ್ಮನಹಳ್ಳಿ | ಕತ್ರಿಗುಪ್ಪೆ | ಕೆಂಪ್ ಫೋರ್ಟ್ ಮಾಲ್ ಕೋರಮಂಗಲ (80 ಅಡಿ ರಸ್ತೆ) | ಲುಲು ಇಂಟರ್‌ನ್ಯಾಷನಲ್ ಶಾಪಿಂಗ್ ಮಾಲ್ | ಎಂ.ಜಿ.ರಸ್ತೆ | ಮಂತ್ರಿ ಮಾಲ್ | ಮಾರತಹಳ್ಳಿ | ನೆಕ್ಸಸ್ ಕೋರಮಂಗಲ (ಫೋರಂ ಮಾಲ್) ನೆಕ್ಸಸ್ ಶಾಂತಿನಿಕೇತನ್ ಮಾಲ್ | ನೆಕ್ಸಸ್ ವೈಟ್‌ಫೀಲ್ಡ್ (ನೈಬರ್‌ಹುಡ್ ಮಾಲ್) | ಒರಾಯನ್ ಈಸ್ಟ್ ಮಾಲ್ | ಫೀನಿಕ್ಸ್ ಮಾರ್ಕೆಟ್ ಸಿಟಿ | ಆರ್.ಟಿ.ನಗರ | ರಾಜರಾಜೇಶ್ವರಿ ನಗರ ರಾಚೇನ ಹಳ್ಳಿ ಮುಖ್ಯ ರಸ್ತೆ | ಆರ್ ಎಂ ಜೆಡ್ ಗಲೆರಿಯಾ ಮಾಲ್ | ರಾಯಲ್ ಮೀನಾಕ್ಷಿ ಮಾಲ್ | ಸಹಾಕಾರ ನಗರ | ಶಿವಾಜಿನಗರ ಟೋಟಲ್ ಮಾಲ್ (ಮಾರ್ಕೆಟ್ ಸ್ಕ್ವೇರ್, ಸರ್ಜಾಪುರ ರಸ್ತೆ) | ವೇಗಾ ಸಿಟಿ ಮಾಲ್ | **ತುಮಕೂರು:** ಎಂ.ಜಿ.ರಸ್ತೆ, ಹಟ್ ಹೋಟೆಲ್ ಕೆಳಗೆ | ಎಂ.ಜಿ.ರಸ್ತೆ, ರಾಥೋಡ್ ಕಾಂಪ್ಲೆಕ್ಸ್
sochstories ನಲ್ಲಿ ನಮ್ಮನ್ನು ಫಾಲೋ ಮಾಡಿ | ಸೋಚ್ ನೊಂದಿಗೆ ಫ್ರ್ಯಾಂಚೈಸಿಂಗ್ ಅವಕಾಶಗಳಿಗಾಗಿ franchise@soch.com ಗೆ ಇಮೇಲ್ ಮಾಡಿ



15 ಕಿಲೋ ಮೀಟರ್ ಉದ್ದದ ರೈಲು ಮಾರ್ಗ: ಅಂಜುಂ ಪರ್ವೇಜ್ ಪರಿಶೀಲನೆ

ವೈಟ್‌ಫೀಲ್ಡ್: ಅಂತಿಮ ಹಂತಕ್ಕೆ ಕಾಮಗಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಅಂತಿಮ ಹಂತ ತಲುಪಿದ್ದು, 2023ರ ಫೆಬ್ರುವರಿಯಲ್ಲಿ ರೈಲು ಸಂಚಾರ ಆರಂಭಿಸಲು ಬಿಎಂಆರ್‌ಸಿಎಲ್ ಸಿದ್ಧತೆ ನಡೆಸುತ್ತಿದೆ.

ರೈಲುಗಳು ಸಾಗುವ ಹಳಿಗಳು ಮತ್ತು ವಿದ್ಯುತ್ ಪ್ರವಹಿಸುವ ಹಳಿ (ಥರ್ಡ್ ರೈಲ್) ಜೋಡಣೆ ಕಾರ್ಯ ಮುಕ್ತಾಯಗೊಂಡಿದೆ. ಇವುಗಳ ಮೇಲೆ ರೈಲುಗಾಡಿಗಳ ಸಂಚಾರವನ್ನು ಪರೀಕ್ಷಾರ್ಥ ಆರಂಭಿಸುವುದು ಬಾಕಿ ಇದೆ. ಪರೀಕ್ಷಾರ್ಥ ಸಂಚಾರ 15 ದಿನ ಪೂರ್ಣಗೊಂಡ ಬಳಿಕ ರೈಲ್ವೆ ಸುರಕ್ಷತಾ ಆಯುಕ್ತರಿಂದ ಪರಿಶೀಲನೆ ನಡೆಯಬೇಕಿದೆ. ಆ ಬಳಿಕ ಪ್ರಯಾಣಿಕರ ಸಂಚಾರ ಆರಂಭವಾಗಲಿದೆ.

ನಿಲ್ದಾಣಗಳನ್ನು ನಿರ್ಮಿಸುವ ಕಾಮಗಾರಿ ಭರದಿಂದ ಸಾಗಿದೆ. ಈ ಎಲ್ಲಾ ಕಾಮಗಾರಿಗಳನ್ನು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಮತ್ತು ರೈಲ್ವೆ ಸುರಕ್ಷತಾ ಎಂಜಿನಿಯರಿಂಗ್ ವಿಭಾಗದ ನಿರ್ದೇಶಕ ಎನ್‌.ಎಂ.ಧೋಕೆ ಅವರು ಗುರುವಾರ ಮೋಟರ್ ಟ್ರ್ಯಾಲಿ ಮೂಲಕ ಸಂಚರಿಸಿ ಪರಿಶೀಲನೆ ನಡೆಸಿದರು.

ವೈಟ್‌ಫೀಲ್ಡ್ ಮೆಟ್ರೊ ರೈಲು ನಿಲ್ದಾಣದಿಂದ ಗರುಡಾಚಾರ್ ಪಾಳ್ಯದ ತನಕ ಸಂಚರಿಸಿದರು. ಅಲ್ಲಲ್ಲಿ ನಿಲ್ದಾಣಗಳ ಕಾಮಗಾರಿ ಪರಿವೀಕ್ಷಣೆ ನಡೆಸಿ, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. 2023ರ ಫೆಬ್ರುವರಿ ಮೊದಲ ವಾರದಲ್ಲಿ ರೈಲ್ವೆ ಸುರಕ್ಷತಾ ಆಯುಕ್ತರನ್ನು ಪರಿಶೀಲನೆಗೆ ಆಹ್ವಾನಿಸಬೇಕಿದೆ ಅಷ್ಟರಲ್ಲಿ ಎಲ್ಲಾ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ಬಾಕಿ ಇರುವ ನಿಲ್ದಾಣಕ್ಕೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ವೇಗವಾಗಿ ಕೈಗೊಳ್ಳಬೇಕು. ಜನವರಿ ಅಂತ್ಯದ ವೇಳೆಗೆ ಎಲ್ಲಾ ಕಾಮಗಾರಿಯೂ ಪೂರ್ಣಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಅಂಜುಂ ಪರ್ವೇಜ್ ಸೂಚನೆ ನೀಡಿದರು.

ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ತನಕ 15.50 ಕಿ.ಮೀ. ಉದ್ದದ ರೈಲು ಮಾರ್ಗದಲ್ಲಿ 13 ನಿಲ್ದಾಣಗಳು ನಿರ್ಮಾಣವಾಗುತ್ತಿವೆ. ವೈಟ್‌ಫೀಲ್ಡ್ ತನಕ ರೈಲುಗಳ ಸಂಚಾರ ಆರಂಭವಾದರೆ ಐ.ಟಿ ಕಾರಿಡಾರ್‌ಗೆ ನಗರದ ವಿವಿಧೆಡೆಯಿಂದ ಸಂಪರ್ಕ ಕಲ್ಪಿಸಿದಂತೆ ಆಗಲಿದೆ. ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆಯೂ ದುಪ್ಪಟ್ಟಾಗುವ ಸಾಧ್ಯತೆ ಇದೆ ಎಂಬುದು ಬಿಎಂಆರ್‌ಸಿಎಲ್ ಅಧಿಕಾರಿಗಳ ಲೆಕ್ಕಾಚಾರ.



ರೈಲ್ವೆ ಸುರಕ್ಷತಾ ಎಂಜಿನಿಯರಿಂಗ್ ವಿಭಾಗದ ನಿರ್ದೇಶಕ ಎನ್‌.ಎಂ.ಧೋಕೆ ಮತ್ತು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರು ವೈಟ್‌ಫೀಲ್ಡ್‌ನಿಂದ ಗರುಡಾಚಾರ್ ಪಾಳ್ಯದ ತನಕ ಟ್ರ್ಯಾಲಿಯಲ್ಲಿ ಸಂಚರಿಸಿ ಕಾಮಗಾರಿ ಪರಿಶೀಲಿಸಿದರು

ಅಕ್ಟೋಬರ್ 25ರಿಂದ ಪರೀಕ್ಷಾರ್ಥ ಸಂಚಾರಕ್ಕೆ ಸಿದ್ಧತೆ

ಈ ನಡುವೆ ರೈಲುಗಳ ಪರೀಕ್ಷಾರ್ಥ ಸಂಚಾರವನ್ನು ಇದೇ 25ರಿಂದ ಆರಂಭಿಸಲು ಸಿದ್ಧತೆ ಭರದಿಂದ ಸಾಗಿದೆ. ರೈಲುಗಳ ಬೋಗಿಗಳನ್ನು ಟ್ರೈಲರ್‌ಗಳ ಮೂಲಕ ವೈಟ್‌ಫೀಲ್ಡ್ ಡಿಪೊಗೆ ಸಾಗಿಸಲಾಯಿತು.

ಬೆಮೆಲ್‌ನಿಂದ(ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್) ತರಿಸಿರುವ ಆರು ಬೋಗಿಗಳನ್ನು ವೈಟ್‌ಫೀಲ್ಡ್ ಡಿಪೊಗೆ ಸ್ಥಳಾಂತರ ಮಾಡಲಾಗಿದೆ. ಅವುಗಳನ್ನು ಜೋಡಣೆ ಮಾಡಿ ಪರೀಕ್ಷಾರ್ಥ ಸಂಚಾರ ಆರಂಭಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

> **ಟ್ರ್ಯಾಕ್ ಮೇಲೆ ಟ್ರ್ಯಾಲಿಯಲ್ಲಿ 13 ಕಿಲೋ ಮೀಟರ್ ಸಾಗಿ ಪರಿಶೀಲನೆ ನಡೆಸಿದ್ದೇವೆ. ನಿಲ್ದಾಣ ನಿರ್ಮಾಣ ಕಾಮಗಾರಿಗಳೂ ಭರದಿಂದ ಸಾಗಿವೆ. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ.**
> **ಅಂಜುಂ ಪರ್ವೇಜ್,** ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ

ನಗರದಲ್ಲಿ ಇಂದು

ವಿಶ್ವ ಮೊಟ್ಟೆ ದಿನಾಚರಣೆ: ಅತಿಥಿಗಳು: ಸಲ್ಮಾ ಕೆ. ಫಾಹಿಮ, ಶರತ್ ಬಿ., ಕೆ.ಎನ್. ಅನುರಾಧ, ಅಧ್ಯಕ್ಷತೆ: ಡಿ.ಕೆ. ಕಾಂತರಾಜು, ಆಯೋಜನೆ: ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ, ಸ್ಥಳ: ಕರ್ನಾಟಕ ಪಶುವೈದ್ಯಕೀಯ ಪರಿಷತ್ತು, ಹೆಬ್ಬಾಳ, ಬೆಳಿಗ್ಗೆ 11

ವಿಶೇಷ ಚೇತನರ ಮತ್ತು ಸಾಹಿತಿಗಳ ಸಾಹಿತ್ಯ ಸಮ್ಮಿಲನ, ಅಕಾಡೆಮಿಯ 55 ಪುಸ್ತಕಗಳ ಬಿಡುಗಡೆ: ಎಚ್‌.ಎಸ್. ಶಿವಪ್ರಕಾಶ, ಅತಿಥಿಗಳು: ಎ. ಮುರಿಗೆಪ್ಪ, ವಿ.ಎಸ್. ಮಾಳಿ, ದೇವರಕೊಂಡಾರೆಡ್ಡಿ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ, ಸ್ಥಳ: ಕರ್ನಾಟಕ ಕಲಾಗ್ರಾಮ, ಜ್ಞಾನಭಾರತಿ ಆವರಣ, ಮಲ್ಲತ್ತಹಳ್ಳಿ, 11

ಬುದ್ಧ ಮಂಟಪ, ಡಾ.ಬಿ.ಆರ್. ಅಂಬೇಡ್ಕರ್ ಮಂಟಪ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ವಸ್ತು ಸಂಗ್ರಹಾಲಯ ಕಟ್ಟಡಕ್ಕೆ ಶಂಕುಸ್ಥಾಪನೆ: ಉದ್ಘಾಟನೆ: ಥಾವರ್‌ಚಂದ್ ಗೆಹಲೋತ್, ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ರಾಮದಾಸ್ ಅಠವಳೆ, ಅತಿಥಿಗಳು: ಕೋಟ ಶ್ರೀನಿವಾಸ ಪೂಜಾರಿ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ ಮತ್ತು ಸ್ಥಳ: ನಾಗಸೇನಾ ವಿದ್ಯಾಲಯ, ಸದಾಶಿವನಗರ, ಮಧ್ಯಾಹ್ನ 12



ಶ್ರೀಚರಿತಾ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಶ್ರೀಚರಿತಾ ಸಿ. ಗಂಗಟಕರ್, ಅತಿಥಿಗಳು: ಮಂಜುಳಾ ಪರಮೇಶ್, ವೀಣಾಮೂರ್ತಿ ವಿಜಯ, ಆಯೋಜನೆ: ನಾಟ್ಯನಿಂದ ನೃತ್ಯಾಲಯ ಟ್ರಸ್ಟ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ ರಸ್ತೆ, ಸಂಜೆ 6

ಎಂ.ಎ. ರಾಮಾನುಜ ಅಯ್ಯಂಗಾರ್ ದತ್ತಿ ಕಾರ್ಯಕ್ರಮ: ವಿಷಯ: ಕೆ.ಜಿ. ಕುಂದಣಗಾರರ ಬದುಕು, ಸಾಧನೆ: ಉಪನ್ಯಾಸ: ಚಂದ್ರಶೇಖರ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎಂ.ವಿ.ಸೀ., ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಸಂಜೆ 5

ಯೂಸುಫ್ ಅರಕ್ಕಲ್ ಅವರು ರಚಿಸಿರುವ 'ಸಾಲಿಟ್ಯೂಡ್ ಆ್ಯಂಡ್ ಹ್ಯುಮ್ಯಾನಿಟಿ' ಚಿತ್ರಗಳ ಪ್ರದರ್ಶನ: ಅತಿಥಿಗಳು: ಚಿರಂಜೀವಿ ಸಿಂಗ್, ಅರುಂಧತಿ ನಾಗ್, ಎಂ.ಜೆ. ಕಮಲಾಕ್ಷಿ, ಆಯೋಜನೆ: ಕೇಂದ್ರ ಸಂಸ್ಕೃತಿ ಸಚಿವಾಲಯ, ಸ್ಥಳ: ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ಬೆಂಗಳೂರು, ಮಾಣಿಕ್ಯವೇಲು ಮ್ಯಾನ್ಶನ್, ಅರಮನೆ ರಸ್ತೆ, ಸಂಜೆ 5.30

ಕಲಾ ರಂಗೋತ್ಸವ: ಉದ್ಘಾಟನೆ: ರವಿ ಸುಬ್ರಹ್ಮಣ್ಯ, ಅತಿಥಿಗಳು: ಎಂ. ನರಸಿಂಹಮೂರ್ತಿ, ಅನಂತಕೃಷ್ಣ, ನಟರಾಜ್ ಶರ್ಮಾ, ಆಯೋಜನೆ: ಕಲಾರಂಗಲೋಕ, ಸ್ಥಳ: ಉದಯಭಾನು ಕಲಾಸಂಘ, ಗವಿಪುರ ಗುಟ್ಟಹಳ್ಳಿ, ಕೆ.ಜಿ. ನಗರ, ಸಂಜೆ 6

'ನವಿಲು ಪುರಾಣ' ನಾಟಕ ಪ್ರದರ್ಶನ: ರಚನೆ: ಕೆ.ಈ. ರಾಧಾಕೃಷ್ಣ, ನಿರ್ದೇಶನ: ಸುರೇಶ ಆನಗಳ್ಳಿ, ಆಯೋಜನೆ: ಅನೇಕ ಅಭಿನಯಿಸುವ, ಸ್ಥಳ: ಕಲಾಗ್ರಾಮ ರಂಗಮಂದಿರ, ಮಲ್ಲತ್ತಹಳ್ಳಿ, ಸಂಜೆ 7

'ಎಫ್‌ಟಿಎ'ಗೆ ಹಿನ್ನಡೆ ಆತಂಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ ಮತ್ತು ಬ್ರಿಟನ್ 'ಮುಕ್ತ ವ್ಯಾಪಾರ ಒಪ್ಪಂದ'ಕ್ಕೆ (ಎಫ್‌ಟಿಎ) ಸಹಿ ಹಾಕಬೇಕಿವೆ. ಆದರೆ, ನೂತನ ಗೃಹ ಕಾರ್ಯದರ್ಶಿ ಸುಯೆಲ್ಲಾ ಬ್ರೇವರ್‌ಮನ್ ಅವರು ಇತ್ತೀಚೆಗೆ ನೀಡಿರುವ ಹೇಳಿಕೆಯು ಉದ್ದೇಶಿತ ಈ ಒಪ್ಪಂದದ ಮೇಲೆ ಪರಿಣಾಮ ಬೀರುವ ಆತಂಕ ಸೃಷ್ಟಿಸಿದೆ.

'ಉದ್ದೇಶಿತ ಒಪ್ಪಂದದಿಂದಾಗಿ ಬ್ರಿಟನ್‌ಗೆ ವಲಸೆ ಬರುವ ಭಾರತೀಯರ ಸಂಖ್ಯೆ ಹೆಚ್ಚಾಗಲಿದೆ. ಇದು ಕಳವಳಕಾರಿ' ಎಂದು ಬ್ರೇವರ್‌ಮನ್ ಇತ್ತೀಚೆಗೆ ಹೇಳಿದ್ದರು. ಇದಕ್ಕೆ ಆಕ್ಷೇಪಿಸಿದ್ದ ಭಾರತ, 'ಇಂಥ ಹೇಳಿಕೆಗಳು ದ್ವಿಪಕ್ಷೀಯ ಸಂಬಂಧದ ಮೇಲೆ ಪರಿಣಾಮ ಬೀರುತ್ತವೆ' ಎಂದಿತ್ತು. ಇದರ ಬೆನ್ನಲ್ಲೇ, 'ಭಾರತದೊಂದಿಗೆ ಉತ್ತಮ ವ್ಯಾಪಾರ ಸಂಬಂಧ ಹೊಂದಲು ಬ್ರಿಟನ್ ಉತ್ಸುಕವಾಗಿದೆ' ಎಂದು ವಿದೇಶಾಂಗ ಕಾರ್ಯದರ್ಶಿ ಜೇಮ್ಸ್ ಕ್ಲೆವರ್ಲಿ ಗುರುವಾರ ಹೇಳಿದ್ದಾರೆ.

ವಿಳಂಬ: ಭಾರತಕ್ಕೆ ಭೇಟಿ ನೀಡಬಯಸುವ ಬ್ರಿಟನ್ ಪ್ರಜೆಗಳು, ಸಕಾಲದಲ್ಲಿ ವೀಸಾ ಸಿಗದೇ ತೊಂದರೆ ಅನುಭವಿಸುವಂತಾಗಿದೆ. 'ಈ ಸಮಸ್ಯೆಯನ್ನು ಶೀಘ್ರವೇ ಬಗೆಹರಿಸಲಾಗುವುದು' ಎಂದು ಬ್ರಿಟನ್‌ನಲ್ಲಿನ ಭಾರತೀಯ ಹೈಕಮಿಷನರ್ ವಿಕ್ರಮ್ ದೊರೈಸ್ವಾಮಿ ಹೇಳಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

'ಕ್ರೀಡೆಯನ್ನು ಯುದ್ಧದಂತೆ ಬಿಂಬಿಸಲಾಗುತ್ತಿದೆ'

ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶ, ಭಾಷೆಯನ್ನು ಮೀರಿ ಜನರನ್ನು ಒಗ್ಗೂಡಿಸುವ ಶಕ್ತಿ ಕ್ರೀಡೆಗೆ ಇದೆ. ಆದರೆ, ಇತ್ತೀಚಿನ ದಿನಗಳಲ್ಲಿ ಕ್ರೀಡೆಯನ್ನು ಯುದ್ಧದಂತೆ ಬಿಂಬಿಸಲಾಗುತ್ತಿದೆ. ಯುದ್ಧವನ್ನು ಕ್ರೀಡೆಯಂತೆ ನಡೆಸಲಾಗುತ್ತಿದೆ' ಎಂದು ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ್ ಗುರೂಜಿ ಬೇಸರ ವ್ಯಕ್ತಪಡಿಸಿದರು.

ವರ್ಲ್ಡ್ ಫೋರಂ ಫಾರ್ ಎಥಿಕ್ಸ್ ಬಿಸಿನೆಸ್ ಹಾಗೂ ಆರ್ಟ್ ಆಫ್ ಲಿವಿಂಗ್ ಸಂಸ್ಥೆ ಜಂಟಿಯಾಗಿ ನಗರದಲ್ಲಿ ಗುರುವಾರ ಆಯೋಜಿಸಿದ 'ಕ್ರೀಡೆಯಲ್ಲಿ ನಾಯಕತ್ವ ಮತ್ತು ನೀತಿ ಸಂಹಿತೆ' ಕುರಿತಾದ 6ನೇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ, ಮಾತನಾಡಿದರು.

'ನಮ್ಮಲ್ಲಿ ಕ್ರೀಡೆಯನ್ನು ವೃತ್ತಿಯಾಗಿ ಸ್ವೀಕರಿಸುವವರ ಸಂಖ್ಯೆ ಕಡಿಮೆಯಿದೆ. ಕ್ರೀಡಾಪಟು ತಾನು ಸಂತೋಷವಾಗಿದ್ದರೆ ಮಾತ್ರ ಬೇರೆಯವರನ್ನೂ ಆಟದ ಮೂಲಕ ರಂಜಿಸಲು ಸಾಧ್ಯ. ಕ್ರೀಡಾಪಟುಗಳಿಗೆ ಮಾನಸಿಕ ಸದೃಢತೆಯೂ ಮುಖ್ಯವಾಗುತ್ತದೆ. ಕಳೆದ 8–10 ವರ್ಷಗಳಿಂದ ಕ್ರೀಡೆಗೆ ಕೇಂದ್ರ ಸರ್ಕಾರವು ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ' ಎಂದು ಹೇಳಿದರು.

ಅಗತ್ಯ ಪ್ರೋತ್ಸಾಹ: ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, 'ಕ್ರೀಡೆಯಲ್ಲಿ ಗೆಲುವು, ಸೋಲಿಗಿಂತ ಭಾಗವಹಿಸುವಿಕೆ ಮುಖ್ಯ. ಆದ್ದರಿಂದಲೇ 'ಖೇಲೋ ಇಂಡಿಯಾ' ಕಾರ್ಯಕ್ರಮದ ಮೂಲಕ ದೇಶದಾದ್ಯಂತ ಕ್ರೀಡಾಕೂಟಗಳನ್ನು ನಡೆಸಿ, ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸಲಾಯಿತು. ದೇಶದಲ್ಲಿ ಕ್ರಿಕೆಟ್ ಆಟಗಾರರು ಹೆಚ್ಚಿನ ವೇತನವನ್ನು ಪಡೆಯುತ್ತಾರೆ. ಇದಕ್ಕೆ ದೊಡ್ಡ ಸಂಖ್ಯೆಯ ವೀಕ್ಷಕರೇ ಮುಖ್ಯ ಕಾರಣ. ಕಬಡ್ಡಿ ಹೊರತುಪಡಿಸಿದರೆ ಉಳಿದ ಲೀಗ್‌ಗಳು ಯಶಸ್ಸು ಸಾಧಿಸಲಿಲ್ಲ. ಕ್ರೀಡಾ ಕ್ಷೇತ್ರ ಬೆಳವಣಿಗೆ ಹೊಂದಲು ಜನರ ಪಾತ್ರವೂ ಮುಖ್ಯ' ಎಂದು ಹೇಳಿದರು.

'ಇತ್ತೀಚಿನ ವರ್ಷಗಳಲ್ಲಿ ದೇಶವು ಕ್ರೀಡಾ ಕ್ಷೇತ್ರದಲ್ಲಿ ಪ್ರಾಬಲ್ಯ ಹೆಚ್ಚಿಸಿಕೊಳ್ಳುತ್ತಿದೆ. ಕ್ರೀಡಾಪಟುಗಳಿಗೆ ಅಗತ್ಯ ಸೌಲಭ್ಯ, ಪ್ರೋತ್ಸಾಹ ಹಾಗೂ ತರಬೇತಿ ಒದಗಿಸಲಾಗುತ್ತಿದೆ. ಈ ಹಿಂದೆ ಕ್ರೀಡಾಪಟುಗಳಿಗೆ ಶೂ, ಸಮವಸ್ತ್ರ ಸೇರಿ ಅಗತ್ಯ ಮೂಲಸೌಕರ್ಯಗಳನ್ನೂ ನೀಡಲಾಗುತ್ತಿರಲಿಲ್ಲ. ಇದರಿಂದ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ವಿದೇಶಿ ಕ್ರೀಡಾಪಟುಗಳನ್ನು ನೋಡುತ್ತಿದ್ದಂತೆ ನಮ್ಮವರು ಆತ್ಮಸ್ಥೈರ್ಯ ಕಳೆದುಕೊಳ್ಳುತ್ತಿದ್ದರು' ಎಂದರು.



ಸಮ್ಮೇಳನದಲ್ಲಿ ಭಾರತದ ಹಾಕಿ ತಂಡದ ಮಾಜಿ ನಾಯಕರೂ ಆಗಿರುವ ಹರಿಯಾಣದ ಕ್ರೀಡಾ ಸಚಿವ ಸಂದೀಪ್ ಸಿಂಗ್ ಅವರಿಗೆ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು 'ಎಥಿಕ್ಸ್ ಇನ್ ಸ್ಪೋರ್ಟ್ಸ್' ಪ್ರಶಸ್ತಿ ಪ್ರದಾನ ಮಾಡಿದರು. ಪಂಕಜ್ ಅಡ್ವಾಣಿ, ಸಮ್ಮೇಳನದ ಸಂಚಾಲಕಿ ರಜಿತಾ ಕುಲಕರ್ಣಿ ಹಾಗೂ ಕೇಂದ್ರ ಸಚಿವ ಕಿರಣ್ ರಿಜಿಜು ಇದ್ದಾರೆ. –ಪ್ರಜಾವಾಣಿ ಚಿತ್ರ

ಸಂದೀಪ್ ಸಿಂಗ್ ಸೇರಿ ಐವರಿಗೆ 'ಎಥಿಕ್ಸ್ ಇನ್ ಸ್ಪೋರ್ಟ್ಸ್' ಪ್ರಶಸ್ತಿ

ಸಮ್ಮೇಳನದಲ್ಲಿ 'ಎಥಿಕ್ಸ್ ಇನ್ ಸ್ಪೋರ್ಟ್ಸ್' ಪ್ರಶಸ್ತಿ ನೀಡಲಾಯಿತು. ಕ್ರೀಡಾ ಕ್ಷೇತ್ರದಲ್ಲಿ ಮಾನವೀಯ ಮೌಲ್ಯಗಳು ಹಾಗೂ ನೈತಿಕತೆಯ ಪ್ರಾಮುಖ್ಯ ಸಾರುವ ತಂಡ ಹಾಗೂ ವ್ಯಕ್ತಿಗೆ ವರ್ಲ್ಡ್ ಫೋರಂ ಫಾರ್ ಎಥಿಕ್ಸ್ ಬಿಸಿನೆಸ್ ಸಂಸ್ಥೆಯು ಈ ಪ್ರಶಸ್ತಿಯನ್ನು ನೀಡುತ್ತಿದೆ. ಬರ್ಲಿನ್‌ನ ಎಫ್‌.ಸಿ. ಯೂನಿಯನ್, ಕ್ರೀಡೆಯಲ್ಲಿ ಮಾನಸಿಕ ಆರೋಗ್ಯದ ಪ್ರಚಾರಕ್ಕಾಗಿ ಅಂಜಾ ಹ್ಯಾಮರ್ಸಂಗ್–ಎಡಿನ್, ಕ್ರೀಡಾ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಕಿರಣ್ ರಿಜಿಜು ಹಾಗೂ ಸಂದೀಪ್ ಸಿಂಗ್ ಅವರಿಗೆ ಈ ಪ್ರಶಸ್ತಿ ನೀಡಲಾಯಿತು.

ಮುಖ್ಯಾಂಶಗಳು

- ಕ್ರೀಡೆಯಲ್ಲಿ ನಾಯಕತ್ವ ಮತ್ತು ನೀತಿ ಸಂಹಿತೆ: ಸಮ್ಮೇಳನ
- 'ಖೇಲೋ ಇಂಡಿಯಾ' ಮೂಲಕ ಪ್ರೋತ್ಸಾಹ: ಸಚಿವ ಕಿರಣ್ ರಿಜಿಜು

> **ದೇಶದ ಜನರನ್ನು ಒಗ್ಗೂಡಿಸಲು ಕ್ರೀಡೆ ಸಹಕಾರಿ. ಇತ್ತೀಚಿನ ವರ್ಷಗಳಲ್ಲಿ ಕ್ರೀಡಾಪಟುಗಳಿಗೆ ಕೇಂದ್ರ ಸರ್ಕಾರದಿಂದ ಉತ್ತಮ ಪ್ರೋತ್ಸಾಹ ದೊರೆಯುತ್ತಿದೆ.**
> **ಸಂದೀಪ್ ಸಿಂಗ್**
> ಹರಿಯಾಣದ ಕ್ರೀಡಾ ಸಚಿವ

> **ಕ್ರೀಡೆಗೆ ಜಾತಿ, ಧರ್ಮ, ಬಣ್ಣ ಸೇರಿ ಯಾವುದೇ ನಿರ್ಬಂಧ ಇಲ್ಲ. ಕ್ರೀಡಾಪಟುಗಳು ನೀತಿ ಸಂಹಿತೆ ಕಾಪಾಡಿ, ಪರಸ್ಪರ ಗೌರವಿಸುವ ಮನೋಭಾವ ಬೆಳಸಿಕೊಳ್ಳಬೇಕು.**
> **ಪಂಕಜ್ ಅಡ್ವಾಣಿ**
> ಬಿಲಿಯರ್ಡ್ಸ್ ಮತ್ತು ಸ್ನೂಕರ್ ಆಟಗಾರ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Marketing & Sales

HIRING
BUSINESS DEVELOPMENT EXECUTIVE NOS: 100+
BUSINESS DEVELOPMENT MANAGER NOS: 100+
REGIONAL MANAGER NOS: 20+
Location: BANGALORE
DATE: 15/10/2022
VENUE: 632, 2nd main, 2nd Cross Rd, RBI Layout, Phase 7, J. P. Nagar, Bengaluru, Karnataka - 560078.
TIME: 09:00AM to 05:00PM.
NEEDFUL DOCUMENTS
Resume (Hard Copy), Passport Size Photo Copy, Aadhar Card(Soft or Hard Copy), Educational Documents(Soft Copy).
Note: Suitable candidates will be having their all the round interviews on the same day and the offer will be released on the same day itself.
dileepan.m@nibavlifts.com
+918925804732
NIBAV

WANTED SALES Executives (M/F) Good Communication Skills, PU/Degree for Retail Showroom Koramangala. 9945083900, 9731028676.

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

Architects

STRUCTURAL DRAUGHTSMAN minimum 2-Years experience. Contact- Mr.Suresh Kumar .P- 9844018163, info@svconsultants.org/ suresh.svcon@gmail.com

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

PROSPECTIVE CAREER, Retired, VRS, Professionals, Senior Citizens, Business, Housewives. Substantial Income. International Recognition. 97400-90431/ 8884445665

ಮಹಿಳಾ ವಾರ್ಡನ್ ಬೇಕಾಗಿದ್ದಾರೆ
ಬೆಂಗಳೂರಿನ ಎಸ್‌ಎಸ್‌ಬಿ ಮಠ ಟ್ರಸ್ಟ್‌ನ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಬೇಕಾಗಿದ್ದಾರೆ. ಆಸಕ್ತರು ಅರ್ಜಿ ಸಲ್ಲಿಸಬಹುದು. ವಯಸ್ಸಿನ ಮಿತಿ: 35 ರಿಂದ 60 ವರ್ಷಗಳು. ವಿಧವೆ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡಲಾಗುವುದು.
10 ದಿನಗಳೊಳಗಾಗಿ ಸಂಪರ್ಕಿಸಿ:
080-22879777
9945352645

WANTED OFFICE Assistant with computer knowledge for Balija Sangha, RPC layout, near Attiguppe metro station. Contact: 9448476465.

WANTED TELECALLERS Male and Female, good Salary Address- Kamakshi Palya, Bangalore- 560079 Contact: 8095256313, 9035906598

EXCLUSIVELY FOR Retired, Sr.Citizens, VRS, Pensioner's, Homemaker's & Entrepreneurs. Opportunity to Earn Income upto 1.5 Lac p.m. Contact:- 8861561347/ 9686399918

Multiple Vacancy

IMMEDIATE APPOINTMENT HRD,Administration, Accounts,Manager, Supervisor, Software,Hardware,Electronics,Mechanical,Electrical Engineers 7676760299/7676760399

Teachers/ Professors

FRANK PUBLIC SCHOOL, JP.Nagar 6th Phase, requires HIGH SCHOOL SOCIAL STUDIES TEACHER, PRIMARY SCHOOL TEACHERS, FRONT OFFICE ADMIN STAFF. apply: rumysud@gmail.com WhatsApp9008744856

WANTED EXPERIENCED Social Science TEACHER and OFFICE ASSISTANT with Computer Knowledge for a school at Kanakapura Road. Contact- 9845810358/ 8123451999



REAL ESTATE SELLING

Commercial Land

Kanakapura Road

KANAKAPURA ROAD, Vajarahalli, Bangalore`City Co-operative Housing society,60'Road Commercial/ Residential 40x60 East`facing A`Katha site`near Metro`Station 2,10,00,000/- -9739995042.

Flat

Mysore Road

SALE: 3BHK Flat Provident Sunworth- East, 3rd Floor, Modular Kitchen, Many amenities. 62 Lacs. 98450-15353

House

J P Nagar

J.P.NAGAR 2ND 40x60, 3 unit 9 BHK House 2 carparking near Thirumala Temple -5,76,00,000/- -9739995042

Industrial & Factory

Magadi Road

FACTORY SHED for sale, G+1 floor at Kamakshipalya, east facing,50x60sq feet, 50 HT power. Call- 9945240012, 9845282506

Sites

General

EAGLETON SITE in BIDADHI 80x120 EAST SOUTH CORNER E-KATHA. All Clear Documents Call: 9845065084

Vishweshwariah Layout

40X60 SMV 6th Block North Facing and 30x40 West Facing, 30x40 SMV 7th Block East Facing Sites Immediate Sale: 9964971895

REAL ESTATE BUYING

Industrial & Factory

Outskirts

ONE OF the reputed Company in Bangalore is looking for Industrial converted land of about 10 to 20 Acre's in and around Bangalore, Mysore, Hassan,Doddaballapura, Hoskote, Kanakapura and Harohalli Industrial Area. Contact Mob:9380476759

ASTRO YATRA



ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ.160/1,1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

FUTURE FOCUS

Healing

6- STAGES OF MAHAJWALA MANTRA - TO GET SUCCESS (Highly Beneficial for Physical, Mental, Financial & Educational purposes)
Contact: 82775 65480

BUSINESS

Business to Business

Finance

WE ARRANGE Loans for Mortgage, Purchase, Construction, Project, Takeover of Loans from Reputed Bank. T&C Apply. Contact: 9353705002.

Business Offers

Finance

NRI'S INVESTMENT And Finance 600Cr Available From Investor (security as property or viable huge projects) genuine parties Contact-7411265189

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

WANTED VEG Hotel Daily and Monthly Finance 10 Lakh Required Contact: 8892501007/ 9606701007

PUBLIC NOTICE

PUBLIC NOTICE

This is to notify the General Public that my client Mr. Hoskote Nikhil has contracted with Sri. B. R. Chandrakumar S/o. late C. Ramanna, residing at No.144, Chikkasandra Colony, T. Dasarahalli Post, Bangalore-560 057, for purchase of the property described in the schedule herebelow, on his representation that he is the absolute owner of the same.

Any person/s having any claim, right, title or interest of whatsoever manner with regard to the Schedule Property or anybody opposing the sale transaction may lodge such claim or objection, in writing with documentary proof to the undersigned within 7 days from the date of this Notice, failing which my clients would proceed to complete the sale transaction, presuming that there are no valid claims or objections.

SCHEDULE

All that piece and parcel of the property bearing Site No. 28-A (Southern side), BBMP Khatha No. 1493, situated in the layout known as "NEVY LAYOUT" carved out of the converted old Sy. No.11, New Sy. No. 28, 29, 30 & 31 of Sidedahalli Village, Yeshwanthapura Hobli, Bangalore North Taluk, within the limits of BBMP, measuring East to West: Northern side: 40 feet; Southern side: 47 feet; North to South: Eastern side: 45 feet, Western side: 25 feet and bounded on the; East by: Road, West by: Site No. 28-B, North by: Northern portion of Site No. 28-A, South by: Road.

Bangalore
Date: 12.10.2022
Sd/-
Narasimhamurthy A.S
Advocate, No.31, 5th Cross, 23rd Main, J. P. Nagar 2nd Phase, Bangalore-78
Ph: 9886434287 & 9739096512

PUBLIC NOTICE

My clients **Sri. Mahesh .S**, S/o Sri. Srinivasa Reddy and **Sri. Parandama .G,** S/o Govinda Swamy are intending to purchase the Schedule Property from Mr. Peter Urban Pais and Smt. Rita Magdalena Pais for valuable consideration. If any person/s having any claims, right, title, interest, objection whatsoever over the Schedule Property may forward their objections along with documentary evidence to the undersigned in writing within **Seven Days** from the date of this notice, failing which it will be deemed that there are no claims, right, title or interest by anybody over the Schedule Property and my client will proceed with the completion of sale transaction and will get registered the absolute sale deed of the Schedule Property in their name.

SCHEDULE PROPERTY

All that piece and parcel of property bearing Gramatana House List No.171, V.P. No.86/1, BBMP Katha No.675/691/171, measuring East to West 90 feet and North to South 60 feet, totally measuring 5400 square feet, Situated at Green Glen Lay-out, Bellandur Village, Varthur Hobli, Bengaluru East taluk, Bengaluru, having the following boundaries: **East by** : Site No.90; **West by** : Road; **North by** : Road; **South by** : Site No.172.

K. MUNIRAJU, Advocate
No.34/1, 3rd Floor, Above Mobile Tyre Tech, Opp to Sukh Sagar Hotel, Kammanahalli Main Road, Bangalore-560084, Mob: 9731111171

PERSONAL

Change of Name

I, IMRANPASHA NAYAZPASHA resident of No. 30, 2nd Floor, 2nd Main, 1st Cross, Bannerghatta Main Road, Bengaluru-560076. have changed my name to IMRAN PASHA vide affidavit dated 01-10-2022 sworn before notary B.M. Chandrashekar, Bangalore

R. SELVI W/o. 14843789W, HAV/SKT S Arulananthan, R/a. Kottur, Seeriyanahalli, Palacode, Dharmapuri, Tamilnadu my name R SELVI to SELVI R notary BM Chandrashekar.

CHANGE OF NAME
I, **SUDHA SUNDARAM, SUDHA PALANIAPPAN, SUDHA PALANIAPPAN MEENAKSHISUNDARAM,** residing at #1332, Double Road, Indiranagar, Bengaluru-560038 have changed my name to **SUDHA PL** vide Affidavit dated 13/10/2022 before Notary P.N. Nagesh, Bengaluru. Henceforth, I shall be called **SUDHA PL** only.

I, SANDEEP SHARMA, Residing at HN-5, Bowee Lane, 'B' Street, Ashok Nagar, Bengaluru- 560025, declare that in some documents my name is wrongly given as SANDEEP instead of SANDEEP SHARMA vide affidavit dated 11.08.2022 before notary L. GopalakrishnaBangalore.

I, POOJA ANTONIO alias POOJA EUSTACIA ANTONIO Residing at No.38, 2nd Cross, KNSS Layout, Brindavan Avenue Extension, JayanthiNagar, Horamavu, Bangalore-43 have changed my name to SHILPA CHRISTINA WILKINS vide affidavit dated 13-10-2022 before notary Y.R.Chandrasekar, Bangalore

I, PRATIMA H GOVEKAR, Residing at #54N Vinayaka Badavane Doddabidarakallu Nagasandra Post, Bangalore-73 have changed my name as GOUTHAMI SARANG,vide affidavit dated 13/10/2022 before Notary V.Anjanappa,Bangalore

I, ASHA VENKATESH resident of TG Vajra Apartment, F304, 3rd Floor 1st Cross, 3rd A Main Road Akshay Nagar West Bengaluru 560068 have changed my name to ASHA ANIL MAHISHI vide affidavit dated 06-10-2022 sworn before notary B.M. Chandrashekar, Bangalore

14843789W, HAV/SKT S Arulananthan 2ATC son name record's A KAVINDRA VIJAY instead of KAVINDRA VIJAY A notary BM Chandrashekar.

SHANTA SPOUSE Of JC279367H, EX/SUB, Veerabhadrappa n hudali r/a. Somanatti Nesargi Belgavi, Karnataka, my name SHANTA to SHANTA VEERABHADRAPPA HUDALI notary BM Chandrashekar.

14843789W, HAV/SKT S Arulananthan 2ATC son name record's A YASHVANTH VIJAY instead of YASHVANTH VIJAY A notary BM Chandrashekar.

CONNECT

ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್



ಹಳೆಯ (ಹರಿದ) ರೇಷ್ಮೆ ಸೀರೆಗಳು, ರೇಷ್ಮೆ ಪಂಚೆಗಳು, ಬೆಳ್ಳಿ ಜರಿ, ಟಿಷ್ಯೂ ಸೀರೆಗಳು, ಬನಾರಸ್, ಮೈಸೂರು ಸಿಲ್ಕ್ ಯಾವುದೇ ರೀತಿಯಲ್ಲಿದ್ದರು ಸ್ಥಳದಲ್ಲೇ ಹಣ ಕೊಟ್ಟು ಖರೀದಿಸುತ್ತೇವೆ
ತಕ್ಷಣ ಹಣ 14.10.22 -24.10.22
ಶ್ರೀ ಕಾಂಚಿಪುರಂ ರೇಷ್ಮೆ ಸೆಂಟರ್, ನಂ.58, ಕೃಷ್ಣ ಬಿಲ್ಡಿಂಗ್, ಸಂಪಿಗೆ ರಸ್ತೆ, 5ನೇ ಅಡ್ಡ ರಸ್ತೆ, ಮಲ್ಲೇಶ್ವರಂ ಬ್ರಿಡ್ಜ್ ಹತ್ತಿರ, ಬೆಂಗಳೂರು
Call: 9632781499

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ವಾಹನಗಳ ನೋಂದಣಿ ಸಂಖ್ಯೆ ಫಲಕ ಬದಲು

ಕೆಲ ಗ್ರಾಹಕರಿಂದ ಮುಂಗಡವಾಗಿ ಆರೋಪಿ ಹಣ ಪಡೆದಿದ್ದ. ವಂಚನೆಯಿಂದ ಸಂಪಾದಿಸಿದ್ದ ಹಣದಲ್ಲಿ ₹ 52 ಸಾವಿರ ಜಪ್ತಿ ಮಾಡಲಾಗಿದೆ

ದ್ವಿಚಕ್ರ ವಾಹನ ಕದ್ದು ಓಎಲ್‌ಎಕ್ಸ್‌ನಲ್ಲಿ ಮಾರಾಟ

ಬೆಂಗಳೂರು: ನಗರದಲ್ಲಿ ದ್ವಿಚಕ್ರ ವಾಹನಗಳನ್ನು ಕದ್ದು, ನೋಂದಣಿ ಸಂಖ್ಯೆ ಫಲಕ ಬದಲಾಯಿಸಿ ಮಾರುತ್ತಿದ್ದ ಆರೋಪಿ ಆರ್. ಅಶ್ಫಾಕ್ (26) ಎಂಬುವರನ್ನು ವಿವೇಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡಿನ ಅಶ್ಫಾಕ್, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದು ನೆಲೆಸಿದ್ದ. ದುಶ್ಚಟ ಹಾಗೂ ಐಷಾರಾಮಿ ಜೀವನಕ್ಕೆ ಹಣ ಹೊಂದಿಸುವುದಕ್ಕಾಗಿ ದ್ವಿಚಕ್ರ ವಾಹನ ಕಳ್ಳತನಕ್ಕೆ ಇಳಿದಿದ್ದ’ ಎಂದು ಪೊಲೀಸರು ಹೇಳಿದರು.

‘ವಿವೇಕನಗರ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಇತ್ತೀಚೆಗೆ ಕಳ್ಳತನವಾಗಿತ್ತು. ತನಿಖೆ ವೇಳೆ, ಅಶ್ಫಾಕ್ ಸಿಕ್ಕಿಬಿದ್ದ. ಈತನಿಂದ ₹ 4.80 ಲಕ್ಷ ಮೌಲ್ಯದ 7 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

‘ಹ್ಯಾಂಡಲ್ ಲಾಕ್ ಮುರಿದು ವಾಹನ ಕಳ್ಳತನ ಮಾಡುತ್ತಿದ್ದ. ಇದರ ನೋಂದಣಿ ಸಂಖ್ಯೆ ಫಲಕ ಬದಲಿಸುತ್ತಿದ್ದ.’

‘ನಕಲಿ ನೋಂದಣಿ ಫಲಕ ಸಂಖ್ಯೆ ಸಮೇತ ದ್ವಿಚಕ್ರ ವಾಹನದ ಫೋಟೊ ತೆಗೆದು, ಓಎಲ್‌ಎಕ್ಸ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತಿದ್ದ. ತನ್ನದೇ ವಾಹನವೆಂದು ಹೇಳಿಕೊಂಡು, ವಾಹನ ಮಾರುತ್ತಿದ್ದ. ಇದರಿಂದ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ. ಹಣ ಖಾಲಿಯಾಗುತ್ತಿದ್ದಂತೆ, ಮತ್ತೆ ವಾಹನ ಕಳ್ಳತನ ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

ಕಾಳಿಕೊಪ್ಪಲು ಕಾಡಿನಲ್ಲಿದ್ದ ಮರ ಕಡಿದಿದ್ದ ಆರೋಪಿಗಳು • ತಮಿಳುನಾಡಿನಲ್ಲಿ ಕಾರ್ಯಾಚರಣೆ

1,400 ಕೆ.ಜಿ. ರಕ್ತಚಂದನ ಜಪ್ತಿ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಕ್ತಚಂದನ ಮರಗಳನ್ನು ಅಕ್ರಮವಾಗಿ ಕಡಿದು ಮಾರುತ್ತಿದ್ದ ಜಾಲವನ್ನು ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಭೇದಿಸಿದ್ದು, ಈ ಸಂಬಂಧ ಐವರು ಆರೋಪಿಗಳನ್ನು ಬಂಧಿಸಿದ್ದಾರೆ.

‘ಮಂಡ್ಯ ಜಿಲ್ಲೆಯ ಬಸರಾಳು ಹೋಬಳಿಯ ಸಿದ್ಧರಾಜು (35), ಪ್ರಜ್ವಲ್ (21), ದೇವರಾಜ್ (22), ವೆಂಕಟೇಶ್ (40) ಹಾಗೂ ತಮಿಳುನಾಡಿನ ಗೋವಿಂದಸ್ವಾಮಿ (46) ಬಂಧಿತರು. ಇವರಿಂದ ₹ 1,400 ಕೆ.ಜಿ. ರಕ್ತಚಂದನದ ತುಂಡುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಉತ್ತರ ವಿಭಾಗದ ಡಿಸಿಪಿ ವಿನಾಯಕ್ ಪಾಟೀಲ ಹೇಳಿದರು.

‘ಇಸ್ಕಾನ್ ದೇವಸ್ಥಾನ ಸಮೀಪದ ಜ್ಯೂಸ್ ಕಾರ್ಖಾನೆ ಬಳಿ ಸೆ. 13ರಂದು ಬಂದಿದ್ದ ಇಬ್ಬರು ಆರೋಪಿಗಳು, ಗೋಣಿಚೀಲದಲ್ಲಿ ರಕ್ತಚಂದನ ತುಂಡುಗಳನ್ನು ತಂದಿದ್ದರು. ಪರಿಚಯಸ್ಥ ಗ್ರಾಹಕರಿಗೆ ರಕ್ತಚಂದನ ಮಾರಲು ಕಾಯುತ್ತಿದ್ದರು. ಅವರ ನಡೆಯಿಂದ ಅನುಮಾನಗೊಂಡ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು.’

‘ಸ್ಥಳಕ್ಕೆ ಹೋಗಿದ್ದ ಪಿಎಸ್‌ಐ ನೇತೃತ್ವದ ತಂಡ, ಆರೋಪಿಗಳನ್ನು ವಶಕ್ಕೆ ಪಡೆದು ಎರಡು ರಕ್ತಚಂದನ ತುಂಡುಗಳನ್ನು ಜಪ್ತಿ ಮಾಡಿತ್ತು. ಅವರಿಬ್ಬರ ವಿಚಾರಣೆಯಿಂದ, ರಕ್ತಚಂದನ ಅಕ್ರಮ ಮಾರಾಟ ಜಾಲ ಪತ್ತೆಯಾಯಿತು’ ಎಂದು ತಿಳಿಸಿದರು.



ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ರಕ್ತಚಂದನ ತುಂಡುಗಳು ಹಾಗೂ ಬೊಲೆರೊ ಗೂಡ್ಸ್ ವಾಹನ

‘ರಕ್ತಚಂದನ ಸಾಗಣೆ ಹಾಗೂ ಮಾರಾಟದ ಬಗ್ಗೆ ತಪ್ಪೊಪ್ಪಿಕೊಂಡಿದ್ದ ಆರೋಪಿಗಳು, ಮತ್ತಷ್ಟು ಮಂದಿಯ ಹೆಸರು ಬಾಯ್ಬಿಟ್ಟಿದ್ದರು. ಅದರಂತೆ, ಉಳಿದ ಮೂವರನ್ನು ಇತ್ತೀಚೆಗೆ ಸೆರೆ ಹಿಡಿಯಲಾಯಿತು. ಸಂಘಟಿತರಾಗಿ ಕೃತ್ಯ ಎಸಗುತ್ತಿದ್ದ ಆರೋಪಿಗಳು, ಅದರಿಂದ ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು’ ಎಂದು ಹೇಳಿದರು.

ತಮಿಳುನಾಡಿನಲ್ಲಿ ಕಾರ್ಯಾಚರಣೆ: ‘ಬಂಧಿತ ಗೋವಿಂದಸ್ವಾಮಿ, ತಮಿಳುನಾಡಿನ ಹೊಲದಲ್ಲಿರುವ ತನ್ನ ಮನೆಯಲ್ಲಿ ರಕ್ತಚಂದನದ ತುಂಡುಗಳನ್ನು ಸಂಗ್ರಹಿಸಿಟ್ಟಿದ್ದ. ಈ ಬಗ್ಗೆ ಆರೋಪಿಗಳು ಬಾಯ್ಬಿಟ್ಟಿದ್ದರು. ಗೋವಿಂದಸ್ವಾಮಿ ಸಮೇತ ತಮಿಳುನಾಡಿಗೆ ಹೋಗಿ ಮನೆಯಲ್ಲಿ ಪರಿಶೀಲಿಸಿದಾಗ 1,400 ಕೆ.ಜಿ. ತೂಕದ ರಕ್ತಚಂದನ ತುಂಡುಗಳು ಪತ್ತೆಯಾದವು’ ಎಂದು ಪೊಲೀಸರು ತಿಳಿಸಿದರು.

ಕಾಳಿಕೊಪ್ಪಲು ಅರಣ್ಯದ ರಕ್ತಚಂದನ: ‘ಮಂಡ್ಯದ ಕಾಳಿ ಕೊಪ್ಪಲು ಅರಣ್ಯ ಪ್ರದೇಶದೊಳಗೆ ಹೋಗಿದ್ದ ಆರೋಪಿಗಳು, ಅಲ್ಲಿದ್ದ ಮೂರು ರಕ್ತಚಂದನ ಮರಗಳನ್ನು ಅಕ್ರಮವಾಗಿ ಕಡಿದಿರುವುದು ಗೊತ್ತಾಗಿದೆ. ಈ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕಾಳಿಕೊಪ್ಪಲು ಅರಣ್ಯ ಪ್ರದೇಶದಿಂದ ತುಂಡುಗಳನ್ನು ಗೋವಿಂದಸ್ವಾಮಿಯ ಹೊಲದ ಮನೆಗೆ ಬೊಲೆರೊ ಗೂಡ್ಸ್ ವಾಹನದಲ್ಲಿ ಸಾಗಿಸಲಾಗಿತ್ತು. ಆರೋಪಿಗಳಿಗೆ ಹಣದ ತುರ್ತು ಅಗತ್ಯವಿದ್ದಿದ್ದರಿಂದ ಎರಡು ತುಂಡುಗಳನ್ನು ಮಾತ್ರ ಮಾರಲು ನಗರಕ್ಕೆ ಬಂದಿದ್ದರು. ಅದೇ ವೇಳೆ ಪೊಲೀಸರಿಗೆ ಸಿಕ್ಕಿಬಿದ್ದರು. ಆರೋಪಿಗಳಿಂದ ಬೊಲೆರೊ ವಾಹನವನ್ನೂ ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದರು.

ಆರ್‌ಎಫ್‌ಒ ಸೇರಿ 17 ಮಂದಿ ವಿರುದ್ಧ ಪ್ರಕರಣ

ಎಚ್.ಡಿ.ಕೋಟೆ: ಜಿಂಕೆ ಮಾಂಸ ಕಳವು ಪ್ರಕರಣದ ವಿಚಾರಣೆ ನೆಪದಲ್ಲಿ ಹಲ್ಲೆ ನಡೆಸಿ ತಂದೆ, ಜೇನುಕುರುಬ ಸಮುದಾಯದ ಹೊಸಹಳ್ಳಿ ಹಾಡಿ ನಿವಾಸಿ ಕರಿಯಪ್ಪ ಅವರನ್ನು ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಅವರ ಪುತ್ರ ಸತೀಶ್ ನೀಡಿದ ದೂರು ಆಧರಿಸಿ ಎನ್.ಬೇಗೂರು ವಲಯ ಅರಣ್ಯಾಧಿಕಾರಿ ಸೇರಿದಂತೆ 17 ಮಂದಿ ವಿರುದ್ಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮನೆ ಮೇಲೆ ದಾಳಿ ನಡೆಸಿದ್ದ ಅಧಿಕಾರಿಗಳು, ಸಹೋದರಿಗೆ ಗನ್ ತೋರಿಸಿ ಪ್ರಾಣ ಬೆದರಿಕೆ ಹಾಕಿದ್ದರು. ತಂದೆಯನ್ನು ವಶಕ್ಕೆ ಪಡೆದಿದ್ದರು. ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಸಂಬಂಧಿಯೊಬ್ಬರಿಂದ ತಿಳಿಯಿತು’ ಎಂದು ಸತೀಶ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಗುರು ರಾಘವೇಂದ್ರ ಬ್ಯಾಂಕ್ ಅಕ್ರಮ: ‘ಆ್ಯಕ್ಸಿಡೆಂಟ್’, ‘ಹೆಬ್ಬುಲಿ’ ಚಿತ್ರಗಳನ್ನು ನಿರ್ಮಿಸಿದ್ದ ಉದ್ಯಮಿ

₹60 ಕೋಟಿ ನಗದು ಸಾಲ: ಜಾಮೀನು ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಿಂದ ಸಾಲದ ರೂಪದಲ್ಲಿ ₹ 60 ಕೋಟಿ ನಗದನ್ನು ಪಡೆದದ್ದು ಏಕೆ ಮತ್ತು ಅದನ್ನು ಯಾವುದಕ್ಕಾಗಿ ಬಳಕೆ ಮಾಡಲಾಗಿದೆ ಎಂಬ ವಿವರಣೆ ನೀಡಲು ವಿಫಲವಾಗಿದ್ದಾರೆ’ ಎಂಬ ಕಾರಣಕ್ಕೆ ಚಲನಚಿತ್ರ ನಿರ್ಮಾಪಕ ಮತ್ತು ಉದ್ಯಮಿ ಜಿ.ರಘುನಾಥ್ ಅವರಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಸದ್ಯ ನ್ಯಾಯಾಂಗ ಬಂಧನದಲ್ಲಿರುವ ರಘುನಾಥ್ ಈ ಸಂಬಂಧ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?

‘ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಕಲಿ ಠೇವಣಿಗಳನ್ನು ಸೃಷ್ಟಿಸಿ, ಸೂಕ್ತ ದಾಖಲೆಗಳಿಲ್ಲದೆ ಸಾಲ ಮಂಜೂರು ಮಾಡಿ ₹1,556 ಕೋಟಿ ನಷ್ಟಕ್ಕೆ ಕಾರಣರಾಗಿದ್ದಾರೆ’ ಎಂದು ಆರೋಪಿಸಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷ, ವ್ಯವಸ್ಥಾಪಕ ನಿರ್ದೇಶಕ ಮತ್ತು ಇತರರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಪ್ರಕರಣ ದಾಖಲಿಸಿದ್ದು, ರಘುನಾಥ್ 17ನೇ ಆರೋಪಿಯಾಗಿದ್ದಾರೆ.

‘ರಘುನಾಥ್ ಅವರು ಬ್ಯಾಂಕ್‌ನಿಂದ ₹105 ಕೋಟಿ ಸಾಲ ಪಡೆದಿದ್ದು ₹139.85 ಕೋಟಿ ಮೊತ್ತಕ್ಕೆ ಸುಸ್ತಿದಾರನಾಗಿದ್ದಾರೆ. ಬ್ಯಾಂಕ್ ಅಧಿಕಾರಿಗಳ ಜತೆ ಶಾಮೀಲಾಗಿ ಈ ಹಣವನ್ನು ಲಪಟಾಯಿಸಿದ್ದಾರೆ’ ಎಂದು ಆರೋಪಿಸಿ ಇ.ಡಿ ಅಧಿಕಾರಿಗಳು 2022ರ ಜೂನ್ 28ರಂದು ಇವರನ್ನು ಬಂಧಿಸಿದ್ದಾರೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲರು, ‘ಅರ್ಜಿದಾರರು, ಕೆಂಗೇರಿಯಲ್ಲಿ ಹೋಟೆಲ್ ತೆರೆದಿದ್ದು, ಒಗರ ಎಂಬ ಫುಡ್ ಬ್ರ್ಯಾಂಡ್ ಆರಂಭಿಸಿದ್ದರು. ಅಂತೆಯೇ, ಸಿನಿಮಾ ನಿರ್ಮಾಪಕರೂ ಹೌದು. ಇವರು ಕೇವಲ ಬ್ಯಾಂಕ್‌ನ ಸಾಲಗಾರ. 2020ರ ಜನವರಿ ತನಕ ನಿಯಮಿತವಾಗಿ ಇಎಂಐ ಪಾವತಿಸಿದ್ದಾರೆ. ಬ್ಯಾಂಕ್ ಅಧಿಕಾರಿಗಳೊಂದಿಗೆ ಅಥವಾ ಇತರರ ಜೊತೆಗಿನ ಯಾವುದೇ ಅಕ್ರಮ ಚಟುವಟಿಕೆಗಳಲ್ಲಿ ಭಾಗಿಯಾಗಿಲ್ಲ’ ಎಂದು ವಾದ ಮಂಡಿಸಿದ್ದರು.

ಇದನ್ನು ತಿರಸ್ಕರಿಸಿರುವ ನ್ಯಾಯಪೀಠ, ‘ಅರ್ಜಿದಾರರು ₹60 ಕೋಟಿ ನಗದನ್ನು ಸಾಲದ ರೂಪದಲ್ಲಿ ಪಡೆದಿರುವ ಪ್ರಕ್ರಿಯೆ ಕಾನೂನಿಗೆ ವಿರುದ್ಧವಾಗಿದೆ. ಈ ಸಾಲವನ್ನು ಎಲ್ಲಿ ಹೂಡಿಕೆ ಮಾಡಲಾಗಿದೆ ಎಂಬ ವಿವರಗಳನ್ನು ಅವರು ನ್ಯಾಯಾಲಯಕ್ಕೆ ಸ್ಪಷ್ಟವಾಗಿ ಬಹಿರಂಗಪಡಿಸಿಲ್ಲ. ಇಂತಹ ಸನ್ನಿವೇಶದಲ್ಲಿ ಜಾಮೀನು ನೀಡಿದರೆ ಅವರು ತಮ್ಮ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡದಂತೆ ತಡೆಯುವ ಎಲ್ಲ ಸಾಧ್ಯತೆಗಳಿವೆ. ಆದ್ದರಿಂದ, ಈ ಹಂತದಲ್ಲಿ ಬಿಡುಗಡೆ ಮಾಡಲು ಸಾಧ್ಯವಿಲ್ಲ’ ಎಂದು ಅಭಿಪ್ರಾಯಪಟ್ಟಿದೆ.

ಭಾರತೀಯ ದಂಡ ಸಂಹಿತೆ-1860 (ಐಪಿಸಿ), ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತರಕ್ಷಣಾ ಕಾಯ್ದೆ-2004 (ಕೆಪಿಐಡಿಎಫ್‌ಇ) ಹಾಗೂ ಹಣ ಅಕ್ರಮ ವರ್ಗಾವಣೆ ಕಾಯ್ದೆ-2002ರ (ಪಿಎಂಎಲ್) ವಿವಿಧ ಕಲಂಗಳ ಅಡಿಯಲ್ಲಿ ರಘುನಾಥ್ ವಿರುದ್ಧ ಇಸಿಐಆರ್ (ಎನ್ಫೋರ್ಸ್‌ಮೆಂಟ್ ಕೇಸ್ ಇನ್ಫಾರ್ಮೇಶನ್ ರಿಪೋರ್ಟ್) ದಾಖಲು ಮಾಡಿದ್ದಾರೆ.

ನಟ ರಮೇಶ್ ಅರವಿಂದ್ ಅಭಿನಯದ ‘ಆ್ಯಕ್ಸಿಡೆಂಟ್’, ಸುದೀಪ್ ಅಭಿನಯದ ‘ಹೆಬ್ಬುಲಿ’ ಚಿತ್ರಗಳನ್ನು ನಿರ್ಮಿಸಿರುವ ಜಿ. ರಘುನಾಥ್ ಜಾಮೀನು ಕೋರಿ ಸಿಸಿಸಿಎಚ್-1ರ ಪ್ರಧಾನ ಮತ್ತು ವಿಶೇಷ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ನ್ಯಾಯಾಧೀಶರು ತಿರಸ್ಕರಿಸಿದ್ದರು. ಇ.ಡಿ ಪರ ವಕೀಲ ಮಧುಕರ ದೇಶಪಾಂಡೆ ವಾದ ಮಂಡಿಸಿದ್ದರು.



ನಗರದಲ್ಲಿ ಗುರುವಾರ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

‘ಎಸ್‌ಎಸ್‌ಸಿ ಪರೀಕ್ಷೆಗಳಲ್ಲಿ ಕನ್ನಡಿಗರಿಗೆ ಅನ್ಯಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಟಾಫ್ ಸೆಲೆಕ್ಷನ್ ಕಮಿಷನ್ (ಎಸ್‌ಎಸ್‌ಸಿ) ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದ ಕೇಂದ್ರ ಸರ್ಕಾರದ ಕ್ರಮ ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರಿ ಕಚೇರಿಗಳಲ್ಲಿ ಖಾಲಿ ಉಳಿದಿರುವ 20 ಸಾವಿರಕ್ಕೂ ಹೆಚ್ಚು ‘ಬಿ’ ಮತ್ತು ‘ಸಿ’ ದರ್ಜೆಯ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಈ ನೇಮಕಾತಿ ಪ್ರಕ್ರಿಯೆಯು ಕೇವಲ ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ನಡೆಯಲಿದೆ. ಇದು ಕನ್ನಡಿಗರ ಉದ್ಯೋಗಾವಕಾಶಗಳನ್ನು ಕಸಿಯಲಿದೆ ಎಂದು ಕಾರ್ಯಕರ್ತರು ದೂರಿದರು.

ದೇಶದಾದ್ಯಂತ ನಡೆಯುವ ನೇಮಕಾತಿಯು ಈ ಹಿಂದಿನಂತೆ ವಲಯವಾರು ನಡೆಯಬೇಕು. ಕರ್ನಾಟಕ-ಕೇರಳ ವಲಯಕ್ಕೆ ನೇಮಕಾತಿಯಾಗುವಾಗ ಇಲ್ಲಿನ ಎಲ್ಲ ಹುದ್ದೆಗಳೂ ಈ ವಲಯದ ಅಭ್ಯರ್ಥಿಗಳಿಗೆ ದೊರೆಯುತ್ತಿದ್ದವು. ಆದ್ದರಿಂದ, ಕೇಂದ್ರ ಸರ್ಕಾರ ತಕ್ಷಣವೇ ಎಸ್‌ಎಸ್‌ಸಿ ಪರೀಕ್ಷೆಗಳಿಗೆ ಸಂಬಂಧಿಸಿದ ಅಧಿಸೂಚನೆಯನ್ನು ರದ್ದುಪಡಿಸಿ, ಹೊಸದಾಗಿ ಅಧಿಸೂಚನೆ ಹೊರಡಿಸಬೇಕು. ಕನ್ನಡದಲ್ಲೂ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.

ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಇದ್ದರು.

ಪರಿಶಿಷ್ಟರಿಗೆ ಮೀಸಲಾತಿ ಹೆಚ್ಚಳ, ಬಿಜೆಪಿಯವರ ತಂತ್ರ: ಕಾಂಗ್ರೆಸ್


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಬೇಕು ಎನ್ನುವುದು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮೂಡಿದ ಚಿಂತನೆ. ಇದೀಗ, ಚುನಾವಣೆ ಸಮೀಪಿಸುತ್ತಿರುವಾಗ ಬಿಜೆಪಿ ಈ ವಿಷಯವನ್ನು ಮುನ್ನೆಲೆಗೆ ತಂದಿರುವುದು ದಲಿತರನ್ನು ಭಾವನಾತ್ಮಕವಾಗಿ ವಂಚಿಸುವ ತಂತ್ರ’ ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ. ಮಹದೇವಪ್ಪ ಟೀಕಿಸಿದ್ದಾರೆ.

‘ಮೀಸಲಾತಿ ಕುರಿತಂತೆ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗ ಸಲ್ಲಿಸಿದ್ದ ವರದಿಯನ್ನು ಒಪ್ಪಿಕೊಳ್ಳಲು ಮೂರು ವರ್ಷ ಬೇಕಾಯಿತೇ. ಇಷ್ಟು ದಿನ ಇಲ್ಲದ ಒಳ ಮೀಸಲಾತಿ ಪ್ರಸ್ತಾಪ ಚುನಾವಣೆಗೆ ಆರು ತಿಂಗಳು ಇರುವಾಗ ಏಕೆ’ ಎಂದೂ ಅವರು ಪ್ರಶ್ನಿಸಿದ್ದಾರೆ.

‘ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಮೀಸಲಾಗಿರುವ ಅನುದಾನವನ್ನು ಬಿಜೆಪಿ ಸರ್ಕಾರ ದುರುದ್ದೇಶದಿಂದ ಕಡಿಮೆ ಮಾಡಿದೆ. ಅಲ್ಲದೆ, ಸಾವಿರಾರು ಕೋಟಿ ಅನುದಾನವನ್ನು ಇತರ ಇಲಾಖೆಗಳಿಗೆ ವರ್ಗಾಯಿಸಿದೆ. ಸಚಿವ ಸಂಪುಟದಲ್ಲಿ ಪರಿಶಿಷ್ಟರಿಗೆ ಅತಿ ಕಡಿಮೆ ಪ್ರಾತಿನಿಧ್ಯ ನೀಡಿದೆ. ಪರಿಶಿಷ್ಟರಿಗೆ ವಿಶೇಷ ಉಪ ಯೋಜನೆ (ಎಸ್‌ಸಿಪಿ, ಟಿಎಸ್‌ಪಿ) ಕಾಯ್ದೆ, ಬಡ್ತಿ ಮೀಸಲಾತಿ ಕಾಯ್ದೆ, ಗುತ್ತಿಗೆ ಮೀಸಲಾತಿ ಕಾಯ್ದೆ, ಮೂಲಸೌಕರ್ಯ ಹೆಚ್ಚಳ, ನಿಗಮಗಳಿಗೆ ಅತಿ ಹೆಚ್ಚಿನ ಅನುದಾನವನ್ನು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಪಕ್ಷ ನೀಡಿತ್ತು’ ಎಂದಿದ್ದಾರೆ.





ರೇಮೊ
ಆಶಿಕಾ, ಇಶಾನ್



ಸೂತ್ರಧಾರಿ
ಅಪೂರ್ವ, ಚಂದನ್ ಶೆಟ್ಟಿ

ರ್‍ಯಾಪ್ ‘ಸೂತ್ರಧಾರಿ’

ಶರತ್ ಹೆಗ್ಡೆ

ಸ್ವತಂತ್ರ ಕಲಾವಿದನಾಗುವ ಹಂಬಲದಿಂದ ಸುಮಾರು 11 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಅಲೆದಾಡಿ ಗಾಯಕನಾಗಿ ಗುರುತಿಸಿಕೊಂಡ ಚಂದನ್ ಶೆಟ್ಟಿ ಅವರಿಗೀಗ ಬಿಡುವಿಲ್ಲದಷ್ಟು ಅವಕಾಶಗಳು. ಕನ್ನಡದಲ್ಲಿ ರ್‍ಯಾಪ್ ಗಾಯನ ಪ್ರಯೋಗ ಮಾಡಿ ಯಶಸ್ವಿಯಾದವರು. ಈಗ ಅವರ ಎರಡನೇ ಚಿತ್ರ ‘ಸೂತ್ರಧಾರಿ’ ಚಿತ್ರೀಕರಣ ನಡೆದಿರುವ ಹೊತ್ತಿನಲ್ಲಿ ಅವರ ಮಾತು.

- **ಸಂಗೀತದ ಪ್ರಯೋಗಶೀಲತೆ ಬೆಳೆದದ್ದು ಹೇಗೆ?**

ನಾನು ಸಂಗೀತ ಕ್ಷೇತ್ರಕ್ಕೆ ಬಂದಿದ್ದೇ ಆಕಸ್ಮಿಕವಾಗಿ. ಶಾಸ್ತ್ರೀಯವಾಗಿ ಕಲಿತವನೂ ನಾನಲ್ಲ. ಒಂದು ದಿನ ಕಾಲೇಜು ಗೆಳೆಯರು ಹಾಡಬೇಕು ಎಂದು ತಮಾಷೆಗಾಗಿ ವೇದಿಕೆಗೆ ದಬ್ಬಿದರು. ಆ ಹಾಡಿಗೇ ಪ್ರಥಮ ಬಹುಮಾನ ಬರುತ್ತದೆ ಎಂದು ಊಹಿಸಿರಲಿಲ್ಲ. ಅಲ್ಲಿಂದ ಹಾಡುವುದು, ಬರೆಯುವುದು ಶುರು ಮಾಡಿದೆ. ಕಾಲೇಜು ದಿನಗಳಲ್ಲಿ ಹಿಂದಿ ಹಾಗೂ ಪಾಶ್ಚಾತ್ಯ ಭಾಷೆಗಳ ರ್‍ಯಾಪ್ ಹಾಡುಗಳನ್ನು ನೋಡುತ್ತಿದ್ದೆ. ಹಾಗಿದ್ದರೆ ನಮ್ಮ ಭಾಷೆಯಲ್ಲಿ ಇದೇ ಶೈಲಿಯ ಹಾಡು ಏಕೆ ಇಲ್ಲ? ಅಂಥದ್ದೊಂದು ಪ್ರಯೋಗ ಮಾಡಲೇಬೇಕು ಎಂದು ಅನಿಸಿತು. ಆ ಪ್ರಯೋಗವನ್ನು ಜನ ಸ್ವೀಕರಿಸಿದ್ದಾರೆ. ಬೇರೆ ಭಾಷೆಗಳಿಗೂ ಡಬ್ ಆಗಿವೆ. ಈಗ ನನ್ನ ಎಲ್ಲ ಆಲ್ಬಂಗಳ ಒಟ್ಟು ವೀಕ್ಷಣೆ ಸುಮಾರು 80 ಕೋಟಿಗೂ ದಾಟಿದೆ.

- **ಕುಟುಂಬದ ಪ್ರೋತ್ಸಾಹ ಇತ್ತೇ?**

ಅಪ್ಪ ಅಮ್ಮ ಹಾಡುತ್ತಿದ್ದರು. ಅಮ್ಮ ಜನಪದ ಹಾಡುಗಳನ್ನು ತಾಳಬದ್ಧವಾಗಿ ಹಾಡುತ್ತಿದ್ದರು. ಆದರೆ, ನಾನು ಈ ಕ್ಷೇತ್ರವನ್ನು ಆಯ್ದುಕೊಂಡದ್ದು ಅಮ್ಮನಿಗೇಕೋ ಆತಂಕ ತಂದಿತ್ತು. ಬೇರೆ ನೌಕರಿ ಮಾಡುವಂತೆ ಹೇಳುತ್ತಿದ್ದರು. ಅಪ್ಪನಂತೂ ನನ್ನ ಮೇಲೆ ವಿಶ್ವಾಸ ಇಟ್ಟಿದ್ದರು. ಹಾಗಾಗಿ ಮುಂದುವರಿಯಲು ಪ್ರೋತ್ಸಾಹ ಸಿಕ್ಕಿತು. 2011 –12ರಲ್ಲಿ ಬೆಂಗಳೂರಿಗೆ ಬಂದೆ. ವಿಪರೀತ ಆರ್ಥಿಕ ಅತಂತ್ರತೆ ಇತ್ತು. ಈ ವೇಳೆ ನಟರಾದ ಚಿರಂಜೀವಿ ಸರ್ಜಾ, ಧ್ರುವ ಸರ್ಜಾ ಅವರ ಪರಿಚಯವಾಯಿತು. ಅರ್ಜುನ್ ಜನ್ಯ ಅವರಂಥ ಗುರುಗಳು ಸಿಕ್ಕಿದರು. ಮೊದಮೊದಲು ಉಚಿತವಾಗಿಯೇ ಹಾಡಿದ್ದುಂಟು. ಕೆಲವು ನಿರ್ದೇಶಕರು ಹಾಡಿಸಿ, ಊಟ ಹಾಕಿ ಕಳುಹಿಸಿದ್ದುಂಟು. ಹಾಗೂ ಹೀಗೂ ಕಾಲ ಸರಿಯುತ್ತಿತ್ತು.

- **ಬ್ರೇಕ್ ಕೊಟ್ಟ ಹಾಡು?**

ಪುನೀತ್ ರಾಜ್‌ಕುಮಾರ್ ಅವರು ತಮ್ಮ ‘ಪವರ್’ ಚಿತ್ರದಲ್ಲಿ ಒಂದು ಹಾಡಿಗೆ ಅವಕಾಶ ಕೊಟ್ಟರು. ಅದು ನನ್ನ 25ನೇ ಹಾಡು. ಅದು ದೊಡ್ಡ ಮಟ್ಟದಲ್ಲಿ ಹಿಟ್ ಆಯಿತು.

ಈ ನಡುವೆ ದಿನಿ ಕ್ರಿಯೇಷನ್ಸ್ ಸಹಯೋಗದಲ್ಲಿ ‘ಹಾಳಾಗೋದೆ’ ಅನ್ನುವ ಆಲ್ಬಂ ಮಾಡಿದೆ. ಅದನ್ನು ಕೊನೆಯ ಪ್ರಯತ್ನ ಎಂಬಂತೆ ಮಾಡಿದ್ದೆ. ಆದರೆ ಅದು ನಿರೀಕ್ಷೆಗೆ ಮೀರಿ ಯಶಸ್ವಿಯಾಯಿತು. ಕೊನೆಗೆ ಈ ಕ್ಷೇತ್ರದಲ್ಲೇ ಉಳಿಯಲು ನಿರ್ಧರಿಸಿದೆ.

- **ಸಿನಿಮಾ ಪ್ರವೇಶಕ್ಕೆ ತರಬೇತಿ?**

ಸುಜಯ್ ಶಾಸ್ತ್ರಿ ಅವರ ತಂಡದಲ್ಲಿ ‘ಎಲ್ಲರ ಕಾಲೆಳೆಯುತ್ತೆ ಕಾಲ’ ಅನ್ನುವ ಚಿತ್ರದಲ್ಲಿ ಪಾತ್ರ ಮಾಡಿದೆ. ಅದೊಂದು ಒಳ್ಳೆಯ ಕಲಿಕೆ. ಅಲ್ಲಿ ಎಲ್ಲರೂ ಸಿಕ್ಕಿದರು. ಅದೊಂದು ತರಹ ಸಾಂದರ್ಭಿಕ ಹಾಸ್ಯ ಕತೆ. ಅದಾದ ಮೇಲೆ ಈ ಅವಕಾಶ ಬಂದಿದೆ. ಸಂಗೀತ ಮತ್ತು ಸಿನಿಮಾದ ಪ್ರಪಂಚಗಳೇ ಬೇರೆ. ಸಂಗೀತಕ್ಕೆ ಒಂದು ಸಿದ್ಧತೆ ಬೇಕು. ಸಿನಿಮಾಕ್ಕೆ ಮೈ, ಮನಸ್ಸು, ಫಿಟ್‌ನೆಸ್ ಎಲ್ಲವೂ ಬೇಕು. ಸಾಕಷ್ಟು ಸಮಯವನ್ನೂ ಕೊಡಬೇಕು. ಸದ್ಯ ಸಿನಿಮಾ ಮುಗಿಯುವವರೆಗೆ ಸಂಗೀತಕ್ಕೆ ಬ್ರೇಕ್ ಕೊಟ್ಟಿದ್ದೇನೆ. ನವೆಂಬರ್‌ನಿಂದ ಮತ್ತೆ ಸಂಗೀತ ಯಾನ ಮುಂದುವರಿಯಲಿದೆ.

- **‘ಪ್ರವಾಹ’ಗಳ ಮಧ್ಯೆ ಚಂದನ್ ಅವರಿಗೆ ಚಂದನವನದ ಸ್ವಾಗತ ಹೇಗಿದೆ?**

ಈವರೆಗೆ ಚೆನ್ನಾಗಿದೆ. ಎಲ್ಲರೂ ಪ್ಯಾನ್ ಇಂಡಿಯಾ ಅನ್ನುತ್ತಾ ಸಿನಿಮಾ ಮಾಡುತ್ತಿದ್ದಾರೆ. ಆಯಾ ಭಾಷೆಗಳಲ್ಲಿ ಕಂಟೆಂಟ್ ಸಿಗುತ್ತಿದೆ. ಆದರೆ, ಹಿಂದಿ ಅಥವಾ ಬೇರೆ ಭಾಷೆಗಳ ಕಂಟೆಂಟ್ ಕನ್ನಡದಲ್ಲಿ ಸಿಕ್ಕಿದರೂ ನಮ್ಮ ಜನ ಅದೇ ಭಾಷೆಗಳಲ್ಲಿ ನೋಡುತ್ತಾರೆಯೇ ವಿನಾ ಅದರ ಕನ್ನಡ ಆವೃತ್ತಿಯನ್ನು ನೋಡುವುದಿಲ್ಲ. ಹಾಗೆಯೇ ಕನ್ನಡ ಚಿತ್ರಗಳು ಬೇರೆ ಭಾಷೆಗೆ ಡಬ್ ಆದಾಗ ಆ ಭಾಷೆಯಲ್ಲಿ ನೋಡುತ್ತಾರೆ. ಆದರೆ, ಮೂಲ ಕನ್ನಡ ಆವೃತ್ತಿಯನ್ನು ನೋಡುವುದಿಲ್ಲ. ಈ ಬೇಸರ ನನಗಿದೆ. ಪಬ್‌ಗಳಲ್ಲಿ ಅದ್ಯಾವುದೋ ಅರ್ಥವಾಗದ ಭಾಷೆಯ ಪಾಪ್, ರ್‍ಯಾಪ್ ಹಾಡುಗಳನ್ನು ಹಾಕುತ್ತಾರೆ. ಆದರೆ, ಕನ್ನಡ ಅನ್ನುವ ಕಾರಣಕ್ಕೆ ಪಬ್‌ಗಳಲ್ಲಿ ಕನ್ನಡ ಹಾಡುಗಳನ್ನು ಹಾಕುವುದಿಲ್ಲ. ಸಂಗೀತ, ಕಲೆಗೆ ಭಾಷೆಯ ಹಣೆಪಟ್ಟಿ ಯಾಕೆ ಕಟ್ಟುತ್ತಾರೋ ಗೊತ್ತಿಲ್ಲ. ಈ ಟ್ರೆಂಡ್ ಪೂರ್ಣ ಬದಲಾಗಬೇಕು. ಕೆಲವೆಡೆಯಷ್ಟೇ ಕನ್ನಡ ಹಾಡು ಕೇಳಿಬರುತ್ತಿವೆ.

- **ಏನಿದು ‘ಸೂತ್ರಧಾರಿ’?**

‘ಸೂತ್ರಧಾರಿ’ ಕ್ರೈಮ್ ಥ್ರಿಲ್ಲರ್ ಚಿತ್ರ. ಎರಡೂವರೆ ಗಂಟೆ ಕಾಲ ನಿಮ್ಮನ್ನು ಕೂರಿಸುತ್ತದೆ. ಪ್ರತಿ 10ರಿಂದ 15 ನಿಮಿಷಗಳಿಗೊಮ್ಮೆ ಕಥೆ ತಿರುವು ಪಡೆದುಕೊಳ್ಳುತ್ತದೆ. ಚಿತ್ರದಲ್ಲಿ ಅಂಡರ್‌ಕವರ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದೇನೆ. ಚಿತ್ರಕ್ಕಾಗಿ ನಾನು ಹನ್ನೆರಡು ಕೆ.ಜಿ. ತೂಕ ಇಳಿಸಿಕೊಂಡಿದ್ದೀನಿ. ಅಕ್ಟೋಬರ್ ಕೊನೆಗೆ ಚಿತ್ರೀಕರಣ ಮುಕ್ತಾಯವಾಗಬಹುದು.

- **ಅಭಿಮಾನಿಗಳಿಗೆ ಏನು ಹೇಳುತ್ತೀರಿ?**

ಅಭಿಮಾನಿಗಳು ಈವರೆಗೆ ಕೈ ಹಿಡಿದಿದ್ದಾರೆ. ಒಂದು ನೆನಪಿಡಿ. ಒಂದು ಚಿತ್ರ, ಆಲ್ಬಂ ಹಾಡು ಏನೇ ಕೃತಿ ನಿರ್ಮಾಣವಾಗಬೇಕಾದರೂ ನೂರಾರು ಜನರ ಶ್ರಮ, ಹಣ ವ್ಯಯವಾಗಿರುತ್ತದೆ. ಜಾಲತಾಣಗಳಲ್ಲಿ ಅದನ್ನು ಹೀನಾಯವಾಗಿ ಕಾಣಬೇಡಿ. ಯಾವುದೇ ವಿಮರ್ಶೆ, ಚರ್ಚೆ ಆರೋಗ್ಯಕರವಾಗಿರಲಿ ಎಂಬುದೇ ನನ್ನ ವಿನಂತಿ.

ನ.25ಕ್ಕೆ ‘ರೇಮೊ’

ಚಂದನವನದಲ್ಲಿ ‘ರಣವಿಕ್ರಮ’, ‘ಗೂಗ್ಲಿ’, ‘ನಟಸಾರ್ವಭೌಮ’ದಂತಹ ಹಿಟ್ ಸಿನಿಮಾಗಳನ್ನು ನಿರ್ದೇಶಿಸಿದ್ದ ನಿರ್ದೇಶಕ ಪವನ್ ಒಡೆಯರ್, ಮ್ಯೂಸಿಕಲ್ ಲವ್ ಸ್ಟೋರಿಯೊಂದಿಗೆ ತೆರೆ ಮೇಲೆ ಬರುತ್ತಿದ್ದಾರೆ.

ತೆಲುಗಿನ ‘ರೋಗ್’ ಸಿನಿಮಾ ಮೂಲಕ ಬೆಳ್ಳಿತೆರೆಗೆ ಪ್ರವೇಶಿಸಿದ್ದ ನಟ ಇಶಾನ್ ನಟನೆಯ ‘ರೇಮೊ’ ಸಿನಿಮಾ ಬಿಡುಗಡೆಗೆ ದಿನಾಂಕ ನಿಗದಿಯಾಗಿದ್ದು, ನ.25ಕ್ಕೆ ತೆರೆಕಾಣಲಿದೆ. ಸಿ.ಆರ್. ಮನೋಹರ್ ಅವರು ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ರಾಕ್‌ಸ್ಟಾರ್ ಪಾತ್ರದಲ್ಲಿ ಕಾಣಿಸಿಕೊಂಡಿರುವ ಇಶಾನ್‌ಗೆ ಆಶಿಕಾ ರಂಗನಾಥ್ ಇಲ್ಲಿ ಜೋಡಿಯಾಗಿದ್ದಾರೆ.

‘ನಾನು ಮೊದಲ ಬಾರಿ ಇಶಾನ್ ಅವರನ್ನು ಭೇಟಿ ಮಾಡಿದ್ದು ದುಬೈನಲ್ಲಿ. ಇಷ್ಟು ಚೆನ್ನಾಗಿದ್ದಾರೆ. ಇವರನ್ನು ಹೀರೊ ಮಾಡಬೇಕು ಅಂದುಕೊಂಡೆ. ನಂತರ ‘ರೇಮೊ’ ಚಿತ್ರದ ಕಥೆ ಬರೆದೆ. 2019ರಲ್ಲಿ ಬೆಂಗಳೂರಿನಲ್ಲಿ ಚಿತ್ರೀಕರಣ ಆರಂಭವಾಯಿತು. ನಂತರ ಹೈದರಾಬಾದ್, ಜಮ್ಮು-ಕಾಶ್ಮೀರ, ದಕ್ಷಿಣ ಆಫ್ರಿಕಾ, ಸಿಂಗಪುರ ಮುಂತಾದ ಕಡೆ ಚಿತ್ರೀಕರಣ ನಡೆಸಲಾಯಿತು. ಇದೊಂದು ಮ್ಯೂಸಿಕಲ್ ಲವ್ ಸ್ಟೋರಿ. ಮ್ಯಾಜಿಕಲ್ ಕಂಪೋಸರ್ ಅರ್ಜುನ್ ಜನ್ಯ ಅವರು ಸಂಗೀತ ನೀಡಿರುವ ಆರು ಹಾಡುಗಳು ಚಿತ್ರದಲ್ಲಿದೆ’ ಎನ್ನುತ್ತಾರೆ ಪವನ್ ಒಡೆಯರ್.

ಇಶಾನ್ ಹಾಗೂ ಆಶಿಕಾ ಜೋಡಿಯನ್ನು ತೆರೆ ಮೇಲೆ ನೋಡಿದವರು ಫಿದಾ ಆಗುವುದು ಖಂಡಿತಾ ಎಂದಿದೆ ಚಿತ್ರತಂಡ. ವೈದಿ ಅವರ ಛಾಯಾಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಅವರ ಸಂಕಲನ ಚಿತ್ರಕ್ಕಿದೆ. ಅ.14ರಂದು ಚಿತ್ರದ ಲಿರಿಕಲ್ ಹಾಡು ಬಿಡುಗಡೆಯಾಗುತ್ತಿದ್ದು, ಶೀಘ್ರದಲ್ಲೇ ಟ್ರೇಲರ್ ರಿಲೀಸ್ ಆಗಲಿದೆ ಎಂದು ಚಿತ್ರತಂಡ ತಿಳಿಸಿದೆ.

ಸಿನಿಮಾತು ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ



ಅಮೆರಿಕ ನೇತೃತ್ವದ ಮಿತ್ರಕೂಟಕ್ಕೆ ಮತ್ತೊಮ್ಮೆ ಎಚ್ಚರಿಕೆ ನೀಡಿದ ರಷ್ಯಾ

ಉಕ್ರೇನ್ ನ್ಯಾಟೊ ಸೇರಿದರೆ 3ನೇ ಮಹಾಯುದ್ಧ

ಲಂಡನ್ (ರಾಯಿಟರ್ಸ್): ಅಮೆರಿಕ ನೇತೃತ್ವದ ಸೇನಾ ಮೈತ್ರಿಕೂಟ ನ್ಯಾಟೊಗೆ ಉಕ್ರೇನ್ ಸೇರಿದರೆ, ಆ ರಾಷ್ಟ್ರದಲ್ಲಿನ ಸಂಘರ್ಷವು ಮೂರನೇ ಮಹಾಯುದ್ಧಕ್ಕೆ ದಾರಿಯಾಗುವುದು ಖಚಿತ ಎಂದು ರಷ್ಯಾದ ಭದ್ರತಾ ಸಮಿತಿ ಗುರುವಾರ ಗಂಭೀರ ಎಚ್ಚರಿಕೆ ನೀಡಿದೆ.

'ನ್ಯಾಟೊ ಸೇರಿದರೆ ಸಂಘರ್ಷ ಉಲ್ಬಣಿಸಿ, ಮೂರನೇ ವಿಶ್ವ ಸಮರ ಸಂಭವಿಸುವುದು ಖಚಿತ ಎನ್ನುವುದು ಉಕ್ರೇನ್‌ಗೂ ಚೆನ್ನಾಗಿಯೇ ಗೊತ್ತಿದೆ' ಎಂದು ರಷ್ಯಾದ ಭದ್ರತಾ ಮಂಡಳಿಯ ಉಪ ಕಾರ್ಯದರ್ಶಿ ಅಲೆಕ್ಸಾಂಡರ್ ವೆನೆಡಿಕ್ಟೊವ್ ಹೇಳಿದ್ದಾರೆ. ಈ ಹೇಳಿಕೆ ಉಲ್ಲೇಖಿಸಿ ರಷ್ಯಾದ ಸರ್ಕಾರಿ ನಿಯಂತ್ರಣ ಸುದ್ದಿಸಂಸ್ಥೆ 'ಟಾಸ್' ಕೂಡ ವರದಿ ಮಾಡಿದೆ.

'ಉಕ್ರೇನ್‌ಗೆ ಸದಸ್ಯತ್ವ ನೀಡುವ ಕೋರಿಕೆ ಪರಿಗಣಿಸಿದರೆ ಅದರಿಂದ ಆಗುವ ಸಂಘರ್ಷದ ಪರಿಣಾಮದ ಅರಿವು ಪಶ್ಚಿಮದ ರಾಷ್ಟ್ರಗಳಿಗಿದೆ. ಸದಸ್ಯತ್ವ ನೀಡುವ ತೀರ್ಮಾನ ಸ್ವಾಭಾವಿಕವಾಗಿ ಆತ್ಮಹತ್ಯೆಗೆ ಸಮಾನ ಎನ್ನುವುದನ್ನು ನ್ಯಾಟೊ ಸದಸ್ಯ ರಾಷ್ಟ್ರಗಳು ಅರ್ಥ ಮಾಡಿಕೊಂಡಿವೆ' ಎಂದು ವೆನೆಡಿಕ್ಟೊವ್ ಹೇಳಿದ್ದಾರೆ.

ಉಕ್ರೇನಿನ 40 ನಗರಗಳ ಮೇಲೆ ಕ್ಷಿಪಣಿ ದಾಳಿ ನಡೆಸಿದ ರಷ್ಯಾ

ಕೀವ್/ಬ್ರಸೆಲ್ಸ್ (ರಾಯಿಟರ್ಸ್): ಉಕ್ರೇನ್ ಬೆಂಬಲಕ್ಕೆ ಇನ್ನಷ್ಟು ಶಸ್ತ್ರಾಸ್ತ್ರದ ಬೆಂಬಲವನ್ನು ನ್ಯಾಟೊ ರಾಷ್ಟ್ರಗಳು ಘೋಷಿಸಿದ ಬೆನ್ನಲ್ಲೇ ಉಕ್ರೇನ್ ಮೇಲೆ ರಷ್ಯಾ ಗುರುವಾರ ಸೇನಾ ದಾಳಿ ತೀವ್ರಗೊಳಿಸಿದೆ. ಕಳೆದ 24 ತಾಸುಗಳಲ್ಲಿ ಉಕ್ರೇನಿನ 40ಕ್ಕೂ ಹೆಚ್ಚು ನಗರಗಳು ಮತ್ತು ಪಟ್ಟಣಗಳ ಮೇಲೆ ರಷ್ಯಾ ಕ್ಷಿಪಣಿಗಳನ್ನು ಉಡಾಯಿಸಿದೆ.

ಮೈಕೊಲೈವ್ ಪಟ್ಟಣದ ಮೇಲೆ ಭಾರಿ ಬಾಂಬ್ ದಾಳಿ ನಡೆದಿದೆ. ರಾಜಧಾನಿ ಕೀವ್ ನಗರದ ಸಮೀಪ ಇರಾನಿ ಡ್ರೋನ್‌ಗಳು ಅಪ್ಪಳಿಸಿವೆ. ನಾಗರಿಕರ ಮೂಲಸೌಕರ್ಯಗಳು, ಜನವಸತಿ ಮತ್ತು ಬಹುಮಹಡಿ ಕಟ್ಟಡಗಳು ಹಾನಿಗೀಡಾಗಿವೆ.

ರಷ್ಯಾದ 25 ಮಿಲಿಟರಿ ಗುರಿಗಳ ಮೇಲೆ ಉಕ್ರೇನ್ ವಾಯು ಪಡೆಯು 32 ದಾಳಿಗಳನ್ನು ನಡೆಸಿರುವುದಾಗಿ ಉಕ್ರೇನ್‌ನ ಶಸ್ತ್ರ ಪಡೆಗಳ ಮುಖ್ಯಸ್ಥರು ಹೇಳಿದ್ದಾರೆ.

ಇದೇ ವೇಳೆ ಬ್ರಸೆಲ್ಸ್‌ನಲ್ಲಿ ನ್ಯಾಟೊ ಮಿತ್ರರಾಷ್ಟ್ರಗಳ ಸಭೆಯಲ್ಲಿ, ಯುರೋಪಿನ ವಾಯು ರಕ್ಷಣೆ ಹೆಚ್ಚಿಸುವ ಜಂಟಿ ಯೋಜನೆಗಳನ್ನು ಪ್ರಕಟಿಸಲಾಯಿತು.

ನ್ಯಾಟೊ ರಾಷ್ಟ್ರಗಳು ಯುರೋಪಿನ ಆಕಾಶ ರಕ್ಷಾ ಕವಚಕ್ಕೆ ಜಂಟಿಯಾಗಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ, ತಮ್ಮ ಪ್ರತಿ ಪ್ರದೇಶವನ್ನು ರಕ್ಷಿಸಿಕೊಳ್ಳಲು ಬದ್ಧವಾಗಿವೆ ಎಂದು ಜರ್ಮನಿಯ ರಕ್ಷಣಾ ಸಚಿವ ಕ್ರಿಸ್ಟೀನ್ ಲ್ಯಾಂಬ್ರೆಕ್ಟ್ ತಿಳಿಸಿದರು.

ಇದೇ ವೇಳೆ ಅಮೆರಿಕ ಕೂಡ ನ್ಯಾಟೊ ತನ್ನ ಪ್ರತಿ ಇಂಚು ನೆಲವನ್ನು ರಕ್ಷಿಸಿಕೊಳ್ಳಲಿದೆ ಎಂದು ಗುಡುಗಿದೆ.

ಪ್ರಮುಖಾಂಶಗಳು

- ಉಕ್ರೇನ್‌ನಲ್ಲಿ ಆಕ್ರಮಣಕ್ಕೆ ಸೇನೆಯ ಭಾಗಶಃ ಸಜ್ಜುಗೊಳಿಸುವಿಕೆಗೆ ಪುಟಿನ್ ಆದೇಶಿಸಿದ ನಂತರ ಕಡ್ಡಾಯ ಸೈನ್ಯ ಸೇವೆಯಲ್ಲಿದ್ದ ರಷ್ಯಾದ ಐವರು ಯೋಧರು ಮೃತಪಟ್ಟಿದ್ದಾರೆ. ಇವರು ಮೃತಪಟ್ಟ ಸ್ಥಳ ಬಹಿರಂಗಪಡಿಸಿಲ್ಲ. ಇವರೆಲ್ಲರೂ ಪಶ್ಚಿಮ ಸೈಬಿರಿಯಾದ ಕೈಗಾರಿಕಾ ಚೆಲಿಯಾಬಿನ್‌ಸ್ಕ್ ಪ್ರದೇಶದ ಬಡವರು ಎಂದು ರಷ್ಯಾದ ಸುದ್ದಿಸಂಸ್ಥೆ ವರದಿ ಮಾಡಿದೆ
- ರಷ್ಯಾದ ಕ್ಷಿಪಣಿ ದಾಳಿಗೆ ತುತ್ತಾಗಿರುವ ಉಕ್ರೇನ್‌ಗೆ ಮಾಸಿಕವಾಗಿ ಅಗತ್ಯವಿರುವ ಶತಕೋಟಿ ಡಾಲರ್‌ಗಳ ಸ್ಥಿರವಾದ ಆರ್ಥಿಕ ನೆರವು ನೀಡಲು ಜಿ 7 ರಾಷ್ಟ್ರಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಪ್ರತಿಜ್ಞೆ ಮಾಡಿವೆ
- ಕ್ಯಾಪ್‌ನಂತಹ ನಿರ್ಬಂಧಗಳನ್ನು ಹೇರುವ ದೇಶಗಳಿಗೆ ತೈಲ ಸರಬರಾಜು ಸ್ಥಗಿತಗೊಳಿಸುವುದಾಗಿ ರಷ್ಯಾ ಅಧ್ಯಕ್ಷ ಪುಟಿನ್ ಎಚ್ಚರಿಕೆ ನೀಡಿದ್ದಾರೆ

ಸೆ.30ರಂದು ಪುಟಿನ್ ಅವರು ರಷ್ಯಾ ಆಕ್ರಮಿಸಿಕೊಂಡಿರುವ ಉಕ್ರೇನ್‌ನ ಶೇ 18ರಷ್ಟು ಭೂಪ್ರದೇಶವನ್ನು ಸ್ವಾಧೀನಕ್ಕೆ ಸೇರಿಸಿಕೊಳ್ಳುತ್ತಿರುವುದಾಗಿ ಔಪಚಾರಿಕ ಘೋಷಣೆ ಹೊರಡಿಸಿದ ಕೆಲವೇ ಗಂಟೆಗಳಲ್ಲಿ, ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ನ್ಯಾಟೊದ ತ್ವರಿತಗತಿಯ ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸಿರುವುದಾಗಿ ಅಚ್ಚರಿಯ ಘೋಷಣೆ ಮಾಡಿದ್ದರು.

ಅಣ್ವಸ್ತ್ರ ಸಂಘರ್ಷದ ಪರಿಣಾಮ ಇಡೀ ಭೂಮಂಡಲಕ್ಕೆ: ಅಣ್ವಸ್ತ್ರ ಸಂಘರ್ಷದ ಪರಿಣಾಮ ರಷ್ಯಾ ಮತ್ತು ಪಶ್ಚಿಮದ ಸಂಘಟಿತ ರಾಷ್ಟ್ರಗಳಿಗಷ್ಟೇ ಸೀಮಿತವಾಗುವುದಿಲ್ಲ, ಈ ಗ್ರಹದ ಪ್ರತಿ ದೇಶದ ಮೇಲೂ ದುರಂತ ಉಂಟು ಮಾಡುತ್ತದೆ. ಮನುಕುಲಕ್ಕೆ ವಿನಾಶಕಾರಿಯಾಗಿದೆ. ರಷ್ಯಾ ವಿರುದ್ಧ ರಕ್ಷಣಾತ್ಮಕ ದಾಳಿಗೆ ಝೆಲೆನ್‌ಸ್ಕಿ ಕರೆ ನೀಡಿರುವುದು ಅತ್ಯಂತ ಅಪಾಯಕಾರಿಯಾದುದು ಎಂದು ವೆನೆಡಿಕ್ಟೊವ್ ಹೇಳಿದರು.

ರಷ್ಯಾ ಮತ್ತು ಅಮೆರಿಕ ಅತಿದೊಡ್ಡ ಅಣ್ವಸ್ತ್ರ ಶಕ್ತಿ ರಾಷ್ಟ್ರಗಳಾಗಿವೆ. ವಿಶ್ವದಲ್ಲಿರುವ ಅಣು ಸಿಡಿತಲೆಗಳಲ್ಲಿ ಶೇ 90ರಷ್ಟು ಈ ಎರಡು ರಾಷ್ಟ್ರಗಳ ಬತ್ತಳಿಕೆಯಲ್ಲಿವೆ.

ಸಿಇಟಿ: ಕೋರ್ಸ್ ಆಯ್ಕೆ ಇಂದಿನಿಂದ

ಬೆಂಗಳೂರು: ಸಿಇಟಿ ಅಭ್ಯರ್ಥಿಗಳು ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ಪಶು ವೈದ್ಯಕೀಯ ಮತ್ತು ಪಶು ಸಂಗೋಪನೆ, ಬಿ-ಫಾರ್ಮಾ, ಡಿ-ಫಾರ್ಮಾ ಕೋರ್ಸ್‌ಗಳ ಪ್ರವೇಶಕ್ಕಾಗಿ ಇಚ್ಛೆ, ಆಯ್ಕೆಗಳನ್ನು ದಾಖಲಿಸಲು ಅ.14ರಿಂದ ಅವಕಾಶ ಕಲ್ಪಿಸಲಾಗಿದೆ.

ಅಂದು ಮಧ್ಯಾಹ್ನ 1ರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಪೋರ್ಟಲ್ ತೆರೆಯಲಾಗುವುದು, ಮೊದಲ ಸುತ್ತಿನ ಸೀಟು ಹಂಚಿಕೆಯ ವಿವರವಾದ ವೇಳಾಪಟ್ಟಿಯನ್ನು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಕೆಇಎ ತಿಳಿಸಿದೆ.

ಮತದಾನದಿಂದ ಹೊರಗುಳಿದ ಭಾರತ

ವಿಶ್ವಸಂಸ್ಥೆ (ಪಿಟಿಐ): ಉಕ್ರೇನ್‌ನಲ್ಲಿ ಆಕ್ರಮಿಸಿಕೊಂಡಿರುವ ಪ್ರದೇಶಗಳಲ್ಲಿ ಅಕ್ರಮವಾಗಿ ಜನಮತ ಗಣನೆ ನಡೆಸುವ ಮತ್ತು ಆ ಪ್ರದೇಶಗಳನ್ನು ಸ್ವಾಧೀನಕ್ಕೆ ಸೇರಿಸಿಕೊಳ್ಳುವ ರಷ್ಯಾದ ಪ್ರಯತ್ನಗಳನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಖಂಡಿಸುವ ಕರಡು ನಿರ್ಣಯದ ಮೇಲಿನ ಮತದಾನದಿಂದ ಭಾರತ ಸೇರಿ 35 ದೇಶಗಳು ದೂರ ಉಳಿದವು.

ನಿರ್ಣಯದ ಪರವಾಗಿ 143 ರಾಷ್ಟ್ರಗಳು ಮತ ಚಲಾಯಿಸಿದವು.

ಸಂಕ್ಷಿಪ್ತ ಸುದ್ದಿ

ಪ್ರತಿಭಟನಕಾರರ ಮೇಲೆ ಗುಂಡಿನ ದಾಳಿ

ಪ್ಯಾರಿಸ್ (ಎಎಫ್‌ಪಿ): ಮಹಸ ಅಮಿನಿ ಸಾವು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದ ನಾಗರಿಕರ ಮೇಲೆ ಇರಾನ್‌ನ ಭದ್ರತಾ ಪಡೆಯವರು ಬುಧವಾರ ಗುಂಡಿನ ದಾಳಿ ನಡೆಸಿದ್ದಾರೆ.

ಮಕ್ಕಳು ಸೇರಿದಂತೆ ಈವರೆಗೆ ಒಟ್ಟು 108 ಮಂದಿಯನ್ನು ಹತ್ಯೆ ಮಾಡಲಾಗಿದೆ ಎಂದು ಮಾನವ ಹಕ್ಕುಗಳ ಸಂಘಟನೆಗಳು ದೂರಿವೆ.

'ಟೆಹರಾನ್‌ನ ಬೀದಿಗಳಲ್ಲಿ ಬುರ್ಖಾ ಧರಿಸದೆ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿನಿಯರು 'ಸರ್ವಾಧಿಕಾರಿ ಸಾಯಲಿ' ಎಂಬ ಘೋಷಣೆಗಳನ್ನು ಕೂಗಿದರು. ಇಸ್ಫಹಾನ್, ಕರಜ್ ಹಾಗೂ ಸಕೀಜ್‌ನಲ್ಲಿ ಪ್ರತಿಭಟನೆ ನಡೆಸುತ್ತಿದ್ದವರು ಗುಂಡಿನ ಸದ್ದು ಕೇಳಿದೊಡನೆ ಘೋಷಣೆ ಮೊಳಗಿಸುವುದನ್ನು ನಿಲ್ಲಿಸಿದರು' ಎಂದು ನಾರ್ವೆ ಮೂಲದ ಮಾನವ ಹಕ್ಕುಗಳ ಸಂಘಟನೆ ತಿಳಿಸಿದೆ. ಈ ಕುರಿತ ವಿಡಿಯೊವನ್ನೂ ಬಿಡುಗಡೆ ಮಾಡಿದೆ.

'ಇರಾನ್‌ನ ಶತ್ರು ರಾಷ್ಟ್ರಗಳು ದೇಶದಲ್ಲಿ ನಡೆಯುತ್ತಿರುವ ಗಲಭೆಗೆ ಪ್ರಚೋದನೆ ನೀಡುತ್ತಿವೆ' ಎಂದು ಇರಾನ್‌ನ ಸರ್ವೋಚ್ಚ ನಾಯಕ ಅಯತ್ ಉಲ್ಲಾ ಅಲಿ ಖಾಮೇನಿ ಬುಧವಾರ ದೂರಿದ್ದಾರೆ.

ಪಾಕಿಸ್ತಾನದಲ್ಲಿ ಬಸ್‌ಗೆ ಬೆಂಕಿ: 18 ಮಂದಿ ಮರಣ

ಇಸ್ಲಾಮಾಬಾದ್: ಬಸ್‌ಗೆ ಬೆಂಕಿ ಹೊತ್ತಿಕೊಂಡ ಪರಿಣಾಮ ಎಂಟು ಮಕ್ಕಳು, ಒಂಭತ್ತು ಮಹಿಳೆಯರು ಸೇರಿದಂತೆ ಒಟ್ಟು18 ಮಂದಿ ಪ್ರವಾಹ ಸಂತ್ರಸ್ತರು ಮೃತಪಟ್ಟಿರುವ ಘಟನೆ ಪಾಕಿಸ್ತಾನದಲ್ಲಿ ನಡೆದಿದೆ.

ಬುಧವಾರ ರಾತ್ರಿ ಸಿಂಧ್ ಪ್ರಾಂತ್ಯದ ನೂರಿಬಾದ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಅವಘಡ ನಡೆದಿದ್ದು, ಕಿಕ್ಕಿರಿದು ತುಂಬಿದ್ದ ಹವಾನಿಯಂತ್ರಿತ ಬಸ್‌ಗೆ ಬೆಂಕಿ ಹೊತ್ತಿಕೊಂಡ ಪರಿಣಾಮ ಇವರೆಲ್ಲ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಸಿರಿಯಾ: ಬಸ್‌ನಲ್ಲಿ ಬಾಂಬ್ ಸ್ಫೋಟ– 18 ಸೈನಿಕರ ಸಾವು

ಡಮಾಸ್ಕಸ್ (ಸಿರಿಯಾ): ಡಮಾಸ್ಕಸ್ ಬಳಿ ಸೇನಾ ಬಸ್ಸೊಂದರಲ್ಲಿ ಗುರುವಾರ ಬಾಂಬ್ ಸ್ಫೋಟಗೊಂಡು 18 ಮಂದಿ ಸೈನಿಕರು ಮೃತಪಟ್ಟಿದ್ದಾರೆ.

'ಉಗ್ರರು ಸ್ಫೋಟಕ ಸಾಧನವನ್ನು ಮೊದಲೇ ಅಳವಡಿಸಿದ್ದರು. ಬಸ್ ಡಮಾಸ್ಕಸ್ ಬಳಿ ತಲುಪಿದಾಗ ಅದು ಸ್ಫೋಟಗೊಂಡಿದೆ. 27 ಮಂದಿ ಗಾಯಗೊಂಡಿದ್ದಾರೆ' ಎಂದು ವರದಿಯಾಗಿದೆ.

ಎಸ್‌ಬಿಐ: ಗೃಹ ಸಾಲಕ್ಕೆ ರಿಯಾಯಿತಿ ಬಡ್ಡಿ



ಮುಂಬೈ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಹಬ್ಬದ ಕೊಡುಗೆಯ ಭಾಗವಾಗಿ ಶೇಕಡ 0.25ರವರೆಗೆ ರಿಯಾಯಿತಿ ದರದಲ್ಲಿ ಗೃಹ ಸಾಲ ನೀಡುವುದಾಗಿ ತಿಳಿಸಿದೆ. ಗೃಹ ಸಾಲದ ಬಡ್ಡಿದರವು ಶೇ 8.40ರಿಂದ ಆರಂಭ ಆಗಲಿದೆ.

ಗೃಹ ಸಾಲಗಳಿಗೆ 2023ರ ಜನವರಿ 31ರವರೆಗೆ ಯಾವುದೇ ಪ್ರಕ್ರಿಯೆ ಶುಲ್ಕ (ಪ್ರೊಸೆಸಿಂಗ್ ಫೀ) ಇರುವುದಿಲ್ಲ ಎಂದೂ ಹೇಳಿದೆ. ಟಾಪ್-ಅಪ್ ಲೋನ್ ಬಡ್ಡಿದರವು ಶೇ 8.80ರಿಂದ ಆರಂಭ ಆಗಲಿದೆ ಎಂದು ತಿಳಿಸಿದೆ.

ಮೈಲಿಗಲ್ಲು: ತಾನು ನೀಡಿರುವ ಗೃಹ ಸಾಲದ ಮೊತ್ತವು ₹ 6 ಲಕ್ಷ ಕೋಟಿಯ ಗಡಿಯನ್ನು ದಾಟಿದೆ. ಈ ಮೈಲಿಗಲ್ಲು ದಾಟಿರುವ ದೇಶದ ಮೊದಲ ಬ್ಯಾಂಕ್ ಆಗಿದೆ ಅದು ಎಸ್‌ಬಿಐ ಹೇಳಿದೆ.

ಪರಿಶಿಷ್ಟರಿಗೆ ವೇದ ಗಣಿತ: ಆದೇಶ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇದ ಗಣಿತ ಅಧ್ಯಯನಕ್ಕೆ ಅನುಸೂಚಿತ ಜಾತಿಗಳ ಉಪ ಹಂಚಿಕೆ (ಎಸ್‌ಸಿಎಸ್‌ಪಿ), ಬುಡಕಟ್ಟು ಉಪ ಹಂಚಿಕೆ (ಟಿಎಸ್‌ಪಿ) ನಿಧಿಯನ್ನು ಬಳಸಿಕೊಳ್ಳಲು ನೀಡಿದ್ದ ಅನುಮತಿಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆ ಹಿಂಪಡೆದಿದೆ.

ಪರಿಶಿಷ್ಟ ಜಾತಿ, ಪಂಗಡದ 5ರಿಂದ 8ನೇ ತರಗತಿ ವಿದ್ಯಾರ್ಥಿಗಳು ಸಮವಸ್ತ್ರ ಸಹಿತ ವೇದ ಗಣಿತ ಕಲಿಕೆಗೆ ಹಾಜರಾಗಲು ಅನುಕೂಲವಾಗುವಂತೆ ಗ್ರಾಮ ಪಂಚಾಯಿತಿಗಳಲ್ಲಿನ ಎಸ್‌ಸಿಎಸ್‌ಪಿ, ಟಿಎಸ್‌ಪಿ ನಿಧಿ ಬಳಕೆಗೆ ಮಾಡಿಕೊಳ್ಳಲು ಗ್ರಾಮೀಣಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿತ್ತು.

ಇಲಾಖೆ ಆದೇಶ ಹೊರಡಿಸುವ ಮೊದಲು ಮುಖ್ಯಮಂತ್ರಿ ಅಧ್ಯಕ್ಷತೆಯ ಅನುಸೂಚಿತ ಜಾತಿಗಳು ಮತ್ತು ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯಲ್ಲಿ ಅನುಮೋದನೆ ಪಡೆದುಕೊಂಡಿಲ್ಲ. ಹಾಗಾಗಿ, ವೇದ ಗಣಿತ ಯೋಜನೆಯ ಆದೇಶ ಹಿಂಪಡೆಯಬೇಕು. ಮುಂದಿನ ನೋಡೆಲ್ ಏಜೆನ್ಸಿ ಸಭೆಯಲ್ಲಿ ಚರ್ಚಿಸಿದ ನಂತರ ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಸಲಹೆ ನೀಡಿತ್ತು. ಸಲಹೆಯನ್ನು ಪರಿಗಣಿಸಿದ ಇಲಾಖೆ ಆದೇಶ ಹಿಂಪಡೆದಿದೆ.

'ವೇದ ಗಣಿತದ ನೆಪದಲ್ಲಿ ಪರಿಶಿಷ್ಟರಿಗೆ ಮೀಸಲಾದ ನಿಧಿಯಲ್ಲಿ ₹70 ಕೋಟಿ ಬಳಕೆ ಮಾಡಿಕೊಳ್ಳಲು ಗ್ರಾಮೀಣಾಭಿವೃದ್ಧಿ ಇಲಾಖೆ ಮುಂದಾಗಿದೆ. ಇದು ಪರಿಶಿಷ್ಟರ ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ ಕಾಯ್ದೆಯ ಉಲ್ಲಂಘನೆ' ಎಂದು ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನ ಹಕ್ಕುಗಳ ಸಂರಕ್ಷಣಾ ಪರಿಷತ್ತು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ದೂರು ನೀಡಿತ್ತು.

ಇನ್ಫೊಸಿಸ್ ಲಾಭ ಶೇ 11ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಎರಡನೆಯ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಇನ್ಫೊಸಿಸ್ ಸೆಪ್ಟೆಂಬರ್ ತ್ರೈಮಾಸಿಕದ ಫಲಿತಾಂಶ ಪ್ರಕಟಿಸಿದ್ದು, ಲಾಭದ ಪ್ರಮಾಣವು ಶೇಕಡ 11ರಷ್ಟು ಹೆಚ್ಚಾಗಿದೆ. ಈ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು ₹ 6,021 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 5,421 ಕೋಟಿ ನಿವ್ವಳ ಲಾಭ ಗಳಿಸಿತ್ತು. ಕಂಪನಿಯು ₹ 9,300 ಕೋಟಿ ಮೌಲ್ಯದ ಷೇರು ಮರುಖರೀದಿ ಯೋಜನೆಯನ್ನು ಸಹ ಪ್ರಕಟಿಸಿದೆ. ಇದರ ಅಡಿಯಲ್ಲಿ ಒಂದು ಷೇರಿಗೆ ಗರಿಷ್ಠ ₹ 1,850ರಂತೆ ನೀಡಲು ಕಂಪನಿ ತೀರ್ಮಾನಿಸಿದೆ. ಇದಕ್ಕೆ ಷೇರುದಾರರ ಒಪ್ಪಿಗೆ ಬೇಕಿದೆ.

ಷೇರು ಮರುಖರೀದಿ ಯೋಜನೆಯ ಅಡಿಯಲ್ಲಿ ಪ್ರತಿ ಷೇರಿಗೆ ನಿಗದಿ ಮಾಡಿರುವ ಬೆಲೆಯು, ಇನ್ಫೊಸಿಸ್‌ನ ಷೇರಿನ ಗುರುವಾರದ ಅಂತ್ಯದ ಮೌಲ್ಯಕ್ಕಿಂತ ಶೇ 30ರಷ್ಟು ಹೆಚ್ಚು.

ಷೇರು ಮರುಖರೀದಿ ಯೋಜನೆಯ ಅಡಿಯಲ್ಲಿ ಕಂಪನಿಯು ತನ್ನದೇ ಷೇರುಗಳನ್ನು ಹೂಡಿಕೆದಾರರಿಂದ, ಷೇರುದಾರರಿಂದ ಖರೀದಿಸುತ್ತದೆ. ಇದು ಷೇರುದಾರರಿಗೆ ಹಣ ಹಿಂದಿರುಗಿಸಲು ಇರುವ ತೆರಿಗೆ ಉಳಿತಾಯದ ಮಾರ್ಗ ಎಂದು ಭಾವಿಸಲಾಗಿದೆ. ಹಿಂದಿನ ವರ್ಷ ಕೂಡ ಇನ್ಫೊಸಿಸ್ ಕಂಪನಿಯು ₹ 9,200 ಕೋಟಿ ಮೌಲ್ಯದ ಷೇರು ಮರುಖರೀದಿ ಮಾಡಿತ್ತು.

ಕಂಪನಿಯು ಪ್ರತಿ ಷೇರಿಗೆ ₹ 16.50ರಷ್ಟು ಮಧ್ಯಂತರ ಲಾಭಾಂಶ ಘೋಷಿಸಿದೆ. ಈ ಮೊತ್ತವು ಹಿಂದಿನ ವರ್ಷದ ಮಧ್ಯಂತರ ಲಾಭಾಂಶಕ್ಕಿಂತ ಶೇ 10ರಷ್ಟು ಜಾಸ್ತಿ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ಶೇ 23.4ರಷ್ಟು ಏರಿಕೆ ಕಂಡಿದೆ.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಛೇರಿ

(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ,

ಬೆಂಗಳೂರು–560 001. ದೂರವಾಣಿ ಸಂ: 080–29565353, 29566556, 29604556. ಇ–ಮೇಲ್: splocaima-21@ka.gov.in

No.SPLOCA/IMA/SPLC(S-5)/5/2022 ದಿನಾಂಕ: 12.10.2022

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಐ.ಎಂ.ಎ ಹಾಗೂ ಅದರ ಅಂಗ ಸಂಸ್ಥೆಗಳ ವಂಚನೆ ಪ್ರಕರಣದಲ್ಲಿ ದಾಖಲಾಗಿರುವ ಮಾನ್ಯ ವಿಶೇಷ ನ್ಯಾಯಾಲಯದ ಪ್ರಕರಣ ಸಂಖ್ಯೆ MISC No.569/2022ರ 31.05.2022 ರ ಆದೇಶದಲ್ಲಿ ಐ.ಎಂ.ಎ ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಸ್ಥಿರಸ್ವತ್ತುಗಳ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸವಿರುವ ಬಾಡಿಗೆದಾರರುಗಳಿಗೆ ಭೋಗ್ಯದ ಠೇವಣಿ ಮೊತ್ತವನ್ನು ಹಿಂದಿರುಗಿಸುವುದಕ್ಕೆ ಸಂಬಂಧಿಸಿದಂತೆ ಭೋಗ್ಯದ ಠೇವಣಿ ಮೊತ್ತದಲ್ಲಿ Notional rental benefits ಗಳನ್ನು ಹಾಗೂ ಭೋಗ್ಯ / ಬಾಡಿಗೆ ಕರಾರರು ಪತ್ರಗಳು ನೋಂದಣಿಯಾಗದಿದ್ದಲ್ಲಿ ಮುದ್ರಾಂಕ ಹಾಗೂ ದಂಡ ಶಿಲ್ಕವನ್ನು ಕಳೆದು ಉಳಿಕೆ ಮೊತ್ತವನ್ನು ಹಿಂದಿರುಗಿಸಿ ಕಟ್ಟಡಗಳ ಸ್ವಾಧೀನತೆಯನ್ನು ಪಡೆಯುವ ಬಗ್ಗೆ ನಿರ್ದೇಶಿಸಲಾಗಿರುತ್ತದೆ. ಸದರಿ ಆದೇಶದನ್ವಯ ಕೆಳಕಂಡ ಪಟ್ಟಿಯಲ್ಲಿ ನಮೂದು ಮಾಡಿರುವ ವಿಳಾಸದಲ್ಲಿನ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸವಿರುವ ಬಾಡಿಗೆದಾರರುಗಳಿಗೆ ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ, ಐ.ಎಂ.ಎ ಹಾಗೂ ಇತರೆ ವಂಚನೆ ಪ್ರಕರಣಗಳುಬೆಂಗಳೂರು ರವರಿಗೆ ದಾಖಲೆಗಳನ್ನು ಸಲ್ಲಿಸಲು ಸೂಚಿಸಿ **ದಿನಾಂಕ: 13.09.2022** ಹಾಗೂ **ದಿನಾಂಕ: 30.09.2022** ರಂದು 02 ಬಾರಿ ಸಮನ್ಸ್‌ನ್ನು ನೀಡಲಾಗಿರುತ್ತದೆ.

Sl. No.	Name and address of the Apartment building	Apartment No.	Name of the Tenant	Documents submitted after receiving 1st summons Yes/No	Documents submitted after receiving 2nd summons Yes/No	Order of eviction issued by special officer and Competent Authority Yes/No
1	2	3	4	5	6	7
1	# 48, PID No. 64-86-48, 30th cross, Bannerughatta Road, ward no: 46, Thilaknagar, Bengaluru-560041.	Ground Floor-1	Dr. Mohammed Khaisar Ahmed	-	No	Yes
2		Ground Floor-2	Sayed Shafiulla	No	No	Yes
3		1st Floor-1	Mohammed Nasiruddin & Amtul Mateen	Yes	-	-
4		1st Floor-2	Syed Javeed Ahmed	No	No	Yes
5		2nd Floor-1	R.Elahi &Shahina Begum	Yes	-	-
6		2nd Floor-2	S Imran &Azharuddin	Yes	-	-
7	#803/18/25, PID No: 58-36-25 36th 'G' Cross, 4th "T" Block, Ward No: 168(58) Jayanagar , Bangalore.	Ground Floor	Shafiulla Basha abdul Rahaman	Yes	-	-
8		1st Floor	Mohammed Altaf and Mohammed Azhar Tandur	Yes	-	-
9	No.77 , PID No: 91-33-77, Pottery Town layout (William's Town), Civil station, Bangalore-46	2nd Floor	Syed Sajid Iqbal	Yes	-	-
10	No.2/3, PID No: 078-W0202-8, Spencer road, Frazer town, Bangalore	Ground Floor	W. Imtiyaz	-	Yes	No
11		1st Floor	Syed Naveed and Shameem Taj	Yes	-	-
12		2nd Floor	Zabiulla	Yes	-	-
13		3rd Floor	Maaz Ahmed and Abdul Mujeer	Yes	-	-
14		4th Floor	K.Safdar Ahmed and Umme salma	Yes	-	-
15	No.9 and 9/1, PID No: 78-56-9 & 78-56-9/1, Park road, Tasker Town, Civil station, Ward No: 63, Bangalore	1st Floor-102	Sadiqunnisa and Asma zareen	No	No	Yes
16		2nd Floor-103	Syed Gaffur and Syed Zaid	No	No	Yes
17		2nd Floor-104	Mohammed Zainul Abedeen and Shazia Fahima	No	No	Yes
18		4th Floor-108	K Ashfaq Ahmed and Ayesha sultana	No	No	Yes
19	Site No 640, BBMP Khata No: 843/640, HBR Layout, 1st Stage, 3rd Block, Now numberd as 640 HBR Layout, 1 to 5th block and HBR 2nd stage, Ward No: 24, B.D.A Layout, Bangalore.	2nd Floor	Shaik Javeed & Maher Sultana	Yes	-	-
20		3rd Floor	Abdul Latheef Ahmed and Husn Ara	Yes	-	-
21		4th Floor	Shaikh Bakher Ali and Fathimunnisa	Yes	-	-
22		5th Floor	Mahamad Shafi and Mohammed Shameer	Yes	-	-

ಮೇಲ್ಕಂಡ ಪಟ್ಟಿಯಲ್ಲಿ ಕಾಣಿಸಿರುವಂತೆ ಅಂಕಣ 7ರ ಎದುರು ನಮೂದಾಗಿರುವ ಬಾಡಿಗೆದಾರರು ಈ ತಹಲ್‌ವರೆಗೂ ಯಾವುದೇ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸದ ಕಾರಣ ಸದರಿ ಬಾಡಿಗೆದಾರರನ್ನು ತೆರವುಗೊಳಿಸಲು ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ.

ಸಹಿ/–
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ
ಐ.ಎಂ.ಎ ಹಾಗೂ ಇತರೆ ಕೆ.ಪಿ.ಐ.ಡಿ ವಂಚನೆ ಪ್ರಕರಣಗಳು, ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/2592/2022–23

Infosys Limited

Infosys® Navigate your next

Regd. office: Electronics City, Hosur Road, Bengaluru 560 100, India.

CIN: L85110KA1981PLC013115
Website: www.infosys.com
Email: investors@infosys.com
T: 91 80 2852 0261
F: 91 80 2852 0362

Q2 FY 23 Financial Results

Extract of the consolidated audited financial results of Infosys Limited and its subsidiaries for the quarter and half-year ended September 30, 2022 prepared in compliance with the Indian Accounting Standards (Ind-AS)

(in ₹ crore except per equity share data)

Particulars	Quarter ended September 30, 2022	Half-year ended September 30, 2022	Quarter ended September 30, 2021
Revenue from operations	**36,538**	**71,008**	**29,602**
Profit before tax	8,391	15,925	7,448
Profit for the period	6,026	11,388	5,428
Total comprehensive income for the period (comprising profit for the period after tax and other comprehensive income after tax)	6,070	11,056	5,377
Profit attributable to:			
Owners of the Company	6,021	11,381	5,421
Non-controlling interest	5	7	7
	6,026	**11,388**	**5,428**
Total comprehensive income attributable to:			
Owners of the Company	6,068	11,054	5,375
Non-controlling interest	2	2	2
	6,070	**11,056**	**5,377**
Paid-up share capital (par value ₹5 each fully paid)	2,099	2,099	2,097
Other equity *#	73,252	73,252	74,227
Earnings per equity share (par value ₹5 each)**			
Basic (₹)	14.35	27.13	12.88
Diluted (₹)	14.34	27.10	12.85

* Balances for the quarter and half year ended September 30, 2022 represents balances as per the audited Balance Sheet for the year ended March 31, 2022 and balances for the quarter ended September 30, 2021 represents balances as per the audited Balance Sheet for the year ended March 31, 2021 as required by SEBI (Listing and Other Disclosure Requirements) Regulations, 2015.

** EPS is not annualized for the quarter and half year ended September 30, 2022 and quarter ended September 30, 2021.

Excludes non-controlling interest

1. Notes pertaining to the current quarter

a) The audited interim condensed consolidated financial statements for the quarter and half-year ended September 30, 2022 have been taken on record by the Board of Directors at its meeting held on October 13, 2022. **The statutory auditors, Deloitte Haskins & Sells LLP, have expressed an unmodified audit opinion.** The information presented above is extracted from the audited interim condensed consolidated financial statements. These interim condensed consolidated financial statements are prepared in accordance with the Indian Accounting Standards (Ind-AS) as prescribed under Section 133 of the Companies Act, 2013 read with Rule 3 of the Companies (Indian Accounting Standards) Rules, 2015 and relevant amendment rules thereafter.

b) Acquisition of BASE life science A/S

On September 01, 2022, Infosys Consulting Pte. Ltd. (a wholly-owned subsidiary of Infosys Limited) acquired 100% voting interests in BASE life science A/S, a consulting and technology firm in the life sciences industry in Europe, for a total consideration of €110 million (approximately ₹906 crore) comprising cash, management incentives, bonuses and retention.

c) Buyback of equity shares

In line with the Capital Allocation Policy, the Board, at its meeting held on October 13, 2022, approved the buyback of equity shares, from the open market route through the Indian stock exchanges, amounting to ₹9,300 crore (Maximum Buyback Size, excluding buyback tax) at a price not exceeding ₹1,850 per share (Maximum Buyback Price), subject to shareholders' approval by way of postal ballot.

d) Management change

Ravi Kumar S., President, resigned from the Company effective October 11, 2022. The Board placed on record its deep sense of appreciation for the services rendered by him.

e) Update on employee stock grants

On the recommendation of the nomination and remuneration committee, the Board, on October 13, 2022, approved the grant of 48,050 Restricted Stock Units (RSUs) to three eligible employees under the 2015 Stock Incentive Plan ("the 2015 Plan"). The RSUs will be granted effective November 1, 2022 and would vest over a period of three to four years.

On the recommendation of the nomination and remuneration committee, the Board, on October 13, 2022, approved the grant of annual performance-based stock incentives in the form of RSUs having a market value of ₹60 lakh to an eligible employee under the Infosys Expanded Stock Ownership Program 2019 ("the 2019 Plan"). The RSUs will be granted effective November 1, 2022 and the number of RSUs will be calculated based on the market price at the close of trading on November 1, 2022. The RSUs would vest equally over a period of three years, subject to the Company's achievement of certain performance criteria as laid out in the 2019 Plan.

2. Information on dividends for the quarter and half-year ended September 30, 2022

The Board of Directors declared an interim dividend of ₹16.50 per equity share. The record date for the payment is October 28, 2022. The interim dividend will be paid on November 10, 2022. The interim dividend declared in the previous year was ₹15 per equity share.

(in ₹)

Particulars	Quarter ended September 30, 2022	Half-year ended September 30, 2022	Quarter ended September 30, 2021
Dividend per share (par value ₹5 each)			
Interim dividend	16.50	16.50	15.00
Final dividend	–	–	–

3. Audited financial results of Infosys Limited (Standalone information)

(in ₹ crore)

Particulars	Quarter ended September 30, 2022	Half-year ended September 30, 2022	Quarter ended September 30, 2021
Revenue from operations	31,567	61,094	25,462
Profit before tax	8,488	15,391	7,303
Profit for the period	6,253	11,154	5,463

The above is an extract of the detailed format of the quarterly audited financial results filed with the stock exchanges under Regulation 33 of the SEBI (Listing and Other Disclosure Requirements) Regulations, 2015. The full format of the quarterly audited financial results are available on the stock exchange websites, www.nseindia.com and www.bseindia.com, and on the Company's website, www.infosys.com.

By order of the Board
for Infosys Limited

Sd/-
Salil Parekh
Chief Executive Officer and Managing Director

Bengaluru, India
October 13, 2022

This release contains 'forward-looking statements' within the meaning of Section 27A of the Securities Act of 1933, as amended ("the Securities Act"), and Section 21E of the Securities Exchange Act of 1934, as amended ("the Exchange Act"), that involve substantial risks and uncertainties. Forward-looking statements generally relate to future events or our future financial or operating performance and that are based on our current expectations, assumptions, estimates and projections about the Company, our industry, economic conditions in the markets in which we operate, and certain other matters. Generally, these forward-looking statements can be identified by the use of forward-looking terminology such as 'may', 'anticipate', 'believe', 'estimate', 'expect', 'continue', 'intend', 'will', 'project', 'seek', 'could', 'would', 'should' and similar expressions. Those statements include, among other things, statements regarding our business strategy, our expectations concerning our market position, future operations, growth, margins, profitability, attrition, liquidity, and capital resources, our ESG vision, our capital allocation policy, the effects of COVID-19 on global economic conditions and our business and operations, wage increases, change in the regulations including immigration regulation and policies in the United States, and corporate actions including timely completion of the proposed buy-back of our equity shares. These statements are subject to known and unknown risks, uncertainties and other factors which may cause actual results or outcomes to differ materially from those implied by the forward-looking statements. Additional risks that could affect our future operating results are more fully described in our United States Securities and Exchange Commission filings including our Annual Report on Form 20-F for the fiscal year ended March 31, 2022. These filings are available at www.sec.gov. Infosys may, from time to time, make additional written and oral forward-looking statements, including statements contained in the Company's filings with the Securities and Exchange Commission and our reports to shareholders. The Company does not undertake to update any forward-looking statements that may be made from time to time by or on behalf of the Company unless it is required by law.

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1670)
ಸೋಯಾ (ರಿಫೈನ್ಡ್)	₹1282 (1285)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹16000-20000

ಷೇರುಪೇಟೆ ವಹಿವಾಟು 391

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,123
ಇಂದಿನ ಅಂತ್ಯ	17,014
▼	109
ದಿನದ ಕನಿಷ್ಠ	16,956

ವಿನಿಮಯ ದರ

$ ಡಾಲರ್	82.38
£ ಪೌಂಡ್	91.35
€ ಯುರೊ	79.97
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹445
12 ಮೊಟ್ಟೆಗೆ	₹60

ಮೈಸೂರು


100 ಮೊಟ್ಟೆಗೆ	₹447

ಎನ್.ಆರ್.ಪುರ ರಬ್ಬರ್


(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹141.50
ಗುಡ್ ಲಾಟ್	₹137

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form



ಚಿರಸ್ಮರಣೆ
ಶ್ರೀ ಬಿ.ಎಚ್. ತಿಮ್ಮಾರೆಡ್ಡಿ
(ಬೆಳ್ಳಂದೂರು)
(ಮುನ್ನೇಕೊಳಾಲು
ದಿ॥ ಎಂ.ಎನ್. ಹನುಮರೆಡ್ಡಿರವರ ಮಗ)
ನಿಧನ: 14-10-2013
ನಿಮ್ಮ ನೆನಪು ನಮ್ಮ ಹೃದಯದಲ್ಲಿ ಹಚ್ಚಹಸಿರಾಗಿ ಉಳಿದಿದೆ. ನಿಮ್ಮ ಆದರ್ಶಗಳೇ ನಮಗೆ ಸ್ಫೂರ್ತಿದಾಯಕ, ಸದಾ ನಿಮ್ಮ ನೆನಪಿನಲ್ಲಿರುವ
ಪತ್ನಿ- ಶ್ರೀಮತಿ ಕೋಮಲ,
ಮಗ ಪ್ರೇಮಕುಮಾರ್
ಹಾಗೂ ಕುಟುಂಬವರ್ಗ



ಪುಣ್ಯಸ್ಮರಣೆ
ಶ್ರೀ ಆರ್. ರಾಮಚಂದ್ರ ರೆಡ್ಡಿ
Engineer, IIA-Bengaluru
ಸ್ನೇಹಜೀವಿಯಾಗಿ ಬದುಕಿದವರು
ಎಲ್ಲರ ಮನಸ್ಸಿನಲ್ಲಿ
ಚಿರಂಜೀವಿಯಾಗಿ ಬದುಕುವರು
ಸುಧಾ ಮತ್ತು ಅನುರಾಗ್

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಚೆಕ್ಸ್ ಅಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಏರ್ ಇಂಡಿಯಾ, ವಿಸ್ತಾರಾ ವಿಲೀನಕ್ಕೆ ಮಾತುಕತೆ

ನವದೆಹಲಿ (ಪಿಟಿಐ): ವಿಸ್ತಾರಾ ವಿಮಾನಯಾನ ಕಂಪನಿಯನ್ನು ಏರ್ ಇಂಡಿಯಾ ಜೊತೆ ವಿಲೀನಗೊಳಿಸುವ ಕುರಿತು ಟಾಟಾ ಸಮೂಹದ ಜೊತೆ ಗೋಪ್ಯ ಮಾತುಕತೆ ನಡೆಯುತ್ತಿದೆ ಎಂದು ಸಿಂಗಪುರ ಏರ್‌ಲೈನ್ಸ್ (ಎಸ್‌ಐಎ) ಗುರುವಾರ ತಿಳಿಸಿದೆ.

ವಿಸ್ತಾರಾದಲ್ಲಿ ಎಸ್‌ಐಎ ಶೇಕಡ 49ರಷ್ಟು ಪಾಲು ಹೊಂದಿದೆ. ಎರಡು ಕಂಪನಿಗಳ ವಿಲೀನದ ವಿಚಾರವಾಗಿ ತಾನು ಟಾಟಾ ಸಮೂಹದ ಜೊತೆ ಮಾತುಕತೆ ನಡೆಸುತ್ತಿರುವುದು ನಿಜ ಎಂಬುದನ್ನು ಎಸ್‌ಐಎ ತಿಳಿಸಿರುವುದು ಇದೇ ಮೊದಲು. ವಿಸ್ತಾರಾದಲ್ಲಿ ಟಾಟಾ ಸಮೂಹವು ಶೇ 51ರಷ್ಟು ಪಾಲು ಹೊಂದಿದೆ, ಏರ್ ಇಂಡಿಯಾದ ಪೂರ್ಣ ಮಾಲೀಕತ್ವ ಹೊಂದಿದೆ. ಏರ್‌ಏಷ್ಯಾ ಇಂಡಿಯಾ ಕಂಪನಿಯಲ್ಲಿ ಶೇ 83.67 ಪಾಲು ಹೊಂದಿದೆ.

ಕೋವಿಡ್ ಪರಿಣಾಮ • 2020ರಲ್ಲಿ ಬಡತನ ಹೆಚ್ಚಳ: ವಿಶ್ವಬ್ಯಾಂಕ್ ವರದಿ

ಬಡವರ ಸಂಖ್ಯೆ 5.6 ಕೋಟಿ ಏರಿಕೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತವು 2020ರಲ್ಲಿ ಎದ್ದು ಕಾಣುವಂತಹ ಆರ್ಥಿಕ ಕುಸಿತವನ್ನು ಕಂಡಿತ್ತು. ಆ ವರ್ಷದಲ್ಲಿ ಭಾರತದಲ್ಲಿ ಬಡವರ ಸಂಖ್ಯೆಯು ಅಂದಾಜು 5.6 ಕೋಟಿಯಷ್ಟು ಜಾಸ್ತಿ ಆಯಿತು ಎಂದು ವಿಶ್ವ ಬ್ಯಾಂಕ್ ವರದಿಯೊಂದು ಹೇಳಿದೆ.

'ಪಾವರ್ಟಿ ಆ್ಯಂಡ್ ಷೇರ್ಡ್ ಪ್ರಾಸ್ಪೆರಿಟಿ 2022: ಕೋರ್ಸ್ ಕರೆಕ್ಷನ್' ಹೆಸರಿನ ಈ ವರದಿಯನ್ನು ವಿಶ್ವ ಬ್ಯಾಂಕ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ವಿಶ್ವ ಬ್ಯಾಂಕ್ ಸಮೂಹದ ಅಂಗಸಂಸ್ಥೆಯಾಗಿರುವ 'ಪುನರ್‌ರಚನೆ ಮತ್ತು ಅಭಿವೃದ್ಧಿಗಾಗಿ ಅಂತರರಾಷ್ಟ್ರೀಯ ಬ್ಯಾಂಕ್' ಈ ವರದಿಯನ್ನು ಸಿದ್ಧಪಡಿಸಿದೆ.

ಕೊರೊನಾ ಸಾಂಕ್ರಾಮಿಕ ಆವರಿಸಿದ 2020ರಲ್ಲಿ ವಿಶ್ವದಲ್ಲಿ ಒಟ್ಟು 7.1 ಕೋಟಿ ಜನ ಬಡತನದ ದವಡೆಗೆ ಸಿಲುಕಿದರು. ಇದರಲ್ಲಿ ಭಾರತೀಯರ ಪಾಲು ಶೇಕಡ 78.87ರಷ್ಟು (5.6 ಕೋಟಿ) ಇದೆ.

'ಚೀನಾ ದೇಶವು ವಿಸ್ತೀರ್ಣದಲ್ಲಿ ಬೃಹತ್ ಆಗಿದ್ದರೂ, ಬಡವರ ಸಂಖ್ಯೆಯ ಹೆಚ್ಚಳದಲ್ಲಿ ಆ ದೇಶದ ಕೊಡುಗೆ ಕಡಿಮೆ ಇದೆ. 2020ರಲ್ಲಿ ಚೀನಾ ದೇಶವು ಮಧ್ಯಮ ಪ್ರಮಾಣದ ಆರ್ಥಿಕ ಪೆಟ್ಟು ಅನುಭವಿಸಿತು. ಹೀಗಾಗಿ, 2020ರಲ್ಲಿ ಜಾಗತಿಕವಾಗಿ ಬಡವರ ಸಂಖ್ಯೆಯಲ್ಲಿ ಆದ ಹೆಚ್ಚಳದಲ್ಲಿ ಚೀನಾದ ಪಾಲು ಜಾಸ್ತಿ ಇಲ್ಲ' ಎಂದು ವರದಿಯಲ್ಲಿ ವಿವರಿಸಲಾಗಿದೆ.



ಭಾರತದ ಕುಟುಂಬಗಳ ಸಮೀಕ್ಷೆಯನ್ನು ಆಧರಿಸಿದ 2020ರ ಬಡತನದ ಅಂಕಿ-ಅಂಶಗಳು ಇನ್ನೂ ಅಂತಿಮವಾಗುತ್ತಿವೆ. ಹೀಗಾಗಿ 2020ರಲ್ಲಿ ಭಾರತದಲ್ಲಿ ಬಡವರ ಸಂಖ್ಯೆಯಲ್ಲಿ ಆದ ಹೆಚ್ಚಳದ ವಿಚಾರವಾಗಿ ಗಣನೀಯ ಪ್ರಮಾಣದ ಅನಿಶ್ಚಿತತೆ ಇದೆ ಎಂದು ಕೂಡ ವಿಶ್ವ ಬ್ಯಾಂಕ್ ವರದಿಯು ಸ್ಪಷ್ಟಪಡಿಸಿದೆ.

ವಿಶ್ವದಲ್ಲಿ 2019ರಿಂದ 2020ರ ನಡುವೆ ಬಡವರ ಸಂಖ್ಯೆಯಲ್ಲಿ ಆಗಿರುವ ಏರಿಕೆಯು 1990ರ ನಂತರದ ಅತಿದೊಡ್ಡ ಏರಿಕೆ. ಇದು ಎರಡನೆಯ ವಿಶ್ವಯುದ್ಧದ ನಂತರದ ಅತಿದೊಡ್ಡ ಏರಿಕೆಯೂ ಆಗಿರಬಹುದು. ಕೋವಿಡ್ ಕಾರಣದಿಂದಾಗಿ ಆಗಿರುವ ಏರಿಕೆಯು ಏಷ್ಯಾದ ಹಣಕಾಸು ಬಿಕ್ಕಟ್ಟಿನ ಕಾರಣದಿಂದಾಗಿ ಆದ ಬಡತನದ ಏರಿಕೆಗಿಂತ ನಾಲ್ಕು ಪಟ್ಟು ಹೆಚ್ಚು ಎಂದು ವರದಿ ತಿಳಿಸಿದೆ.

ಭಾರತದಲ್ಲಿನ ಬಡವರ ಸಂಖ್ಯೆಯನ್ನು ಅಂದಾಜಿಸಲು ವಿಶ್ವ ಬ್ಯಾಂಕ್, ಖಾಸಗಿ ಸಂಸ್ಥೆಯಾಗಿರುವ ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಕಲೆಹಾಕಿರುವ ಅಂಕಿ-ಅಂಶಗಳನ್ನು ಬಳಸಿಕೊಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಕೋಕ	12500-25000
ಹಳತು	48000-56000
ಚಿತ್ರದುರ್ಗ	
ಅಪಿ	49619-50029
ಬೆಟ್ಟೆ	38049-38469
ಕೆಂಪುಗೋಟು	29510-29999
ರಾಶಿ	49139-49589
ಕುಮಟ	
ಚಿಪ್ಪು	27099-32689
ಕೋಕ	14510-30679
ಹೊಸಚಾಲಿ	36299-42199
ಹಳೆಚಾಲಿ	44099-44299
ಪುತ್ತೂರು	
ಹೊಸತು	35500-48500
ಸಾಗರ	
ಬಿಳಿಗೋಟು	8100-32529
ಚಾಲಿ	36599-40299
ಕೋಕ	12129-36599
ಕೆಂಪುಗೋಟು	20690-38199
ರಾಶಿ	36989-50599
ಸಿಪ್ಪೆಗೋಟು	4029-21688
ಶಿವಮೊಗ್ಗ	
ಗೊಬರಲು	12309-37899
ರಾಶಿ	44599-50699
ಸರಕು	58007-80806
ಸಿದ್ದಾಪುರ	
ಬಿಳಿಗೋಟು	27699-35399
ಚಾಲಿ	38809-42299
ಕೋಕ	24099-31319
ಕೆಂಪುಗೋಟು	34189-34189
ರಾಶಿ	49469-50599
ತಟ್ಟಿಬೆಟ್ಟೆ	37699-43099
ಶಿರಸಿ	
ಬೆಟ್ಟೆ	36699-46699
ಬಿಳಿಗೋಟು	19399-36800
ಚಾಲಿ	34849-43500
ಕೆಂಪುಗೋಟು	26199-38169
ರಾಶಿ	44399-49009
ಯಲ್ಲಾಪುರ	
ಬಿಳಿಗೋಟು	26869-34429
ಚಾಲಿ	38699-43020
ಕೋಕ	20899-32899
ಕೆಂಪುಗೋಟು	28899-35599
ರಾಶಿ	47801-52429
ತಟ್ಟಿಬೆಟ್ಟೆ	40199-46399

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16200	16000	16100	217.45 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4750	2158 ಡಾಲರ್ಸ್

ಸಂಸ್ಕರಿಸಿದ ತಾಳೆ ಎಣ್ಣೆ ಆಮದು ಹೆಚ್ಚಳ

ನವದೆಹಲಿ (ಪಿಟಿಐ): ಸಂಸ್ಕರಿಸಿದ ತಾಳೆ ಎಣ್ಣೆ ಆಮದು ಕಳೆದ ವರ್ಷದ 11 ತಿಂಗಳಿಗೆ ಹೋಲಿಸಿದರೆ ಎರಡೂವರೆ ಪಟ್ಟಿಗೂ ಹೆಚ್ಚು ಏರಿಕೆ ಕಂಡಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ (ಎಸ್‌ಇಎ) ಗುರುವಾರ ತಿಳಿಸಿದೆ.

2021ರ 11 ತಿಂಗಳಿನಲ್ಲಿ 6.28 ಲಕ್ಷ ಟನ್‌ನಷ್ಟು ಸಂಸ್ಕರಿಸಿದ ತಾಳೆ ಎಣ್ಣೆ ಆಮದಾಗಿತ್ತು. 2022ರ 11 ತಿಂಗಳಿನಲ್ಲಿ (ನವೆಂಬರ್-ಸೆಪ್ಟೆಂಬರ್ ಅವಧಿ) 17.12 ಲಕ್ಷ ಟನ್‌ಗೆ ಏರಿಕೆ ಆಗಿದೆ ಎಂದು ತಿಳಿಸಿದೆ.

ಇಂಡೊನೇಷ್ಯಾ ದೇಶವು ಸಂಸ್ಕರಿಸಿದ ತಾಳೆ ಎಣ್ಣೆ ಮೇಲಿನ ಕಸ್ಟಮ್ಸ್ ಸುಂಕವನ್ನು ಕಡಿಮೆ ಮಾಡಿದೆ. ಇದರಿಂದಾಗಿ ಸಂಸ್ಕರಿಸಿದ ತಾಳೆ ಎಣ್ಣೆಯನ್ನು ರಿಯಾಯಿತಿ ದರದಲ್ಲಿ ರಫ್ತು ಮಾಡಲು ಇಂಡೊನೇಷ್ಯಾದ ರಫ್ತುದಾರರು ಹೆಚ್ಚಿನ ಆಸಕ್ತಿ ತೋರಿಸಿದರು ಎಂದು ಎಸ್‌ಇಎ ತಿಳಿಸಿದೆ.

ಅಡುಗೆ ಎಣ್ಣೆಗಳ ಬೆಲೆ ಇಳಿಕೆಯಿಂದಾಗಿ ದೇಶಿ ಎಣ್ಣೆಕಾಳುಗಳ ದರವು ಕನಿಷ್ಠ ಬೆಂಬಲ ಬೆಲೆಯ ಮಟ್ಟಕ್ಕೆ ಇಳಿಕೆ ಆಗಿದೆ. ಇದು ಸರ್ಕಾರ, ಉದ್ಯಮ ಮತ್ತು ರೈತರ ಆತಂಕಕ್ಕೆ ಕಾರಣವಾಗಿದೆ ಎಂದು ಅದು ಹೇಳಿದೆ.

ಕಚ್ಚಾ ಮತ್ತು ಸಂಸ್ಕರಿಸಿದ ತಾಳೆ ಎಣ್ಣೆಯ ಮೇಲಿನ ಆಮದು ಸುಂಕವನ್ನು ಕನಿಷ್ಠ ಶೇ 10ರಷ್ಟು ಹೆಚ್ಚಿಸುವಂತೆ ಎಸ್‌ಇಎ ಸರ್ಕಾರಕ್ಕೆ ಒತ್ತಾಯಿಸಿದೆ.

ನವೋದ್ಯಮ: ತಗ್ಗಿದ ಹೂಡಿಕೆ

ನವದೆಹಲಿ (ಪಿಟಿಐ): ಜಾಗತಿಕ ಆರ್ಥಿಕತೆಯ ಮಂದಗತಿಯ ಬೆಳವಣಿಗೆಯ ಬೆನ್ನಲ್ಲೇ ಭಾರತದಲ್ಲಿ ನವೋದ್ಯಮಗಳ ಮೇಲೆ ಬಂಡವಾಳ ಹೂಡಿಕೆಯು ಇಳಿಕೆ ಕಾಣುತ್ತಿದೆ ಎಂದು ಪಿಡಬ್ಲ್ಯುಸಿ ಇಂಡಿಯಾ ವರದಿಯು ಹೇಳಿದೆ.

2022ರ ಮೂರನೇ ತ್ರೈಮಾಸಿಕದಲ್ಲಿ ದೇಶದ ನವೋದ್ಯಮಗಳಲ್ಲಿ ₹ 22,221 ಕೋಟಿ ಬಂಡವಾಳ ಹೂಡಿಕೆ ಆಗಿದೆ. ಇದು ಎರಡು ವರ್ಷಗಳ ಕನಿಷ್ಠ ಮಟ್ಟ ಎಂದು ತನ್ನ ವರದಿಯಲ್ಲಿ ತಿಳಿಸಿದೆ.

2022ರ ಜುಲೈ-ಸೆಪ್ಟೆಂಬರ್ ಅವಧಿಯಲ್ಲಿ ಎರಡು ನವೋದ್ಯಮಗಳು ಮಾತ್ರವೇ ಯುನಿಕಾರ್ನ್ ಸ್ಥಾನ ಪಡೆದುಕೊಂಡಿವೆ. ಇದೇ ಅವಧಿಯಲ್ಲಿ ಜಾಗತಿಕ ಮಟ್ಟದಲ್ಲಿ ಒಟ್ಟು 20 ಯುನಿಕಾರ್ನ್‌ಗಳು ಸೃಷ್ಟಿಯಾಗಿವೆ. ನವೋದ್ಯಮಗಳಲ್ಲಿ ಎಲ್ಲಾ ಹಂತಗಳಲ್ಲಿಯೂ ಬಂಡವಾಳ ಹೂಡಿಕೆ ಇಳಿಮುಖವಾಗಿದೆ ಎಂದು ತಿಳಿಸಿದೆ.

'ಇದೇ ಸ್ಥಿತಿಯು ಎಲ್ಲಿಯವರೆಗೆ ಮುಂದುವರಿಯಲಿದೆ ಎಂದು ಅಂದಾಜು ಮಾಡುವುದು ಕಷ್ಟ. ಆದರೆ, ಹೂಡಿಕೆದಾರರು ಬಹಳ ಎಚ್ಚರಿಕೆಯಿಂದ ನವೋದ್ಯಮಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ' ಎಂದು ಪಿಡಬ್ಲ್ಯುಸಿ ಇಂಡಿಯಾದ ಪಾಲುದಾರ ಅಮಿತ್ ನಾವ್ಕಾ ಹೇಳಿದ್ದಾರೆ.

'ಆಚಾರ್ಯ ಬಾಲಕೃಷ್ಣಗೆ ಜಾಗತಿಕ ಮಾನ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತಂಜಲಿ ಆಯುರ್ವೇದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಅವರನ್ನು 'ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ಮತ್ತು ಎಲ್ಸುವೀರ್ ಸಂಸ್ಥೆಯು ವಿಶ್ವದ ಟಾಪ್ ಶೇಕಡ 2ರಷ್ಟು ವಿಜ್ಞಾನಿಗಳ ಪೈಕಿ ಒಬ್ಬರು ಎಂದು ಮಾನ್ಯ ಮಾಡಿವೆ' ಎಂದು ಪತಂಜಲಿ ಯೋಗಪೀಠ ಟ್ರಸ್ಟ್ ಹೇಳಿದೆ.



ಆಚಾರ್ಯ ಬಾಲಕೃಷ್ಣ

'ಆಯುರ್ವೇದ ಮತ್ತು ಯೋಗದ ಮೇಲಿನ ವೈಜ್ಞಾನಿಕ ಸಂಶೋಧನೆಗಳಿಗೆ ಹಿಂದೆಂದೂ ಸಿಗದಿದ್ದಂತಹ ಜಾಗತಿಕ ಮಾನ್ಯತೆ ಇದು. ಭಾರತದ ಪುರಾತನ ವಿಜ್ಞಾನಕ್ಕೆ ಬಾಲಕೃಷ್ಣ ಅವರು ಜಾಗತಿಕ ಮಾನ್ಯತೆ ತಂದಿರುವುದನ್ನು ನೋಡುವುದು ಪತಂಜಲಿ ಕುಟುಂಬಕ್ಕೆ ಹೆಮ್ಮೆಯ ಹಾಗೂ ಗೌರವದ ಸಂಗತಿ' ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

13–10-2022

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10750-10800
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1680)
ಒಂದು ವಾರದ ಡೆಲಿವರಿ	1665 (1675)
ಸೋಯಾ ಕಚ್ಚಾ	1182 (1192)
ಪಾಮ್ ವಾರದ ಡೆಲಿವರಿ	928 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	1385 (1375)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,300 (50,600)
ಬೆಳ್ಳಿ ಕೆ.ಜಿ 56,000 (57,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಐಎಸ್‌ಎಲ್ ಫುಟ್‌ಬಾಲ್: ಜಯ ಮುಂದುವರಿಸುವ ಛಲ

ಚೆಟ್ರಿ ಪಡೆಗೆ ಚೆನ್ನೈ ಸವಾಲು

ಚೆನ್ನೈ (ಪಿಟಿಐ): ಗೆಲುವಿನ ಲಯ ಮುಂದುವರಿಸುವ ವಿಶ್ವಾಸದಲ್ಲಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಶುಕ್ರವಾರ ಚೆನ್ನೈಯಿನ್ ಎಫ್‌ಸಿ ಸವಾಲಿಗೆ ಸಜ್ಜಾಗಿದೆ.

ಟೂರ್ನಿಯ ತಮ್ಮ ಮೊದಲ ಪಂದ್ಯಗಳಲ್ಲಿ ಉಭಯ ತಂಡಗಳು ಜಯ ಸಾಧಿಸಿ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿವೆ.

ಲೀಗ್‌ನಲ್ಲಿ 50ನೇ ಗೆಲುವಿನ ಮೈಲಿಗಲ್ಲು ತಲುಪಲು ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿಗೆ ಇನ್ನೊಂದೇ ಜಯದ ಅವಶ್ಯವಿದೆ. ಚೆನ್ನೈ ವಿರುದ್ಧ ಕಳೆದ ಆರು ಪಂದ್ಯಗಳಲ್ಲಿ ಬೆಂಗಳೂರು ಸೋಲು ಕಂಡಿಲ್ಲ.

ಈ ಬಾರಿ ಮೊದಲ ಪಂದ್ಯದಲ್ಲಿ ಬೆಂಗಳೂರು ತಂಡವು ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡಕ್ಕೆ ಸೋಲುಣಿಸಿತ್ತು. ಅದೇ ರೀತಿಯ ಸಾಮರ್ಥ್ಯವನ್ನು ಮುಂದುವರಿಸುವ ವಿಶ್ವಾಸದಲ್ಲಿ ತಂಡವಿದೆ.

ಮೊದಲ ಹಣಾಹಣಿಯಲ್ಲಿ ಎಟಿಕೆ ಮೋಹನ್ ಬಾಗನ್ ತಂಡವನ್ನು ಸೋಲಿಸಿದ್ದ ಚೆನ್ನೈ, ಲೀಗ್‌ನಲ್ಲಿ 50ನೇ ಜಯ ಸಾಧಿಸಿದ ಮೂರನೇ ತಂಡ ಎನಿಸಿಕೊಂಡಿತ್ತು. ಅಲ್ಲದೆ 200 ಗೋಲುಗಳ ಮೈಲಿಗಲ್ಲು ತಲುಪಿದ ಮೂರನೇ ತಂಡ ಎಂಬ ಶ್ರೇಯ ಗಳಿಸಿತ್ತು.

ಈ ಪಂದ್ಯದಲ್ಲಿ ಚೆಟ್ರಿ ಪಡೆಯನ್ನು ಸೋಲಿಸುವ ವಿಶ್ವಾಸದಲ್ಲಿದೆ.

ಐಎಸ್‌ಎಲ್‌ನಲ್ಲಿ ಮುಖಾಮುಖಿ

ಪಂದ್ಯಗಳು 11

ಬೆಂಗಳೂರು ಜಯ	6
ಚೆನ್ನೈ ಗೆಲುವು	3
ಡ್ರಾ	2

ಪಂದ್ಯ ಆರಂಭ ರಾತ್ರಿ 7.30

ಸ್ಥಳ: ಜವಾಹರಲಾಲ್ ನೆಹರೂ ಕ್ರೀಡಾಂಗಣ, ಚೆನ್ನೈ

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಬೆಂಗಳೂರು ಎಫ್‌ಸಿ ತಂಡದ ರಾಯ್‌ಕೃಷ್ಣ ಮತ್ತು ನೋರೆಮ್ ರೋಷನ್ ಸಿಂಗ್

16ರಂದು ಬೆಂಗಳೂರು ಮ್ಯಾರಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀರಾಮ್ ಪ್ರಾಪರ್ಟೀಸ್ ಪ್ರಾಯೋಜಿಸುವ ಬೆಂಗಳೂರು ಮ್ಯಾರಥಾನ್ ಇದೇ 16ರಂದು ನಡೆಯಲಿದ್ದು, 11 ಸಾವಿರಕ್ಕೂ ಅಧಿಕ ಜನ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಈ ಕುರಿತು ಗುರುವಾರ ಎನ್‌ಬಿಎ ಸ್ಪೋರ್ಟ್ಸ್ ವರ್ಚುವಲ್ ಪತ್ರಿಕಾಗೋಷ್ಠಿ ಆಯೋಜಿಸಿತ್ತು.

ಒಂಬತ್ತನೇ ಆವೃತ್ತಿಯ ಮ್ಯಾರಥಾನ್‌ಗೆ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಶ್ರೀರಾಮ್ ಪ್ರಾಪರ್ಟೀಸ್ ಲಿಮಿಟೆಡ್‌ನ ಚೇರ್ಮನ್ ಮತ್ತು ವ್ಯವಸ್ಥಾಪಕ ನಿರ್ದೇಶಕ ಮುರಳಿ ಎಂ. ಮತ್ತು ನಟ ಧೀರೇನ್ ರಾಮ್ ಕುಮಾರ್ ಅವರು ಚಾಲನೆ ನೀಡಲಿದ್ದಾರೆ.

ಮ್ಯಾರಥಾನ್ ಬೆಳಿಗ್ಗೆ 4 ಗಂಟೆಗೆ, ಹಾಫ್ ಮ್ಯಾರಥಾನ್ 6.15ರಿಂದ ನಡೆಯಲಿದೆ. ವಿಶೇಷ ಉದ್ದೇಶಕ್ಕಾಗಿ ನಡೆಯಲಿರುವ 10ಕೆ ಮತ್ತು 5ಕೆ ಓಟಗಳು ಕ್ರಮವಾಗಿ ಬೆಳಿಗ್ಗೆ 7.45 ರಿಂದ ಮತ್ತು 8.15ರಿಂದ ಆರಂಭವಾಗಲಿವೆ.

'10ಕೆ ಓಟಕ್ಕೆ ನೋಂದಾಯಿಸುವ ಪ್ರತಿಯೊಬ್ಬರ ಶುಲ್ಕದಲ್ಲಿ ₹ 1 ಸಾವಿರ ಅನ್ನು ಶ್ರೀ ಶಂಕರ ಕ್ಯಾನ್ಸರ್ ಫೌಂಡೇಷನ್‌ಗೆ ದಾನವಾಗಿ ನೀಡಲಾಗುತ್ತದೆ. ಕ್ಯಾನ್ಸರ್ ರೋಗಿಗಳಿಗಾಗಿ ಹಣವನ್ನು ಸಂಗ್ರಹಿಸಲು ಮಾತ್ರವಲ್ಲದೆ ಈ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದೊಂದಿಗೆ ಈ ಉಪಕ್ರಮ ನಡೆಯುತ್ತಿದೆ' ಎಂದು ಧೀರೇನ್ ರಾಮ್‌ಕುಮಾರ್ ಅವರು ವಿವರಿಸಿದರು.

ಅರ್ಜುನ ಪ್ರಶಸ್ತಿ ಪುರಸ್ಕೃತ, ಮಾಜಿ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಅಶ್ವಿನಿ ನಾಚಪ್ಪ ಅವರು ಈ ಸಂದರ್ಭದಲ್ಲಿ ಮ್ಯಾರಥಾನ್ ಟಿ-ಶರ್ಟ್ ಮತ್ತು ಪದಕಗಳನ್ನು ಅನಾವರಣಗೊಳಿಸಿದರು.

https://www.bengalurumarathon.in ಮೂಲಕ ಮ್ಯಾರಥಾನ್‌ಗೆ ನೋಂದಾಯಿಸಿಕೊಳ್ಳಬಹುದು.

ಕ್ರಿಕೆಟ್: ಸೆಮಿಫೈನಲ್‌ಗೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹಿಳಾ ತಂಡವು ಬಿಸಿಸಿಐ 19 ವರ್ಷದೊಳಗಿನವರ ಟ್ವೆಂಟಿ-20 ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದೆ.

ಅಹಮದಾಬಾದ್‌ನ ಮೊಟೆರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಎಂಟರಘಟ್ಟದ ಹಣಾಹಣಿಯಲ್ಲಿ ಕರ್ನಾಟಕ ತಂಡವು ಆರು ವಿಕೆಟ್‌ಗಳಿಂದ ಪಂಜಾಬ್ ತಂಡಕ್ಕೆ ಸೋಲುಣಿಸಿತು.

ಮೊದಲು ಬ್ಯಾಟ್ ಮಾಡಿದ ಪಂಜಾಬ್ ನಿಗದಿತ ಓವರ್‌ಗಳಲ್ಲಿ ಒಂಬತ್ತು ವಿಕೆಟ್ ಕಳೆದುಕೊಂಡು 103 ರನ್ ಗಳಿಸಿತು. ಗುರಿ ಬೆನ್ನತ್ತಿದ ಕರ್ನಾಟಕ 19ನೇ ಓವರ್‌ನಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಜಯ ಸಾಧಿಸಿತು.

ಸೆಮಿಫೈನಲ್‌ನಲ್ಲಿ ರಾಜ್ಯ ತಂಡಕ್ಕೆ ಆಂಧ್ರ ಸವಾಲು ಎದುರಾಗಿದೆ. ಶನಿವಾರ ಈ ಪಂದ್ಯ ನಡೆಯಲಿದೆ.

ಸಂಕ್ಷಿಪ್ತ ಸ್ಕೋರು: ಪಂಜಾಬ್: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 103 (ವಂಶಿಕಾ ಮಹಾಜನ್ 24, ಸಿಮರ್‌ಪ್ರೀತ್ 12; ಮಿಥಿಲಾ ವಿನೋದ್ 15ಕ್ಕೆ 3, ವಂದಿತಾ ರಾವ್ 22ಕ್ಕೆ 3, ರೀಮಾ ಫರೀದ್ 21ಕ್ಕೆ 2). ಕರ್ನಾಟಕ: 18.2 ಓವರ್‌ಗಳಲ್ಲಿ 4 ವಿಕೆಟ್‌ಗೆ 107 (ಪ್ರೇರಣಾ ಜಿ.ಆರ್ ಔಟಾಗದೆ 47, ರೋಶಿನಿ ಕಿರಣ್ 14, ಮಿಥಿಲಾ ವಿನೋದ್ ಔಟಾಗದೆ 17; ಅಕ್ಷಿತಾ ಭಗತ್ 17ಕ್ಕೆ 1, ಮುಸ್ಕಾನ್ ಸೋಗಿ 12ಕ್ಕೆ 1, ಪ್ರೀತಿ ಕಪೂರ್ 16ಕ್ಕೆ 1). ಫಲಿತಾಂಶ: ಕರ್ನಾಟಕ ತಂಡಕ್ಕೆ ಆರು ವಿಕೆಟ್‌ಗಳ ಗೆಲುವು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Marketing & Sales
HIRING
BUSINESS DEVELOPMENT EXECUTIVE NOS: 100+
BUSINESS DEVELOPMENT MANAGER NOS: 100+
REGIONAL MANAGER NOS: 20+
Location: BANGALORE
DATE: 15/10/2022
NEEDFUL DOCUMENTS
dileepan.m@nibavlifts.com
+918925804732
NIBAV

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ಎಲ್ಲರಿಗೂ ... ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ... 9611225266/ 9611225388

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ಮಹಿಳಾ ವಾರ್ಡನ್ ಬೇಕಾಗಿದ್ದಾರೆ
ಬೆಂಗಳೂರಿನ ಎಸ್‌ಎಸ್‌ಬಿ ಮಠ ಟ್ರಸ್ಟ್‌ನ ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಬೇಕಾಗಿದ್ದಾರೆ. ಆಸಕ್ತರು ಅರ್ಜಿ ಸಲ್ಲಿಸಬಹುದು. ವಯಸ್ಸಿನ ಮಿತಿ: 35 ರಿಂದ 60 ವರ್ಷಗಳು. ವಿಧವೆ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡಲಾಗುವುದು.
10 ದಿನಗಳೊಳಗಾಗಿ ಸಂಪರ್ಕಿಸಿ:
080-22879777
9945352645

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Wanted

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ.10,000-15,000. 8951315839, 9880545002

ಇತರೆ

Medical

ಶ್ರೀ ಶಕ್ತಿ ಎಲೆಕ್ಟ್ರೋ ಮ್ಯಾಗ್ನೆಟಿಕ್ ಮಸಾಜ್ ಸೆಂಟರ್ (ಸರ್ವಿಸ್). ಮಂಡಿ, ಬೆನ್ನು, ಕತ್ತು ನೋವು ಲಕ್ವಾ ವೆರಿಕೋಸ್ ವೇಯ್ನ್, ಆರ್ಥ್ರೈಟಿಸ್ ಸಮಸ್ಯೆಗಳಿಗೆ, ಯಾವುದೇ ರೀತಿಯ ಔಷಧಿ, ಶಸ್ತ್ರ ಚಿಕಿತ್ಸೆ ಇಲ್ಲದೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಮಸಾಜ್ ಮಾಡಲಾಗುವುದು. ವಿಳಾಸ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಶೇಷಾದ್ರಿ ಪುರಂ ಬೆಂಗಳೂರು. 9019626612

ಪ್ರವಾಸ

Pilgrimage Tours

ಸುವರ್ಣ ಯಾತ್ರ 27-10-22 ಪೂರಿ,ಕೊನಾರ್ಕ್, ಭುವನೇಶ್ವರ್ ಪ್ರವಾಸ.27-10-22 ತಮಿಳುನಾಡು ಪ್ರವಾಸ.11-11-22 ಕಾಶಿ ಪ್ರವಾಸ. 9019462508, 9008381022

Travel

★ಶ್ರೇಯಸ್ ಟೂರ್ಸ್★ 16.10.2022 8ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ, 26.10.2022 5ದಿನಗಳು ತಮಿಳುನಾಡು ರಾಜ್ಯಪ್ರವಾಸ ಅಹೋಬಲಂ,ಶ್ರೀಶೈಲಂ ಮಹಾನಂದಿ,ಮಂತ್ರಾಲಯ, 03.11.2022 15ದಿನಗಳು ಅಖಂಡ ಮಧ್ಯಪ್ರದೇಶರಾಜ್ಯ ಪ್ರವಾಸ ಅಮರಕಂಟಕ,ಚಿತ್ರಕೂಟ ಮಯ್ಯಾರ್ ಸಹಿತ, 04.11.2022 13ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ ಕಚ್‌ಬುಜ್ ಸಹಿತ, 24.11.2022,28.11.2022 12/15/21ದಿನಗಳು ಈಶಾನ್ಯ ರಾಜ್ಯಗಳ(ಸೆವೆನ್‌ಸಿಸ್ಟರ್ಸ್) ಅಸ್ಸಾಂ,ಅರುಣಾಚಲ ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 8073824856 9206979202 6366322639

ದೆಹಲಿ ಮಥುರ ಅಲಹಾಬಾದ್ ಕಾಶಿ,ಗಯಾ,ಅಯೋಧ್ಯ ನೈಮೀಶಾರಣ್ಯ 29.10.2022 ರಿಂದ 13/10 ದಿನಗಳು. ಸೋಮನಾಥ್ ದ್ವಾರಕಾ ಉಜ್ಜಯಿನಿ ಓಂಕಾರೇಶ್ವರ್ ಮಾತೃಗಯಾ ಅಷ್ಟ ಜ್ಯೋತಿರ್ಲಿಂಗಗಳು 20.11.2022 28.11.2022 ರಿಂದ 15/10 ದಿನಗಳು. ವೈಷ್ಣೋದೇವಿ ಅಮೃತ್ಸರ್ ಕುಲು,ಮನಾಲಿ,ಶಕ್ತಿಪೀಠಗಳು ಕುರುಕ್ಷೇತ್ರ 18.11.2022 ರಿಂದ 12 ದಿನಗಳು. ಗೌಹಾಟಿ ಸಿಕ್ಕಿಂ ಡಾರ್ಜಲಿಂಗ್ ಕೊಲ್ಕತ್ತ,ಪುರಿ ಕೊನಾರ್ಕ್ ಭುವನೇಶ್ವರ್ 25.11.2022 ರಿಂದ 14 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಕಾರ್ತಿಕ ಮಾಸದ ವಿಶೇಷ ಪ್ರವಾಸ: ವಿಮಾನ/A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟ ಜ್ಯೋತಿರ್ಲಿಂಗ ಗುಜರಾತ್ ಮಧ್ಯಪ್ರದೇಶ ಮಹಾರಾಷ್ಟ್ರ ಮೌಂಟ್‌ಅಬು ಇತ್ಯಾದಿ. ಊಟ,ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289 9686721196

ಹೆಸರಾಂತ ಪ್ರವಾಸಿ ಸಂಸ್ಥೆಯಾದ ಏಷ್ಯನ್ ಟ್ರಾವಲ್ ಏಜೆನ್ಸಿ ವತಿಯಿಂದ ಸಮಸ್ತ ನಾಡಿನ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳೊಂದಿಗೆ ವಿಮಾನ/A/C ಬಸ್ಸಿನಲ್ಲಿ 09.11.2022 ಸೋಮನಾಥ ಕಚ್-ಬುಜ್ ಓಂಕಾರೇಶ್ವರ್ ಮಂಹಾಕಾಳೇಶ್ವರ್ 11.11.2022 ಪಂಚರಾಮ ಸಮೇತ ಪ್ರವಾಸ 14.11.2022, 6 ದಿನಗಳ ಕಾಶಿ,ಅಲಹಾಬಾದ್‌ಅಯೋಧ್ಯ 18.11.2022 ಮುಕ್ತಿನಾಥ, ನೇಪಾಳ,ಪೋಕ್ರಾ 24.12.2022, 6 ದಿನಗಳ ಶಿರಡಿ ಮತ್ತು 9 ದಿನಗಳ ದಕ್ಷಿಣ ಭಾರತ ಪ್ರವಾಸ. ಸಂಪರ್ಕಿಸಿ. 26574131 26573421 8317446683

ಭವಿಷ್ಯ

Healing

6 - ಹಂತದ ಮಹಾಜ್ವಾಲ ಮಂತ್ರ
ಜೀವನದಲ್ಲಿ ಯಶಸ್ಸು, ದೈಹಿಕ ಆರೋಗ್ಯ, ಮಾನಸಿಕ, ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ವಿದ್ಯಾರ್ಥಿಗಳ ಯಶಸ್ಸಿಗೆ
ಸಂಪರ್ಕಿಸಿ:
82775 65480

Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಾಹ್ಮಿತಂತ್ರ ವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ ಗುಟ್ಟಹಳ್ಳಿ. ಬೆಂ.9620201188

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 9900510171

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135
CD Per Sqcm	Single Col	Double Col	Multi Col	
	480	450	475	

SPECIAL OFFER
PAY 2 And GET 1 Free
PAY 3 And GET 2 Free
PAY 5 And GET 5 Free
For More Details Contact:
Ph: 080- 45557160 | 163 | 164 |
9731810277 | 9901641752 | 9845114560 | 9886213331
*conditions apply
dhclassifieds@deccanherald.co.in www.dhclassifieds.com

ಮಹಿಳಾ ಏಷ್ಯಾ ಕಪ್ ಟಿ20: ಥಾಯ್ಲೆಂಡ್ ಮಣಿಸಿದ ಹರ್ಮನ್‌ಪ್ರೀತ್ ಬಳಗ

ಭಾರತ– ಶ್ರೀಲಂಕಾ ಫೈನಲ್ ಹಣಾಹಣಿ

ಸಿಲೆಟ್ (ಪಿಟಿಐ): ಭಾರತ ಮತ್ತು ಶ್ರೀಲಂಕಾ ತಂಡಗಳು ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಗುರುವಾರ ನಡೆದ ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಮೊದಲೇ ನಿರೀಕ್ಷಿಸಿದಂತೆ ಭಾರತ ತಂಡವು ಥಾಯ್ಲೆಂಡ್ ವಿರುದ್ಧ ಸುಲಭ ಜಯ ದಾಖಲಿಸಿತು. ಪಾಕಿಸ್ತಾನದ ಎದುರು ಶ್ರೀಲಂಕಾ ಕೇವಲ 1 ರನ್ ಅಂತರದ ರೋಚಕ ಗೆಲುವು ಸಾಧಿಸಿತು. ಬಿಸ್ಮಾ ಮರೂಫ್ ಬಳಗದ ಫೈನಲ್ ಕನಸು ಕಮರಿತು.

ನಾಲ್ಕರ ಘಟ್ಟದ ಮೊದಲ ಪಂದ್ಯದಲ್ಲಿ; ಟಾಸ್ ಗೆದ್ದ ಥಾಯ್ಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.ಶಫಾಲಿ ವರ್ಮಾ (42; 28ಎ, 4X5, 6X1) ಹಾಗೂ ಹರ್ಮನ್‌ಪ್ರೀತ್ ಕೌರ್ (36; 30ಎ, 4X4) ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 148 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಥಾಯ್ಲೆಂಡ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 74 ರನ್ ಗಳಿಸಿತು. 74 ರನ್‌ಗಳಿಂದ ಭಾರತ ಗೆದ್ದಿತು.

ಇದೇ ಮೊದಲ ಬಾರಿಗೆ ನಾಲ್ಕರ ಘಟ್ಟ ಪ್ರವೇಶಿಸಿದ್ದ ಥಾಯ್ಲೆಂಡ್ ತಂಡವು ಪೂರ್ಣ ಇನಿಂಗ್ಸ್ ಆಡಿತು. ಆಲೌಟ್ ಕೂಡ ಆಗದಿರುವುದು ವಿಶೇಷ. ನೆರುಮೊಳ್ ಚೈವೈ ಹಾಗೂ ನತಾಯಾ ಬೂಚಾತಮ್ ತಲಾ 21 ರನ್ ಗಳಿಸಿದರು. ಅವರಿಬ್ಬರೇ ಎರಡಂಕಿ ತಲುಪಿದವರು.


ಶಫಾಲಿ ವರ್ಮಾ

ರೋಚಕ ಹಣಾಹಣಿ: ಲಂಕೆ ಜಯಭೇರಿ: ಮಧ್ಯಾಹ್ನ ನಡೆದ ರೋಚಕವಾದ ಎರಡನೇ ಸೆಮಿಫೈನಲ್‌ನಲ್ಲಿ ಶ್ರೀಲಂಕಾ ತಂಡವು ಪಾಕ್ ವಿರುದ್ಧ ಗೆದ್ದಿತು. ಕೊನೆಯ ಓವರ್‌ನಲ್ಲಿ ಪಾಕ್ ತಂಡದ ಗೆಲುವಿಗೆ 9 ರನ್‌ಗಳ ಅವಶ್ಯಕತೆ ಇತ್ತು. ಲಂಕಾ ತಂಡದ ಬಲಗೈ ಬೌಲರ್ ಅಚಿನಿ ಕೌಸಲ್ಯಾ ಅವರು ಕೇವಲ ಏಳು ರನ್ ಬಿಟ್ಟುಕೊಟ್ಟು ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಬ್ಯಾಟರ್ ನಿದಾ ದಾರ್ ಹಾಗೂ ಅಲಿಯಾ ರಿಯಾಜ್ ಅವರ ಪ್ರಯತ್ನಕ್ಕೆ ಫಲ ಲಭಿಸಲಿಲ್ಲ.

ಮುಖ್ಯಾಂಶಗಳು

- ಶಫಾಲಿ, ಹರ್ಮನ್‌ಪ್ರೀತ್ ಕೌರ್ ಉತ್ತಮ ಬ್ಯಾಟಿಂಗ್
- ಒಂಬತ್ತು ವಿಕೆಟ್‌ಗೆ 74 ರನ್ ಗಳಿಸಿದ ಥಾಯ್ಲೆಂಡ್
- ಪಾಕಿಸ್ತಾನ ಎದುರು ಲಂಕಾಗೆ 1 ರನ್‌ನ ಗೆಲುವು

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 148 (ಶಫಾಲಿ ವರ್ಮಾ 42, ಜೆಮಿಮಾ ರಾಡ್ರಿಗಸ್ 27, ಹರ್ಮನ್‌ಪ್ರೀತ್ ಕೌರ್ 36, ಸಾರ್‌ನಾರಾಯನ್ ತಿಪೊಚ್ 24ಕ್ಕೆ3) ಥಾಯ್ಲೆಂಡ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 74 (ನಾರುಮೊಳ್ ಚೈವೈ 21, ನತಾಯಾ ಬೂಚತಾಮ್ 21, ದೀಪ್ತಿ ಶರ್ಮಾ 7ಕ್ಕೆ3, ರಾಜೇಶ್ವರಿ ಗಾಯಕವಾಡ 10ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 74 ರನ್‌ಗಳ ಜಯ.

ಶ್ರೀಲಂಕಾ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 122 (ಅನುಷ್ಕಾ ಸಂಜೀವಿನಿ 26, ಮಾದವಿ 35, ನೀಲಾಕ್ಷಿ ಡಿಸಿಲ್ವಾ 14, ಹಸಿನಿ ಪೆರೆರಾ 13, ನಷ್ರಾ ಸಂಧು 17ಕ್ಕೆ3), ಪಾಕಿಸ್ತಾನ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 121 (ಬಿಸ್ಮಾ ಮರೂಫ್ 42, ನಿದಾ ದಾರ್ 26, ಇನೊಕಾ ರಣವೀರಾ 17ಕ್ಕೆ2) ಫಲಿತಾಂಶ: ಶ್ರೀಲಂಕಾ ತಂಡಕ್ಕೆ 1 ರನ್ ಜಯ.

ಸದಾಕಾಲ ಆಡಳಿತ ಅಸಾಧ್ಯ

ಬಿಸಿಸಿಐ ನಿರ್ಗಮಿತ ಅಧ್ಯಕ್ಷ ಸೌರವ್ ಗಂಗೂಲಿ ಅಭಿಮತ

ಕೋಲ್ಕತ್ತ (ಪಿಟಿಐ): ಸದಾಕಾಲ ಆಡಳಿತಗಾರನಾಗಿಯೇ ಉಳಿಯಲು ಸಾಧ್ಯವಿಲ್ಲ. ನಿರಾಕರಣೆಗಳು ಜೀವನದ ಭಾಗ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ನಿರ್ಗಮಿತ ಅಧ್ಯಕ್ಷ ಸೌರವ್ ಗಂಗೂಲಿ ಗುರುವಾರ ಹೇಳಿದ್ದಾರೆ.

ಕಳೆದ 3 ವರ್ಷಗಳಿಂದ ಬಿಸಿಸಿಐ ಅಧ್ಯಕ್ಷರಾಗಿದ್ದ ಗಂಗೂಲಿ ಇದೇ 18ರಂದು ಅಧಿಕಾರವನ್ನು ರೋಜರ್ ಬಿನ್ನಿ ಅವರಿಗೆ ಹಸ್ತಾಂತರಿಸಲಿದ್ದಾರೆ. ಈಚೆಗೆ ಬಿನ್ನಿ ನಾಮಪತ್ರ ಸಲ್ಲಿಸಿದ್ದಾರೆ. ಗಂಗೂಲಿ ಅಧ್ಯಕ್ಷ ಗಾದಿಯನ್ನು ಬಿಟ್ಟು-ಕೊಟ್ಟಿದ್ದು ಅಚ್ಚರಿ ಮೂಡಿಸಿತ್ತು. ಅಲ್ಲದೇ ರಾಜಕೀಯ ಪಕ್ಷಗಳ ನಡುವೆ ವಾದಗಳಿಗೆ ಗ್ರಾಸವಾಗಿತ್ತು.

ಈ ಕುರಿತು ಮೌನ ಮುರಿದಿರುವ ಗಂಗೂಲಿ, 'ಯಾರಿಗೂ ಶಾಶ್ವತ ಆಟಗಾರನಾಗಿ ಉಳಿಯಲು ಸಾಧ್ಯವಿಲ್ಲ. ಅದೇ ರೀತಿ ಯಾವತ್ತೂ ಆಡಳಿತಗಾರನಾಗಿ ಉಳಿಯಲಾಗದು. ನಾಣ್ಯದ ಎರಡೂ ಬದಿ ನೋಡಿರುವುದು ಖುಷಿ ತಂದಿದೆ. ಭವಿಷ್ಯದಲ್ಲಿ ಇನ್ನೂ ಕೆಲವು ಮಹತ್ವದ ವಿಷಯಗಳತ್ತ ಗಮನ ಹರಿಸುವೆ' ಎಂದರು. ಬಂಧನ್ ಬ್ಯಾಂಕ್ ಪ್ರಚಾರ ರಾಯಭಾರಿಯಾಗಿ ನೇಮಕವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.


ಸೌರವ್ ಗಂಗೂಲಿ

'ಅಪಾರ ಪ್ರಮಾಣದಲ್ಲಿ ಕ್ರಿಕೆಟ್ ಚಟುವಟಿಕೆಗಳು ನಡೆಯುತ್ತಿವೆ. ಆದ್ದರಿಂದ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುವುದು ಆಡಳಿತಗಾರನಾಗಿ ನನ್ನ ಕರ್ತವ್ಯವಾಗಿತ್ತು. ದೇಶಿ ಕ್ರಿಕೆಟ್, ಮಹಿಳಾ ಕ್ರಿಕೆಟ್ ಸೇರಿದಂತೆ ಬಹಳಷ್ಟು ಚಟುವಟಿಕೆಗಳು ಇವೆ. ಕೆಲವೊಮ್ಮೆ ಕಠಿಣ ನಿರ್ಣಯಗಳನ್ನು ತೆಗೆದುಕೊಳ್ಳು-ವುದು ಅನಿವಾರ್ಯ' ಎಂದರು.

ತಮ್ಮ ಅಧಿಕಾರಾವಧಿಯ ಬಗ್ಗೆ ಹೇಳಿದ ಗಂಗೂಲಿ, 'ಸಂಪೂರ್ಣವಾಗಿ ಆನಂದಿಸಿದ್ದೇನೆ. ಕಳೆದ ಮೂರು ವರ್ಷಗಳತ್ತ ಗಮನ ಹಾಯಿಸಿದರೆ ಎಷ್ಟೋ ಒಳ್ಳೆಯ ಸಂಗತಿಗಳು ನಡೆದಿವೆ. ಕೋವಿಡ್ ಸಮಯದಲ್ಲಿ ಐಪಿಎಲ್ ಆಯೋಜಿಸಿದ್ದೇವೆ. ಪ್ರಸಾರ ಹಕ್ಕುಗಳ ಮೌಲ್ಯವು ಸಾರ್ವಕಾಲಿಕ ದಾಖಲೆ ಮಟ್ಟಕ್ಕೆ ತಲುಪಿದೆ' ಎಂದರು.

'ನಾನು ಎಂಟು ವರ್ಷಗಳ ಕಾಲ ಆಡಳಿತಗಾರನಾಗಿದ್ದೆ. ಬಂಗಾಳ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷನಾಗಿದ್ದೆ. ನಂತರ ಬಿಸಿಸಿಐ ಅಧ್ಯಕ್ಷನಾದೆ. ಆದರೆ ಕ್ರಿಕೆಟಿಗನಾಗಿ ಹೆಚ್ಚು ಸವಾಲುಗಳನ್ನು ಎದುರಿಸಿದ್ದೇನೆ' ಎಂದರು.

ಟಿಎಂಸಿ ಆರೋಪ: 2021ರ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ)ಕ್ಕೆ ಗಂಗೂಲಿ ಬೆಂಬಲಿಸಿರಲಿಲ್ಲ. ಆದ್ದರಿಂದಲೇ ಅವರನ್ನು 2ನೇ ಅವಧಿಗೆ ಬಿಸಿಸಿಐ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಸಲಿಲ್ಲ ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ವಕ್ತಾರ ಕುನಾಲ್ ಘೋಷ್ ಆರೋಪಿಸಿದ್ದಾರೆ.

ವಿಶ್ವ ಶೂಟಿಂಗ್: ಭಾರತಕ್ಕೆ ಕಂಚು

ಕೈರೊ, ಈಜಿಪ್ಟ್ (ಪಿಟಿಐ): ಭಾರತ ತಂಡವು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದೆ.

ಮಹಿಳೆಯರ 25 ಮೀಟರ್ಸ್ ಪಿಸ್ತೂಲ್ ವಿಭಾಗದ ಜೂನಿಯರ್ ತಂಡವು, ಕಂಚಿನ ಪದಕದ ಸುತ್ತಿನಲ್ಲಿ 17–1ರಿಂದ ಜರ್ಮನಿ ತಂಡವನ್ನು ಸೋಲಿಸಿತು.

ಕಂಚು ಗೆದ್ದ ಭಾರತ ತಂಡದಲ್ಲಿ ಈಶಾ ಸಿಂಗ್, ನಾಮ್ಯಾ ಕಪೂರ್ ಮತ್ತು ವಿಭೂತಿ ಭಾಟಿಯಾ ಇದ್ದರು.


ಕೆ.ಎಲ್. ರಾಹುಲ್

ಅಭ್ಯಾಸ ಪಂದ್ಯ: ರಾಹುಲ್ ಅರ್ಧಶತಕ ವ್ಯರ್ಥ

ಪರ್ತ್(ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ಅಬ್ಬರದ ಅರ್ಧಶತಕ ದಾಖಲಿಸಿದರೂ ಭಾರತ ತಂಡವು ಇಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ವೆಸ್ಟರ್ನ್ ಆಸ್ಟ್ರೇಲಿಯಾ ಎದುರು ಸೋತಿತು.

ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ವೆಸ್ಟರ್ನ್ ಆಸ್ಟ್ರೇಲಿಯಾ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 168 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಭಾರತ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳೀಗೆ 132 ರನ್ ಗಳಿಸಿತು.

ರಾಹುಲ್ (74; 55ಎಸೆತ) ಏಕಾಂಗಿ ಹೋರಾಟ ಮಾಡಿದರು. ಉಳಿದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಲಿಲ್ಲ. ಇದರಿಂದಾಗಿ ಭಾರತ ಸೋತಿತು.

ನಾಯಕ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ಸೂರ್ಯಕುಮಾರ್ ಯಾದವ್ ಅವರು ಬ್ಯಾಟಿಂಗ್ ಮಾಡಲಿಲ್ಲ. ಕೇವಲ ಫೀಲ್ಡಿಂಗ್ ಮಾತ್ರ ಮಾಡಿದರು.

ರಿಷಭ್ ಪಂತ್ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಎಸೆತಗಳನ್ನು ಎದುರಿಸುವಲ್ಲಿ ಅವರು ಪರದಾಡಿದರು. ದೀಪಕ್ ಹೂಡಾ 9 ಎಸೆತಗಳಲ್ಲಿ ಆರು ರನ್ ಗಳಿಸಿದರು. ಎರಡು ಸಿಕ್ಸರ್ ಬಾರಿಸಿದ ಹಾರ್ದಿಕ್ ಪಾಂಡ್ಯ ಒಂಬತ್ತು ಎಸೆತಗಳಲ್ಲಿ 17 ರನ್ ಗಳಿಸಿ ಔಟಾದರು. ದಿನೇಶ್ ಕಾರ್ತಿಕ್ 14 ಎಸೆತಗಳಲ್ಲಿ 10 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟರ್ನ್ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 8ಕ್ಕೆ168 (ಡಾರ್ಸಿ ಶಾರ್ಟ್ 52, ನಿಕ್ ಹಾಬ್ಸನ್ 64, ಆರ್. ಅಶ್ವಿನ್ 32ಕ್ಕೆ3, ಹರ್ಷಲ್ ಪಟೇಲ್ 27ಕ್ಕೆ2) ಭಾರತ: 20 ಓವರ್‌ಗಳಲ್ಲಿ 8ಕ್ಕೆ 132 (ಕೆ.ಎಲ್. ರಾಹುಲ್ 74, ಲ್ಯಾನ್ಸ್ ಮೊರಿಸ್ 23ಕ್ಕೆ2) ಫಲಿತಾಂಶ ವೆಸ್ಟ್ ಆಸ್ಟ್ರೇಲಿಯಾಕ್ಕೆ 36 ರನ್‌ಗಳ ಜಯ.

ಫುಟ್‌ಬಾಲ್: ಭಾರತಕ್ಕೆ ಮೊರಕ್ಕೊ ಸವಾಲು

ಭುವನೇಶ್ವರ (ಪಿಟಿಐ): ಮೊದಲ ಪಂದ್ಯದ ಸೋಲಿನ ಕಹಿಯನ್ನು ಮರೆಯುವ ಹಂಬಲದಲ್ಲಿರುವ ಭಾರತ ತಂಡವು 17 ವರ್ಷದೊಳಗಿನವರ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ ಮೊರಕ್ಕೊ ತಂಡಕ್ಕೆ ಮುಖಾಮುಖಿಯಾಗಲಿದೆ.

ಮಂಗಳವಾರ ನಡೆದ ಎ ಗುಂಪಿನ ಹಣಾಹಣಿಯಲ್ಲಿ ಭಾರತ 0–8ರಿಂದ ಅಮೆರಿಕ ಎದುರು ಎಡವಿತ್ತು.

ಮೊರಕ್ಕೊ ತಂಡವು ಆಫ್ರಿಕನ್ ಅರ್ಹತಾ ಟೂರ್ನಿಯಲ್ಲಿ ಘಾನಾ ತಂಡವನ್ನು ಮಣಿಸಿ ವಿಶ್ವಕಪ್ ಟೂರ್ನಿಗೆ ಪ್ರವೇಶ ಪಡೆದಿದೆ. ಹೀಗಾಗಿ ಭಾರತಕ್ಕೆ ಕಠಿಣ ಸವಾಲು ನೀಡುವ ಸಾಧ್ಯತೆಯಿದೆ. ಆತಿಥೇಯ ತಂಡವಾಗಿದ್ದರಿಂದ ಭಾರತಕ್ಕೆ ನೇರ ಅರ್ಹತೆ ಲಭಿಸಿದೆ.

ಅಮೆರಿಕ ಎದುರಿನ ಪಂದ್ಯದಲ್ಲಿ ಎಲ್ಲ ಹಂತಗಳಲ್ಲಿ ವಿಫಲವಾಗಿದ್ದ ಭಾರತದ ಆಟಗಾರ್ತಿಯರು ಇಲ್ಲಿ ಸಾಮರ್ಥ್ಯ ಸುಧಾರಿಸಿಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಉಭಯ ತಂಡಗಳು ಮೊದಲ ಬಾರಿ ವಿಶ್ವಕಪ್‌ನಲ್ಲಿ ಕಣಕ್ಕಿಳಿದಿದ್ದು, ತೀವ್ರ ಪೈಪೋಟಿ ನಿರೀಕ್ಷಿಸಲಾಗಿದೆ.

ಪಂದ್ಯ ಆರಂಭ: ರಾತ್ರಿ 8 ಗಂಟೆ

ಎಐಎಫ್‌ಎಫ್ ತನಿಖೆ

ಅಮೆರಿಕ ಎದುರಿನ ಪಂದ್ಯದ ವೇಳೆ ಭಾರತ ತಂಡದ ನಾಲ್ವರು ಆಟಗಾರ್ತಿಯರಿಗೆ, ಬೂಟುಗಳು ವಿಳಂಬವಾಗಿ ತಲುಪಿರುವ ಬಗ್ಗೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ತನಿಖೆ ಆರಂಭಿಸಿದೆ.

'ಬೂಟುಗಳನ್ನು ಸೂಕ್ತ ಸಮಯಕ್ಕೆ ತಲುಪಿಸದಿರುವ ಕುರಿತು ರಾಷ್ಟ್ರೀಯ ತಂಡಗಳ ವಿಭಾಗಗಳಿಗೆ ವರದಿ ನೀಡುವಂತೆ ಕೇಳಲಾಗಿದೆ. ಅಗತ್ಯ ಬಿದ್ದರೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗು-ವುದು' ಎಂದು ಎಐಎಫ್‌ಎಫ್ ಪ್ರಧಾನ ಕಾರ್ಯದರ್ಶಿ ಶಾಜಿ ಪ್ರಭಾಕರನ್ ಅವರು ತಿಳಿಸಿದ್ದಾರೆ.

ಕೆಲವರು ತಮ್ಮ ಪಾದದ ಅಳತೆಗೆ ಹೊಂದುವ ಕಡಿಮೆ ನಂಬರ್‌ನ ಹೊಸ ಬೂಟುಗಳಿಗೆ ಬೇಡಿಕೆ ಸಲ್ಲಿಸಿದ್ದರು. ಅವುಗಳನ್ನು ಭೂಸಾರಿಗೆ ಮೂಲಕ ತಂದು ವಿತರಿಸುವುದು ತಡವಾಗಿದೆ ಎಂದು ತಿಳಿದುಬಂದಿದೆ.



ಟಿ20 ಕ್ರಿಕೆಟ್: ಮಯಂಕ್ ಬಳಗಕ್ಕೆ ಗೆಲುವಿನ ತವಕ

ಮೊಹಾಲಿ: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ಶುಕ್ರವಾರ ನಡೆಯಲಿರುವ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ 3ನೇ ಪಂದ್ಯದಲ್ಲಿ ಮೇಘಾಲಯದ ಎದುರು ಸುಲಭ ಜಯದ ನಿರೀಕ್ಷೆಯಲ್ಲಿದೆ.

ಸಿ ಗುಂಪಿನ ಮೊದಲ ಪಂದ್ಯದಲ್ಲಿ ಮಹಾರಾಷ್ಟ್ರದ ಎದುರು ಮಯಂಕ್ ಪಡೆಯು ಜಯಿಸಿತ್ತು. ದೇವದತ್ತ ಪಡಿಕ್ಕಲ್ ಶತಕ ಬಾರಿಸಿದ್ದರು. ಆದರೆ, ಬುಧವಾರ ಬ್ಯಾಟರ್‌ಗಳ ವೈಫಲ್ಯದಿಂದ ಕೇರಳದ ವಿರುದ್ಧ ಮುಗ್ಗರಿಸಿತ್ತು.

ಇದೀಗ ಮತ್ತೆ ಜಯದ ಹಾದಿಗೆ ಮರಳುವ ತವಕದಲ್ಲಿದೆ. ದೇಶಿ ಕ್ರಿಕೆಟ್‌ನಲ್ಲಿ ಕೆಲವೇ ವರ್ಷಗಳ ಅನುಭವವಿರುವ ತಂಡ ಮೇಘಾಲಯ. ಕರ್ನಾಟಕದ ಬ್ಯಾಟಿಂಗ್ ಪಡೆಯು ಅನುಭವಿಗಳಿಂದ ತುಂಬಿದೆ. ಬೌಲಿಂಗ್‌ನಲ್ಲಿ ಯುವ ಪ್ರ-ತಿಭಾನ್ವಿತರು ಇದ್ದಾರೆ. ಆದ್ದರಿಂದ ಈ ಪಂದ್ಯದಲ್ಲಿ ಜಯಿಸುವ ನೆಚ್ಚಿನ ತಂಡ ಕರ್ನಾಟಕವೇ ಆಗಿದೆ.


ಮಯಂಕ್

ಪಂದ್ಯ ಆರಂಭ: ಬೆಳಿಗ್ಗೆ 9

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಸೆಲೆಕ್ಟ್ 2

ಮೈಸೂರು ರೇಸ್

ಟ್ರಫಾಲ್ಗರ್ ಗೆಲ್ಲುವ ನಿರೀಕ್ಷೆ

ಗವರ್ನರ್ಸ್ ಕಪ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟ್ರಫಾಲ್ಗರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಫ್ಲಾಶ್ ಬಾಂಡ್ 1, ಗಿಂಟೋಕಿ 3
2ನೇ ರೇಸ್: ಥಿಯಾಸ್ ಗಿಫ್ಟ್ 1, ಅಕಾಶಿ 3, ಕಪ್ಪಡೋಸಿಯಾ 5
3ನೇ ರೇಸ್: ಲೈಕರ್ಗಸ್ 4, ವಲ್ಡ್ರಿ ವೈಸ್ 6, ಡಿ ಲಾರ್ಡ್ 1
4ನೇ ರೇಸ್: ಫರ್ನೆಟ್ ಬ್ಲಾಂಕ 2, ಲಾಟರ್‌ಬ್ರನೆನ್ 7, ಅನಾಕಿನ್ 9
5ನೇ ರೇಸ್: ಟ್ರಫಾಲ್ಗರ್ 2, ಜೇಕ್ 1
6ನೇ ರೇಸ್: ವಿಂಡ್ ಪವರ್ 6, ಕೋಸ್ಟಲ್ ಕ್ರ್ಯೂಯ್ 2, ಡಿ ಥರ್ಟೀನ್ ಟ್ವೆಲ್ವ್ 7
7ನೇ ರೇಸ್: ಜೆರ್ಸಿ ಲೆಜೆಂಡ್ 7, ಕಮ್ ಅಲೈವ್ 4, ರಾಪ್ಟರ್ 9

ಉತ್ತಮ ಬೆಟ್: ವಿಂಡ್ ಪವರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

2023ರ ಮಾರ್ಚ್‌ನಲ್ಲಿ ಮಹಿಳಾ ಐಪಿಎಲ್ ಟೂರ್ನಿ

ಪ್ರಶಸ್ತಿಗೆ 5 ತಂಡಗಳ ಸೆಣಸು

ನವದೆಹಲಿ (ಪಿಟಿಐ): ಬಹುನಿರೀಕ್ಷಿತ ಚೊಚ್ಚಲ ಆವೃತ್ತಿಯ ಮಹಿಳಾ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯು 2023ರ ಮಾರ್ಚ್‌ನಲ್ಲಿ ನಡೆಯಲಿದೆ.

ಪುರುಷರ ಟೂರ್ನಿಗಿಂತ ಮೊದಲು ನಡೆಯಲಿರುವ ಮಹಿಳಾ ಐಪಿಎಲ್‌ನಲ್ಲಿ ಐದು ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ಮಹಿಳಾ ಐಪಿಎಲ್ ಕುರಿತ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮೂಲಗಳ ಪ್ರಕಾರ ಲೀಗ್ ಹಂತದಲ್ಲಿ 20 ಪಂದ್ಯಗಳು ಇರಲಿದ್ದು, ಪ್ರತಿ ತಂಡಗಳು ಪರಸ್ಪರ ಎರಡು ಬಾರಿ ಮುಖಾಮುಖಿಯಾಗ-ಲಿವೆ. ಲೀಗ್‌ನಲ್ಲಿ ಅಗ್ರಸ್ಥಾನ ಪಡೆಯುವ ತಂಡವು ನೇರವಾಗಿ ಫೈನಲ್‌ಗೆ ಅರ್ಹತೆ ಗಳಿಸಲಿದೆ. ಎರಡು ಮತ್ತು ಮೂರನೇ ಸ್ಥಾನ ಪಡೆದ ತಂಡಗಳು ಎಲಿಮಿನೇಟ-ರ್‌ನಲ್ಲಿ ಸೆಣಸುತ್ತವೆ. ಇಲ್ಲಿ ಗೆದ್ದ ತಂಡವು ಫೈನಲ್‌ಗೆ ಪ್ರವೇಶ ಪಡೆಯಲಿದೆ.

ಪ್ರತಿ ತಂಡವು ಆಡುವ ಹನ್ನೊಂದರ ಬಳಗದಲ್ಲಿ ಐದು ವಿದೇಶಿ ಆಟಗಾರ್ತಿ-ಯರನ್ನು ಹೊಂದುವ ಅವಕಾಶವಿದೆ. ಅದರಲ್ಲಿ ಐಸಿಸಿ ಪೂರ್ಣ ಸದಸ್ಯತ್ವ ಹೊಂದಿರುವ ದೇಶದ ನಾಲ್ಕು ಮತ್ತು ಸಹ ಸದಸ್ಯತ್ವ ಹೊಂದಿರುವ ದೇಶದ ಒಬ್ಬರು ಆಟಗಾರ್ತಿ ಇರಬೇಕಿದೆ.


ಐಪಿಎಲ್ ಟ್ರೋಫಿ

'ದೇಶಿ ಮತ್ತು ಅಂತರರಾ-ಷ್ಟ್ರೀಯ ಆಟಗಾರ್ತಿಯರನ್ನೊ-ಳಗೊಂಡ ಸಮತೋಲಿತ ಮತ್ತು ಸ್ಪರ್ಧಾತ್ಮಕ ತಂಡಗಳನ್ನು ಹೊಂದುವ ಉದ್ದೇಶದಿಂದ ಮಹಿಳಾ ಐಪಿಎಲ್‌ಅನ್ನು ತಾತ್ಕಾಲಿಕವಾಗಿ ಐದು ತಂಡಗಳೊಂದಿಗೆ ನಡೆಸಲಾಗುವುದು. ಪ್ರತಿ ತಂಡಗಳು ಆರು ವಿದೇಶಿ ಆಟಗಾರ್ತಿಯರನ್ನೊ-ಳಗೊಂಡು ಗರಿಷ್ಠ 18 ಮಂದಿಯನ್ನು ಹೊಂದಿರುತ್ತವೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ದಕ್ಷಿಣ ಆಫ್ರಿಕಾದಲ್ಲಿ ಫೆಬ್ರುವರಿ 9ರಿಂದ 26ರವರೆಗೆ ಮಹಿಳಾ ಟಿ20 ವಿಶ್ವಕಪ್ ಟೂರ್ನಿ ನಡೆಯಲಿದೆ. ಆ ಬಳಿಕ ಐಪಿಎಲ್ ನಡೆಯುವ ನಿರೀಕ್ಷೆಯಿದೆ.

ಕ್ಯಾರವಾನ್ ಮಾದರಿಯಲ್ಲಿ ಪಂದ್ಯಗಳನ್ನು ನಡೆಸುವ ಸಾಧ್ಯತೆಯಿದೆ. ಎರಡು ತಾಣಗಳಲ್ಲಿ ತಲಾ 10 ಪಂದ್ಯಗಳನ್ನು ಆಡಿಸುವ ನಿರೀಕ್ಷೆಯಿದೆ. ವಲಯವಾರು ಆಧರಿಸಿ ಬೆಂಗಳೂರು, ಅಹಮದಾಬಾದ್, ಚೆನ್ನೈ, ದೆಹಲಿ, ಕೋಲ್ಕತ್ತ ಮತ್ತು ಮುಂಬೈ ನಗರಗಳು ಪಂದ್ಯ ಆಯೋಜಿಸುವ ಆಯ್ಕೆ ಪಟ್ಟಿಯಲ್ಲಿವೆ.

ಟೂರ್ನಿಯ ಕುರಿತು ಅಂತಿಮ ನಿರ್ಧಾರವನ್ನು ಐಪಿಎಲ್‌ನ ಆಡಳಿತ ಮಂಡಳಿ ಮತ್ತು ಬಿಸಿಸಿಐ ಪದಾಧಿಕಾರಿಗಳು ತೆಗೆದುಕೊಳ್ಳಲಿದ್ದಾರೆ.

'ಕಳೆದ ಎಂಟು ವರ್ಷಗಳಲ್ಲಿ, ವಿವಿಧ ವಿಭಾಗಗಳ ಕ್ರಿಕೆಟ್ ಟೂರ್ನಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ-ಯಲ್ಲಿ ಶೇಕಡಾ 111ರಷ್ಟು ಹೆಚ್ಚಳ ಕಂಡುಬಂದಿದೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಧಾರವಾಡದಲ್ಲಿ ರಾಷ್ಟ್ರಮಟ್ಟದ ಚೆಸ್ ನ. 5ರಿಂದ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಶ್ರೀ ಸದ್ಗುರು ಚೆಸ್ಮಾರ್ಟ್ಸ್ ಮತ್ತು ಮ್ಯೂಸಿಕ್ ಅಕಾಡೆಮಿಯು ರಾಷ್ಟ್ರಮಟ್ಟದ ಮುಕ್ತ ಫಿಡೆ ರೇಟೆಡ್ ರ್‍ಯಾಪಿಡ್ ಚೆಸ್ ಹಾಗೂ ಬ್ಲಿಟ್ಜ್ ಚೆಸ್ ಟೂರ್ನಿಯನ್ನು ನವೆಂಬರ್ 5 ಮತ್ತು 6ರಂದು ಧಾರವಾಡದ ಯಾಲಕ್ಕಿ ಶೆಟ್ಟರ ಕಾಲೊನಿಯ ಶೃಂಗೇರಿ ಶಾರದಾಪೀಠದ ವಿದ್ಯಾಭಾರತಿ ಸಭಾಭವನದಲ್ಲಿ ಆಯೋಜಿಸಿದೆ.

ವಿವಿಧ ರಾಜ್ಯಗಳ 500ಕ್ಕೂ ಹೆಚ್ಚು ಆಟಗಾರರು ಟೂರ್ನಿಯಲ್ಲಿ ಸ್ಪರ್ಧಿಸುವರು. ವಿಜೇತರಿಗೆ ಒಟ್ಟು ₹2.40 ಲಕ್ಷ ನಗದು ಹಾಗೂ 255ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ನೀಡಲಾಗುವುದು. ಸ್ಪರ್ಧಿಗಳು ನ. 3ರೊಳಗೆ ದೂರವಾಣಿ ಸಂಖ್ಯೆ 8762191789 ಅಥವಾ 8431737265 ಗೆ ಕರೆ ಮಾಡಿ ಹೆಸರು ನೋಂದಾಯಿಸಬೇಕು ಎಂದು ಎಸ್‌ಸಿಎಂಎ ಅಧ್ಯಕ್ಷೆ ಅರ್ಚನಾ ನಾಯಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನರಗುಂದದಲ್ಲಿ ರಾಷ್ಟ್ರಮಟ್ಟದ ಆಹ್ವಾನಿತ ಕಬಡ್ಡಿ

ಬಸವನಗುಡಿ ತಂಡ ಜಯಭೇರಿ

ಪ್ರಜಾವಾಣಿ ವಾರ್ತೆ

ನರಗುಂದ (ಗದಗ ಜಿಲ್ಲೆ): ಬೆಂಗಳೂರಿನ ಬಸವನಗುಡಿ ಮತ್ತು ಬೆಳಗಾವಿ ಜಿಲ್ಲಾ ತಂಡಗಳು ಸಿ.ಸಿ.ಪಾಟೀಲ ಅಭಿಮಾನಿ ಬಳಗದಿಂದ ಪಟ್ಟಣದಲ್ಲಿ ನಡೆಯುತ್ತಿರುವ 'ಎ' ದರ್ಜೆ ರಾಷ್ಟ್ರ-ಮಟ್ಟದ ಆಹ್ವಾನಿತ ಹೊನಲು ಬೆಳಕಿನ ಕಬಡ್ಡಿ ಟೂರ್ನಿಯಲ್ಲಿ ಜಯಿಸಿದವು.

ಗುರುವಾರ ನಡೆದ ಪುರುಷರ ವಿಭಾಗದ ಲೀಗ್ ಪಂದ್ಯದಲ್ಲಿ ಬಸವನಗುಡಿ ತಂಡವು 43-37ರಿಂದ ಗದಗ ಜಿಲ್ಲಾ ತಂಡದ ವಿರುದ್ಧ ಗೆದ್ದಿತು. ಇನ್ನೊಂದು ಪಂದ್ಯದಲ್ಲಿ ಬೆಳಗಾವಿ ಜಿಲ್ಲಾ ತಂಡ 39-37ರಿಂದ ಯೂತ್ ಕಬಡ್ಡಿ ಹರಿಯಾಣ ವಿರುದ್ಧ ಜಯ ಸಾಧಿಸಿತು.

ಆರ್ಡಿನನ್ಸ್ ಫ್ಯಾಕ್ಟರಿ 44-30ರಿಂದ ಬಾಗಲಕೋಟೆ ತಂಡದ ವಿರುದ್ಧ ಗೆಲುವು ಸಾಧಿಸಿದೆ. ಉತ್ತರಪ್ರದೇಶದ ಜೆಡಿ ಅಕಾಡೆಮಿ 80-26ರಿಂದ ಉತ್ತರಕನ್ನಡ ಜಿಲ್ಲೆಯ ವಿರುದ್ಧ ಜಯಿಸಿತು.

ಹಿಮಾಚಲ ಪ್ರದೇಶ ಮತ್ತು ಯಾದವ ಅಕಾಡೆಮಿ ನಾಗಪುರದ ನಡುವಿನ (22-22) ಪಂದ್ಯ ಟೈ ಆಯಿತು.

ಮುನ್ಸಿಪಲ್ ಕಾರ್ಪೋರೇಶನ್ ಠಾಣೆ 36-25ರಿಂದ ಬಿಎಂಟಿಸಿ ಬೆಂಗಳೂರು ವಿರುದ್ಧ ಗೆಲುವು ಸಾಧಿಸಿತು. ಎಸ್‌ವಿಎಂ ಪಾಣಿಪತ್ 32-11ರಿಂದ ಬೆಂಗಳೂರು ಮಾರುತಿ ತಂಡದ ವಿರುದ್ಧ ಜಯ ಸಾಧಿಸಿತು.

ಸಿ.ಸಿ.ಪಾಟೀಲ ಅಭಿಮಾನಿ ಬಳಗ ನರಗುಂದ ತಂಡವು 40-25 ರಿಂದ ಚಿಕ್ಕಬಳ್ಳಾಪುರ ತಂಡದ ವಿರುದ್ಧ ಗೆಲುವು ಸಾಧಿಸಿತು. ರೆಡ್ ಆರ್ಮಿ ದೆಹಲಿ 62-18ರಿಂದ ಹೊನ್ನಪ್ಪ ಅಕಾಡೆಮಿ ಕೇಸರಗೊಪ್ಪ ವಿರುದ್ಧ ಜಯ ಸಾಧಿಸಿತು. ಸೆಂಟ್ರಲ್ ರೈಲ್ವೆ 35-16ರಿಂದ ಗದಗ ವಿರುದ್ಧ ಗೆಲುವು ಸಾಧಿಸಿತು. ಆಂಧ್ರಪ್ರದೇಶ ತಂಡ 33-32ರಿಂದ ಕುರುಕ್ಷೇತ್ರ ವಿವಿ ವಿರುದ್ಧ ಗೆದ್ದಿತು.

ಆರ್ಡಿನನ್ಸ್ ಫ್ಯಾಕ್ಟರಿ 36-8ರಿಂದ ಹೊನ್ನಪ್ಪ ಅಕಾಡೆಮಿ ವಿರುದ್ಧ ಗೆಲುವು ಸಾಧಿಸಿತು. ಸಾಯ್ ಗುಜರಾತ್ ತಂಡ 41-38ರಿಂದ ಜೆಡಿ ಅಕಾಡೆಮಿ ವಿರುದ್ಧ ಜಯ ಸಾಧಿಸಿತು.

ಯೂತ್ ಕಬಡ್ಡಿ 34-29ರಿಂದ ಎಸ್‌ಡಿಎಂ ಉಜಿರೆ ವಿರುದ್ಧ ಜಯ ಸಾಧಿಸಿತು.

ಪ್ರೊ ಕಬಡ್ಡಿ : ತಲೈವಾಸ್–ಮುಂಬಾ ಹಣಾಹಣಿ ಇಂದು

ಬೆಂಗಳೂರು: ಕಂಠೀರವ ಕ್ರೀಡಾಂಗಣ-ದಲ್ಲಿ ಆಯೋಜಿಸಲಾಗಿರುವ ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಶುಕ್ರವಾರ ಮೂರು ಪಂದ್ಯಗಳು ನಡೆಯಲಿವೆ.

ಮೊದಲ ಪಂದ್ಯದಲ್ಲಿ ತಮಿಳ್ ತಲೈವಾಸ್ ಹಾಗೂ ಯು ಮುಂಬಾ ಸೆಣಸಲಿವೆ. ನಂತರ ಹರಿಯಾಣ ಸ್ಟೀಲರ್ಸ್ –ಜೈಪುರ ಪಿಂಕ್ ಪ್ಯಾಂಥರ್ಸ್ ಹಾಗೂ ಗುಜರಾತ್ ಜೈಂಟ್ಸ್– ಪುಣೇರಿ ಪಲ್ಟನ್ ತಂಡಗಳು ಮುಖಾಮುಖಿ-ಯಾಗಲಿವೆ. ಗುರುವಾರ ವಿಶ್ರಾಂತಿಯ ದಿನವಾಗಿದ್ದರಿಂದ ಪಂದ್ಯಗಳು ನಡೆಯಲಿಲ್ಲ.

ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್

'ದೇವರ ಕೈ' ಚೆಂಡಿಗೆ ₹23 ಕೋಟಿ!

ಮೆಕ್ಸಿಕೊ (ರಾಯಿಟರ್ಸ್): ಅರ್ಜೆಂಟಿನಾದ ಫುಟ್‌ಬಾಲ್ ದಂತಕತೆ ಡಿಯಾಗೊ ಮರಡೋನಾ ಅವರ 'ದೇವರ ಕೈ' ಘಟನೆಯ ಚೆಂಡು ಬಾರೀ ಮೊತ್ತಕ್ಕೆ ಹರಾಜಾಗುವ ನಿರೀಕ್ಷೆ ಮೂಡಿಸಿದೆ.


ಮರಡೋನಾ

36 ವರ್ಷಗಳ ಹಿಂದೆ ಮೆಕ್ಸಿಕೊ ವಿರುದ್ಧದ ಪಂದ್ಯದಲ್ಲಿ ಮರಡೋನಾ ಕೈಗೆ ತಗುಲಿದ್ದ ಚೆಂಡು ಗೋಲು ಸೇರಿತು. ಅದು ಬಹಳಷ್ಟು ಚರ್ಚೆ, ವಿವಾದಕ್ಕೂ ಕಾರಣವಾಗಿತ್ತು. ಇದೀಗ ಆ ಚೆಂಡನ್ನು ಹರಾಜಿಗಿಡಲಾಗಿ-ದ್ದು, ₹ 23 ಕೋಟಿಗೆ ಮಾರಾಟವಾಗುವ ಸಾಧ್ಯತೆ ಇದೆ ಎಂದು ಮೂಲಗಳು ಖಚಿತಪಡಿಸಿವೆ.

ಫುಟ್‌ಬಾಲ್: ರೆಬೆಲ್ಸ್ ಎಫ್‌ಸಿ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಎಚ್. ತೇಜುದ್ದೀನ್ ಗಳಿಸಿದ ಎರಡು ಗೋಲುಗಳು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ರೆಬೆಲ್ಸ್ ಎಫ್‌ಸಿ ತಂಡಕ್ಕೆ ಗೆಲುವು ತಂದುಕೊಟ್ಟವು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂ-ಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ರೆಬೆಲ್ಸ್ 2–0ಯಿಂದ ಕೊಡಗು ಎಫ್‌ಸಿ ತಂಡವನ್ನು ಪರಾಭವಗೊಳಿ-ಸಿತು. ತೇಜುದ್ದೀನ್ 11 ಮತ್ತು 16ನೇ ನಿಮಿಷಗಳಲ್ಲಿ ಚೆಂಡನ್ನು ಗೋಲು ಪೆಟ್ಟಿಗೆಗೆ ಸೇರಿಸಿದರು. ಶುಕ್ರವಾರ ನಡೆಯುವ ಪಂದ್ಯಗಳಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು– ಬೆಂಗ ಳೂರು ಇಂಡಿಪೆಂಡೆಂಟ್ಸ್, ಬಿಎಫ್‌ಸಿ– ಎಡಿಇ, ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ– ಎಫ್‌ಸಿ ಬೆಂಗಳೂರು ಯುನೈಟೆಡ್ ಸೆಣಸಲಿವೆ.